ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
‘ಕವಿಗಳ ಸಲಹೆ ಪಡೆಯದೇ ಆಯೋಜನೆ’ 6
ಅಪ್ರಿಯ ದತ್ತಾಂಶ ಅಪಥ್ಯ?
ಪ್ರತಿಯೊಬ್ಬರಿಗೂ ₹25 ಲಕ್ಷ ಆರೋಗ್ಯ ವಿಮೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,428 ▲	19,811 ▲	₹60,550 (ಬೆಂಗಳೂರು) ▼	₹72,500 (ಬೆಂಗಳೂರು) ▼	83.25 ▼

ಕಾನೂನು ರೂಪಿಸುವುದು ಸಂಸತ್ತಿಗೆ ಬಿಟ್ಟಿದ್ದು: ಸುಪ್ರೀಂ ಕೋರ್ಟ್ ಸಂವಿಧಾನ ಪೀಠದ ತೀರ್ಪು

ಸಲಿಂಗ ವಿವಾಹಕ್ಕೆ ಮಾನ್ಯತೆ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂಸಾಚಾರ, ಬಲಾತ್ಕಾರ ಅಥವಾ ಹಸ್ತಕ್ಷೇಪಕ್ಕೆ ಯಾವುದೇ ಬೆದರಿಕೆಯಿಲ್ಲದೆ ಸಹಬಾಳ್ವೆಯ ಹಕ್ಕನ್ನು ಮಂಗಳವಾರ ಎತ್ತಿ ಹಿಡಿದ ಸುಪ್ರೀಂ ಕೋರ್ಟ್, ವಿಶೇಷ ವಿವಾಹ ಕಾಯ್ದೆಯಡಿ ಸಲಿಂಗ ಜೋಡಿಗಳ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಲು ನಿರಾಕರಿಸಿತು.

ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ನ್ಯಾಯಮೂರ್ತಿಗಳನ್ನೊಳಗೊಂಡ ಸಂವಿಧಾನ ಪೀಠವು, ‘ಸಲಿಂಗ ಜೋಡಿಗಳಿಗೆ ಮದುವೆಯಾಗುವ ಹಕ್ಕನ್ನು ನ್ಯಾಯಾಂಗ ಗುರುತಿಸುವುದಿಲ್ಲ ಮತ್ತು ಈ ವಿಷಯದ ಬಗ್ಗೆ ಕಾನೂನು ರೂಪಿಸುವುದು ಸಂಸತ್‌ಗೆ ಬಿಟ್ಟದ್ದು’ ಎಂದು ತೀರ್ಪು ನೀಡಿತು.

ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ 21 ಅರ್ಜಿಗಳ ವಿಚಾರಣೆ ನಡೆಸಿದ್ದ ಪೀಠವು ಮಂಗಳವಾರ ತೀರ್ಪು ಪ್ರಕಟಿಸಿತು. ಪೀಠವು 3:2ರ ಬಹುಮತದ ತೀರ್ಪು ಕೊಟ್ಟಿತು.

ಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಸ್.ರವೀಂದ್ರ ಭಟ್, ಹಿಮಾ ಕೊಹ್ಲಿ, ಪಿ.ಎಸ್.ನರಸಿಂಹ ಅವರೂ ಇದ್ದರು. 10 ದಿನಗಳ ಕಾಲ ವಿಚಾರಣೆ ನಡೆಸಿದ್ದ ಪೀಠವು, ಮೇ 11ರಂದು ತೀರ್ಪು ಕಾಯ್ದಿರಿಸಿತ್ತು.

10ನೇ ಪುಟ ನೋಡಿ

ಸುಪ್ರೀಂ ಕೋರ್ಟ್‌ನ ಕಲಾಪದ ನೇರ ಪ್ರಸಾರವನ್ನು ಲಿಂಗತ್ವ ಅಲ್ಪಸಂಖ್ಯಾತರು ನವದೆಹಲಿಯಲ್ಲಿ ತಮ್ಮ ಸ್ಮಾರ್ಟ್‌ಫೋನ್‌ನಲ್ಲಿ ವೀಕ್ಷಿಸಿದರು —ಎಎಫ್‌ಪಿ ಚಿತ್ರ

‘ಲಿಂಗತ್ವ ಅಲ್ಪಸಂಖ್ಯಾತರ ಪರ ಕಾಳಜಿ’

ನವದೆಹಲಿ: ಬಹುಮತದ ದೃಷ್ಟಿಕೋನದಿಂದ ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡದಿದ್ದರೂ, ಲಿಂಗತ್ವ ಅಲ್ಪಸಂಖ್ಯಾತರು ಭಿನ್ನಲಿಂಗೀಯ ವ್ಯಕ್ತಿಗಳನ್ನು ಮದುವೆಯಾಗುವ ಹಕ್ಕನ್ನು ಸುಪ್ರೀಂ ಕೋರ್ಟ್ ಮಂಗಳವಾರ ಗುರುತಿಸಿದೆ.

ಡಿ.ವೈ. ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು, ‘ಭಿನ್ನಲಿಂಗೀಯ ಸಂಬಂಧದಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರ ವಿವಾಹವನ್ನು ನಿಯಂತ್ರಿಸುವ ವೈಯಕ್ತಿಕ ಕಾನೂನುಗಳು ಸೇರಿದಂತೆ ಅಸ್ತಿತ್ವದಲ್ಲಿರುವ ಕಾನೂನಿನ ಅಡಿಯಲ್ಲಿ ಮದುವೆಯಾಗುವ ಹಕ್ಕನ್ನು ಹೊಂದಿದ್ದಾರೆ’ ಎಂದು ಹೇಳಿತು.

‘ಪುರುಷ ಅಥವಾ ಮಹಿಳೆಯೆಂದು ಗುರುತಿಸಿಕೊಂಡಿರುವ ವ್ಯಕ್ತಿಗಳು ವಿವಾಹವನ್ನು ನಿಯಂತ್ರಿಸುವ ವೈಯಕ್ತಿಕ ಕಾನೂನುಗಳು ಸೇರಿದಂತೆ ಅಸ್ತಿತ್ವದಲ್ಲಿರುವ ಕಾನೂನಿನಡಿಯಲ್ಲಿ ಮದುವೆಯಾಗಲು ಹಕ್ಕು ಹೊಂದಿರುತ್ತಾರೆ; ಸಂವಿಧಾನದ ಅಡಿಯಲ್ಲಿ ಎಲ್‌ಜಿಬಿಟಿಕ್ಯೂ ಸಮುದಾಯ ವನ್ನು ಈ ಸಂಬಂಧ ಸಬಲಗೊಳಿಸಲು ಸರ್ಕಾರಗಳು ಪ್ರಯತ್ನಿಸಬೇಕು. ಸಲಿಂಗಿ ಜೋಡಿಗಳು ಬಲವಂತ ಧೋರಣೆಯಿಂದ ಸ್ವಾತಂತ್ರ್ಯ ಪಡೆಯುವ ಅಧಿಕಾರ ಇದೆ’ ಎಂದು ಸಿಜೆಐ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಆರ್‌ಎಸ್‌ಎಸ್, ವಿಎಚ್‌ಪಿ ಸ್ವಾಗತ

ಸುಪ್ರೀಂ ಕೋರ್ಟ್‌ನ ತೀರ್ಪನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಹಾಗೂ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಸ್ವಾಗತಿಸಿವೆ.

‘ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮವನ್ನು ಅನುಸರಿಸುವವರು ಸೇರಿ ಎಲ್ಲ ವರ್ಗದವರ ವಾದವನ್ನು ಸುಪ್ರೀಂ ಕೋರ್ಟ್ ಆಲಿಸಿ, ಸಲಿಂಗ ವಿವಾಹವು ಕಾನೂನು ಮಾನ್ಯತೆ ಪಡೆಯಲು ಅರ್ಹವಲ್ಲ ಎಂದು ತೀರ್ಪು ನೀಡಿದೆ. ಈ ತೀರ್ಪು ನಮಗೆ ಸಮಾಧಾನ ಉಂಟು ಮಾಡಿದೆ. ಇದು ಮೂಲಭೂತ ಹಕ್ಕು ಕೂಡ ಅಲ್ಲ’ ಎಂದು ವಿಶ್ವ ಹಿಂದೂ ಪರಿಷತ್‌ನ ರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಹೇಳಿದ್ದಾರೆ. ಮಗು ದತ್ತು ಪಡೆಯಲು ಸಲಿಂಗಿ ಜೋಡಿಗಳಿಗೆ ಅವಕಾಶ ನೀಡದಿರುವುದು ಕೂಡ ಉತ್ತಮ ನಡೆ ಎಂದು ವಿಎಚ್‌ಪಿ ಅಭಿಪ್ರಾಯಪಟ್ಟಿದೆ.

‘ತೀರ್ಪು ಸ್ವಾಗತಾರ್ಹ. ನಮ್ಮ ಪ್ರಜಾಸತ್ತಾತ್ಮಕ ಸಂಸದೀಯ ವ್ಯವಸ್ಥೆಯು ಇದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಗಂಭೀರವಾಗಿ ಚರ್ಚಿಸಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ’ ಎಂದು ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ್ ಪ್ರಮುಖ್ ಸುನಿಲ್ ಅಂಬೇಕರ್ ತಿಳಿಸಿದ್ದಾರೆ.

ನಾಗರಿಕರ ಹಕ್ಕುಗಳ ರಕ್ಷಣೆ: ಕಾಂಗ್ರೆಸ್

ಜೈರಾಮ್ ರಮೇಶ್

ಸಲಿಂಗ ವಿವಾಹ ಮತ್ತು ಸಂಬಂಧಿತ ವಿಷಯಗಳ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಅಧ್ಯಯನ ಮಾಡುತ್ತಿದ್ದೇವೆ ಮತ್ತು ನಂತರ ವಿವರವಾದ ಪ್ರತಿಕ್ರಿಯೆ ನೀಡುತ್ತೇವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

‘ನಮ್ಮ ಎಲ್ಲಾ ನಾಗರಿಕರ ಸ್ವಾತಂತ್ರ್ಯಗಳು, ಆಯ್ಕೆಗಳು ಮತ್ತು ಹಕ್ಕುಗಳನ್ನು ರಕ್ಷಿಸಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಿಂತಿದೆ. ನಾವು ಒಳಗೊಳ್ಳುವಿಕೆಯ ಪಕ್ಷವಾಗಿ ನ್ಯಾಯಾಂಗ, ಸಾಮಾಜಿಕ ಮತ್ತು ರಾಜಕೀಯ - ತಾರತಮ್ಯರಹಿತ ಪ್ರಕ್ರಿಯೆಗಳ ಕುರಿತು ದೃಢವಾದ ನಂಬಿಕೆ ಹೊಂದಿದ್ದೇವೆ’ ಎಂದು ಅವರು ತಿಳಿಸಿದ್ದಾರೆ.

ಬಿಂದಿಗೆ ಓಟ

ಮಹಿಳಾ ದಸರಾ ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರು ನೀರು ತುಂಬಿದ ಬಿಂದಿಗೆ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದರು
ಪ್ರಜಾವಾಣಿ ಚಿತ್ರ/ಅನೂಪ್ ರಾಘ್.ಟಿ.

ಗಾಜಾ ಆಸ್ಪತ್ರೆ ಮೇಲೆ ದಾಳಿ: 500 ಸಾವು

ಗಾಜಾ ಪಟ್ಟಿ (ಎಎಫ್‌ಪಿ): ಗಾಜಾ ನಗರದಲ್ಲಿರುವ ಆಸ್ಪತ್ರೆಯೊಂದರ ಮೇಲೆ ಮಂಗಳವಾರ ಇಸ್ರೇಲ್‌ನ ಸೇನೆ ವಾಯುದಾಳಿ ನಡೆಸಿದ್ದು, ಕನಿಷ್ಠ 500 ಮಂದಿ ಹತರಾಗಿದ್ದಾರೆ.

‘ಗಾಜಾದ ಅಹ್ಲಿ ಅರಬ್ ಆಸ್ಪತ್ರೆ ಮೇಲೆ ಈ ದಾಳಿ ದಾಳಿ ನಡೆದಿದೆ. ಆಸ್ಪತ್ರೆಯಲ್ಲಿ ಗಾಯಾಳುಗಳು ಸೇರಿದಂತೆ ಹಲವರು ಆಶ್ರಯ ಪಡೆದಿದ್ದರು’ ಎಂದು ಹಮಾಸ್ ಪ್ರಾಬಲ್ಯವುಳ್ಳ ಪ್ಯಾಲೆಸ್ಟೀನ್ ಪ್ರಾಂತ್ಯದ ಆರೋಗ್ಯ ಸಚಿವಾಲಯವು ತಿಳಿಸಿದೆ.

ಗಾಜಾದ ಹಮಾಸ್ ಸರ್ಕಾರ ಈ ದಾಳಿಯನ್ನು ‘ಯುದ್ಧ ಅಪರಾಧ’ ಎಂದು ಹೇಳಿದೆ. ‘ಕಟ್ಟಡದ ಅವಶೇಷಗಳ ನಡುವೆ ನೂರಾರು ಜನರು ಸಿಕ್ಕಿಬಿದ್ದಿದ್ದಾರೆ, ಸಾವಿನ ಸಂಖ್ಯೆ ಹೆಚ್ಚಬಹುದು’ ಎಂದು ಸಚಿವಾಲಯವು ತಿಳಿಸಿದೆ.

ದಾಳಿ ಹಿಂದೆಯೇ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಕಿಟಕಿಗಳ ಗಾಜುಗಳು ಸಿಡಿದವು. ವಾಯು ದಾಳಿಗೆ ಸಿಕ್ಕವರ ದೇಹದ ತುಣುಕುಗಳು ವಿವಿಧೆಡೆ ಚೆಲ್ಲಾಡಿದ್ದವು ಎಂದು ವರದಿ ತಿಳಿಸಿದೆ.

3C ಪುಟ ನೋಡಿ

ಪ್ರತ್ಯೇಕ ಸ್ಫೋಟ: 14 ಮಂದಿ ಸಾವು

ಚೆನ್ನೈ: ತಮಿಳುನಾಡಿನ ಎರಡು ಪ್ರತ್ಯೇಕ ಪಟಾಕಿ ಘಟಕಗಳಲ್ಲಿ ಮಂಗಳವಾರ ಹಠಾತ್ ಸ್ಫೋಟ ಸಂಭವಿಸಿ ಒಟ್ಟು 14 ಮಂದಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ವಿರುಧುನಗರ ಜಿಲ್ಲೆಯ ಶ್ರೀವಿಲ್ಲಿಪುತ್ತೂರು ಬಳಿ ಪಟಾಕಿ ಘಟಕದಲ್ಲಿ 1 3, ಶಿವಕಾಶಿ ಜಿಲ್ಲೆಯ ಕಿಚನಾಯಕನಪಟ್ಟಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ.

5

ಆಡಳಿತದಲ್ಲಿ ಕನ್ನಡಕ್ಕೆ ಆದ್ಯತೆ ಇರಲಿ: ಸಿ.ಎಂ

ಬೆಂಗಳೂರು: ‘ಕೆಲವು ಸಚಿವರು, ಅಧಿಕಾರಿಗಳು ಕಡತಗಳಲ್ಲಿ ಇಂಗ್ಲಿಷ್ ನಲ್ಲೇ ಟಿಪ್ಪಣಿ ಬರೆಯುತ್ತಾರೆ. ಇಂಗ್ಲಿಷ್ ಭಾಷೆಯ ಮೇಲೆ ವ್ಯಾಮೋಹ ಸರಿಯಲ್ಲ. ಆಡಳಿತದಲ್ಲಿ ಕನ್ನಡಕ್ಕೇ ಆದ್ಯತೆ ನೀಡಬೇಕು’ ಎಂದು ಸಿ.ಎಂ ಸಿದ್ದರಾಮಯ್ಯ ಹೇಳಿದರು.

6

ಕ್ರಿಮಿನಲ್ ಆರೋಪ: ಬಡ್ತಿ ನಿರಾಕರಣೆ ಸಲ್ಲ– ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗದೇ ಇದ್ದರೂ ಕ್ರಿಮಿನಲ್ ಪ್ರಕರಣ ವಿಚಾರಣೆ ಬಾಕಿಯಿದೆ ಎಂಬ ಕಾರಣಕ್ಕಾಗಿ ಸರ್ಕಾರಿ ನೌಕರರಿಗೆ ಬಡ್ತಿ ನಿರಾಕರಿಸಲಾಗದು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಧಾರವಾಡ ತಹಶೀಲ್ದಾರ್ ಕಚೇರಿ ಗ್ರಾಮ ಲೆಕ್ಕಾಧಿಕಾರಿ ಜಯಶ್ರೀ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಮತ್ತು ನ್ಯಾಯಮೂರ್ತಿ ಜಿ.ಬಸವರಾಜ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಬಡ್ತಿ ನೀಡುವಂತೆ ಕೋರಿ ಜಯಶ್ರೀ ಅವರು 2022ರ ಜುಲೈ 5ರಂದು ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಿ ಧಾರವಾಡ ಜಿಲ್ಲಾಧಿಕಾರಿ ನೀಡಿದ್ದ ಹಿಂಬರಹ ಹಾಗೂ ಈ ಹಿಂಬರಹ ನೀಡಿದ್ದನ್ನು ಎತ್ತಿ ಹಿಡಿದಿದ್ದ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) ಆದೇಶವನ್ನು ನ್ಯಾಯಪೀಠ ಇದೇ ವೇಳೆ ರದ್ದುಪಡಿಸಿದೆ.

‘ಅರ್ಜಿದಾರರನ್ನು ಮುಂದಿನ ಮೂರು ತಿಂಗಳ ಒಳಗಾಗಿ ಎಲ್ಲಾ ಸರ್ಕಾರಿ ಸೌಲಭ್ಯಗಳೊಂದಿಗೆ ಪ್ರಥಮ ದರ್ಜೆ ಸಹಾಯಕರು ಹಾಗೂ ಕಂದಾಯ ಇನ್‌ಸ್ಪೆಕ್ಟರ್ ಹುದ್ದೆಗೆ ಪರಿಗಣಿಸಬೇಕು’ ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ. ಕ್ರಿಮಿನಲ್ ಪ್ರಕರಣ ಬಾಕಿಯಿರುವ ಕಾರಣಕ್ಕೆ ನನಗೆ ಬಡ್ತಿ ನಿರಾಕರಿಸಲಾಗಿದೆ ಎಂದು ಆಕ್ಷೇಪಿಸಿ ಜಯಶ್ರೀ ಕೋರ್ಟ್ ಮೆಟ್ಟಿಲೇರಿದ್ದರು.

ದೆಹಲಿ ಮಾತುಕತೆಗೆ ಆಹ್ವಾನಿಸಿಲ್ಲ ಎಂಬ ಸಿಟ್ಟು ಇಬ್ರಾಹಿಂಗೆ: ಜಿ.ಟಿ. ದೇವೇಗೌಡ

‘ಮೈತ್ರಿಗೆ ಒಪ್ಪಿದವರಿಂದ ಈಗ ಹಿಂದೇಟು’

ಪ್ರಜಾವಾಣಿ ವಾರ್ತೆ

ಜಿ.ಟಿ. ದೇವೇಗೌಡ

ಬೆಂಗಳೂರು: ಬಿಜೆಪಿ ಜತೆಗಿನ ಮೈತ್ರಿ ಕುರಿತು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರ ಹೇಳಿಕೆ ಬಗ್ಗೆ ಪಕ್ಷದ ಪ್ರಮುಖ ನಾಯಕರು ಗರಂ ಆಗಿದ್ದು, ಇಬ್ರಾಹಿಂ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ.

ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, ‘ಸಿ.ಎಂ.ಇಬ್ರಾಹಿಂ ಬಿಜೆಪಿ ಜತೆಗಿನ ಮೈತ್ರಿ ಪ್ರಸ್ತಾವ ಒಪ್ಪಿದ್ದರು. ಆದರೆ, ದೆಹಲಿಯಲ್ಲಿ ನಡೆದ ಮಾತುಕತೆಗೆ ಆಹ್ವಾನಿಸಿಲ್ಲ ಎಂಬ ಸಿಟ್ಟಿನಿಂದ ಈಗ ವಿರೋಧಿಸುತ್ತಿದ್ದಾರೆ’ ಎಂದರು. ‘ಬಿಜೆಪಿ ಜತೆಗಿನ ಮೈತ್ರಿಗೆ ಸಂಬಂಧಿಸಿದಂತೆ ಪಕ್ಷದ ವರಿಷ್ಠ ಎಚ್‌.ಡಿ. ದೇವೇಗೌಡರ ಮನೆಯಲ್ಲಿ ನಡೆದಿದ್ದ ಸಭೆಯಲ್ಲಿ ಇಬ್ರಾಹಿಂ ಭಾಗವಹಿಸಿದ್ದರು. ಅಲ್ಲಿನ ತೀರ್ಮಾನಕ್ಕೆ ಸಹಿ ಮಾಡಿದ್ದರು. ಅರಮನೆ ಮೈದಾನದಲ್ಲಿ ನಡೆದ ಸಭೆಯಲ್ಲೂ ಭಾಗವಹಿಸಿ ನಿರ್ಧಾರಕ್ಕೆ ಬದ್ಧ ಎಂದಿದ್ದರು’ ಎಂದರು.

‘ಬಿಜೆಪಿ ಜತೆ ಮೈತ್ರಿಗೆ ತಮ್ಮ ವಿರೋಧ ಇಲ್ಲ ಎಂದು ಇಬ್ರಾಹಿಂ ಮೊದಲು ಹೇಳಿದ್ದರು. ಎರಡೂ ಪಕ್ಷಗಳ ಮಧ್ಯೆ ಸೀಟುಗಳ ಹಂಚಿಕೆ ಹೇಗಿರಬೇಕು ಎಂಬ ಸಲಹೆಯನ್ನೂ ನೀಡಿದ್ದರು’ ಎಂದರು.

7ನೇ ಪುಟ ನೋಡಿ

‘ಇಬ್ರಾಹಿಂ ಫಲಕ ಹಾಕಿಕೊಳ್ಳಲಿ’



ಕುಮಾರಸ್ವಾಮಿ

‘ನಮ್ಮದೇ ನೈಜ ಜೆಡಿಎಸ್ ಎಂದು ಅವರು ಫಲಕ ಹಾಕಿಕೊಳ್ಳಲಿ. ಅವರು ಹಾಗೆಯೇ ಬರೆದುಕೊಳ್ಳಲಿ. ನಾವು ಏನು ಮಾಡಬೇಕೋ ಅದನ್ನೇ ಮಾಡುತ್ತೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಇಬ್ರಾಹಿಂ ಹೇಳಿಕೆ ಕುರಿತು ಪತ್ರಕರ್ತರಿಗೆ ಮಂಗಳವಾರ ಪ್ರತಿಕ್ರಿಯಿಸಿದ ಅವರು, ‘ಅವರು ಆರಾಮವಾಗಿಯೇ ಇದ್ದಾರೆ. ಮಾತನಾಡಿಕೊಳ್ಳಲಿ ಬಿಡಿ. ನಮ್ಮ ಪಕ್ಷದಲ್ಲಿ ಹಿರಿಯರು ತೀರ್ಮಾನ ತೆಗೆದುಕೊಳ್ಳುತ್ತಾರೆ. ನೀವು ಏಕೆ ತಲೆ ಕೆಡಿಸಿಕೊಳ್ಳುತ್ತೀರಿ’ ಎಂದು ಕೇಳಿದರು. ‘ಉಚ್ಚಾಟನೆ ಪತ್ರ’ದ ಕುರಿತು ಪ್ರಶ್ನಿಸಿದಾಗ, ‘ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ಅದು ಅವರಿಗೆ ಬಿಟ್ಟದ್ದು. ಇಂತಹ ಕ್ಷುಲ್ಲಕ ವಿಚಾರದ ಬಗ್ಗೆ ಕೇಳಲು ಇಲ್ಲಿಗೆ ಬರಬೇಡಿ’ ಎಂದರು.

ಉಚ್ಚಾಟನೆಯ ನಕಲಿ ಪತ್ರ

ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿರುವುದಕ್ಕಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮತ್ತು ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಪಕ್ಷದಿಂದ ಉಚ್ಚಾಟಿಸಿದ್ದಾರೆ ಎಂಬಂತೆ ಬಿಂಬಿಸುವ ನಕಲಿ ಪತ್ರವೊಂದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯಬಿಡಲಾಗಿದೆ.

ಮಂಗಳವಾರ ಈ ಪತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತು. ತಮ್ಮ ಹೆಸರಿನಲ್ಲಿ ಕಿಡಿಗೇಡಿಗಳು ನಕಲಿ ಪತ್ರ ಸೃಷ್ಟಿಸಿ ಹರಿಯಬಿಟ್ಟಿದ್ದಾರೆ ಎಂದು ಇಬ್ರಾಹಿಂ ಜೆ.ಸಿ. ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ನರೇಗಾ: ₹478.46 ಕೋಟಿ ಬಾಕಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ’ (ನರೇಗಾ) ಅಡಿ ಈಗಾಗಲೇ ವೆಚ್ಚ ಮಾಡಿರುವ ₹478.46 ಕೋಟಿ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದೆ.

‘ನರೇಗಾ ಯೋಜನೆಯಲ್ಲಿ ಈಗಾಗಲೇ ಬಳಕೆ ಪ್ರಮಾಣಪತ್ರ ಸಲ್ಲಿಸಿರುವ ವೆಚ್ಚಕ್ಕೆ ಅನುಗುಣವಾಗಿ ಈ ಮೊತ್ತ ಬಿಡುಗಡೆಗೆ ಬಾಕಿಯಿದೆ’ ಎಂದು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ಶೈಲೇಶ್ ಕುಮಾರ್ ಸಿಂಗ್ ಅವರಿಗೆ ಅ. 11 ರಂದು ಬರೆದ ಪತ್ರದಲ್ಲಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ತಿಳಿಸಿದ್ದಾರೆ.

‘ಹಣ ಬಳಕೆಯ ಪ್ರಮಾಣಪತ್ರಗಳು ಮತ್ತು ವಾರ್ಷಿಕ ಲೆಕ್ಕಪರಿಶೋಧನೆಯ ವಿವರಗಳನ್ನು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ರಾಜ್ಯದ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಈಗಾಗಲೇ ಸಲ್ಲಿಸಿದೆ.

ಆ. 29ರಿಂದ ಈ ಮೊತ್ತ ಬಿಡುಗಡೆಗೆ ಬಾಕಿ ಉಳಿದಿದೆ’ ಎಂಬ ಅಂಶವನ್ನು ಮುಖ್ಯ ಕಾರ್ಯದರ್ಶಿ ಪತ್ರದಲ್ಲಿ ಗಮನಕ್ಕೆ ತಂದಿದ್ದಾರೆ.

‘ರಾಜ್ಯದ 31 ಜಿಲ್ಲೆಗಳಲ್ಲಿ 236 ತಾಲ್ಲೂಕುಗಳಿವೆ. ಈ ಪೈಕಿ, 195 ತಾಲ್ಲೂಕುಗಳನ್ನು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ಪರಿಹಾರ ನಿಧಿ (ಎಸ್‌ಡಿಆರ್‌ಎಫ್) ಮಾನದಂಡಗಳ ಅನ್ವಯ ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಅವುಗಳಲ್ಲಿ 161 ತಾಲ್ಲೂಕುಗಳಲ್ಲಿ ತೀವ್ರ ಬರ, 34 ತಾಲ್ಲೂಕುಗಳಲ್ಲಿ ಸಾಧಾರಣ ಬರ ಇದೆ. ಬರ ಪರಿಸ್ಥಿತಿಯಿಂದಾಗಿ ಗ್ರಾಮೀಣ ಭಾಗದ ಕಾರ್ಮಿಕರು ತಮ್ಮ ಜೀವನೋಪಾಯಕ್ಕಾಗಿ ನರೇಗಾ ಯೋಜನೆಯನ್ನು ಹೆಚ್ಚು ಅವಲಂಬಿತರಾಗಿದ್ದಾರೆ’ ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

7ನೇ ಪುಟ ನೋಡಿ

ಪ್ರಜಾವಾಣಿ
ನವವರ್ಣ
3ಬಿ ಮತ್ತು 3ಡಿ ಪುಟಗಳನ್ನು ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಬೊಮ್ಮಾಯಿಗೆ ಹೃದಯ ಶಸ್ತ್ರಚಿಕಿತ್ಸೆ 7
‘ಚಂದಿರನ ಅಂಗಳಕ್ಕೆ ಭಾರತೀಯ’ 10

ರಾಜೀವ್ ತಾರಾನಾಥ ಅವರ 91ನೇ ಜನ್ಮದಿನದ ಪ್ರಯುಕ್ತ ಪಂಡಿತ್ ತಾರಾನಾಥ ಫೌಂಡೇಷನ್ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜೀವ್ ತಾರಾನಾಥ ಅವರನ್ನು ಸನ್ಮಾನಿಸಲಾಯಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿವೃತ್ತ ನಿರ್ದೇಶಕ ಎನ್‌.ಆರ್‌.ವಿಶುಕುಮಾರ್, ವೀಣಾ ವಾದಕ ಡಿ. ಬಾಲಕೃಷ್ಣ, ಸಾಹಿತಿ ಚಂದ್ರಶೇಖರ ಕಂಬಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಇದ್ದಾರೆ —ಪ್ರಜಾವಾಣಿ ಚಿತ್ರ

‘ಸಂಸ್ಕೃತಿ ಸಂಗಮ’ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಸಿ. ಸೋಮಶೇಖರ-ಎನ್. ಸರ್ವಮಂಗಳಾ ಸಾಹಿತ್ಯ ಸೇವಾ ಪ್ರತಿಷ್ಠಾನ ನೀಡುವ ‘ಸಂಸ್ಕೃತಿ ಸಂಗಮ-2023’ ಪ್ರಶಸ್ತಿಗೆ ಶಾಂತಾ ಇಮ್ರಾಪುರ (ವಚನ ಸಾಹಿತ್ಯ), ಹೀ.ಚಿ. ಬೋರಲಿಂಗಯ್ಯ (ಜಾನಪದ ಸಾಹಿತ್ಯ), ಎ.ವಿ. ನಾವಡ (ದಾಸ ಸಾಹಿತ್ಯ), ನರಸಿಂಹಲು ವಡವಾಟಿ (ಸಂಗೀತ ಕ್ಷೇತ್ರ) ಆಯ್ಕೆಯಾಗಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರತಿಷ್ಠಾನದ ಅಧ್ಯಕ್ಷ ಸಿ. ಸೋಮಶೇಖರ, ‘ಇದೇ 21ರಂದು (ಶನಿವಾರ) ನಗರದ ಗಾಂಧಿ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರತಿ ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಫಲಕ ಮತ್ತು ಸರಸ್ವತಿ ವಿಗ್ರಹ ಒಳಗೊಂಡಿದೆ’ ಎಂದರು.

ನೀರಿನ ಅದಾಲತ್ ನಾಳೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವಿವಿಧ ಉಪವಿಭಾಗಗಳಲ್ಲಿ ಅ. 19 ರಂದು ಬೆಳಿಗ್ಗೆ 9.30ರಿಂದ 11 ಗಂಟೆ ವರೆಗೆ ನೀರಿನ ಅದಾಲತ್ ನಡೆಸಲಿದೆ.

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಕ್ಕೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 87622 28888ಗೆ ಸಂದೇಶ ಕಳುಹಿಸಿ ದೂರು ದಾಖಲಿಸಬಹುದು ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯ ಘಟಿಕೋತ್ಸವದಲ್ಲಿ ಉದ್ಯಮಿ ನಿಖಿಲ್ ಕಾಮತ್ ಅಭಿಮತ

‘ಜಗತ್ತನ್ನೇ ಶಾಲೆಯಾಗಿಸಿದ ನವ್ಯ ಶಿಕ್ಷಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವ್ಯ ಶಿಕ್ಷಣವು ಕೊಠಡಿಯ ಮಿತಿದಾಟಿ ಜಗತ್ತನ್ನೇ ಒಂದು ಶಾಲೆಯಾಗಿಸಿದೆ. ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳ ಕಲಿಕೆಯ ದೃಷ್ಟಿಕೋನ ವಿಸ್ತಾರವಾಗಬೇಕಿದೆ ಎಂದು ಝೆರೋದಾ ಸಹ ಸಂಸ್ಥಾಪಕ ನಿಖಿಲ್ ಕಾಮತ್ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಮಂಗಳವಾರ ಹಮ್ಮಿಕೊಂಡಿದ್ದ 58ನೇ ಘಟಿಕೋತ್ಸವದಲ್ಲಿ ಅವರು ಮಾತನಾಡಿದರು. ‘ಸಾಂಪ್ರದಾಯಿಕ ಶಿಕ್ಷಣದಾಚೆಗೂ ವಿದ್ಯಾರ್ಥಿಗಳು ದೃಷ್ಟಿಹರಿಸಬೇಕು. ತಂತ್ರಜ್ಞಾನ ಮತ್ತು ಶಿಕ್ಷಣದ ವೇಗ ಸಾಕಷ್ಟು ಅವಕಾಶಗಳನ್ನು ತೆರೆದಿಟ್ಟಿದೆ. ವಿಶ್ವದ ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧೆ ಇದೆ. ಸಾಂಪ್ರದಾಯಿಕ ಶಿಕ್ಷಣದ ಹೊರಗೆ ಜಗತ್ತಿಗೆ ಅಗತ್ಯವಿರುವ ಕೌಶಲ ಸಿಗುತ್ತಿದೆ. ಉದ್ಯೋಗದ ಭರವಸೆ ಮೂಡಿಸಿದೆ’ ಎಂದರು.

299 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 113 ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸಲಾಯಿತು. 204 ಅಭ್ಯರ್ಥಿಗಳಿಗೆ ಪಿ.ಎಚ್‌ಡಿ ಪ್ರದಾನ ಮಾಡಲಾಯಿತು. 28,871 ವಿದ್ಯಾರ್ಥಿಗಳು ವಿವಿಧ ಪದವಿ ಪಡೆದರು. ಅವರಲ್ಲಿ 20,056 ಉನ್ನತ ಶ್ರೇಣಿ, 4,807 ಪ್ರಥಮ ದರ್ಜೆ, 874 ದ್ವಿತೀಯ ದರ್ಜೆ ಮತ್ತು 137 ವಿದ್ಯಾರ್ಥಿಗಳು ಸಾಮಾನ್ಯ ದರ್ಜೆಯಲ್ಲಿ ಪದವಿ ಪೂರೈಸಿದ್ದಾರೆ. ಕುಲಪತಿ ಎಸ್.ಎಂ.ಜಯಕರ ಪ್ರಾಸ್ತಾವಿಕ ಮಾತನಾಡಿದರು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಇದ್ದರು.

ಬೆಂಗಳೂರು ವಿಶ್ವವಿದ್ಯಾಲಯ ಮಂಗಳವಾರ ಹಮ್ಮಿಕೊಂಡಿದ್ದ 58ನೇ ಘಟಿಕೋತ್ಸವದಲ್ಲಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ರಾಜ್ಯಪಾಲ ಥಾವರ್ ಚಂದ್ ಗೆಹಲೋತ್, ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಇದ್ದಾರೆ (ಎಡಚಿತ್ರ) ಘಟಿಕೋತ್ಸವದಲ್ಲಿ ಹೆಚ್ಚು ಚಿನ್ನದ ಪದಕ ಪಡೆದ ವಿದ್ಯಾರ್ಥಿನಿಯರಾದ ಜೆ.ವಿನುತಾ, ಅಸ್ಮಾ ಬಾನು ಅಬ್ದುಲ್ ವಹೀದ್, ಶ್ವೇತಾ ಉದಯಕುಮಾರ ಮುರಗೋಡ

ನೈತಿಕ ಶಿಕ್ಷಣ ಅಗತ್ಯ: ದೇವೇಗೌಡ

ವಿದ್ಯೆ ಜತೆಗೆ ಸಂಸ್ಕಾರವಿದ್ದಾಗ ಮಾತ್ರ ಶಿಕ್ಷಣಕ್ಕೆ ಮೌಲ್ಯ ಬರುತ್ತದೆ. ನೈತಿಕ ಶಿಕ್ಷಣ ಇಂದಿನ ಅಗತ್ಯ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಪ್ರತಿಪಾದಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಸ್ವೀಕರಿಸಿದ ನಂತರ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣದ ಜತೆಗೆ ಗುಣಮಟ್ಟದ ಶಿಕ್ಷಣ ನೀಡುವುದು ಮುಖ್ಯ. ಪದವಿ ಪಡೆದ ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಸಂಸ್ಕೃತಿಯನ್ನೂ ಬೆಳೆಸಿಕೊಳ್ಳಬೇಕು ಸಂಸ್ಕಾರವಿಲ್ಲದ ಶಿಕ್ಷಣ ಕಾಗದದ ಪ್ರಮಾಣಪತ್ರವಾಗೇ ಉಳಿಯುತ್ತದೆ. ಮನುಷ್ಯ ಗಳಿಸಿದ ಹಣವನ್ನು ಧರ್ಮ ಕಾರ್ಯಗಳಿಗೆ ಬಳಸಿದಾಗ ಬದುಕು ಸಾರ್ಥಕವಾಗುತ್ತದೆ ಎಂದರು.

ಗೌರವ ಡಾಕ್ಟರೇಟ್‌ಗೆ ಆಯ್ಕೆಯಾಗಿದ್ದ ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಗೈರುಹಾಜರಾಗಿದ್ದರು.

60 ವರ್ಷಗಳ ಪರಂಪರೆಯುಳ್ಳ ಹೊಸೂರು

ಚೆನ್ನೈ ಸಿಲ್ಕ್ಸ್ ಶ್ರೀ ಕುಮರನ್ ತಂಗಮಾಳಿಗೈ

ರೇಷ್ಮೆ ಮತ್ತು ಜ್ಯುವೆಲ್ಲರಿ ಕ್ಷೇತ್ರದಲ್ಲಿ 60 ವರ್ಷಗಳ ಗಮನಾರ್ಹ ಪರಂಪರೆ ಹೊಂದಿರುವ ಹೊಸೂರು, ಚೆನ್ನೈ ಸಿಲ್ಕ್ಸ್ ಮತ್ತು ಶ್ರೀ ಕುಮಾರನ್ ತಂಗಮಾಳಿಗೈಯವರು ವಿವಾಹ ಸಮಾರಂಭಗಳು, ಮಂಗಳಕರ ಆಚರಣೆಗಳು ಮತ್ತು ಹಬ್ಬಗಳನ್ನು ಧಾರ್ಮಿಕ, ಧನಾತ್ಮಕ ಹಾಗೂ ರೋಮಾಂಚಕವಾಗಿಸುವ ಮೂಲಕ ಲಕ್ಷಾಂತರ ಕುಟುಂಬಗಳ ಸಂತೋಷ, ಸಮೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ದಕ್ಷಿಣ ಭಾರತದ ವಿವಾಹಗಳ ಸೊಬಗು ಮತ್ತು ಸಂಪ್ರದಾಯಗಳು ಇಡೀ ಜಗತ್ತನ್ನು ಆಕರ್ಷಿಸಿದೆ. ಇವು ಕೇವಲ ಹೊರನೋಟದ ಆಕರ್ಷಣೆ ಮಾತ್ರವಲ್ಲದೆ ಕುಟುಂಬದ ಬಂಧಗಳು, ಆಚರಣೆಯಲ್ಲಿ ಅಡಗಿರುವ ಪ್ರೀತಿ, ಸಂಪ್ರದಾಯಗಳ ಉತ್ಕೃಷ್ಟತೆ ಮತ್ತು ಸೀರೆಗಳು ಹಾಗೂ ಆಭರಣಗಳಲ್ಲಿರುವ ಸೊಗಸಾದ ಕರಕುಶಲತೆಯನ್ನು ಪ್ರದರ್ಶಿಸುತ್ತವೆ.

ಇಡೀ ಭಾರತದ ಸುಂದರವಾದ ರೇಷ್ಮೆ ಸೀರೆಗಳು ಮತ್ತು ಸಾಂಪ್ರದಾಯಿಕ ಅಕ್ಕಸಾಲಿಗರಿಂದ ಹಿಂದೆಂದೂ ಕಂಡಿರದ ಆಭರಣ ವಿನ್ಯಾಸಗಳು, ನಿಮ್ಮನ್ನು ಮದುವೆಯ ಶಾಪಿಂಗ್ ಅನುಭವಗಳನ್ನು ಹೆಚ್ಚಿಸಲು ಒಟ್ಟಿಗೆ ಸೇರಿಸುತ್ತವೆ.

ಹೊಸೂರಿನಲ್ಲಿರುವ ನಮ್ಮ ಬೃಹತ್ ಮಳಿಗೆ ಭಾರತೀಯ ವಿವಾಹಗಳಿಗೆ ಸಮರ್ಪಿತವಾಗಿದೆ. ಇಲ್ಲಿ ವಧುಗಳು ಮತ್ತು ಅವರ ಕುಟುಂಬಗಳು ಒಂದೇ ಮಹಡಿಯಲ್ಲಿ ವ್ಯಾಪಕವಾಗಿರುವ ರೇಷ್ಮೆ ಸೀರೆಗಳನ್ನು ಅನ್ವೇಷಿಸಬಹುದು. ರೇಷ್ಮೆ ಸೀರೆಗಳ ಸಂಗ್ರಹ 1 ಲಕ್ಷ ಚದರ ಅಡಿಗಳಲ್ಲಿ ಪ್ರತ್ಯೇಕವಾಗಿ ವಿಸ್ತರಿಸಲಾಗಿದೆ. ಪ್ರತ್ಯೇಕ 3 ವಿಸ್ತೃತ ಮಹಡಿಗಳಲ್ಲಿ ಚಿನ್ನ, ವಜ್ರ ಮತ್ತು ಬೆಳ್ಳಿ ಆಭರಣಗಳು ವೈಶಿಷ್ಟ್ಯಗಳನ್ನು ಹೊಂದಿವೆ. ಪ್ರತಿ ಕುಟುಂಬಕ್ಕೆ ಆರಾಮದಾಯಕ ಆಸನಗಳ ವಿಶ್ರಾಂತಿ ಕೋಣೆ (ಲಾಂಜ್), ಪುಳಕಿತ ಪ್ರತಿ ವಧು-ವರರಿಗೆ ಮತ್ತು ಅವರ ಪ್ರೀತಿಪಾತ್ರರಿಗೆ ಪರಿಪೂರ್ಣ ಮದುವೆಯ ಶಾಪಿಂಗ್ ವಾತಾವರಣವನ್ನು ಕಲ್ಪಿಸುತ್ತದೆ. ವಿಶಿಷ್ಟ ಶೈಲಿ ಹಾಗೂ ಸಂಪ್ರದಾಯದೊಂದಿಗೆ ಮಾರ್ದನಿಸುವ ಸೀರೆಗಳು ಮತ್ತು ಆಭರಣಗಳನ್ನು ಆಯ್ಕೆ ಮಾಡಲು, ಇಲ್ಲಿನ ಆಂತರಿಕ ಸಿಬ್ಬಂದಿ ಸಹಾಯ ಮಾಡಲಿದ್ದಾರೆ. ಪ್ರತಿ ಕುಟುಂಬಕ್ಕೆ ವೈಯಕ್ತಿಕ ಗಮನ ಮತ್ತು ಮಾರ್ಗದರ್ಶನವನ್ನೂ ನೀಡಲಿದ್ದಾರೆ.

"ಗ್ರ್ಯಾಂಡ್ ಫೆಸ್ಟಿವ್ ಕಲೆಕ್ಷನ್": ದಾಂಡಿಯಾ ರಾತ್ರಿಗಳು ಹಾಗೂ ಗೋಲು ಪ್ರದರ್ಶನಗಳನ್ನು ಆನಂದಿಸುವವರೆಗೆ ಹೊಸದಾಗಿ ಆರಂಭಿಸಲಾದ "ಗ್ರ್ಯಾಂಡ್ ಫೆಸ್ಟಿವ್ ಕಲೆಕ್ಷನ್" ನೊಂದಿಗೆ ದಸರಾ ಮತ್ತು ನವರಾತ್ರಿಯ ಅಸಂಖ್ಯಾತ ಸಂಪ್ರದಾಯಗಳನ್ನು ಆಚರಿಸಬಹುದು. ❖

ಪ್ರಸ್ತುತಿ:ಪಿ.ವಿ ಬ್ರ್ಯಾಂಡ್ ಸ್ಪಾಟ್

ವಸ್ತ್ರಗಳು
- ಸೊಗಸಾದ ಕಾಂಚೀಪುರಂ ಸಿಲ್ಕ್ ಸೀರೆಗಳು
- ವಧುವಿನ ಸಿಲ್ಕ್ ಸೀರೆಗಳ ಸಂಗ್ರಹಗಳು
- ಲೆಹೆಂಗಾ
- ಅಲಂಕಾರಿಕ ಸಿಲ್ಕ್
- ಮೈಸೂರು ರೇಷ್ಮೆ
- ಬನಾರಸ್ ಸೀರೆಗಳು
- ಕಿಡ್ಸ್ ಟ್ರೆಂಡಿ ಹುಡುಗರು ಮತ್ತು ಹುಡುಗಿಯರ ಸಂಗ್ರಹಗಳು
- ಶರ್ಟಿಂಗ್ ಮತ್ತು ಸೂಟಿಂಗ್ ಸೆಟ್‌ಗಳು – ರೇಮಂಡ್ಸ್ ಮತ್ತು ಇತರೆ ಬ್ರ್ಯಾಂಡ್‌ಗಳು
- ಪ್ರಮುಖ ಪುರುಷರ ಬ್ರ್ಯಾಂಡೆಡ್ ಸಂಗ್ರಹಣೆಗಳು...

ಆಭರಣಗಳು
- ರಾಗಿಣಿ ವೆಡ್ಡಿಂಗ್ ಜ್ಯುವೆಲ್ಲರಿ
- ಎತ್ನಿಕ್ ನಾಗಾಸ್ ಆಭರಣಗಳು
- ಸಾಂಪ್ರದಾಯಿಕ ದೇವಾಲಯ ಆಭರಣಗಳು
- ಧೂಲಿಕಾಸ್ ಡೈಮಂಡ್ ಸಂಗ್ರಹಗಳು
- ಅರೋರಾ ವೆಡ್ಡಿಂಗ್ ಸಿಲ್ವರ್
- ಗುಲಾಬಿ ಚಿನ್ನದ ಸಿಗ್ನೇಚರ್ ಕಲೆಕ್ಷನ್ಸ್ ಮತ್ತು ಇನ್ನಷ್ಟು....
- ಹೊಸೂರಿನಲ್ಲಿರುವ ನಮ್ಮ ವಿಸ್ತಾರವಾದ ಶೋರೂಮ್‌ಗಳಿಗೆ ಇಂದೇ ಭೇಟಿ ನೀಡಿ ಮತ್ತು ಮದುವೆ ಹಾಗೂ ಈ ಹಬ್ಬದ ಋತುವನ್ನು ನಿಜವಾಗಿಯೂ ವಿಶೇಷವಾಗಿಸಿಕೊಳ್ಳಿ

ದಸರಾ: ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಅಂಗವಾಗಿ ವಾಸ್ಕೋಡಿಗಾಮ ಹಾಗೂ ಬೆಂಗಳೂರಿನ ಸರ್‌ಎಂ ವಿಶ್ವೇಶ್ವರಯ್ಯ ಟರ್ಮಿನಲ್ ನಡುವೆ ವಿಶೇಷ ರೈಲು ಸೇವೆ ಕಲ್ಪಿಸಲಾಗಿದೆ. ಪ್ರಯಾಣಿಕರ ಬೇಡಿಕೆ ಪೂರೈಸಲು ಈ ವಿಶೇಷ ರೈಲು ಸಂಚರಿಸಲಿದೆ.

ರೈಲು ಸಂಖ್ಯೆ 07357 ಅ.20ರಂದು ಸಂಜೆ 5.30ಕ್ಕೆ ಬೆಂಗಳೂರಿನ ಎಸ್‌ಎಂವಿಟಿಯಿಂದ ಪ್ರಯಾಣ ಆರಂಭಿಸಲಿದ್ದು ಮರುದಿನ ಬೆಳಿಗ್ಗೆ 9.30ಕ್ಕೆ ವಾಸ್ಕೋಡಿಗಾಮ ರೈಲು ನಿಲ್ದಾಣ ತಲುಪಲಿದೆ. ರೈಲು ಸಂಖ್ಯೆ 07358 ಅ.24ರಂದು ಮಧ್ಯಾಹ್ನ 2.30ಕ್ಕೆ ವಾಸ್ಕೋಡಿಗಾಮದಿಂದ ಹೊರಟು ಮರುದಿನ ಬೆಳಿಗ್ಗೆ 5ಕ್ಕೆ ಬೆಂಗಳೂರು ಎಸ್‌ಎಂವಿಟಿ ತಲುಪಲಿದೆ.

ಈ ವಿಶೇಷ ರೈಲು ಚಿಕ್ಕಬಾಣಾವರ, ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಎಸ್.ಎಂ.ಎಂ ಹಾವೇರಿ, ಎಸ್.ಎಸ್.ಎಸ್ ಹುಬ್ಬಳ್ಳಿ, ಧಾರವಾಡ, ಲೋಂಡಾ, ಕ್ಯಾಸಲ್‌ರಾಕ್, ಕುಲೆಮ್ ಮತ್ತು ಮಡಗಾಂವ್ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ.

ವಿಶೇಷ ರೈಲು, ಎಸಿ ಪ್ರಥಮ ದರ್ಜೆ (1), ಎಸಿ ಎರಡನೇ ದರ್ಜೆ (1), ಎಸಿ ಮೂರನೇ ದರ್ಜೆ (2), ಸ್ಲೀಪರ್ ಕ್ಲಾಸ್ (9), ಸಾಮಾನ್ಯ ದ್ವಿತೀಯ ದರ್ಜೆ (2) ಮತ್ತು ಎಸ್‌ಎಲ್‌ಆರ್ (2) ಸೇರಿದಂತೆ ಒಟ್ಟು 17 ಬೋಗಿಗಳು ಒಳಗೊಂಡಿರುತ್ತದೆ ಎಂದು ರೈಲ್ವೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಂಸ್ಕೃತಿ ಸಚಿವಾಲಯ
ಭಾರತ ಸರ್ಕಾರ

ಲಲಿತ ಕಲಾ ಅಕಾಡೆಮಿ
ರಾಷ್ಟ್ರೀಯ ಕಲಾ ಅಕಾಡೆಮಿ
ರವೀಂದ್ರ ಭವನ, ನವದೆಹಲಿ – 110001

ಟೆಂಡರ್ ಪ್ರಕಟಣೆ

ಹಿತಾಸಕ್ತಿ ವ್ಯಕ್ತಪಡಿಸುವಿಕೆ

ಲಲಿತ ಕಲಾ ಅಕಾಡೆಮಿ, ಸಂಸ್ಕೃತಿ ಸಚಿವಾಲಯ ಇವರು ‘ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಪರಿಕಲ್ಪನೆಗಳನ್ನು ಸಾಕಾರಗೊಳಿಸುವ, ಸೃಜನಾತ್ಮಕ ರೂಪಕಗಳು, ರಂಗ ವಿನ್ಯಾಸಗಳು ಮುಂತಾದವನ್ನು ವಿನ್ಯಾಸಗೊಳಿಸುವ ಮತ್ತು / ಅಥವಾ ತಯಾರಿಸುವ ಪ್ರತಿಷ್ಠಿತ ಸಂಸ್ಥೆಗಳ ಮತ್ತು ಏಜೆನ್ಸಿಗಳ ಪಟ್ಟಿಗಾಗಿ’ ಆಸಕ್ತಿಯುಳ್ಳ ಅರ್ಜಿದಾರರಿಂದ **ಆಸಕ್ತಿ ವ್ಯಕ್ತಪಡಿಸಲು** ಆಹ್ವಾನಿಸಿದ್ದಾರೆ. ಟೆಂಡರ್ ದಸ್ತಾವೇಜುಗಳನ್ನು **www.lalitkala.gov.in** ಮತ್ತು **www.indiaculture.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆಸಕ್ತಿ ವ್ಯಕ್ತಪಡಿಸುವಿಕೆಯ ಸಲ್ಲಿಕೆಗೆ ಅಂತಿಮ ಗಡುವು 23ನೇ ಅಕ್ಟೋಬರ್ 2023 ರಂದು ಬೆಳಗ್ಗೆ 11 ಗಂಟೆ.

ಪ್ರೊ. ವಿ. ನಾಗದಾಸ್
ಚೇರ್ಮನ್, ಲಲಿತ ಕಲಾ ಅಕಾಡೆಮಿ

CBC 09105/12/0004/2324

ಕೃಷಿ ಜಿಡಿಪಿ: ಶೇ35ರಷ್ಟು ತೋಟಗಾರಿಕೆ ಪಾಲು– ರಾಜ್ಯಪಾಲ ಗೆಹಲೋತ್

ಪ್ರಜಾವಾಣಿ ವಾರ್ತೆ

ಥಾವರ್ ಚಂದ್ ಗೆಹಲೋತ್

ಹೆಸರಘಟ್ಟ: ‘ದೇಶದ ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ಕೃಷಿ ಕ್ಷೇತ್ರದ ಕೊಡುಗೆ ಅಪಾರ. ಕೃಷಿಯ ಈ ಕೊಡುಗೆಯಲ್ಲಿ ಶೇ 35ರಷ್ಟು ತೋಟಗಾರಿಕೆ ಬೆಳೆಗಳ ಪಾಲಿದೆ’ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಹೇಳಿದರು.

ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ಮಂಗಳವಾರ ಹಮ್ಮಿಕೊಂಡಿದ್ದ ‘ವಿದೇಶಿ ಮತ್ತು ಕಡಿಮೆ ಬಳಕೆಯ ತೋಟಗಾರಿಕಾ ಬೆಳೆಗಳು: ಆದ್ಯತೆಗಳು ಮತ್ತು ಉದಯೋನ್ಮುಖ ಪ್ರವೃತ್ತಿಗಳ’ ಕುರಿತ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

‘ದೇಶದ ಕೃಷಿ ಪ್ರದೇಶಗಳ ಪೈಕಿ ಶೇ 18ರಷ್ಟು ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಮುಂದಿನ ದಿನಗಳಲ್ಲಿ ತೋಟಗಾರಿಕೆ ಕ್ಷೇತ್ರ ಮತ್ತಷ್ಟು ವೃದ್ಧಿಯಾಗಲಿ’ ಎಂದರು.

‘ದೇಶದಲ್ಲಿ 1950-51ರಲ್ಲಿ ತೋಟಗಾರಿಕಾ ಬೆಳೆಗಳ ಉತ್ಪಾದನೆ 25 ದಶಲಕ್ಷ ಟನ್‌ಗಳಷ್ಟಿತ್ತು. ಪ್ರಸ್ತುತ ಉತ್ಪಾದನೆ 350 ದಶಲಕ್ಷ ಟನ್‌ಗಳಿಗೆ ಏರಿದೆ. ಇದು ಆಹಾರ ಧಾನ್ಯಗಳ ಉತ್ಪಾದನೆಗಿಂತ 14 ಪಟ್ಟು ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ಭಾರತವು ಕೃಷಿ, ತೋಟಗಾರಿಕೆ ಹಾಗೂ ಹೈನುಗಾರಿಕೆ ಕ್ಷೇತ್ರಗಳಲ್ಲಿ ಮುಂಚೂಣಿ ಸಾಧಿಸಲಿದೆ’ ಎಂದು ಅವರು ಅಭಿಪ್ರಾಯಪಟ್ಟರು.

ಐಐಎಚ್‌ಆರ್ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ಐಸಿಎಆರ್ ಮಾಜಿ ಡಿಡಿಜಿ (ತೋಟಗಾರಿಕಾ ವಿಜ್ಞಾನ) ಡಾ. ಎನ್.ಕೆ. ಕೃಷ್ಣಕುಮಾರ್, ಅಲಯನ್ಸ್ ಆಫ್ ಬಯೋವರ್ಸಿಟಿ ಇಂಟರ್‌ನ್ಯಾಷನಲ್‌ನ ಭಾರತದ ಪ್ರತಿನಿಧಿ ಡಾ. ಜೆ.ಸಿ. ರಾಣಾ, ಐಸಿಎಆರ್ ಸಹಾಯಕ ಮಹಾನಿರ್ದೇಶಕ ವಿ.ಬಿ. ಪಟೇಲ್ ಇದ್ದರು.

ಮೂರು ದಿನ ನಡೆಯಲಿರುವ ಈ ವಿಚಾರ ಸಂಕಿರಣದಲ್ಲಿ ಅಮೆರಿಕ, ಆಸ್ಟ್ರೇಲಿಯಾ, ಬ್ರಿಟನ್, ಇಸ್ರೇಲ್, ಮಲೇಷ್ಯಾ, ಮೆಕ್ಸಿಕೊ, ಕೊರಿಯಾ ಮತ್ತು ಜಾಂಬಿಯಾ ಸೇರಿದಂತೆ ವಿವಿಧ ದೇಶಗಳ 400 ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ.

ಕಾಂತರಾಜು ಆಯೋಗದ ವರದಿ ತಿರಸ್ಕರಿಸಿ: ಒಕ್ಕಲಿಗ ಮುಖಂಡರ ಒತ್ತಾಯ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕಾಂತರಾಜು ಆಯೋಗದ ಅಪೂರ್ಣ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ತಿರಸ್ಕರಿಸಬೇಕು ಎಂದು ಒಕ್ಕಲಿಗರ ಕ್ರಿಯಾ ಸಮಿತಿ ಆಯೋಜಿಸಿದ್ದ ದುಂಡುಮೇಜಿನ ಸಭೆ ಯಲ್ಲಿ ಮುಖಂಡರು ಒತ್ತಾಯಿಸಿದರು.

ಕಾಂತರಾಜು ಆಯೋಗದ ಅಪೂರ್ಣ ಜಾತಿ ಗಣತಿ ವರದಿಯಾಗಿದ್ದು, ಇದರಲ್ಲಿ ಒಕ್ಕಲಿಗರ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ತೋರಿಸಲಾಗಿದೆ. ಇದನ್ನು ನಾವು ಒಪ್ಪಲು ಸಾಧ್ಯವಿಲ್ಲ. ಅದಕ್ಕಾಗಿ ನೈಜವಾದ ನಿಖರವಾದ ಜಾತಿಗಣತಿ ನಡೆಸಬೇಕು ಎಂದು ಸಮಿತಿಯ ಅಧ್ಯಕ್ಷ ಕೆ.ಜಿ. ಕುಮಾರ್ ತಿಳಿಸಿದರು. ವರದಿ ತಿರಸ್ಕರಿಸಬೇಕೆಂದು ಇದೇ 28ರಂದು ಬೆಳಿಗ್ಗೆ 10.30ಕ್ಕೆ ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಪ್ರತಿಭಟನೆಯಲ್ಲಿ ಒಕ್ಕಲಿಗ ಮುಖಂಡರು, ಮಠಾಧೀಶರು, ರಾಜಕೀಯ ಮುಖಂಡರು, ಸಂಘ-ಸಂಸ್ಥೆಯವರು ಸಾವಿರಾರು ಜನರು ಭಾಗವಹಿಸಿ ಒಕ್ಕಲಿಗರ ಶಕ್ತಿ ಪ್ರದರ್ಶಿಸಬೇಕು ಎಂದು ಅವರು ಕೋರಿದರು.

ಕೆ.ಎನ್. ಲಿಂಗೇಗೌಡ, ಗೋವಿಂದೇಗೌಡ ಎ.ಎಸ್, ವೇಣುಗೋಪಾಲ್ ಕೆ., ರಾಣಿ ಪ್ರತಾಪ್, ರೇಣುಕಮ್ಮ, ಯಶೋದ, ರುದ್ರೇಶ್, ಸಂತೋಷ್, ಕಡೆಮನೆ ಚಂದ್ರು, ಕೃಷ್ಣಪ್ರಸಾದ್, ಬೈರೇಗೌಡ, ಕೃಷ್ಣೇಗೌಡ, ರವಿ ಗೌಡ ಇದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTEDFOR IMMEDIATE Appointment:HINDI, SCIENCE TEACHERS (Primary) and Typist. Contact:St.YASH PUBLIC SCHOOL, Kempegowdanagar, from Magadi Main-road, Bangalore-91. Phone:7204347583/4, 9066242255

JANATHA EDUCATION SOCIETY (R) Est. 1972
Dr.Rajkumar Road, 2nd Stage, Rajajinagar, Bengaluru-55

VIVEKANANDA P U COLLEGE-KUMBALAGODU
- PRINCIPAL : Masters with Ph.D with 5 years as principal. Visionary leader with flair to lead and motivate all stake holders.

VIVEKANANDA DEGREE COLLEGE
- ASSISTANT PROFESSOR
  Commerce : M.Com NET / SLET, Ph.D. preferable
  Economics : MA, NET/ SLET, Ph.D. preferable.
- NODAL OFFICER:Master in Arts/Management with 5-10 years exp., in university/ College with Knowledge of admission procedures statistics, data compilation etc.
- ACCOUNTS ASSISTANTS : B.Com / M.Com 3 years experience, fresher's can apply

VIVEKANANDA INSTITUTE OF TECHNOLOGY
- ASSISTANT PROFESSOR : Mechanical Engineering
- PART TIME FACULTY : English
  Qualification : As per AICTE norms
- PLACEMENT OFFICER: Qual- MBA in HRM with 5 years experience in placement in engineering college.

Eligible candidates may send their BIODATA along with 2 passport size photos to the Hon. Secretary to reach him within 10 days or email : jobs@jes-edu.in | 6366733434 080-23371952

H.C. Balakrishna, Hon. President | H.G. Balagopal, Hon. Secretary

BEST OF the Best qualified- Science, Maths, Social Science, Hindi, English, PE teachers for reputed CBSE school. Further, 6 computer teachers (diploma/ graduates). All should be experienced. Attractive salary. 9535601743/ 9449835744. Walk-in interview: 19.10.2023. Attend only with originals.

MATH & PHYSICS High School Teachers needed for Chitrakoota CBSE School in Nagarbhavi, Kengeri Ring Road, Bangalore. With High Salary. Call: 7829647333.

General

"WANTED MARKETING Executive-3.Nos, Accounts Executive-1.No, Office Executive-1.No, Engineers-1.No with Coral Draw exp.with min 3-5yrs exp.and good communication.& computer skills.Salary Rs.30,000 to Rs.40,000 per month for-a manufacturing company located in Bommanahalli, near HSR Layout, Bangalore-68. Age limit:-within 40yrs. Send CV-to: uppbangalore@gmail.com/Contact: 9449817703"

BHUMIKA BUILDERS requires experienced SITE SUPERVISOR Call : 9480316868

Wanted

ಕಪಸಸಂ **ಬೇಕಾಗಿದ್ದಾರೆ**

ಕರ್ನಾಟಕ ಪತ್ರಕರ್ತರ ಸಹಕಾರ ಸಂಘದಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕ (1 ಹುದ್ದೆ) ಹಾಗೂ ದ್ವಿತೀಯ ದರ್ಜೆ ಸಹಾಯಕ (1 ಹುದ್ದೆ)ಗೆ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಲು ಅರ್ಜಿ ಆಹ್ವಾನಿಸಲಾಗಿದೆ.

ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಕನಿಷ್ಠ ಶೇಕಡಾ 60ರಷ್ಟು ಅಂಕಗಳೊಂದಿಗೆ ಬಿ.ಕಾಂ, ಎಂ.ಕಾಂ, ಬಿ.ಕಾಂ–ಎಲ್‌ಎಲ್‌ಬಿ, ಪದವಿ ಜೊತೆಗೆ ಕಾನೂನಿನ ಬಗ್ಗೆ ಅರಿವು, ಕಂಪ್ಯೂಟರ್ ಮೂಲಕ ಲೆಕ್ಕಪತ್ರ ನಿರ್ವಹಣೆ ಅನುಭವ ಹೊಂದಿರಬೇಕು. ಸಹಕಾರಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದವರು/ ಸಲ್ಲಿಸುತ್ತಿರುವವರಿಗೆ ಆದ್ಯತೆ ನೀಡಲಾಗುವುದು.

ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಕನಿಷ್ಠ ಶೇಕಡಾ 60ರಷ್ಟು ಅಂಕಗಳೊಂದಿಗೆ ಬಿ.ಕಾಂ, ಬಿ.ಕಾಂ–ಎಲ್‌ಎಲ್‌ಬಿ, ಪದವಿ ಜೊತೆಗೆ ಕಂಪ್ಯೂಟರ್ ಮೂಲಕ ಲೆಕ್ಕಪತ್ರ ನಿರ್ವಹಣೆ ಅನುಭವ ಹೊಂದಿರಬೇಕು.

ವಯೋಮಿತಿ ಗರಿಷ್ಠ 35 ವರ್ಷ ಮೀರಿರಬಾರದು, ಅರ್ಹ ಅಭ್ಯರ್ಥಿಗಳು ಈ ಪ್ರಕಟಣೆಯ ದಿನದಿಂದ 10 ದಿನಗಳೊಳಗೆ ಪೂರ್ಣ ವಿವರಗಳ ಅರ್ಜಿಯನ್ನು ಭಾವಚಿತ್ರ ಸಮೇತ ಸಂಘದ ಇ–ಮೇಲ್ kjcs2009@gmail.com ಗೆ ಕಳುಹಿಸಬಹುದು ಅಥವಾ ಸಂಘದ ವಿಳಾಸಕ್ಕೆ (ನಂ.11/4, ಸುವರ್ಣ ಭವನ, 2ನೇ ಮಹಡಿ, ಕ್ವೀನ್ಸ್ ರಸ್ತೆ, ಬೆಂಗಳೂರು–560052) ಅಂಚೆ/ಕೊರಿಯರ್ ಮೂಲಕ ತಲುಪಿಸಬಹುದು.

ಸಹಿ/– ಸಿಬ್ಬಂದಿ ನೇಮಕಾತಿ ಸಮಿತಿ

Manager

WANTED OPERATIONS MANAGER (Ex-servicemen can apply)
For Maintainance, Safety Implementation, Monitoring and Conflict Management of Personnel.
Apply to cbbjcmtnc@gmail.com before 26.10.2023 Mobile No- 8951556740

Marketing & Sales

LOCAL REP. Retired Person from Defense. Promote Technical Textiles Compensation Rs. 7000 PM.+ Commission 2% on new orders. resume@urjafabrics.com

REQUIRED SALES Executive for reputed electric vehicle showroom in Jayanagar. Attractive salary, incentive and TA/ DA. Call 9164705777.

Part-Time Jobs

TOP MNC COMPANY Licensed By Central Govt. Retired/ VRS Persons 2nd Career Opportunity Age above 45 Years 35K to 40K: 7019215243/ 9886641282

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

DH DECCAN HERALD Classifieds More value, more impact
JOB HUNT ಪ್ರಜಾವಾಣಿ
Get your HIRING NEEDS answered
JOB
Get the right people for your company... Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 |
+91 9731810277 | +91 9901641752 | 080-45557163/164

BUSINESS

Business Offers

General

INVEST RS 50Lakhs for 2BHK flat worth 75 Lakhs in Vidyapeeta Circle, delivery 15 months. Call 9611937546

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

REAL ESTATE SELLING

Farm House/ Land/ Resorts

Out-Station

NILGIRIS 3.75 Acres Tea Estate for Sale / JV. Contact: 9087688877

PERSONAL

Change of Name

I, AADI, changed-my name to AADI SAMAL dated 11.10.2023.Sworn before notary H.S.Sakalesh Aradhya, Bengaluru.

EDUCATION SUCCESS

EDUCATION SUCCESS
CONGRATULATIONS

Dr. Suchitha.S

Suchitha.S has been awarded Doctorate Degree (PhD) in Computer Science by Bharathiar University, Coimbatore, for the thesis "Evaluation of Congestion Control in Wireless Sensor Networks"

CHANGE OF NAME
I, SSHARAN BANDI, R/at # 148/6-1, 5th Cross, 8th Main, R.M.V. Extension, Sadashivanagar, Bangalore-80, have changed my minor son's name ADHVIK BANDI to ADHHVIK BANDI vide affidavit dated 17-10-2023, before Notary C. Sharada, Bangalore. Henceforth he shall be known as ADHHVIK BANDI only.

CHANGE OF NAME
I, ATHIFA CHAND, W/o Syed Ikramulla, R/at # 2/1, 2nd Cross, Annayappa Block, Benson Town, Bengaluru- 46 have changed my name to ATHIFA IKRAM vide affidavit dated 17-10-2023, before Notary B.V. Nagabhushana, Bengaluru, Henceforth I shall be known as ATHIFA IKRAM only.

I,SMRUTI KANTA SAMAL, changed-my daughter's name-from ADYA to ADYA SAMAL dtd:11.10.2023 Sworn before notary H.S.Sakalesh Aradhya, Bengaluru

I,UMA (OLD name) W/o Rajanna R/a No.97,2nd 'H' Main Road,11th Block, 2nd Stage,Nagarabhavi Bengaluru-560 072 have changed my Name to UMA ALIAS JAYALAKSHMI.K. J. vide affidavit dated 15-10-2023 Sworn before Notary Sumithra.N. Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಅತ್ಯಾಧುನಿಕ ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ಬೆನ್ನುಮೂಳೆ ಶಸ್ತ್ರಚಿಕಿತ್ಸೆ

ಬಾಂಗ್ಲಾ ದೇಶದ ಬಾಲಕಿಗೆ ಬೆಳಕಾದ ಮಣಿಪಾಲ್ ಆಸ್ಪತ್ರೆ ವೈದ್ಯರು

ಪ್ರಜಾವಾಣಿ ಮಂಥನ





ಡಾ.ಎಸ್. ವಿದ್ಯಾಧರ, ಅಧ್ಯಕ್ಷರು ಮತ್ತು ಮುಖ್ಯಸ್ಥರು, ಬೆನ್ನುಮೂಳೆ ಶಸ್ತ್ರಚಿಕಿತ್ಸೆ ಮತ್ತು ಸಲಹೆಗಾರರು, ರೊಬೊಟಿಕ್ ಸ್ಪೈನ್ ಸರ್ಜರಿ, ಮಣಿಪಾಲ್ ಆಸ್ಪತ್ರೆ, ಹಳೇ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು.

ಬೆಂಗಳೂರು: ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಯಲ್ಲಿ ಮುಂಚೂಣಿಯಲ್ಲಿರುವ ಮಣಿಪಾಲ್ ಆಸ್ಪತ್ರೆ, ಗುಣಮಟ್ಟದ ಚಿಕಿತ್ಸೆಗೆ ಹೆಸರಾಗಿದೆ. ಇದರಿಂದಾಗಿ ಹೊರ ರಾಜ್ಯದ ಜತೆಗೆ ವಿದೇಶಗಳಿಂದಲೂ ರೋಗಿಗಳು ಇಲ್ಲಿಗೆ ಬರುತ್ತಿದ್ದಾರೆ. ಆಸ್ಪತ್ರೆಯ ರೊಬೊಟಿಕ್ ಸ್ಪೈನ್ ಸರ್ಜರಿ (ಬೆನ್ನುಮೂಳೆ) ವಿಭಾಗದ ವೈದ್ಯರು ಇತ್ತೀಚೆಗೆ ಬಾಂಗ್ಲಾದೇಶದ 15 ವರ್ಷದ ಬಾಲಕಿಗೆ ವಿರೂಪಗೊಂಡಿದ್ದ ಬೆನ್ನುಮೂಳೆಯನ್ನು ರೊಬೊಟಿಕ್ ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಿದ್ದಾರೆ. ಈ ಶಸ್ತ್ರಚಿಕಿತ್ಸೆಗೆ ಬಳಸಿಕೊಂಡ ತಂತ್ರಜ್ಞಾನ ದಕ್ಷಿಣ ಭಾರತದ ಬೇರಾವುದೇ ಆಸ್ಪತ್ರೆಯಲ್ಲಿ ಇರದಿರುವುದು ವಿಶೇಷ.

ಈ ಶಸ್ತ್ರಚಿಕಿತ್ಸೆಯನ್ನು ಹಳೆ ವಿಮಾನ ನಿಲ್ದಾಣದಲ್ಲಿರುವ ಮಣಿಪಾಲ್ ಆಸ್ಪತ್ರೆಯ ಬೆನ್ನುಮೂಳೆ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥ ಡಾ.ಎಸ್. ವಿದ್ಯಾಧರ ನೇತೃತ್ವದ ವೈದ್ಯಕೀಯ ತಂಡವು ಅ.15ರಂದು ಸಾಕಾರಗೊಳಿಸಿದೆ. ಇದಕ್ಕಾಗಿ ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ 'ಮೇಜರ್ ಎಕ್ಸ್' ರೊಬೊಟ್ ಜತೆಗೆ 'ಇಂಟರಾ-ಆಪರೇಟಿವ್ ಓ-ಆರ್ಮ ಇಮೇಜಿಂಗ್' ಮತ್ತು 'ರೇಡಿಯೊಲುಸೆಂಟ್ ಟೇಬಲ್' ತಂತ್ರಜ್ಞಾನವನ್ನು ಕೂಡ ಪರಿಚಯಿಸಿದೆ.

ಸಾಮಾನ್ಯವಾಗಿ 10ರಿಂದ 15 ವರ್ಷದವರಲ್ಲಿ ಗೂನು ಬೆನ್ನು ಸಮಸ್ಯೆ (ಇಡಿಯೋಪಥಿಕ್ ಸ್ಕೋಲಿಯೋಸಿಸ್) ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅದೇ ರೀತಿ, ಬಾಂಗ್ಲಾದೇಶದ ಬಾಲಕಿಗೆ ಕೂಡ ಈ ಸಮಸ್ಯೆ 11 ವರ್ಷದವಳಿದ್ದಾಗ ಕಾಣಿಸಿಕೊಂಡಿತ್ತು. ಪಾಲಕರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದರು. ಆದರೆ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗಿ, ಬೆನ್ನಿನ ಭಾಗ ಅಧಿಕ ಪ್ರಮಾಣದಲ್ಲಿ ಬಾಗತೊಡಗಿತು. ಇದರಿಂದ ಆತಂಕಕ್ಕೆ ಒಳಗಾದ ಪಾಲಕರು ಚಿಕಿತ್ಸೆಗಾಗಿ ಅಲ್ಲಿನ ಇನ್ನಷ್ಟು ಆಸ್ಪತ್ರೆಗಳಿಗೆ ಅಲೆದಾಟ ನಡೆಸಿದರು. ಅಲ್ಲಿನ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆ ದೊರೆಯದಿದ್ದಾಗ ಭಾರತದತ್ತ ಮುಖ ಮಾಡಿದರು.

ಇಲ್ಲಿಗೆ ಬರುವಾಗ ಬೆನ್ನಿನ ಭಾಗ ಅದಾಗಲೇ 45 ಡಿಗ್ರಿಯಷ್ಟು ಬಾಗಿತ್ತು. ಇದರಿಂದ ಶ್ವಾಸಕೋಶ, ಹೃದಯಕ್ಕೆ ಹಾನಿಯಾಗುವ ಸಾಧ್ಯತೆಗಳಿದ್ದವು. ಅವಳಿಗೆ ನಡೆಯುವುದು ಕಷ್ಟಸಾಧ್ಯವಾಗಿತ್ತು. ಈ ಸಮಸ್ಯೆಗೆ ಸೂಕ್ತ ಚಿಕಿತ್ಸೆ ಒದಗಿಸಲು ಕೊಲ್ಕತ್ತ, ಚೆನ್ನೈ ಸೇರಿ ವಿವಿಧೆಡೆ ವಿಚಾರಿಸಿದ್ದರು. ವಿವಿಧ ಜಾಲತಾಣಗಳ ಮೂಲಕವೂ ಮಾಹಿತಿ ಕಲೆ ಹಾಕಿದ್ದರು. ಅಂತಿಮವಾಗಿ ಅವರಿಗೆ ಇಲ್ಲಿನ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯಲ್ಲಿ 'ಮೇಜರ್ ಎಕ್ಸ್' ರೊಬೊಟ್ ಜತೆಗೆ 'ಇಂಟರಾ-ಆಪರೇಟಿವ್ ಓ-ಆರ್ಮ ಇಮೇಜಿಂಗ್' ಮತ್ತು 'ರೇಡಿಯೊಲುಸೆಂಟ್ ಟೇಬಲ್' ತಂತ್ರಜ್ಞಾನ ಆಧಾರಿತ ಚಿಕಿತ್ಸೆ ಇರುವುದು ತಿಳಿಯಿತು. ಆದ್ದರಿಂದ ಅವರು ಇಲ್ಲಿಗೆ ಬಂದರು.

ಶಸ್ತ್ರಚಿಕಿತ್ಸೆಗೆ ಒಳಗಾದ ಬಾಲಕಿಯ ತಂದೆ ದೃಶ್ಯ ಮಾಧ್ಯಮದಲ್ಲಿ ಕೆಲಸ ಮಾಡುತ್ತಿದ್ದರು. ತಾಯಿ ಗೃಹಿಣಿಯಾಗಿದ್ದರು. ಬಾಲಕಿ ಆಸ್ಪತ್ರೆಗೆ ಬಂದ ಬಳಿಕ ಪರಿಶೀಲನೆ ನಡೆಸಿದ ವೈದ್ಯರ ತಂಡ, ಒಂದು ಗಂಟೆಯಲ್ಲಿ ಶಸ್ತ್ರಚಿಕಿತ್ಸೆಗೆ ಅಗತ್ಯ ಸಿದ್ಧತೆ ಮಾಡಿಕೊಂಡಿತು. ಬೆನ್ನಿಗೆ ಸುಮಾರು 26 ಸ್ಕ್ರೂ ಹಾಕಲಾಗಿತ್ತು. ಎಲ್ಲ ಸ್ಕ್ರೂಗಳನ್ನು ರಾಡ್‌ನ ಸಹಾಯದಿಂದ ಜೋಡಣೆ ಮಾಡಲಾಯಿತು. ಈ ಎಲ್ಲಾ ಕೆಲಸವನ್ನು ರೊಬೊಟ್‌ನ ನೆರವಿನಿಂದಲೇ ನಡೆಸಲಾಯಿತು. ಕೇವಲ ಐದು ಗಂಟೆಗಳಲ್ಲಿ ಈ ಶಸ್ತ್ರಚಿಕಿತ್ಸೆಯನ್ನು ನಡೆಸಲಾಯಿತು. ನೂತನ ತಂತ್ರಜ್ಞಾನದ ನೆರವಿನಿಂದ ನಿಖರ ಶಸ್ತ್ರಚಿಕಿತ್ಸೆ ಯಶಸ್ವಿಯಾಯಿತು. ಶಸ್ತ್ರಚಿಕಿತ್ಸೆ ನಡೆದು ಐದು ಗಂಟೆಯಲ್ಲಿಯೇ ಬಾಲಕಿ ನಡೆದಾಡಲು ಪ್ರಾರಂಭಿಸಿದಳು. ಅವಳನ್ನು ಮರುದಿನವೇ ಮನೆಗೆ ಕಳುಹಿಸಲಾಯಿತು. ಶೀಘ್ರದಲ್ಲಿಯೇ ಬಾಲಕಿ ತನ್ನ ಹುಟ್ಟೂರಾದ ಢಾಕಾಗೆ ತೆರಳುತ್ತಾರೆ.

ಬೇಗ ಚೇತರಿಕೆ: ಬೆನ್ನುಮೂಳೆ ಸಮಸ್ಯೆಗೆ ಸಂಬಂಧಿಸಿದಂತೆ ರೊಬೊಟ್ ಸಹಾಯದಿಂದ ಎಲ್ಲಾ ವಯೋಮಾನದವರಿಗೂ ಶಸ್ತ್ರಚಿಕಿತ್ಸೆ ನಡೆಸಬಹುದಾಗಿದೆ. ಈ ವಿಧಾನದ ಶಸ್ತ್ರಚಿಕಿತ್ಸೆಯಿಂದ ಮಕ್ಕಳು ಬೇಗ ಚೇತರಿಸಿಕೊಳ್ಳುತ್ತಾರೆ. ವೃದ್ಧರಿಗೆ ಸ್ವಲ್ಪ ಸಮಯ ಬೇಕಾಗುತ್ತದೆ. ಈ ಮೊದಲು ಗೂನು ಬೆನ್ನು ಸಮಸ್ಯೆ ಇದ್ದ ಮಕ್ಕಳು ವರ್ಷಗಟ್ಟಲೆ ಶಾಲೆಯಿಂದ ವಂಚಿತರಾಗುತ್ತಿದ್ದರು. ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಒದಗಿಸಲಾಗುವ ಚಿಕಿತ್ಸೆಯಿಂದ ಈಗ ಮೂರು ವಾರದಿಂದ ತಿಂಗಳಲ್ಲಿ ಶಾಲೆಗೆ ಹೋಗಬಹುದಾಗಿದೆ.

ದಕ್ಷಿಣ ಭಾರತದಲ್ಲಿ ಮಣಿಪಾಲ್ ಆಸ್ಪತ್ರೆ ಹೊರತುಪಡಿಸಿದರೆ ಬೇರೆ ಯಾವುದೇ ಆಸ್ಪತ್ರೆಯಲ್ಲಿ ಈ ಶಸ್ತ್ರಚಿಕಿತ್ಸೆ ಲಭ್ಯವಿಲ್ಲ. ಉತ್ತರ ಭಾರದಲ್ಲಿ ನವದೆಹಲಿಯಲ್ಲಿ ಮಾತ್ರ ಈ ಶಸ್ತ್ರಚಿಕಿತ್ಸೆ ಇದೆ. ಬೆಂಗಳೂರು ವೈದ್ಯಕೀಯ ಪ್ರವಾಸೋದ್ಯಮಕ್ಕೆ ಹೆಸರಾಗಿದ್ದು, ರೋಗಿಗಳಿಗೆ ಅಗತ್ಯ ಚಿಕಿತ್ಸೆ ಒದಗಿಸಲಾಗುತ್ತದೆ. ಇದರಿಂದಾಗಿ ಮೊದಲ ಆಯ್ಕೆ ಇಲ್ಲಿನ ಆಸ್ಪತ್ರೆಯಾಗಿದೆ.

ನಿಖರ ಚಿಕಿತ್ಸೆ: ಸಾಂಪ್ರದಾಯಿಕ ವಿಧಾನದಿಂದ ನಡೆಸಲಾಗುವ ಶಸ್ತ್ರಚಿಕಿತ್ಸೆಯಲ್ಲಿ ನಿಖರ ಫಲಿತಾಂಶ ನಿರೀಕ್ಷಿಸುವುದು ಕಷ್ಟ. ಆದರೆ, ರೊಬೊಟ್ ತಂತ್ರಜ್ಞಾನ ಆಧಾರಿತ ಶಸ್ತ್ರಚಿಕಿತ್ಸೆ ನಿಖರ ಆಗಿರುತ್ತದೆ. ಗಾಯದ ಪ್ರಮಾಣವೂ ಕಡಿಮೆ ಇರುತ್ತದೆ. ಇದರಿಂದ ವ್ಯಕ್ತಿ ಬೇಗ ಚೇತರಿಸಿಕೊಳ್ಳಲು ಸಾಧ್ಯ. ರಕ್ತಸ್ರಾವ, ನೋವು ಸಹ ಕಡಿಮೆ ಇರುತ್ತದೆ. ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ಸುಲಭವಾಗಿ ನಡೆಸಬಹುದಾಗಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಇದು ಮೈಲುಗಲ್ಲಾಗಿದೆ. ರೋಗಿಗಳ ಅನುಕೂಲಕ್ಕಾಗಿ ಅತ್ಯಾಧುನಿಕ ವೈದ್ಯಕೀಯ ತಂತ್ರಜ್ಞಾನಗಳ ಅಳವಡಿಕೆಗೆ ಆಸ್ಪತ್ರೆ ಆದ್ಯತೆ ನೀಡುತ್ತಿದೆ. ರೊಬೊಟ್‌ಗಳ ನೆರವಿನಿಂದ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನೂ ಅಲ್ಪಾವಧಿಯಲ್ಲಿ ನಡೆಸಬಹುದು. ರೋಗಿಯೂ ಬೇಗ ಚೇತರಿಸಿಕೊಂಡು, ಮನೆಗೆ ಮರಳಬಹುದು. ಇಲ್ಲಿನ ಸೌಲಭ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಪಡೆದುಕೊಳ್ಳಬೇಕು.

ಸಾಂಪ್ರದಾಯಿಕ ವಿಧಾನದಿಂದ ನಡೆಸುವ ಶಸ್ತ್ರಚಿಕಿತ್ಸೆಗೆ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರು, ಶುಶ್ರೂಷಕರು ಹಾಗೂ ತಂತ್ರಜ್ಞರು ಅಗತ್ಯ. ಆದರೆ, ರೊಬೊಟಿಕ್ ಶಸ್ತ್ರಚಿಕಿತ್ಸೆಗೆ ಹೆಚ್ಚಿನ ಮಾನವ ಸಂಪನ್ಮೂಲ ಅಗತ್ಯವಿಲ್ಲ. ಇಲ್ಲಿ ತಂತ್ರಜ್ಞಾನದ ನೆರವಿನಿಂದ ಬೆನ್ನುಮೂಳೆಯ ಇಮೇಜ್‌ಗಳನ್ನು ಪಡೆದು, ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಆದ್ದರಿಂದ ಇದು ಅತ್ಯಂತ ಸುರಕ್ಷಿತ ವಿಧಾನವಾಗಿದೆ.

ಪ್ರಸ್ತುತಿ:ಪಿ.ವಿ ಬ್ರ್ಯಾಂಡ್ ಸ್ಪಾಟ್

ಶಸ್ತ್ರಚಿಕಿತ್ಸೆ ಈಗ ಸುಲಭ

'ರೊಬೊಟ್ ಬಂದ ಬಳಿಕ ಶಸ್ತ್ರಚಿಕಿತ್ಸೆ ಸುಲಭವಾಗಿದೆ. ದಿನಕ್ಕೆ ನಾಲ್ಕೈದು ಶಸ್ತ್ರಚಿಕಿತ್ಸೆ ನಡೆಸಿದರೆ ಎರಡರಿಂದ ಮೂರು ಶಸ್ತ್ರಚಿಕಿತ್ಸೆಯನ್ನು ರೊಬೊಟ್ ಮೂಲಕವೇ ನಡೆಸಲಾಗುತ್ತದೆ. ಪ್ರತಿ ಪ್ರಕರಣವೂ ಸವಾಲಿನಿಂದ ಕೂಡಿರುತ್ತದೆ. ತಂತ್ರಜ್ಞಾನ ಶಸ್ತ್ರಚಿಕಿತ್ಸೆಯನ್ನು ಸುಲಭವಾಗಿಸಿದೆ'

-ಡಾ.ಎಸ್. ವಿದ್ಯಾಧರ.

ಪಬ್, ಬಾರ್‌ಗಳ ಮೇಲೆ ದಾಳಿ

ಬೆಂಗಳೂರು: ನಿಯಮ ಉಲ್ಲಂಘನೆ ಆರೋಪದಡಿ ನಗರದ ಪಬ್, ಬಾರ್ ಆ್ಯಂಡ್ ರೆಸ್ಟೋರೆಂಟ್ ಸೇರಿ 1051 ಸ್ಥಳಗಳ ಮೇಲೆ ಪೊಲೀಸರು ದಾಳಿ ಮಾಡಿ ಪರಿಶೀಲಿಸಿದರು.

'ಅಪ್ರಾಪ್ತರಿಗೆ ಮದ್ಯ, ತಂಬಾಕು ಉತ್ಪನ್ನ ಮಾರುತ್ತಿರುವ ಬಗ್ಗೆ ದೂರುಗಳಿವೆ. ಅಬಕಾರಿ ಹಾಗೂ ಇತರೆ ನಿಯಮಗಳನ್ನು ಉಲ್ಲಂಘನೆ ಮಾಹಿತಿ ಇದೆ. ಹೀಗಾಗಿ, ಪ್ರತಿ ವಾರವೂ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಕಮಿಷನರ್ ಬಿ. ದಯಾನಂದ್ ಹೇಳಿದರು.

'ಅ. 14 ಹಾಗೂ 15ರಂದು ವಿಶೇಷ ಕಾರ್ಯಾಚರಣೆ ನಡೆಸಲಾಗಿದೆ. ಐವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ಹಾಗೂ ಅಪ್ರಾಪ್ತರಿಗೆ ತಂಬಾಕು ಉತ್ಪನ್ನ ಮಾರುತ್ತಿದ್ದ 965 ಸ್ಥಳಗಳ ವಿರುದ್ಧ ಕ್ರಮ ಜರುಗಿಸಲಾಗಿದೆ' ಎಂದರು.

ಕೆರೆಯ ಒಡಲಿಗೆ ಕಲುಷಿತ ನೀರು • ಅಸಂಖ್ಯಾತ ಮೀನುಗಳ ರಾಶಿ

ವರ್ತೂರು ಕೆರೆ: ಮೀನುಗಳ ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಚರಂಡಿ ನೀರು ಸೇರಿ ಕಪ್ಪು ಬಣ್ಣಕ್ಕೆ ತಿರುಗಿದ್ದ ಕೆರೆ ನೀರು
- ಬಿಡಿಎ, ಬಿಬಿಎಂಪಿ ಅಧಿಕಾರಿಗಳ ನಿರ್ಲಕ್ಷ್ಯ ಆರೋಪ
- ಇನ್ನಾದರೂ ಗಮನಹರಿಸಿ ಕ್ರಮಜರುಗಿಸಲು ಆಗ್ರಹ

ಕೆರೆ ನೀರು ಕಲುಷಿತಗೊಂಡು ಸಾವಿರಾರು ಮೀನುಗಳು ಸಾವಿಗೀಡಾಗಿವೆ.

ಕೆ.ಆರ್.ಪುರ: ವರ್ತೂರು ಕೆರೆಯಲ್ಲಿ ಸಾವಿರಾರು ಮೀನುಗಳು ಸಾವಿಗೀಡಾಗಿವೆ.

ಕೆರೆಯಲ್ಲಿನ ನೀರು ಕಲುಷಿತವಾಗಿದ್ದರಿಂದ ಮೀನುಗಳು ಮೃತಪಟ್ಟಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಸತ್ತ ಮೀನುಗಳನ್ನು ಕೆರೆಯಿಂದ ಹೊರ ತೆಗೆದು ಗುಂಡಿ ತೆಗೆದು ಮುಚ್ಚಲಾಗುತ್ತಿದೆ.

ಕಳೆದ ವಾರ ಸುರಿದ ಮಳೆಯಿಂದ ಚರಂಡಿ ನೀರು ಕೆರೆಗೆ ಹರಿದು ನೀರು ಕಲುಷಿತಗೊಂಡಿತ್ತು. ನೀರೆಲ್ಲ ಕಪ್ಪು ಬಣ್ಣಕ್ಕೆ ತಿರುಗಿತ್ತು. ರಾಸಾಯನಿಕಗಳ ಮಿಶ್ರಣ ಹಾಗೂ ಆಮ್ಲಜನಕ ಕೊರತೆಯಿಂದಾಗಿ ಮೀನುಗಳು ಸತ್ತಿರಬಹುದು ಎಂದು ಶಂಕಿಸಲಾಗಿದೆ.

ಬಿಡಿಎ ಮತ್ತು ಬಿಬಿಎಂಪಿ ನಿರ್ವಹಣೆಯಲ್ಲಿರುವ ಈ ಕೆರೆಯ ಬಗ್ಗೆ ನಿರ್ಲಕ್ಷ್ಯ ಧೋರಣೆಯಿಂದ ಮೀನುಗಳ ಸಾವಿಗೀಡಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು ಮುಂಜಾಗ್ರತಾ ಕ್ರಮ ವಹಿಸಬೇಕೆಂದು ಪರಿಸರ ಪ್ರೇಮಿಗಳು ಆಗ್ರಹಿಸಿದ್ದಾರೆ.

ಇಂತಹ ಪ್ರಕರಣಗಳು ಮರುಕಳಿಸುತ್ತಿದ್ದರೂ ಬಿಡಿಎ ಅಧಿಕಾರಿಗಳಾಗಲಿ, ಪಾಲಿಕೆ ಅಧಿಕಾರಿಗಳಾಗಲಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿಲ್ಲ. ಕೆರೆ ಅಭಿವೃದ್ಧಿಗಾಗಿ ಕೋಟ್ಯಂತರ ಮೊತ್ತ ಮೀಸಲಿಡಲಾಗಿದೆ. ಆದರೂ ಸ್ವಚ್ಛತೆ ಮರೀಚಿಕೆಯಾಗಿದೆ. ಕೆರೆ ನಿರ್ವಹಣೆ ಸಮರ್ಪಕವಾಗಿಲ್ಲ. ಕೆರೆಯನ್ನು ಗಮನಿಸಲು ಸಿಸಿ ಟಿವಿ ಕ್ಯಾಮೆರಾಗಳು ಅಳವಡಿಸಿಲ್ಲ ಎಂದು ವರ್ತೂರು ನಿವಾಸಿ ಮುನಿರಾಜ್ ಅವರು ದೂರಿದರು.

ಕೆಲವು ದಿನಗಳ ಹಿಂದೆ ಸುರಿದ ಮಳೆಯಿಂದಾಗಿ ತ್ಯಾಜ್ಯ ನೀರು ಕೆರೆಗೆ ಸೇರಿದೆ. ಕೆರೆ ಶುದ್ಧೀಕರಣ ಘಟಕ ಇಲ್ಲದೇ ಇರುವುದು ಮುಖ್ಯ ಕಾರಣವಾಗಿದೆ. ಕೆರೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಖಾಸಗಿಯವರು ಜೆಸಿಬಿ ಮೂಲಕ ಕೆಲಸ ಮಾಡುವ ವೇಳೆ ಚರಂಡಿ ಒಡೆದು ಕಲುಷಿತ ನೀರು ಕೆರೆ ಸೇರಿದೆ. ಈ ಬಗ್ಗೆ ಬಿಬಿಎಂಪಿ ಹಾಗೂ ಬಿಡಿಎ ಅಧಿಕಾರಿಗಳು ಗಮನ ಹರಿಸಬೇಕಿದೆ ಎಂದು ಸ್ಥಳೀಯ ವರ್ತೂರು ದೀಪಕ್ ಆಕ್ರೋಶ ವ್ಯಕ್ತಪಡಿಸಿದರು.

'ನಿಯಂತ್ರಣದತ್ತ ಡೆಂಗಿ'

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ಪ್ರಕರಣಗಳು ನಿಯಂತ್ರಣಕ್ಕೆ ಬರುತ್ತಿದ್ದು, 17 ದಿನದಲ್ಲಿ 337 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.

ಬಿಸಿಲು-ಮಳೆ, ಹವಾಮಾನ ಬದಲಾವಣೆ ಪರಿಣಾಮ ಡೆಂಗಿ ಪ್ರಕರಣಗಳ ಸಂಖ್ಯೆ ಆಗಸ್ಟ್ ಮೊದಲ ವಾರದ ಬಳಿಕ ಏರಿತ್ತು. ನಿರಂತರ ಮಳೆಯಿಂದಾಗಿ ವಾತಾವರಣವು ಈಡಿಸ್ ಜಾತಿಯ ಸೊಳ್ಳೆಗಳ ಉತ್ಪತ್ತಿಗೆ ಪೂರಕವಾಗಿತ್ತು. ಇದರಿಂದಾಗಿ ಈ ವರ್ಷ ದಿಢೀರ್ ಪ್ರಕರಣಗಳು ಹೆಚ್ಚಳವಾದವು. ಕಳೆದ ತಿಂಗಳು 2,302 ಪ್ರಕರಣಗಳು ದೃಢಪಟ್ಟಿದ್ದವು. ಇದರಿಂದಾಗಿ ಬಿಬಿಎಂಪಿ ಅಧಿಕ ಪ್ರಕರಣಗಳು ವರದಿಯಾಗುತ್ತಿದ್ದ ಸ್ಥಳಗಳನ್ನು ಗುರುತಿಸಿ, ಲಾರ್ವಾ ಉತ್ಪತ್ತಿ ತಾಣಗಳ ನಾಶ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿತ್ತು. ಹೀಗಾಗಿ, ಎರಡು ವಾರಗಳಿಂದ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದೆ.

ಈ ವರ್ಷ ರಾಜ್ಯದಲ್ಲಿ ಡೆಂಗಿ ಜ್ವರಕ್ಕೆ ಒಟ್ಟು ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ನಾಲ್ಕು ಮರಣ ಪ್ರಕರಣಗಳು ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ವರದಿಯಾಗಿದೆ.

ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ಈವರೆಗೆ 33,511 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದೆ. ಅವರಲ್ಲಿ 22,241 ಮಂದಿಯ ರಕ್ತದ ಮಾದರಿಯನ್ನು ಸಂಗ್ರಹಿಸಿ, ಪರೀಕ್ಷೆ ಮಾಡದಲಾಗಿದೆ. ಒಟ್ಟು 6,093 ಮಂದಿಯಲ್ಲಿ ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ರಾಜ್ಯದಲ್ಲಿ ವರದಿಯಾದ ಒಟ್ಟು ಪ್ರಕರಣಗಳಲ್ಲಿ (11,434) ಅರ್ಧಕ್ಕೂ ಅಧಿಕ ಪ್ರಕರಣಗಳು ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ವರದಿಯಾಗಿವೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಈವರೆಗೆ 393 ಶಂಕಿತರನ್ನು ಗುರುತಿಸಿ, 188 ಮಂದಿಯ ರಕ್ತದ ಮಾದರಿ ಪರೀಕ್ಷಿಸಲಾಗಿದೆ. ಅವರಲ್ಲಿ 46 ಮಂದಿಯಲ್ಲಿ ಡೆಂಗಿ ದೃಢಪಟ್ಟಿದೆ.

ಕಳೆದ ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ 75,035 ಶಂಕಿತರನ್ನು ಗುರುತಿಸಿ, 10,866 ಮಂದಿಗೆ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿತ್ತು. ಅವರಲ್ಲಿ 2,313 ಮಂದಿಗೆ ಡೆಂಗಿ ಖಚಿತಪಟ್ಟಿತ್ತು.

34 ಚಿಕೂನ್‌ಗುನ್ಯಾ ಪ್ರಕರಣ: ಬಿಬಿಎಂಪಿ ವ್ಯಾಪ್ತಿಯಲ್ಲಿ ಈವರೆಗೆ 415 ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿದ್ದು, 75 ಮಂದಿಗೆ ರಕ್ತದ ಮಾದರಿಗಳನ್ನು ಪರೀಕ್ಷಿಸಲಾಗಿದೆ. 34 ಮಂದಿಗೆ ಚಿಕೂನ್‌ಗುನ್ಯಾ ದೃಢಪಟ್ಟಿದೆ. ಕಳೆದ ಒಂದು ತಿಂಗಳಿಂದ ಚಿಕೂನ್‌ಗುನ್ಯಾ ಪ್ರಕರಣ ಬಿಬಿಎಂಪಿ ವ್ಯಾಪ್ತಿಯಲ್ಲಿ ವರದಿಯಾಗಿಲ್ಲ. ಕಳೆದ ವರ್ಷ 1,623 ಶಂಕಿತರ ಗುರುತಿಸಲಾಗಿತ್ತು. ಅವರಲ್ಲಿ 14 ಮಂದಿಗೆ ಈ ಜ್ವರ ದೃಢಪಟ್ಟಿತ್ತು.

'ಲಾರ್ವಾ ಉತ್ಪತ್ತಿ ತಾಣಗಳ ನಾಶ ಸೇರಿ ವಿವಿಧ ಮುನ್ನೆಚ್ಚರಿಕೆಯಿಂದ ಡೆಂಗಿ ನಿಯಂತ್ರಣಕ್ಕೆ ಬಂದಿದೆ. ಈ ತಿಂಗಳ ಅಂತ್ಯಕ್ಕೆ ಪೂರ್ಣ ನಿಯಂತ್ರಣಕ್ಕೆ ಬರಲಿದೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

7 ಶೆಡ್, 3 ಕಟ್ಟಡಗಳು ತೆರವು

ಕೆಂಪೇಗೌಡ ಬಡಾವಣೆಯಲ್ಲಿ ಕಾರ್ಯಾಚರಣೆ • ₹ 25 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಅನಧಿಕೃತ ಕಟ್ಟಡ ತೆರವುಗೊಳಿಸಿದ ಜೆಸಿಬಿ ಯಂತ್ರ.

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅನಧಿಕೃತ ಕಟ್ಟಡಗಳ ತೆರವು ಕಾರ್ಯಾಚರಣೆ ಮುಂದುವರಿಸಿದ್ದು, ಮಂಗಳವಾರ ನಡೆದ ಕಾರ್ಯಾಚರಣೆಯಲ್ಲಿ ಕೋಟ್ಯಂತರ ಮೌಲ್ಯದ ಆಸ್ತಿ ವಶಕ್ಕೆ ಪಡೆದುಕೊಂಡಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಅನಧಿಕೃತವಾಗಿ ತಲೆಯೆತ್ತಿದ್ದ ನಿರ್ಮಾಣಗಳನ್ನು ತೆರವುಗೊಳಿಸಿ ಪ್ರಾಧಿಕಾರದ ಆಸ್ತಿಯನ್ನು ಮರುವಶಕ್ಕೆ ಪಡೆದುಕೊಂಡಿದೆ.

ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ. 108 ರಲ್ಲಿನ 5 ಎಕರೆ ಪ್ರದೇಶವನ್ನು ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಅದರಲ್ಲಿ 3 ಎಕರೆ 35 ಗುಂಟೆಯಲ್ಲಿ ಕಂದಾಯ ನಿವೇಶನಗಳನ್ನು ರಚಿಸಲಾಗುತ್ತಿತ್ತು. ಅನಧಿಕೃತ ಕಟ್ಟಡ ನಿರ್ಮಿಸುತ್ತಿದ್ದವರಿಗೆ ಅನೇಕ ಬಾರಿ ನೋಟಿಸ್ ನೀಡಿದ್ದರೂ ನಿರ್ಮಾಣ ಕಾರ್ಯ ಮುಂದುವರಿಸಲಾಗಿತ್ತು. ಮಂಗಳವಾರ ಬೆಳಿಗ್ಗೆ ನಡೆದ ಕಾರ್ಯಾಚರಣೆಯಲ್ಲಿ 7 ಶೆಡ್ ಹಾಗೂ 3 ಕಾಂಕ್ರೀಟ್ ಕಟ್ಟಡ ತೆರವುಗೊಳಿಸಲಾಯಿತು. ಪ್ರಾಧಿಕಾರ ಸುಮಾರು ₹ 25 ಕೋಟಿ ಮೌಲ್ಯದ ಆಸ್ತಿಯನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಅಲ್ಲದೇ ಒತ್ತುವರಿದಾರರ ವಿರುದ್ಧ ಭೂಕಬಳಿಕೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾಧಿಕಾರದ ಎಸ್‌ಪಿ ಕೆ.ನಂಜುಂಡೇಗೌಡ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಅಶೋಕ್ ನೇತೃತ್ವದಲ್ಲಿ ತೆರವು ಕಾರ್ಯ ನಡೆಯಿತು.

ಅರಣ್ಯ ಜಮೀನಿನ ದಾಖಲೆ ಬದಲು: ವರದಿ ಸಲ್ಲಿಕೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ವಿಭಾಗದ ವ್ಯಾಪ್ತಿಯಲ್ಲಿ ಹಿಂದಿನ ಉಪ ವಿಭಾಗಾಧಿಕಾರಿ ಎಂ.ಜಿ.ಶಿವಣ್ಣ, ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದ ಅಜಿತ್ ಕುಮಾರ್ ರೈ ಅವರು ಅರಣ್ಯ ಜಮೀನಿನ ದಾಖಲೆಗಳನ್ನು ಅಕ್ರಮವಾಗಿ 'ಸರ್ಕಾರಿ ಕಂದಾಯ ಜಮೀನು' ಎಂದು ತಿದ್ದುಪಡಿ ಮಾಡಿದ್ದು, ಅದರ ತನಿಖಾ ವರದಿಯನ್ನು ಬೆಂಗಳೂರು ನಗರ ವಿಭಾಗದ ಡಿಸಿಎಫ್ ಎನ್.ರವೀಂದ್ರ ಕುಮಾರ್ ಅವರು ಅರಣ್ಯ ಇಲಾಖೆ ನೋಡಲ್ ಅಧಿಕಾರಿಯೂ ಆಗಿರುವ ಪಿಸಿಸಿಎಫ್ ಅವರಿಗೆ ಸಲ್ಲಿಸಿದ್ದಾರೆ.

ಪೂರ್ವ ತಾಲ್ಲೂಕಿನಲ್ಲಿ ಕೊತ್ತನೂರಿನ ಸರ್ವೆ ನಂ. 47ರಲ್ಲಿ 17 ಎಕರೆ 34 ಗುಂಟೆಯನ್ನು ಸರ್ಕಾರಿ ಕಂದಾಯ ಜಮೀನಾಗಿ ತಿದ್ದುಪಡಿ ಮಾಡಲಾಗಿದೆ. ಅರಣ್ಯ ಇಲಾಖೆ ಹೆಸರಿನಲ್ಲಿ ಜಮೀನಿನ ದಾಖಲೆಗಳಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ₹ 500 ಕೋಟಿ ಮೌಲ್ಯದ 18 ಎಕರೆಯನ್ನು ಅರಣ್ಯ ಜಮೀನಿನ ದಾಖಲೆಗಳನ್ನು ಅಕ್ರಮವಾಗಿ 'ಸರ್ಕಾರಿ ಕಂದಾಯ ಜಮೀನು' ಎಂದು ತಿದ್ದುಪಡಿ ಮಾಡಿರುವುದು ಪತ್ತೆಯಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸಾರ್ವಜನಿಕರ ದೂರು ಆಧರಿಸಿ, ತನಿಖೆಗೆ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಸೂಚಿಸಿದ್ದರು.

ಅರಣ್ಯ ಜಮೀನು ಕಬಳಿಸಲು ದಾಖಲೆಗಳನ್ನು ಬದಲಿಸಲಾಗಿದೆ' ಎಂಬ ಅಂಶ ವರದಿಯಲ್ಲಿದೆ. ಅಕ್ರಮ ಎಸಗಿರುವುದು ದಾಖಲೆ ಪರಿಶೀಲನೆ ವೇಳೆ ಗೊತ್ತಾಗಿದೆ.



ಅಕ್ರಮ ಸಂಬಂಧಕ್ಕೆ ಅಡ್ಡಿ • ನಿದ್ರೆ ಮಾತ್ರೆ ಬೆರೆಸಿದ್ದ ಮುದ್ದೆ ತಿನ್ನಿಸಿ ಕೊಲೆ • ಸೊಸೆ ಬಂಧನ

ಅತ್ತೆ ಕೊಂದು ಹೃದಯಾಘಾತ ನಾಟಕ

ಪ್ರಜಾವಾಣಿ ವಾರ್ತೆ

ರಶ್ಮಿ ಲಕ್ಕಮ್ಮ ಅಕ್ಷಯ್ ಪುರುಷೋತ್ತಮ್

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಲಕ್ಕಮ್ಮ (52) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಸೊಸೆ ರಶ್ಮಿ ಸೇರಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಲಕ್ಕಮ್ಮ ಅವರನ್ನು ಕೊಲೆ ಮಾಡಿದ್ದ ಆರೋಪಿಗಳು, ಹೃದಯಾಘಾತವೆಂದು ನಾಟಕವಾಡಿದ್ದರು. ಲಕ್ಕಮ್ಮ ಅವರ ಮಗ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡು, ಆರೋಪಿ ರಶ್ಮಿ, ಪ್ರಿಯಕರ ಅಕ್ಷಯ್ ಹಾಗೂ ಪುರುಷೋತ್ತಮ್‌ನನ್ನು ಬಂಧಿಸಲಾಗಿದೆ' ಎಂದು ಕಮಿಷನರ್ ಬಿ. ದಯಾನಂದ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಲಕ್ಕಮ್ಮ ಅವರ ಮಗ ಮಂಜುನಾಥ್, ಸಾಫ್ಟ್‌ವೇರ್ ಕಂಪನಿ ಉದ್ಯೋಗಿ. 10 ವರ್ಷಗಳ ಹಿಂದೆ ರಶ್ಮಿ ಜೊತೆ ಮದುವೆಯಾಗಿತ್ತು. ಬಹುಮಹಡಿ ಕಟ್ಟಡದಲ್ಲಿ ಮಂಜುನಾಥ್-ರಶ್ಮಿ ಕುಟುಂಬ ವಾಸವಿತ್ತು. ಅದೇ ಕಟ್ಟಡದ ಮೊದಲ ಮಹಡಿಯ ಮನೆಯಲ್ಲಿ ಆರೋಪಿ ಅಕ್ಷಯ್ ಬಾಡಿಗೆಗಿದ್ದ' ಎಂದು ತಿಳಿಸಿದರು.

ಅಕ್ಷಯ್ ಜೊತೆ ಅಕ್ರಮ ಸಂಬಂಧ: 'ಬಣ್ಣಗಳ ಮಾರಾಟ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅಕ್ಷಯ್, ಮನೆಯಲ್ಲಿ ಒಬ್ಬನೇ ಇರುತ್ತಿದ್ದ. ಮಂಜುನಾಥ್ ಅವರು ನಿತ್ಯವೂ ಬೆಳಿಗ್ಗೆ ಕೆಲಸಕ್ಕೆ ಹೋದರೆ, ರಾತ್ರಿಯೇ ವಾಪಸು ಬರುತ್ತಿದ್ದರು. ರಶ್ಮಿ ಹಾಗೂ ಲಕ್ಕಮ್ಮ ಮಾತ್ರ ಮನೆಯಲ್ಲಿರುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

'ರಶ್ಮಿ ಜೊತೆ ಅಕ್ಷಯ್ ಸ್ನೇಹ ಬೆಳೆಸಿದ್ದ. ನಂತರ, ಇಬ್ಬರ ನಡುವೆ ಅಕ್ರಮ ಸಂಬಂಧ ಏರ್ಪಟ್ಟಿತ್ತು. ಪತಿ ಕೆಲಸಕ್ಕೆ ಹೋಗುತ್ತಿದ್ದಂತೆ ಅಕ್ಷಯ್ ಜೊತೆ ರಶ್ಮಿ ಕಾಲ ಕಳೆಯುತ್ತಿದ್ದರು. ಆದರೆ, ಲಕ್ಕಮ್ಮ ಮನೆಯಲ್ಲಿದ್ದಾಗ ಅವರಿಬ್ಬರ ಏಕಾಂತಕ್ಕೆ ತೊಂದರೆ ಉಂಟಾಗುತ್ತಿತ್ತು' ಎಂದು ತಿಳಿಸಿವೆ.

ನಿದ್ದೆ ಮಾತ್ರೆ ಬೆರೆಸಿದ್ದ ಮುದ್ದೆ ತಿನ್ನಿಸಿ ಕೊಲೆ: 'ಚೀಟಿ ವ್ಯವಹಾರದಲ್ಲಿ ಲಕ್ಕಮ್ಮ ಹಾಗೂ ರಶ್ಮಿ ನಡುವೆ ಜಗಳವಾಗಿತ್ತು. ಅತ್ತೆ ಕೊಲ್ಲಲು ಯೋಚಿಸಿದ್ದ ರಶ್ಮಿ, ಅಕ್ಷಯ್‌ಗೆ ವಿಷಯ ತಿಳಿಸಿದ್ದರು. 'ನಮ್ಮಿಬ್ಬರ ಸಂಬಂಧಕ್ಕೆ ಅತ್ತೆ ಅಡ್ಡಿಯಾಗುತ್ತಿದ್ದಾರೆ. ಅವರನ್ನು ಕೊಲೆ ಮಾಡಿದರೆ, ನಾವಿಬ್ಬರೂ ಚೆನ್ನಾಗಿ ಇರಬಹುದು' ಎಂದು ಹೇಳಿದ್ದರು. ಅದಕ್ಕೆ ಅಕ್ಷಯ್ ಒಪ್ಪಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅ. 5ರಂದು ಮಧ್ಯಾಹ್ನ ನಿದ್ದೆ ಮಾತ್ರೆ ಬೆರೆಸಿ ರಾಗಿ ಮುದ್ದೆ ತಯಾರಿಸಿದ್ದ ರಶ್ಮಿ, ಅತ್ತೆ ಲಕ್ಕಮ್ಮ ಅವರಿಗೆ ತಿನ್ನಿಸಿದ್ದರು. ಇದರಿಂದಾಗಿ ಲಕ್ಕಮ್ಮ ನಿದ್ರೆಗೆ ಜಾರಿದ್ದರು. ಇದೇ ಸಂದರ್ಭದಲ್ಲಿ ಮನೆಗೆ ಬಂದಿದ್ದ ಅಕ್ಷಯ್ ಹಾಗೂ ಈತನ ಸ್ನೇಹಿತ ಪುರುಷೋತ್ತಮ್, ಕತ್ತು ಹಿಸುಕಿ ಲಕ್ಕಮ್ಮ ಅವರನ್ನು ಕೊಂದು ಸ್ಥಳದಿಂದ ಹೊರಟು ಹೋಗಿದ್ದರು' ಎಂದು ತಿಳಿಸಿವೆ.

'ಮನೆಯಲ್ಲಿ ಚೀರಾಡಿದ್ದ ರಶ್ಮಿ, 'ನಮ್ಮ ಅತ್ತೆ ಹೃದಯಾಘಾತದಿಂದ ತೀರಿಕೊಂಡರು' ಎಂದು ಸ್ಥಳೀಯರನ್ನು ಸೇರಿಸಿದ್ದರು. ಸಂಬಂಧಿಕರಿಗೂ ವಿಷಯ ಗೊತ್ತಾಗಿತ್ತು. ನಂತರ, ಮೃತದೇಹವನ್ನು ಸ್ವಂತ ಊರಾದ ಕುಣಿಗಲ್ ತಾಲ್ಲೂಕಿನ ಮುದಿಗೆರೆ ಶೆಟ್ಟಿಪಾಳ್ಯಕ್ಕೆ ಕೊಂಡೊಯ್ದು ಅಂತ್ಯಸಂಸ್ಕಾರವನ್ನೂ ನೆರವೇರಿಸಲಾಗಿತ್ತು. ಕೊಲೆ ಬಗ್ಗೆ ಯಾರಿಗೂ ಅನುಮಾನ ಬಂದಿರಲಿಲ್ಲ' ಎಂದು ಪೊಲೀಸ್ ಮೂಲಗಳು ಹೇಳಿವೆ.

ವಾಟ್ಸ್‌ಆ್ಯಪ್ ಚಾಟಿಂಗ್ ನೀಡಿದ ಸುಳಿವು: 'ಕೊಲೆ ನಡೆದು 9 ದಿನಗಳ ನಂತರ ಅಕ್ಷಯ್ ಸ್ನೇಹಿತನೊಬ್ಬ, ಲಕ್ಕಮ್ಮ ಅವರ ಮಗನಿಗೆ ಮಾಹಿತಿ ನೀಡಿದ್ದರು. 'ನಿಮ್ಮ ತಾಯಿಯನ್ನು ಪತ್ನಿ ಹಾಗೂ ಪ್ರಿಯಕರ ಅಕ್ಷಯ್ ಸೇರಿಕೊಂಡು ಕೊಂದಿದ್ದಾರೆ. ಈ ಬಗ್ಗೆ ಅವರಿಬ್ಬರು ವಾಟ್ಸ್‌ಆ್ಯಪ್‌ನಲ್ಲಿ ಚಾಟಿಂಗ್ ಮಾಡಿರುವುದನ್ನು ನಾನು ನೋಡಿದ್ದೇನೆ' ಎಂದಿದ್ದರು. ಅವಾಗಲೇ ಮಗ, ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಶ್ಮಿ ಹಾಗೂ ಅಕ್ಷಯ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ತಪ್ಪೊಪ್ಪಿಕೊಂಡರು. ನಂತರ, ಪುರುಷೋತ್ತಮ್ ಸಹ ಸಿಕ್ಕಿಬಿದ್ದ. ಇದೀಗ ಮೂವರನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ' ಎಂದು ಮೂಲಗಳು ಹೇಳಿವೆ.

ಲಾಂಗ್ ತೋರಿಸಿ ನಗದು-ಮೊಬೈಲ್ ಸುಲಿಗೆ

ಬೆಂಗಳೂರು: ಸರಸ್ವತಿಪುರದಲ್ಲಿ ದ್ವಿಚಕ್ರ ವಾಹನ ಸವಾರರೊಬ್ಬರನ್ನು ಅಡ್ಡಗಟ್ಟಿ ನಗದು ಹಾಗೂ ಮೊಬೈಲ್ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಹಲಸೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸುಲಿಗೆ ಸಂಬಂಧ ಸಂತ್ರಸ್ತ ವೆಂಕಟೇಶ್ ಪ್ರಸಾದ್ ಅವರು ಹಲಸೂರು ಠಾಣೆಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಮುಂದುವರಿಸಿದ್ದಾರೆ.

'25 ವರ್ಷಗಳಿಂದ ಪತ್ರಿಕಾ ವಿತರಕನಾಗಿ ಕೆಲಸ ಮಾಡುತ್ತಿದ್ದೇನೆ. ಮಂಗಳವಾರ ನಸುಕಿನ 3.50 ಗಂಟೆ ಸುಮಾರಿಗೆ ಪತ್ರಿಕೆ ತೆಗೆದುಕೊಂಡು ದ್ವಿಚಕ್ರ ವಾಹನದಲ್ಲಿ ಸರಸ್ವತಿಪುರದ ಮುಖ್ಯ ಚಾನಲ್ ರಸ್ತೆಯಲ್ಲಿ ಹೊರಟಿದ್ದೆ. ರಸ್ತೆಯಲ್ಲಿ ನನ್ನನ್ನು ಅಡ್ಡಗಟ್ಟಿದ್ದ ಇಬ್ಬರು ಅಪರಿಚಿತರು, ಲಾಂಗ್ ತೋರಿಸಿ ಬೆದರಿಸಿದ್ದರು' ಎಂದು ದೂರಿನಲ್ಲಿ ವೆಂಕಟೇಶ್ ಪ್ರಸಾದ್ ತಿಳಿಸಿದ್ದಾರೆ.

'ಕೊಲೆ ಮಾಡುವುದಾಗಿ ಬೆದರಿಸಿದ್ದ ಆರೋಪಿಗಳು, ಮೊಬೈಲ್, ದ್ವಿಚಕ್ರ ವಾಹನ ಕೀ ಹಾಗೂ ₹200 ನಗದು ಕಸಿದುಕೊಂಡು ಸ್ಥಳದಿಂದ ಪರಾರಿಯಾಗಿದ್ದಾರೆ. ಆರೋಪಿಗಳನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಿ' ಎಂದೂ ಉಲ್ಲೇಖಿಸಿದ್ದಾರೆ.

ಸುಲಿಗೆ ಪ್ರಕರಣ ಹೆಚ್ಚಳ: 'ಹಲಸೂರು ಹಾಗೂ ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಸುಲಿಗೆ ಪ್ರಕರಣಗಳು ಹೆಚ್ಚಾಗುತ್ತಿವೆ' ಎಂದು ಸ್ಥಳೀಯರು ದೂರಿದರು.

'ಮನೆ ಮನೆಗೆ ಪತ್ರಿಕೆ, ಹಾಲು ವಿತರಣೆ ಮಾಡುವವರು ಹಾಗೂ ಇತರೆ ಕಾರ್ಮಿಕರು, ರಸ್ತೆಯಲ್ಲಿ ನಸುಕಿನಲ್ಲಿ ಒಂಟಿಯಾಗಿ ಓಡಾಡುತ್ತಾರೆ. ಇಂಥವರನ್ನೇ ಗುರಿಯಾಗಿಸಿಕೊಂಡು ದುಷ್ಕರ್ಮಿಗಳು ಕೃತ್ಯ ಎಸಗುತ್ತಿದ್ದಾರೆ. ನಸುಕಿನ ಅವಧಿಯಲ್ಲಿ ಪೊಲೀಸರು ಗಸ್ತು ತಿರುಗುವುದನ್ನು ಕಡಿಮೆ ಮಾಡಿದ್ದು, ಇದು ಆರೋಪಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಪೊಲೀಸರು ಗಸ್ತು ತಿರುಗುವುದನ್ನು ಚುರುಕುಗೊಳಿಸಬೇಕು' ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

'ಕೈಗಾರಿಕಾ ಪ್ರದೇಶಕ್ಕೆ ಲೋಡ್ ಶೆಡ್ಡಿಂಗ್ ಇಲ್ಲ'

ಬೆಂಗಳೂರು: 'ಕೈಗಾರಿಕಾ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ. ನಿರಂತರ ವಿದ್ಯುತ್ ಪೂರೈಸಲಾಗುವುದು' ಎಂದು ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತಾ ತಿಳಿಸಿದರು.

ಬೆಸ್ಕಾಂ ವಲಯದ ಕೈಗಾರಿಕಾ ಪ್ರತಿನಿಧಿಗಳ ಜತೆಗೆ ಮಂಗಳವಾರ ನಡೆದ ವಿಡಿಯೊ ಸಂವಾದದಲ್ಲಿ ಅವರು ಕೈಗಾರಿಕಾ ಘಟಕಗಳ ಪ್ರತಿನಿಧಿಗಳಿಗೆ ಭರವಸೆ ನೀಡಿದರು.

'ರಾಜ್ಯ ವಿದ್ಯುತ್ ಅಭಾವ ಎದುರಿಸುತ್ತಿದ್ದರೂ ಬೆಸ್ಕಾಂ ವಲಯದ ಕೈಗಾರಿಕಾ ಪ್ರದೇಶಗಳಿಗೆ ನಿರಂತರ ವಿದ್ಯುತ್ ನೀಡಲಾಗುವುದು' ಎಂದು ಹೇಳಿದರು.

'ಕೈಗಾರಿಕೋದ್ಯಮಿಗಳು ಆತಂಕ ಪಡುವ ಅಗತ್ಯ ಇಲ್ಲ. ಹೆಚ್ಚುವರಿ ವಿದ್ಯುತ್ ಖರೀದಿಗೆ ಈಗಾಗಲೇ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ' ಎಂದು ಬೆಸ್ಕಾಂ ವ್ಯವಸ್ಥಾಕ ನಿರ್ದೇಶಕ ಮಹಾಂತೇಶ್ ಬೀಳಗಿ ಮಾಹಿತಿ ನೀಡಿದರು.

ಕೈಗಾರಿಕಾ ಪ್ರದೇಶಕ್ಕೆ ವಿದ್ಯುತ್ ಪೂರೈಕೆಯಲ್ಲಿ ಇದುವರೆಗೂ ವ್ಯತ್ಯಾಸ ಮಾಡಿಲ್ಲ. ಕೆಲವು ದಿನಗಳಿಂದ ಲೋಡಿ ಶೆಡ್ಡಿಂಗ್ ಸುದ್ದಿ ಹರಿದಾಡುತ್ತಿತ್ತು. ಅವರ ಸಂಶಯ ಹೋಗಲಾಡಿಸಲು ವಿಡಿಯೊ ಸಂವಾದ ನಡೆಸಲಾಯಿತು. ಸಂವಾದದಲ್ಲಿ ಕೈಗಾರಿಕೋದ್ಯಮಿಗಳು ತಮ್ಮ ಅಳಲು ತೋಡಿಕೊಂಡರು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಪೀಣ್ಯ, ಬಿಡದಿ, ಹೊಸಕೋಟೆ, ಎಲೆಕ್ಟ್ರಾನಿಕ್ ಸಿಟಿ, ಕುಂಬಳಗೋಡು, ಮಾಲೂರು, ನೆಲಮಂಗಲ, ದಾಬಸ್‌ಪೇಟೆ, ದಾವಣಗೆರೆ, ತುಮಕೂರು, ಕೋಲಾರ, ಗೌರಿಬಿದನೂರು, ವೈಟ್‌ಫೀಲ್ಡ್, ಹೆರೋಹಳ್ಳಿ ಕೈಗಾರಿಕಾ ವಲಯಗಳ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಎಂ.ಜಿ.ರಸ್ತೆಯಲ್ಲಿ ಸಂಚಾರಕ್ಕೆ ಅಡ್ಡಿ: ಪ್ರತಿಭಟನಕಾರರ ವಿರುದ್ಧ ಎಫ್‌ಐಆರ್

ಬೆಂಗಳೂರು: 'ಗಾಜಾ ಮೇಲೆ ಇಸ್ರೇಲ್ ನಡೆಸುತ್ತಿರುವ ದಾಳಿಯನ್ನು ಭಾರತ ಖಂಡಿಸಬೇಕು' ಎಂದು ಒತ್ತಾಯಿಸಿ ದಿಢೀರ್ ಪ್ರತಿಭಟನೆ ನಡೆಸಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಪ್ರತಿಭಟನಾಕಾರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಬಹುತ್ವ ಕರ್ನಾಟಕ ಹಾಗೂ ಇತರೆ ಸಂಘಟನೆಗಳು, ಎಂ.ಜಿ. ರಸ್ತೆಯಲ್ಲಿ ಸೋಮವಾರ (ಅ. 16) ಪ್ರತಿಭಟನೆ ನಡೆಸಿದ್ದವು. ಪ್ರತಿಭಟನಾಕಾರರ ವಿರುದ್ಧ ಸ್ವಯಂಪ್ರೇರಿತ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ. 'ವಿನಯ್ ಶ್ರೀನಿವಾಸ್, ಬಾಬು ಪ್ರಸಾದ್ ಎ.ಎಸ್., ಫಹಾದ್ ಖಾನ್, ಇಮ್ರಾನ್, ಮೊಹಮ್ಮದ್ ಅಶ್ವಾಸ್, ಸೈಯದ್ ಅಬ್ಬಾಸ್, ಲಿಯೊ ಜಾನ್, ಮೊಹಮ್ಮದ್ ಸೈಫುದ್ದೀನ್, ಮೊಹಮ್ಮದ್ ಇಸ್ಮಾಯಿಲ್, ಸುಹೇಬ್, ಉಮರ್ ಹಾಗೂ ಇತರರನ್ನು ಆರೋಪಿಯನ್ನಾಗಿ ಮಾಡಲಾಗಿದೆ' ಎಂದಿವೆ.

'ಬಹುತ್ವ ಕರ್ನಾಟಕ ಸಂಘಟನೆಯ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಪ್ರತಿಭಟನೆ ಬಗ್ಗೆ ಸಂದೇಶ ಕಳುಹಿಸಲಾಗಿತ್ತು. ಅದರಂತೆ ಸುಮಾರು 150 ಮಂದಿ, ಎಂ.ಜಿ. ರಸ್ತೆಯಲ್ಲಿ ಸೇರಿದ್ದರು. ಪಾದಚಾರಿ ಮಾರ್ಗದಲ್ಲಿ ಸಾಲುಗಟ್ಟಿ ನಿಂತು ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ಇದರಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗಿತ್ತು.'

'ನಗರದ ಸ್ವಾತಂತ್ರ್ಯ ಉದ್ಯಾನ ಹೊರತುಪಡಿಸಿದರೆ, ಬೇರೆ ಯಾವ ಭಾಗದಲ್ಲೂ ಪ್ರತಿಭಟನೆಗೆ ಅವಕಾಶವಿಲ್ಲ. ಈ ಬಗ್ಗೆ ಹೈಕೋರ್ಟ್ ಆದೇಶವಿದೆ. ಅಷ್ಟಾದರೂ ಪ್ರತಿಭಟನಕಾರರು, ಯಾವುದೇ ಅನುಮತಿ ಪಡೆಯದೇ ಅಕ್ರಮವಾಗಿ ಗುಂಪು ಸೇರಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ನೀರಿಗೆ ಹಾಹಾಕಾರ

ಬನ್ನೇರಘಟ್ಟ ರಸ್ತೆಯ ಜೇಡಿಮರ ಕೊಳೆಗೇರಿಯಲ್ಲಿ ಮಹಿಳೆಯೊಬ್ಬರು ಸಾರ್ವಜನಿಕ ನಲ್ಲಿಯಲ್ಲಿ ನೀರು ತುಂಬಿಸಿಕೊಂಡು ಬಿಂದಿಗೆ ಕೊಂಡೊಯ್ಯುತ್ತಿದ್ದ ದೃಶ್ಯ ಮಂಗಳವಾರ ಕಂಡುಬಂತು ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ವಕೀಲ ಅಮಿತ್ ಕೇಶವಮೂರ್ತಿ ಕೊಲೆ ಪ್ರಕರಣ

ಅಂತಿಮ ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲದ ಖ್ಯಾತ ವಕೀಲ ಕೇಶವಮೂರ್ತಿ ಅವರ ಪುತ್ರ ವಕೀಲ ಅಮಿತ್ ಕೇಶವಮೂರ್ತಿ ಕೊಲೆ ಪ್ರಕರಣದ ಅಂತಿಮ ವಿಚಾರಣೆಯನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಹೊಸಮನಿ ಪುಂಡಲೀಕ ಅವರು ಮಂಗಳವಾರ ಆರಂಭಿಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು, 'ಪ್ರಕರಣದ ಪ್ರತ್ಯಕ್ಷ ಸಾಕ್ಷಿಯಾದ ಕಾರಿನ ಚಾಲಕ ಪ್ರಾಸಿಕ್ಯೂಷನ್‌ಗೆ ಪೂರಕವಾದ ಪೂರ್ಣ ಸಾಕ್ಷ್ಯ ನೀಡಿಲ್ಲ. ಆದರೆ, ಕೊಲೆಯಾದ ಸ್ಥಳದಲ್ಲಿ ಇದ್ದ ಬಗ್ಗೆ ಸಾಕ್ಷ್ಯ ನುಡಿದಿದ್ದಾನೆ. ಆದರೆ, ಆತನ ಪರ ವಕೀಲರು ಇಡೀ ಪ್ರಕರಣಕ್ಕೆ ಹೊಸ ಕಥೆಯೊಂದನ್ನು ಹೆಣೆದು ಮತ್ತೊಂದು ತಿರುವು ಸೃಷ್ಟಿಸಿದ್ದಾರೆ. ಹೀಗಾಗಿ, ಆರೋಪಿಯು ಹೇಳಿಕೆಯಲ್ಲಿ ತಂದಿರುವ ಹೊಸ ಕಥೆಗೆ ಪೂರಕ ಸಾಕ್ಷಿ ದೊರಕುವುದಿಲ್ಲ' ಎಂದು ಆಕ್ಷೇಪಿಸಿದರು.

ಅಮಿತ್ ಮತ್ತು ಶ್ರುತಿ

ಕೋರ್ಟ್ ಕಲಾಪದ ಅವಧಿ ಮುಕ್ತಾಯವಾದ ಕಾರಣ ವಿಚಾರಣೆಯನ್ನು ಬುಧವಾರಕ್ಕೆ (ಅ.19) ಮುಂದೂಡಲಾಗಿದೆ.

ಏನಿದು ಘಟನೆ?: 'ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಆಚಾರ್ಯ ಎಂಜಿನಿಯರಿಂಗ್ ಕಾಲೇಜು ಬಳಿ 2017ರ ಜನವರಿ 13ರಂದು ಮಧ್ಯಾಹ್ನ 3.15ರ ಸಮಯದಲ್ಲಿ ಅಮಿತ್ ಕೇಶವಮೂರ್ತಿ ಅವರು ಆರೋಪಿ ರಾಜೇಶ್ ಅವರ ಪತ್ನಿ ಪಿಡಿಒ ಶ್ರುತಿಗೌಡ ಅವರೊಂದಿಗೆ ಸ್ವಿಫ್ಟ್ ಕಾರಿನಲ್ಲಿ ಕುಳಿತಿದ್ದರು. ಶ್ರುತಿ ಗೌಡ ಅವರಿಗೆ ಸೇರಿದ ಈ ಕಾರನ್ನು ಹಿಂಬಾಲಿಸಿಕೊಂಡು ಬಂದಿದ್ದ ರಾಜೇಶ್, ಕಾರಿನ ಬಾಗಿಲು ತೆರೆದು ತಮ್ಮ ಬಳಿ ಇದ್ದ ಪಿಸ್ತೂಲಿನಿಂದ ಅಮಿತ್ ಮೇಲೆ ಏಕಾಏಕಿ ಗುಂಡು ಹಾರಿಸಿ ಕೊಂದಿದ್ದರು. ಶ್ರುತಿ ಗೌಡ ಅವರ ನಡೆ ಮತ್ತು ಚಟುವಟಿಕೆಗಳ ಮೇಲೆ ಸದಾ ಸಂಶಯ ವ್ಯಕ್ತಪಡಿಸುತ್ತಿದ್ದ ರಾಜೇಶ್, ಶ್ರುತಿ ಬಳಸುವ ಕಾರಿಗೆ ಜಿಪಿಎಸ್ ಅಳವಡಿಸಿ ಅದರ ಮುಖಾಂತರ ಅವರಿದ್ದ ಸ್ಥಳಕ್ಕೆ ಹಿಂಬಾಲಿಸಿಕೊಂಡು ಬಂದಿದ್ದರು. ಅಮಿತ್ ಮೃತಪಟ್ಟ ಸುದ್ದಿ ತಿಳಿದ ನಂತರ ಶ್ರುತಿಗೌಡ ಲಾಡ್ಜ್‌ನಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಅಮಿತ್ ಕೇಶವಮೂರ್ತಿ ಅಮೆರಿಕದಲ್ಲಿ ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಪಡೆದಿದ್ದರು. ನೆಲಮಂಗಲ ಮತ್ತು ಬೆಂಗಳೂರು ನಗರದಲ್ಲಿ ವಕೀಲಿಕೆ ನಡೆಸುತ್ತಿದ್ದರು.

ಬಿಜೆಪಿ ಹಾಗೂ ಜೆಡಿಎಸ್‌ನ ಕಾರ್ಯಕರ್ತರು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಸಂಸದ ಡಿ.ಕೆ. ಸುರೇಶ್, ಕಗ್ಗಲೀಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೃತ್ ರಾಜ್, ಮುಖಂಡರಾದ ಶಿವಮಾದಯ್ಯ, ಡೈರಿ ಶಿವಣ್ಣ, ಚಿಕ್ಕರಾಯಪ್ಪ, ರುದ್ರಸ್ವಾಮಿ ಇದ್ದಾರೆ

'ಧರ್ಮದ ಹೆಸರಲ್ಲಿ ಸಮಾಜ ಒಡೆಯುತ್ತಿರುವ ಬಿಜೆಪಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸರ್ವ ಜನಾಂಗದ ಅಭಿವೃದ್ಧಿಗಾಗಿ ಕಾಂಗ್ರೆಸ್ ಶ್ರಮಿಸುತ್ತಿದ್ದರೆ, ಕೋಮುವಾದಿ ಬಿಜೆಪಿ ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುವ ಕಾಯಕದಲ್ಲಿ ತೊಡಗಿದೆ ಎಂದು ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಆರೋಪಿಸಿದರು.

ಯಶವಂತಪುರ ಕ್ಷೇತ್ರದ ವಾಜರಹಳ್ಳಿಯಲ್ಲಿ ಆಯೋಜಿಸಲಾಗಿದ್ದ ನವರಾತ್ರಿ ಮಹೋತ್ಸವ ಹಾಗೂ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೆಡಿಎಸ್ ಸಿದ್ಧಾಂತ ರಹಿತ ಪಕ್ಷ. ಅಧಿಕಾರಕ್ಕಾಗಿ ಜೆಡಿಎಸ್ ನಾಯಕರು ಎಲ್ಲರೊಂದಿಗೂ ಮೈತ್ರಿ ಮಾಡಿಕೊಳ್ಳುತ್ತಾರೆ. ಕಾರ್ಯಕರ್ತರ ಅಭಿಪ್ರಾಯ ಅಲ್ಲಿ ನಗಣ್ಯ ಎಂದು ಲೇವಡಿ ಮಾಡಿದರು.

ರಾಜ್ಯದ ಅಭಿವೃದ್ಧಿಗಾಗಿ ಅನ್ಯ ಪಕ್ಷೀಯರು ಪಕ್ಷಕ್ಕೆ ಸೇರ್ಪಡೆಗೊಳ್ಳಲು ಮುಕ್ತ ಅವಕಾಶವಿದೆ ಎಂದರು.

250ಕ್ಕೂ ಹೆಚ್ಚು ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಕೈ ಸೇರ್ಪಡೆಯಾದರು. ಕಗ್ಗಲೀಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮೃತ್ ರಾಜ್, ಮುಖಂಡರಾದ ಶಿವಮಾದಯ್ಯ, ಡೈರಿ ಶಿವಣ್ಣ, ಚಿಕ್ಕರಾಯಪ್ಪ, ರುದ್ರಸ್ವಾಮಿ, ರೋಹಿಣಿ ಇದ್ದರು.

ಶ್ರೀಕಿ ಸಹೋದರನ ವಿರುದ್ಧದ ಎಲ್‌ಒಸಿ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಪ್ರಕರಣದ ಆರೋಪಿ ಶ್ರೀಕಿ ಅಲಿಯಾಸ್ ಶ್ರೀಕೃಷ್ಣ ಅವರ ಸಹೋದರ ಸುದರ್ಶನ್ ರಮೇಶ್ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಹೊರಡಿಸಿದ್ದ ಲುಕ್ ಔಟ್ ಸುತ್ತೋಲೆಯನ್ನು (ಎಲ್‌ಒಸಿ) ಹೈಕೋರ್ಟ್ ರದ್ದುಪಡಿಸಿದೆ.

ಎಲ್‌ಒಸಿ ರದ್ದುಪಡಿಸುವಂತೆ ಕೋರಿ ಸುದರ್ಶನ್ ರಮೇಶ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಚಂದನ್‌ಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ತನಿಖೆಯ ವೇಳೆ ಆಕ್ಷೇಪಾರ್ಹ ವಿಚಾರಗಳು ಕಂಡುಬಂದಲ್ಲಿ ಇ.ಡಿ ಸಮನ್ಸ್ ನೀಡಿದರೆ ಅರ್ಜಿದಾರರು ಹಾಜರಾಗಬೇಕು. ತಮ್ಮ ಇ-ಮೇಲ್ ಐಡಿ, ಸಂಪರ್ಕ ವಿವರ ಮತ್ತು ಶಾಶ್ವತ ವಿಳಾಸವನ್ನು ನೀಡಬೇಕು' ಎಂದು ನ್ಯಾಯಪೀಠ ಅರ್ಜಿದಾರರಿಗೆ ತಾಕೀತು ಮಾಡಿದೆ. ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್, 'ಅರ್ಜಿದಾರರ ಸಹೋದರನ ವಿರುದ್ಧ ಗಂಭೀರ ಆರೋಪವಿದೆ. ಈ ಕಾರಣಕ್ಕಾಗಿ ಎಲ್‌ಒಸಿ ಹೊರಡಿಸಲಾಗಿದೆ. ಒಂದು ವೇಳೆ ಈ ಸುತ್ತೋಲೆಯನ್ನು ಹಿಂಪಡೆದಲ್ಲಿ ಅರ್ಜಿದಾರರು ವಿದೇಶಕ್ಕೆ ತೆರಳಲಿದ್ದು, ತನಿಖೆಗೆ ಸಹಕರಿಸದೇ ಇರಬಹುದು. ಹೀಗಾಗಿ ಎಲ್‌ಒಸಿ ರದ್ದು ಮಾಡಲಾಗದು' ಎಂದು ಪ್ರತಿಪಾದಿಸಿದ್ದರು.

ಕೆಂಭಾವಿ: ಪಿಡಿಒ ಅಮಾನತು

ಪ್ರಜಾವಾಣಿ ವಾರ್ತೆ

ಕೆಂಭಾವಿ: ಇಲ್ಲಿಗೆ ಸಮೀಪದ ಮಲ್ಲಾ(ಬಿ) ಗ್ರಾಮದಲ್ಲಿ ಶುದ್ಧ ಕುಡಿಯುವ ಘಟಕದ ನಲ್ಲಿ ಮುರಿದ ವಿಚಾರಕ್ಕೆ ಗ್ರಾಮಸ್ಥರ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿ ಪಿಡಿಒ ಪುತ್ರಪ್ಪಗೌಡ ಅವರನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗರಿಮಾ ಪಂವಾರ ಅಮಾನತು ಮಾಡಿದ್ದಾರೆ.

ಕುಡಿಯಲು ನೀರು ಬಾರದ್ದರಿಂದ ಆಕ್ರೋಶಗೊಂಡ ಗ್ರಾಮಸ್ಥರು ನಲ್ಲಿ(ನಳ) ಮುರಿದಿದ್ದರಿಂದ ಸಿಟ್ಟಿಗೆದ್ದ ಪಿಡಿಒ ಚಪ್ಪಲಿಯಿಂದ ಹಲ್ಲೆ ನಡೆಸಿದ್ದರು. ಚಪ್ಪಲಿಯಿಂದ ಹೊಡೆದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಶಾಲಾ ಮಕ್ಕಳಿಗೆ ಲೈಂಗಿಕ ಕಿರುಕುಳ: ಅಪರಾಧಿಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಶಾಲಾ ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ ಅಪರಾಧಿ ಮಾದೇವನಿಗೆ (24) ಮೂರು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಬೊಮ್ಮನಹಳ್ಳಿ ಠಾಣೆಯಲ್ಲಿ 2019ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶೆ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

ಕಾವೇರಿ ನಗರದ ನಿವಾಸಿ ಮಾದೇವ, ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಬಾಲಕಿಯರು ನಡೆದುಕೊಂಡು ಶಾಲೆ ಹೋಗುತ್ತಿದ್ದ ರಸ್ತೆಯಲ್ಲಿ ನಿಲ್ಲುತ್ತಿದ್ದ ಈತ, ಅಸಭ್ಯವಾಗಿ ವರ್ತಿಸುತ್ತಿದ್ದ. ಬಾಲಕಿಯರನ್ನು ಅಡ್ಡಗಟ್ಟಿ ಲೈಂಗಿಕ ಕಿರುಕುಳ ನೀಡುತ್ತಿದ್ದ. ನೊಂದ ಬಾಲಕಿಯರು, ಶಿಕ್ಷಕರಿಗೆ ವಿಷಯ ತಿಳಿಸಿದ್ದರು. ಅಪರಾಧಿ ವಿರುದ್ಧ ಶಿಕ್ಷಕರು ದೂರು ನೀಡಿದ್ದರು.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಇನ್‌ಸ್ಪೆಕ್ಟರ್ ಶಿವಪ್ಪ, ಅಪರಾಧಿ ಮಾದೇವನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಅಪಘಾತ: ಪರಿಹಾರ ಹೆಚ್ಚಳ

ಬೆಂಗಳೂರು: 'ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಬಳಿ ವಾಹನ ಚಾಲನಾ ಪರವಾನಿಗೆ ಇಲ್ಲವೆಂದ ಮಾತ್ರಕ್ಕೆ ಘಟನೆಗೆ ಆತನ ನಿರ್ಲಕ್ಷ್ಯವೇ ಕಾರಣ ಎಂದು ಹೇಳಲಾಗದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಆರು ವರ್ಷಗಳ ಹಿಂದೆ ರಾಯಚೂರಿನಲ್ಲಿ ನಡೆದ ರಸ್ತೆ ಅಪಡwಘಾತದಲ್ಲಿ ಮೃತಪಟ್ಟಿದ್ದ ದ್ವಿಚಕ್ರ ವಾಹನ ಚಾಲಕನ ಕುಟುಂಬಕ್ಕೆ ಮೋಟಾರು ವಾಹನ ಅಪಘಾತ ನ್ಯಾಯಮಂಡಳಿ ಆದೇಶಿಸಿದ್ದ ₹ 8.8 ಲಕ್ಷ ಮೊತ್ತದ ಪರಿಹಾರವನ್ನು ₹ 15.8 ಲಕ್ಷಕ್ಕೆ ಹೆಚ್ಚಿಸಿದೆ.

ಅಪಘಾತದಲ್ಲಿ ಮೃತಪಟ್ಟಿದ್ದ 20 ವರ್ಷದ ಹುಲಿರಾಜ್ ಸಹೋದರರು ಮತ್ತು ಅವರ ತಾಯಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನವಾಜ್ ಮತ್ತು ನ್ಯಾಯಮೂರ್ತಿ ರಾಜೇಶ್ ರೈ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣದಲ್ಲಿ ಮಹೇಂದ್ರ ಬೊಲೇರೊ ಜೀಪ್ ಚಾಲಕನ ನಿರ್ಲಕ್ಷ್ಯ ದೃಢಪಟ್ಟಿದ್ದರೂ, ದ್ವಿಚಕ್ರ ವಾಹನ ಸವಾರನ ಬಳಿ ವಾಹನ ಚಾಲನಾ ಪರವಾನಗಿ ಇಲ್ಲದೇ ಇರುವ ಅಂಶವನ್ನೂ ಪರಿಗಣಿಸಬೇಕಾಗುತ್ತದೆ. ಹೀಗಾಗಿ, ಹೆಚ್ಚಳದ ಮೊತ್ತವನ್ನು ಸಂತ್ರಸ್ತರ ಕುಟುಂಬಕ್ಕೆ ಪಾವತಿಸುವಂತೆ ನ್ಯೂ ಇಂಡಿಯಾ ಅಶ್ಯುರೆನ್ಸ್ ಕಂಪನಿಗೆ ನ್ಯಾಯಪೀಠ ಆದೇಶಿಸಿದೆ.

ಕುಡಿಯುವ ನೀರು ಮಾರಾಟ ಮಾಡುತ್ತಿದ್ದ ಹುಲಿರಾಜ್ 2017ರ ನವೆಂಬರ್ 10ರಂದು ಬೈಕ್‌ನಲ್ಲಿ ರಾಯಚೂರಿನ ಯರಮರಸ್‌ಗೆ ತೆರಳುತ್ತಿದ್ದಾಗ ಎದುರಿನಿಂದ ಬಂದ ಜೀಪ್ ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಇನ್‌ಸ್ಪೆಕ್ಟರ್ ಅಮಾನತು

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಜಪ್ತಿ ಮಾಡಲಾಗಿದ್ದ ವಾಹನವನ್ನು ಅಕ್ರಮವಾಗಿ ಬಿಡುಗಡೆ ಮಾಡಿದ್ದ ಆರೋಪದಡಿ ಹಲಸೂರು ಠಾಣೆಯ ಇನ್‌ಸ್ಪೆಕ್ಟರ್ ಪ್ರಕಾಶ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಡಿ.ಜೆ.ಹಳ್ಳಿ ಠಾಣೆಯಲ್ಲಿ ಈ ಹಿಂದೆ ಕೆಲಸ ಮಾಡಿದ್ದ ಪ್ರಕಾಶ್, ಡ್ರಗ್ಸ್ ಪ್ರಕರಣವೊಂದನ್ನು ದಾಖಲಿಸಿಕೊಂಡಿದ್ದರು. ಇದೇ ಪ್ರಕರಣದಲ್ಲಿ ಆರೋಪಿಗಳಿಂದ ಜಪ್ತಿ ಮಾಡಿದ್ದ ವಾಹನವನ್ನು ಅಕ್ರಮವಾಗಿ ಬಿಟ್ಟು ಕಳುಹಿಸಿದ್ದರೆಂಬ ಆರೋಪವಿತ್ತು.

ಆರೋಪದ ಬಗ್ಗೆ ತನಿಖೆ ನಡೆಸುವಂತೆ ಕಮಿಷನರ್ ಬಿ. ದಯಾನಂದ್ ಸೂಚಿಸಿದ್ದರು. ಇದೀಗ ತನಿಖಾ ವರದಿ ಬಂದಿದೆ. ಅದನ್ನು ಆಧರಿಸಿ ಇನ್‌ಸ್ಪೆಕ್ಟರ್ ಪ್ರಕಾಶ್ ಅವರನ್ನು ಅಮಾನತು ಮಾಡಿ ಕಮಿಷನರ್ ಆದೇಶ ಹೊರಡಿಸಿದ್ದಾರೆ.

ನಗರದಲ್ಲಿ ಇಂದು

ದೇಸಿ ಸಮ್ಮೇಳನ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಎನ್. ಚಲುವರಾಯಸ್ವಾಮಿ, ಎಸ್.ವಿ. ಸುರೇಶ, ಪಿ. ಚಂದ್ರಶೇಖರ, ಜಿ.ಟಿ. ಪುತ್ರ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಸಭಾಂಗಣ, ಜಿಕೆವಿಕೆ ಆವರಣ, ಬೆಳಿಗ್ಗೆ 11.30

'ಅಲ್ಲಮ ಮತ್ತು ಕಬೀರ್-ಸಾಹಿತ್ಯಿಕ ಮತ್ತು ತಾತ್ವಿಕ ನೆಲೆಗಳು' ಕುರಿತು ಉಪನ್ಯಾಸ: ಅಜಯ್ ಕುಮಾರ್ ಸಿಂಗ್, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ವಿಶ್ವವಿದ್ಯಾಲಯ, ಹೊಸೂರು ರಸ್ತೆ, ಮಧ್ಯಾಹ್ನ 3.15

'ನಮ್ಮ ಸಚ್ಚಿ' ಒಂದು ನೆನಪು: ಸ್ಥಳ: ಗಾಂಧಿಭವನ, ಕುಮಾರಪಾರ್ಕ, ಮಧ್ಯಾಹ್ನ 3.30

'ಡಾಂಡಿಯಾ ನೈಟ್ಸ್': ಅತಿಥಿಗಳು: ಕೆ. ಗೋಪಾಲಯ್ಯ, ವೈಷ್ಣವಿ ಗೌಡ, ನೇಹಾ ಗೌಡ, ಆಯೋಜನೆ ಮತ್ತು ಸ್ಥಳ: ರಾಮನ್ ಪಾಲಿಟೆಕ್ನಿಕ್ ಆ್ಯಂಡ್ ಐಟಿಐ ಕಾಲೇಜು, ಮಾಗಡಿ ಮುಖ್ಯರಸ್ತೆ, ಸಂಜೆ 4.30

ನವರಾತ್ರಿ ವಿಶೇಷ

ಸಾಯಿ ಚಂಡಿಕಾಂಬ ಸಪ್ತಾಹ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಕಾಡುಗೋಡಿ, ಬೆಳಿಗ್ಗೆ ಮತ್ತು ಸಂಜೆ 5 ರಿಂದ

'ನಿಮಿಷಾಂಬಾದೇವಿಗೆ ಬೆಣ್ಣೆ ಅಲಂಕಾರ': ಆಯೋಜನೆ ಮತ್ತು ಸ್ಥಳ: ನಿಮಿಷಾಂಬಾ ದೇವಿ ದೇವಸ್ಥಾನ, ಅಕ್ಕಿಪೇಟೆ ಹತ್ತಿರ, ಓ.ಟಿ.ಸಿ. ರಸ್ತೆ

ದೇವಿಗೆ ಮುತ್ತಿನ, ಬಟ್ಟಲಡಿಕೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ಮಹೇಶ್ವರಿ ದೇವಸ್ಥಾನ ಟ್ರಸ್ಟ್,ಮಲ್ಲೇಶ್ವರ

ಕೂಷ್ಮಾಂಡ ದೇವಿಯ ಆವಾಹನೆ, ಕೂಷ್ಮಂಡ ಹೋಮ, ಕುಂಕುಮಾರ್ಚನೆ, ಪುಷ್ಪಾರ್ಚನೆ, 108 ಜಪ ಪಾರಾಯಣ, ಚಂಡಿ ಪಾರಾಯಣ, ಮಹಾ ಮಂಗಳಾರತಿ, ಆಯೋಜನೆ: ತ್ರಿಕೋನ ಶಕ್ತಿ ಪೀಠ, ಸ್ಥಳ: ಸಾತನೂರು, ಯಲಹಂಕ, ಬೆಳಿಗ್ಗೆ 9ರಿಂದ

ದೇವಿಗೆ ಮಹಾಭಿಷೇಕ, ಗೋಡಂಬಿ ಅಲಂಕಾರ: ಸಾಮೂಹಿಕ ಲಲಿತ ಸಹಸ್ರ ಪಾರಾಯಣ ಮಧ್ಯಾಹ್ನ 1.30ಕ್ಕೆ, ಹಿಂದೂಸ್ತಾನಿ ಗಾಯನ: ಶರಣ್ ಗುರ್ಜಾರ್ ಮತ್ತು ತಂಡ ಸಂಜೆ 6.30ಕ್ಕೆ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ

ವಚನ ನವರಾತ್ರಿ: ಆಶಯ ನುಡಿ: ರುದ್ರೇಶ್ ಅದರಂಗಿ, 'ಗುಣಶೀಲೆ ಹಡಪದ ಲಿಂಗಮ್ಮ' ಕುರಿತು ಉಪನ್ಯಾಸ: ಲೀಲಾ ದೇಸಾಯಿ, ಅತಿಥಿಗಳು: ಮಧುರ ಅಶೋಕಕುಮಾರ್, ಅನಸೂಯ ಮಂಜುನಾಥ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ದೇವಿ ಸ್ತೋತ್ರ ಪಠಣ, ಚಲನಚಿತ್ರ ಉತ್ಸವ: 'ಮಗಳೇ' ಚಲನಚಿತ್ರ ಪ್ರದರ್ಶನ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5ರಿಂದ

ದೇವಿಗೆ ಶೃಂಗೇರಿ ಶಾರದ ಅಲಂಕಾರ: ಭಜನೆ, ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮಾತಾ ಅನ್ನಪೂರ್ಣೇಶ್ವರಿ ದೇವಾಲಯ, ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಸಂಜೆ 5.30ರಿಂದ

ದೇವಿಗೆ ಅಭಿಷೇಕ, ಅರಿಸಿನ ಕುಂಕುಮ ನವವರ್ಣ ಅಲಂಕಾರ: ಲಲಿತಾ ಸಹಸ್ರ ನಾಮ ಪಾರಾಯಣ: ಆಯೋಜನೆ ಮತ್ತು ಸ್ಥಳ: ಬಂಡೆ ಮಹಾಂಕಾಳಿ ದೇವಾಲಯ ವಿಶ್ವಸ್ಥ ಮಂಡಳಿ, ಗುಟ್ಟಹಳ್ಳಿ, ಸಂಜೆ 6

ದುರ್ಗಾ ಮಹೇಶ್ವರಮ್ಮ ದೇವಿಗೆ 'ಕೂಷ್ಮಾಂಡ ದೇವಿ ಅಲಂಕಾರ': ಭಜನೆ: ದಿವ್ಯ ಉಪಾಧ್ಯಯ, ವಾಗದೇವಿ ಸಂಗೀತ ಪಾಠಶಾಲೆಯ ಮಕ್ಕಳಿಂದ, ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣಾ ರಾಜಪುರ, ಸಂಜೆ 6

ದೇವಿಗೆ ಪೂಜೆ: ಮಹಾ ನೀರಾಜನ, ತೀರ್ಥಪ್ರಸಾದ ವಿನಿಯೋಗ, ಲಲಿತ ಸಹಸ್ರನಾಮ ಪಾರಾಯಣ, ಭಕ್ತಿ ಗೀತೆಗಳು: ಭಾರತಿ, ಉಷಾ, ಪ್ರಸನ್ನಲಕ್ಷ್ಮಿ ಭಜನಾ ಮಂಡಲಿ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡ ರಾಮ ದೇವಸ್ಥಾನ, ವಿಜಯನಗರ, ಸಂಜೆ 6

ನವರಾತ್ರಿ ಸಾಂಸ್ಕೃತಿಕ ಸಿಂಚನ: ಭಜನೆ: ವಂದನಾ ಭಜನಾ ಮಂಡಳಿ, ಆಯೋಜನೆ: ಬ್ರಾಹ್ಮಣ ಸಭಾ, ಸ್ಥಳ: ಗಾಯತ್ರಿ ಮಂದಿರ, ಕೆಂಗೇರಿ ಉಪನಗರ, ಸಂಜೆ 6ರಿಂದ

ದೇವಿಗೆ ನಾಗಲಕ್ಷ್ಮಿ ಅಲಂಕಾರ: ಸೂಕ್ತಹೋಮ, ಆಯೋಜನೆ ಮತ್ತು ಸ್ಥಳ: ಮಾರಮ್ಮ ಆಂಜನೇಯಸ್ವಾಮಿ ಸೇವಾ ಟ್ರಸ್ಟ್, ಚಿನ್ನಯ್ಯನಪಾಳ್ಯ, ಸಂಜೆ 6

ಯಲ್ಲಮ್ಮ ದೇವಿಗೆ ಶ್ರೀಗಂಧ ಅಲಂಕಾರ: ಆಯೋಜನೆ ಮತ್ತು ಸ್ಥಳ: ಯಲ್ಲಮ್ಮದೇವಿ ದೇವಾಲಯ, ದೇಶದ ಪೇಟೆ ರಸ್ತೆ, ಯಲಹಂಕ, ಸಂಜೆ 6.30

ದೇವಿಗೆ ವೈಷ್ಣವೀ ಅಲಂಕಾರ, ಲಕ್ಷ್ಮೀನಾರಾಯಣ ಹೃದಯ ಹೋಮ, ಗಾಯನ: ಎಂ.ಆರ್. ಆದಿತ್ಯ ಮತ್ತೂರು, ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರಮಠ ಶಂಕರಪುರ, ಸಂಜೆ 7

ದೊಡ್ಡಮ್ಮ ದೇವಿಗೆ ದಾಳಿಂಬೆ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್. ಪುರ, ಸಂಜೆ 7.30

ಫ್ಲ್ಯಾಟ್ ಖರೀದಿದಾರರಿಗೆ ವಂಚನೆ ಆರೋಪ

ಮಾಂಗಲ್ಯ ವೆಂಚರ್ಸ್ ವಿರುದ್ಧ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್ ಖರೀದಿದಾರರಿಗೆ ಮೋಸ ಎಸಗಿ ₹ 50 ಕೋಟಿಗೂ ಹೆಚ್ಚಿನ ಮೊತ್ತದ ಹಣ ದುರ್ಬಳಕೆ ಮಾಡಿದ ಆರೋಪ ಎದುರಿಸುತ್ತಿರುವ, 'ಮಾಂಗಲ್ಯ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ' ನಿರ್ದೇಶಕರಾದ ಅಜ್ಗರ್ ಅಹಮದ್ ಮತ್ತು ಸಂಜಯ ಸೂರ್ಯನಾರಾಯಣ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರನ್ನು ಆಧರಿಸಿ ಬೆಂಗಳೂರು ಗ್ರಾಮಾಂತರ ಎರಡನೇ ಹೆಚ್ಚುವರಿ ಎಸಿಎಂಎಂ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿಗೆ ತಡೆ ನೀಡಬೇಕು' ಎಂದು ಕೋರಿ ಅಜ್ಗರ್ ಅಹಮದ್ ಮತ್ತು ಸಂಜಯ ಸೂರ್ಯನಾರಾಯಣ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಸ್.ಸುನಿಲ್ ಕುಮಾರ್, 'ಉದ್ದೇಶಿತ ಕಟ್ಟಡ ನಿರ್ಮಾಣ ಪೂರ್ಣಗೊಳಿಸಲು ರೇರಾ (ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ) 2024ರ ಸೆಪ್ಟೆಂಬರ್ 30ರವರೆಗೆ ಗಡುವು ನೀಡಿದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಪ್ರಕರಣಗಳನ್ನು ರದ್ದುಪಡಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧದ ದೂರುಗಳಿಗೆ ಮಧ್ಯಂತರ ತಡೆ ನೀಡಿ, ಪ್ರತಿವಾದಿ ಪ್ರಾಸಿಕ್ಯೂಷನ್ ಪರ ವಕೀಲರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಆಕ್ಷೇಪಣೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್‌ಗೆ ಸೂಚಿಸಿ ವಿಚಾರಣೆ ಮುಂದೂಡಿತು.

ಆರೋಪ ಏನು?: ಅರ್ಜಿದಾರರು, 'ಮಾಂಗಲ್ಯ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ'ಯನ್ನು 2019ರಲ್ಲಿ ಪ್ರಾರಂಭಿಸಿದ್ದರು. ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂಬರ್ 15/2ರಲ್ಲಿ, 'ಮಾಂಗಲ್ಯ ಪಾರ್ಕ್ ಅವೆನ್ಯೂ' ಎಂಬ 14 ಅಂತಸ್ತಿನ ಅಪಾರ್ಟ್‌ಮೆಂಟ್ ನಿರ್ಮಿಸಲು ಖರೀದಿದಾರರಿಂದ ಒಟ್ಟು ₹ 50 ಕೋಟಿಗೂ ಹೆಚ್ಚಿನ ಮೊತ್ತವನ್ನು ಪಡೆದಿರುತ್ತಾರೆ.

ಅಪಾರ್ಟ್‌ಮೆಂಟ್ ಕಾಮಗಾರಿಯನ್ನು ಅರ್ಧಕ್ಕೇ ನಿಲ್ಲಿಸಿ ಖರೀದಿದಾರರಿಗೆ ಸಮಯಕ್ಕೆ ಸರಿಯಾಗಿ ಅಪಾರ್ಟ್‌ಮೆಂಟ್‌ಫ್ಲ್ಯಾಟ್‌ಗಳಿಗೆಕ್ರಯಪತ್ರಮಾಡಿಸಿ ಕೊಟ್ಟಿರುವುದಿಲ್ಲ. ಒಂದೇ ಫ್ಲ್ಯಾಟ್ ಅನ್ನು ಮೂವರಿಗೆ ಖರೀದಿ ಒಪ್ಪಂದ ಪತ್ರ ಮಾಡಿಕೊಟ್ಟಿರುವ ಸಾಕಷ್ಟು ಪ್ರಕರಣಗಳಿವೆ. ಅಂತೆಯೇ, ಫ್ಲ್ಯಾಟ್ ಖರೀದಿದಾರರಿಂದ ಪಡೆದ ಹಣವನ್ನು ರೇರಾ ಕಾಯ್ದೆಯ ಅನುಸಾರ ಮಾಂಗಲ್ಯ ಪಾರ್ಕ್ ಅವೆನ್ಯೂ ಅಪಾರ್ಟ್‌ಮೆಂಟ್ ಕಟ್ಟಡ ಕಾಮಗಾರಿಗೆ ಬಳಸದೆ ಬೇರೆಡೆ ಅಕ್ರಮವಾಗಿ ಹೂಡಿಕೆ ಮಾಡಿರುತ್ತಾರೆ.

ಅಂಜನಾಪುರದಲ್ಲಿ, 'ಮಾಂಗಲ್ಯ ಸಿಗ್ನೇಚರ್' ಹೆಸರಿನ 12 ಅಂತಸ್ತಿನ 138 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ಅನ್ನು ನಿರ್ಮಿಸಿದ್ದು, ಇವುಗಳಲ್ಲಿ ಕೆಲವು ಫ್ಲ್ಯಾಟ್‌ಗಳನ್ನು ಖರೀದಿದಾರರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ. ಈ ಯೋಜನೆಯಲ್ಲಿ ಹಣ ಹೂಡಿಕೆ ಮಾಡಿದರೆ 18 ತಿಂಗಳಲ್ಲಿ ಹಣ ದ್ವಿಗುಣಪಡಿಸಿ ವಾಪಸು ನೀಡುತ್ತೇವೆ ಮತ್ತು ಅವರಿಗೆ ಫ್ಲ್ಯಾಟ್‌ಗಳನ್ನು ಖರೀದಿ ಮಾಡಲು ನಾವೇ ಬ್ಯಾಂಕುಗಳಿಂದ ಸಾಲ ಕೊಡಿಸಿ ಸಾಲದ ಬಡ್ಡಿಯನ್ನು ಬ್ಯಾಂಕುಗಳಿಗೆ ನಾವೇ ಪಾವತಿ ಮಾಡುತ್ತೇವೆ ಎಂದು ಉದ್ದೇಶ ಪೂರ್ವಕವಾಗಿ ವಂಚನೆ ಮಾಡಿದ್ದಾರೆ ಎಂದು ದೊಡ್ಡಕಲ್ಲಸಂದ್ರ ಪೊಲೀಸ್ ಠಾಣೆಯಲ್ಲಿ ದೂರುಗಳು ದಾಖಲಾಗಿದ್ದವು.

ಈ ದೂರುಗಳನ್ನು ಆಧರಿಸಿ; ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 506 (ಕ್ರಿಮಿನಲ್ ಬೆದರಿಕೆ), 406 (ನಂಬಿಕೆಯ ಉಲ್ಲಂಘನೆ), 420 (ವಂಚನೆಯ ಅಪರಾಧ), ಪೋಂಜಿ ಸ್ಕೀಂಗಳನ್ನು (ನಿವೇಶನದಾರರಿಗೆ ಮೋಸ ಎಸಗುವ ಯೋಜನೆ) ಸೃಷ್ಟಿಸಿದ ಅಪರಾಧ, ಕೆಪಿಐಡಿ (ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತರಕ್ಷಣಾ ಕಾಯ್ದೆ-2004) ಅಪರಾಧ ಹಾಗೂ ಅನಿಯಂತ್ರಿತ ಹೂಡಿಕೆ ಯೋಜನೆ ನಿಷೇಧ ಕಾಯ್ದೆ-2019ರ (ಬಡ್ಸ್ ಕಾಯ್ದೆ) ಅಡಿಯಲ್ಲಿನ ವಿವಿಧ ಕಲಂಗಳ ಅನ್ವಯ ಬೆಂಗಳೂರು ಗ್ರಾಮಾಂತರ ಎರಡನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ನವವರ್ಣ

ನವರಾತ್ರಿಯ ಮೂರನೆಯ ದಿನ ಜಗನ್ಮಾತೆಯನ್ನು ಚಂದ್ರಘಂಟಾ ಸ್ವರೂಪದಲ್ಲಿ ಪೂಜಿಸಲಾಗುತ್ತದೆ. ಸಿಂಹವಾಹಿನಿಯಾಗಿ ದೇವಿಯು ತನ್ನ ಹತ್ತು ಕೈಗಳಲ್ಲಿ ಖಡ್ಗ, ಬಿಲ್ಲು-ಬಾಣ, ತ್ರಿಶೂಲ ಮುಂತಾದ ಆಯುಧಗಳನ್ನು ಹಿಡಿದಿದ್ದಾಳೆ. ಇವು ದೇವಿಯ ದುಷ್ಟಶಿಕ್ಷಣ ಮತ್ತು ಶಿಷ್ಟರಕ್ಷಣದ ಸಂಕಲ್ಪಗಳನ್ನು ಪ್ರಕಟಿಸುತ್ತವೆ. ಕೆಂಪುಬಣ್ಣವು ಲೋಕಮಾತೆಯ ಸಂಹಾರಶಕ್ತಿಗೂ ಸಂರಕ್ಷಣಶಕ್ತಿಗೂ ಸಂಕೇತ. ಶಕ್ತಿಯ ಸ್ವರೂಪವಾಗಿರುವ ಕೆಂಪುಬಣ್ಣದ ಸೀರೆಯಲ್ಲಿ ಸಂಭ್ರಮಿಸಿರುವ ನಾರಿಯರ ಕೆಲವು ಚಿತ್ರಗಳು ಇಲ್ಲಿವೆ.

ನೀಲಿ ಬಣ್ಣದ ಧಿರಿಸನ್ನು ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಬುಧವಾರ ಸಂಜೆ 4 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...
7338018541

ಐಎಸ್‌ಇ ವಿಭಾಗದ ಸಿಬ್ಬಂದಿ, ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ, ಬೆಂಗಳೂರು

ಮಾಸ್ಟರ್ಸ್ ಪಿಯು ಕಾಲೇಜ್ ಸಿಬ್ಬಂದಿ, ತುಮಕೂರು

ಕೆಪಿಟಿಸಿಎಲ್ ಸಿಬ್ಬಂದಿ, ಆನಂದ ರಾವ್ ವೃತ್ತ, ಬೆಂಗಳೂರು

ಅನು ಮತ್ತು ಸ್ನೇಹಿತೆಯರು, ಎಂಇಎಸ್ ಕಿಶೋರ ಕೇಂದ್ರ, ಮಲ್ಲೇಶ್ವರ, ಬೆಂಗಳೂರು

ರೋಹಿಣಿ ಎಚ್.ಎಸ್. ಮತ್ತು ಸಹೋದ್ಯೋಗಿಗಳು, ಮಲ್ಲೇಶ್ವರ, ಬೆಂಗಳೂರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರೋಗ್ಯ ಸೌಧ, ಬೆಂಗಳೂರು

ಅನುಪಮ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಯರು ಮತ್ತು ಸಿಬ್ಬಂದಿ ವರ್ಗ, ರಾಜಾಜಿನಗರ

ಬಿವಿವಿ ಸಂಘದ ಶಿಕ್ಷಣ ಮಹಾವಿದ್ಯಾಲಯ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರು, ಬಾಗಲಕೋಟೆ

ಸುಖಿ, ಸುಳ್ಯ

ಪಲ್ಲವಿ ಮತ್ತು ಸ್ನೇಹಿತೆಯರು, ಜ್ಞಾನಭಾರತಿ ಲೇಔಟ್, ಬೆಂಗಳೂರು

ಕೆ.ಪಿ.ಎಸ್ ಶಾಲೆಯ ಶಿಕ್ಷಕಿಯರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿಬ್ಬಂದಿಯಾದ ಉಷಾ, ಎಂ, ಜೆಸಿಂತ, ಅನುಪಮ

ರಾಧಾ ಈಶ್ವರ್, ಬೆಂಗಳೂರು

ಪ್ರೇಮಾ ಡಯಾಗ್ನೋಸ್ಟಿಕ್ ಸೆಂಟರ್ ಸಿಬ್ಬಂದಿ, ಜಯನಗರ

ಬಿ. ಶೋಭಾ, ಬೆಂಗಳೂರು

ಅರಣ್ಯ ಭವನದ ಮಹಿಳಾ ನೌಕರರು

ಶಾಪೂರ್‌ಜಿ ಪಲ್ಲೊಂಜಿ ಮತ್ತು ಗೆಳತಿಯರು, ಸಿಆರ್‌ಎಂ ಟೀಂ, ಬೆಂಗಳೂರು

ಸಾಯಿ ಉದಯ್ ಗ್ರಾಫಿಕ್ ತಂಡ, ನಾಗರಬಾವಿ, ಬೆಂಗಳೂರು

ಸ್ನಾತಕ ಗ್ರಂಥಾಲಯದ ಸಿಬ್ಬಂದಿ ವರ್ಗ, ಮೈಸೂರು

ಸರ್ಕಾರಿ ಆಸ್ಪತ್ರೆ ಸಿಬ್ಬಂದಿ, ಕೆ.ಆರ್. ಪುರ, ಬೆಂಗಳೂರು

ಎಲಿಗಂಟ್ ಎಕ್ಸ್‌ಸ್ಟೇಟ್ ಅಪಾರ್ಟ್‌ಮೆಂಟ್‌ನ ಗೆಳತಿಯರು, ರಾಜರಾಜೇಶ್ವರಿ ನಗರ, ಬೆಂಗಳೂರು

ಸುಮಂಗಲಾ ದೇವಿ, ಪ್ರೇಮಾ ಮತ್ತು ಸ್ನೇಹಿತೆಯರು, ವಿಜಯನಗರ, ಬೆಂಗಳೂರು

ಜ್ಯೋತಿ ಮಂಜುನಾಥ್ ಮತ್ತು ಗೆಳತಿಯರು, ಕೆಇಎಸ್ ಕಿಶೋರ ಕೇಂದ್ರ, ಮಲ್ಲೇಶ್ವರ, ಬೆಂಗಳೂರು

ಶಿಲ್ಪಾ ನಟರಾಜ್ ಮತ್ತು ಗೆಳತಿಯರು, ನಾಗರಬಾವಿ, ಬೆಂಗಳೂರು

ಅಚಲ ಪ್ರಸಾದ್ ಮತ್ತು ಧಾತ್ರಿ, ಹೊಸಕೆರೆಹಳ್ಳಿ, ಬೆಂಗಳೂರು

ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಜಾಗತಿಕ ಕಡಲ ಶೃಂಗಸಭೆ ಆರಂಭ

ಮುಂಬೈ (ಪಿಟಿಐ): ದೀರ್ಘಾವಧಿಯಲ್ಲಿ ದೇಶದ ಕಡಲ ಆರ್ಥಿಕತೆಗೆ ಬಲ ನೀಡುವ ನಿಟ್ಟಿನಲ್ಲಿ ₹23 ಸಾವಿರ ಕೋಟಿ ಮೊತ್ತದ ಸಮುದ್ರಯಾನ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ.

ಬಂದರು ಅಭಿವೃದ್ಧಿ, ಸುಸ್ಥಿರ ಬಳಕೆಗೆ ಉತ್ತೇಜನ ಹಾಗೂ ಅಂತರರಾಷ್ಟ್ರೀಯ ಸಹಯೋಗವನ್ನು ಸುಗಮಗೊಳಿಸುವ ಕಾರ್ಯತಂತ್ರದ ಉಪಕ್ರಮಗಳಿಗೆ ಅನು ಗುಣವಾಗಿ ಈ ನೀಲನಕ್ಷೆ ಸಿದ್ಧಪಡಿಸಲಾಗಿದೆ ಎಂದು ತಿಳಿಸಲಾಗಿದೆ.

ಮಂಗಳವಾರದಿಂದ ಮೂರು ದಿನಗಳ ಕಾಲ ನಡೆಯುವ ಮೂರನೇ ಆವೃತ್ತಿಯ ಜಾಗತಿಕ ಕಡಲ ಭಾರತ ಶೃಂಗಸಭೆಗೆ ಮೋದಿ ಅವರು ವರ್ಚುವಲ್ ಆಗಿ ಚಾಲನೆ ನೀಡಿದರು.

ವಿಶ್ವ ಬಂಟರ ಸಮ್ಮೇಳನ 29ಕ್ಕೆ

ಮಂಗಳೂರು: ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ಉಡುಪಿಯಲ್ಲಿ ನಡೆಯುವ ವಿಶ್ವ ಬಂಟರ ಸಮ್ಮೇಳನದಲ್ಲಿ ಇದೇ 29ರಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಭಾಗವಹಿಸಲಿದ್ದಾರೆ ಎಂದು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ತಿಳಿಸಿದ್ದಾರೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 28ರಂದು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. 29ರಂದು ಸಚಿವ ನಿತಿನ್ ಗಡ್ಕರಿ ಪಾಲ್ಗೊಳ್ಳಲಿದ್ದಾರೆ. ಕೇಂದ್ರ ಕೃಷಿ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಉಡುಪಿ ಜಿಲ್ಲಾ ಉಸ್ತುವಾರಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಮುಂಬೈ ಸಂಸದ ಗೋಪಾಲ ಶೆಟ್ಟಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಭಾಗವಹಿಸಲಿದ್ದಾರೆ. ನಟರಾದ ಸುನಿಲ್ ಶೆಟ್ಟಿ, ರಿಷಬ್ ಶೆಟ್ಟಿ ಸಮ್ಮೇಳನದ ಪ್ರಮುಖ ಆಕರ್ಷಣೆಯಾಗಲಿದ್ದಾರೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಹಳಿ ತಪ್ಪಿದ ರೈಲಿನ ಎಂಜಿನ್

ಕೊಪ್ಪಳ: ಜಿಲ್ಲೆಯ ಕಾರಟಗಿ ರೈಲು ನಿಲ್ದಾಣದ ಸಮೀಪದಲ್ಲಿ ಮಂಗಳವಾರ ಯಶವಂತಪುರ–ಕಾರಟಗಿ ಎಕ್ಸ್‌ಪ್ರೆಸ್ ರೈಲಿನ ಎಂಜಿನ್ ಹಳಿ ತಪ್ಪಿತ್ತು.

ನಿಲ್ದಾಣದ ಸಮೀಪದಲ್ಲಿಯೇ ರೈಲು ಇದ್ದ ಕಾರಣ ನಿಧಾನಗತಿಯಲ್ಲಿ ಚಲಿಸುತ್ತಿತ್ತು. ಲೋಕೊ ಪೈಲಟ್ ಎಚ್ಚರಿಕೆ ವಹಿಸಿದ್ದರಿಂದ ಯಾವುದೇ ಅನಾಹುತವಾಗಿಲ್ಲ. ಸೋಮವಾರ ರಾತ್ರಿ ಯಶವಂತಪುರದಿಂದ 8.25ಕ್ಕೆ ಹೊರಟಿದ್ದ ರೈಲು ನಿಗದಿತ ವೇಳಾಪಟ್ಟಿ ಪ್ರಕಾರ ಬೆಳಿಗ್ಗೆ 10.45ಕ್ಕೆ ಕಾರಟಗಿ ತಲುಪಬೇಕಾಗಿತ್ತು. ಆದರೆ, 12.05ಕ್ಕೆ ಬಂದಿದೆ.

ರೈಲು ಒಂದು ಹಳಿಯಿಂದ ಇನ್ನೊಂದು ಹಳಿಗೆ ಮಾರ್ಗ ಬದಲಿಸುವಾಗ ಈ ಘಟನೆ ನಡೆದಿದೆ. ಹುಬ್ಬಳ್ಳಿಯಿಂದ ಕಾರಟಗಿಗೆ ಸಂಚರಿಸಬೇಕಿದ್ದ ಎರಡು ರೈಲುಗಳ ಸಂಚಾರವನ್ನು ಗಂಗಾವತಿಗೆ ಮೊಟಕುಗೊಳಿಸಲಾಗಿತ್ತು. ಯಶವಂತಪುರಕ್ಕೆ ಕಾರಟಗಿ ಬದಲು ಗಂಗಾವತಿಯಿಂದ ಸಂಚಾರ ಆರಂಭಿಸಲಾಯಿತು.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಆರೋಪ

'ಈ ಸರ್ಕಾರದಲ್ಲೂ ಭ್ರಷ್ಟಾಚಾರವಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ ಹಿಂದೆಯೂ ಇತ್ತು, ಈಗಲೂ ಇದೆ. ಭ್ರಷ್ಟಾಚಾರ ಇಲ್ಲವೆಂದರೆ ನನ್ನಂಥ ಮೂರ್ಖ ಇನ್ನೊಬ್ಬರಿಲ್ಲ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಹೇಳಿದರು.

ಕುಮಾರಕೃಪಾ ಅತಿಥಿ ಗೃಹದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಸಂಘದ ಪದಾಧಿಕಾರಿಗಳ ಜೊತೆ ಮಂಗಳವಾರ ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, 'ಈ ಸರ್ಕಾರದಲ್ಲಿಯೂ (ಕಾಂಗ್ರೆಸ್) ಭ್ರಷ್ಟಾಚಾರ ಇದೆ. ಬಿಲ್ ಪಾವತಿಯಲ್ಲಿ ಅವ್ಯವಹಾರ ನಡೆಯುತ್ತಿದೆ. ಇದನ್ನು ಗಮನಕ್ಕೆ ತಂದಿದ್ದೇವೆ. ಸರಿ ಮಾಡುವ ಭರವಸೆ ಸಿಕ್ಕಿದೆ' ಎಂದರು.

'ಈಗ ಯಾವುದೇ ಕಾಮಗಾರಿ ಮಾಡಿಲ್ಲ. ಹೀಗಾಗಿ, ಈ ಹಂತದಲ್ಲಿ ಭ್ರಷ್ಟಾಚಾರ ಕಂಡುಬರುತ್ತಿಲ್ಲ' ಎಂದೂ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ, ಪ್ರಧಾನ ಕಾರ್ಯದರ್ಶಿ ರವೀಂದ್ರ ಮತ್ತಿತರರು ಮಂಗಳವಾರ ಭೇಟಿ ಮಾಡಿದರು

'ಬಿಬಿಎಂಪಿಯ ಬಾಕಿ ಬಿಲ್ ವಿಚಾರವಾಗಿ ಮಾತ್ರ ಶಿವಕುಮಾರ್ ಜೊತೆ ಮಾತನಾಡಿದ್ದೇವೆ. ಶೇ 75ರಷ್ಟು ಬಾಕಿ ಬಿಲ್ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇವೆ. ಕಮಿಷನ್ ವಿಚಾರವಾಗಿ ತನಿಖೆ ಮಾಡಬೇಕು ಎಂದಿದ್ದೇವೆ. ನಮ್ಮ ಬೇಡಿಕೆಗೆ ಶಿವಕುಮಾರ್ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಹಿರಿತನದ ಮೇಲೆ ಶೇ 80ಕ್ಕಿಂತ ಹೆಚ್ಚು ಬಿಲ್ ಪಾವತಿ ಮಾಡುವ ಭರವಸೆ ನೀಡಿದ್ದಾರೆ' ಎಂದರು.

'ಅಧಿಕಾರಿಗಳ ಮೇಲೆ ಕಮಿಷನ್ ಆರೋಪ ಮಾಡಿರುವ ನನ್ನ ಹೇಳಿಕೆಗೆ ಈಗಲೂ ಬದ್ಧನಾಗಿದ್ದೇನೆ' ಎಂದರು.

ಅಂಬಿಕಾಪತಿ ಮೇಲಿನ ಆರೋಪ ಸುಳ್ಳು: ಬಿಜೆಪಿ ಸಂಸದ ಡಿ.ವಿ. ಸದಾನಂದಗೌಡರ ಆರೋಪ ವಿಚಾರವಾಗಿ ಪ್ರತಿಕ್ರಿಯಿಸಿದ ಕೆಂಪಣ್ಣ, 'ಮುಖ್ಯಮಂತ್ರಿ ಮನೆಯಿಂದ ನಾನು ನೇರವಾಗಿ ನನ್ನ ಮನೆಗೆ ಹೋಗಿದ್ದೇನೆ. ಅಂಬಿಕಾಪತಿ ಮನೆಗೆ ನಾನು ಹೋಗಿಲ್ಲ. ಸದಾನಂದ ಗೌಡ ಅವರು ಆರೋಪ ಸಾಬೀತುಪಡಿಸಿದರೆ ನಾನು ಅವರ ಕಾಲಡಿಯಲ್ಲಿ ಇರುತ್ತೇನೆ' ಎಂದರು.

'ನಾನು ಹಾಗೂ ಅಂಬಿಕಾಪತಿ 45 ವರ್ಷಗಳಿಂದ ಸ್ನೇಹಿತರು. ಅಂಬಿಕಾಪತಿ ಮೇಲಿನ ಆರೋಪ ಸುಳ್ಳು. ನಾನು ಅಂಬಿಕಾಪತಿ ಪರ ನಿಲ್ಲುತ್ತೇನೆ. ಅಂಬಿಕಾಪತಿ ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ' ಎಂದರು.

'ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇದೆ. ಸಿಬಿಐ, ಇ.ಡಿ ಅವರ ಬಳಿಯೇ ಇದೆ. ಈ ಬಗ್ಗೆ ತನಿಖೆ ಮಾಡಿಸಲಿ. ಶೇ 40 ಕಮಿಷನ್ ಆರೋಪಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ವಿಚಾರಣಾ ಆಯೋಗಕ್ಕೆ ನಮ್ಮಲ್ಲಿರುವ ಸಾಕ್ಷ್ಯಗಳನ್ನು ಕೊಡುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಸಮಯ ಪರಿಪಾಲನೆ: ಬೆಂಗಳೂರು ವಿಮಾನ ನಿಲ್ದಾಣ ಅಗ್ರ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸತತ ಮೂರು ತಿಂಗಳಿನಿಂದ ವಿಶ್ವದ ಸಮಯ ಪರಿಪಾಲನೆ ವಿಮಾನ ನಿಲ್ದಾಣಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಸಿರಿಯಮ್‌ನ 'ದಿ ಆನ್-ಟೈಮ್ ಪರ್‌ಫಾರ್ಮೆನ್ಸ್' ಮಾಸಿಕ ವರದಿ ಪ್ರಕಾರ ಜುಲೈ ತಿಂಗಳಿನಲ್ಲಿ ಶೇ 87.51, ಆಗಸ್ಟ್‌ನಲ್ಲಿ ಶೇ 89.66 ಮತ್ತು ಸೆಪ್ಟೆಂಬರ್‌ನಲ್ಲಿ ಶೇ 88.51 ರಷ್ಟು ಸಮಯ ಪರಿಪಾಲನೆ ಮಾಡಿದೆ ಎಂದು ಬಿಐಎಎಲ್ ಮಂಗಳವಾರ ತಿಳಿಸಿದೆ.

ಆನ್-ಟೈಮ್ ನಿರ್ಗಮನ ಶ್ರೇಯಾಂಕ ನಿಗದಿತ ಸಮಯದ 15 ನಿಮಿಷದೊಳಗೆ ನಿರ್ಗಮಿಸಿದ ವಿಮಾನಗಳ ಶೇಕಡಾವಾರು ಸಂಖ್ಯೆ ಅಳೆಯಲಾಗುವುದು ಎಂದು ವರದಿ ಹೇಳಿದೆ.

3.2 ಕೋಟಿ ಪ್ರಯಾಣಿಕರು: 2022-23ರಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ 31.91 ಮಿಲಿಯನ್ ಪ್ರಯಾಣಿಕರಿಗೆ ಸೇವೆ ಸಲ್ಲಿಸುವ ಮೂಲಕ ಭಾರತದ ಮೂರನೇ ಅತ್ಯಂತ ಹೆಚ್ಚು ಪ್ರಯಾಣಿಕರನ್ನು ಹೊಂದಿದ ವಿಮಾನ ನಿಲ್ದಾಣ ಎನಿಸಿಕೊಂಡಿದೆ. 88 ಮಾರ್ಗಗಳ ನೆಟ್‌ವರ್ಕ್ ಮತ್ತು 35 ಏರ್‌ಲೈನ್‌ಗಳೊಂದಿಗೆ ಕೆಂಪೇಗೌಡ ವಿಮಾನ ನಿಲ್ದಾಣ ಕಾರ್ಯಾಚರಣೆ ಮಾಡುತ್ತಿದೆ.

'ಪುಸ್ತಕ ಮಾರಾಟದ ಸರಕಲ್ಲ, ಸಂಸ್ಕೃತಿ'

ಬೆಂಗಳೂರು: 'ಪುಸ್ತಕ ಎನ್ನುವುದು ಸಂಸ್ಕೃತಿಯ ಭಾಗವೇ ಹೊರತು ಮಾರಾಟದ ಸರಕಲ್ಲ' ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷ ಕರೀಗೌಡ ಬೀಚನಹಳ್ಳಿ ತಿಳಿಸಿದರು.

ಕರ್ನಾಟಕ ಕನ್ನಡ ಬರಹಗಾರರ ಹಾಗೂ ಪ್ರಕಾಶಕರ ಸಂಘವು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಗೌರವ ಅಭಿನಂದನೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ, ಮಾತನಾಡಿದರು. 'ಪುಸ್ತಕವನ್ನು ಉದ್ಯಮವನ್ನಾಗಿ ಮಾತ್ರ ನೋಡದೆ, ಅದನ್ನು ಸಂಸ್ಕೃತಿಯ ಭಾಗವಾಗಿ ನೋಡುವಂತೆ ಮಾಡಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ. ಅದಕ್ಕಾಗಿ ಪುಸ್ತಕದ ಗುಣಮಟ್ಟ, ಉತ್ಪಾದನೆಯ ಮೌಲ್ಯ ಹೆಚ್ಚುವಂತೆ ಮಾಡಬೇಕು' ಎಂದು ತಿಳಿಸಿದರು.

ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, 'ಗ್ರಂಥಾಲಯಗಳಲ್ಲಿ ಹೊಸ ಪುಸ್ತಕಗಳನ್ನು ಸೇರ್ಪಡೆ ಮಾಡುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಪುಸ್ತಕ ಖರೀದಿಯಲ್ಲಿ ಆಗುತ್ತಿರುವ ವಿಳಂಬ. ಇದರೊಂದಿಗೆ ಪುಸ್ತಕ ಪ್ರಕಾಶನ ರಂಗ ಎದುರಿಸುತ್ತಿರುವ ಹಲವು ಸಮಸ್ಯೆಗಳತ್ತ ಸರ್ಕಾರ ಗಮನ ಹರಿಸಬೇಕಾಗಿದೆ. ಪುಟಕ್ಕೆ ₹ 40 ಪೈಸೆ ನಿಗದಿ ಮಾಡಬೇಕೆನ್ನುವ ಮನವಿ ನನೆಗುದಿಗೆ ಬಿದ್ದಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಲಂಚಕ್ಕೆ ಬೇಡಿಕೆ ಇಟ್ಟ ಬೆಂಗಳೂರು ವಿ.ವಿ ಸಮಿತಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ರಚಿಸಿದ ನಾಲ್ವರು ಸದಸ್ಯರ ಸ್ಥಳೀಯ ಪರಿಶೀಲನಾ ಸಮಿತಿ (ಎಲ್‌ಐಸಿ) ₹5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದೆ ಎಂದು ಕರ್ನಾಟಕ ಚಿತ್ರಕಲಾ ಪರಿಷತ್ತು (ಸಿಕೆಪಿ) ರಾಜ್ಯ ಸರ್ಕಾರಕ್ಕೆ ದೂರು ಸಲ್ಲಿಸಿದೆ.

ಲಂಚದ ಬೇಡಿಕೆ ಕುರಿತು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರಿಗೆ ಪತ್ರ ಬರೆದಿರುವ ಕಾಂಗ್ರೆಸ್ ಮುಖಂಡರೂ ಆದ ಸಿಕೆಪಿ ಅಧ್ಯಕ್ಷ ಬಿ.ಎಲ್.ಶಂಕರ್, 'ಬನಶಂಕರಿ 6ನೇ ಹಂತದಲ್ಲಿರುವ ಸಂಸ್ಥೆಯ ಲಲಿತ ಕಲಾ ಮಹಾವಿದ್ಯಾಲಯಕ್ಕೆ ಸಮಿತಿಯ ಸದಸ್ಯರು ಕಳೆದ ಸೆ. 9ರಂದು ಭೇಟಿ ನೀಡಿದ್ದರು. ಬಂದು ಹೋದ ನಂತರ ಸಮಿತಿಯ ಅಧ್ಯಕ್ಷೆ ಮಾಲಿನಿ ಅವರು ಸಂಚಾಲಕಿ ನಾಗಲಕ್ಷ್ಮಿ ಅವರ ಮೂಲಕ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ. ಹಣ ಪಾವತಿಸಲು ಒತ್ತಾಯಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

'ಪರಿಷತ್ತು ತನ್ನ ಇತಿಹಾಸದಲ್ಲಿ ಎಂದೂ ಅಕ್ರಮ ಚಟುವಟಿಕೆಗಳಿಗೆ ಆಸ್ಪದ ನೀಡಿಲ್ಲ. ಲಂಚ ನೀಡುವ ಅಭ್ಯಾಸ ಬೆಳೆಸಿಕೊಂಡಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಆದರೂ, ಬೇಡಿಕೆ ಮುಂದುವರಿಸಿದ ಕಾರಣ ಉನ್ನತ ಶಿಕ್ಷಣ ಸಚಿವರಿಗೆ ಪತ್ರ ಬರೆದಿದ್ದೇವೆ. ತಪ್ಪು ವರದಿ ನೀಡಬಹುದು ಎಂಬ ಆತಂಕವಿದೆ. ಹಾಗಾಗಿ, ಹೊಸದಾಗಿ ಎಲ್‌ಐಸಿ ಕಳುಹಿಸುವಂತೆ ಕೋರಿದ್ದೇವೆ' ಎಂದು ಶಂಕರ್ ಹೇಳಿದರು.

ಪರಿಷತ್ ಮಾಡಿರುವ ಆರೋಪವನ್ನು ನಿರಾಕರಿಸಿರುವ ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರೂ (ರಾಜ್ಯಪಾಲರಿಂದ ನಾಮ ನಿರ್ದೇಶನಗೊಂಡವರು) ಆದ ಮಾಲಿನಿ, 'ಸಂಸ್ಥೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ವಸ್ತುಸ್ಥಿತಿಯ ವರದಿ ನೀಡಿದ್ದೇವೆ. ಲಂಚದ ಬೇಡಿಕೆ ವಿಷಯ ಸುಳ್ಳು ಆರೋಪ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಬಿಜೆಪಿ ಮುಖಂಡರು, 'ಕರ್ನಾಟಕ ಕಾಂಗ್ರೆಸ್, ಎಟಿಎಂ ಸರ್ಕಾರ' ಘೋಷವಾಕ್ಯವುಳ್ಳ ಎಟಿಎಂ ಯಂತ್ರದ ಮಾದರಿ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರಗಳು

ಅಕ್ರಮ ಹಣ ಪತ್ತೆ: ಸಿಬಿಐ ತನಿಖೆಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಾಯ ತೆರಿಗೆ (ಐಟಿ) ಅಧಿಕಾರಿಗಳ ದಾಳಿ ವೇಳೆ ಪತ್ತೆಯಾಗಿರುವ ಅಕ್ರಮ ಹಣದ ಬಗ್ಗೆ ಸಿಬಿಐ ತನಿಖೆ ನಡೆಸಬೇಕು. ಅಕ್ರಮ ಹಣದ ಹೊಣೆ ಹೊತ್ತು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಸಚಿವರು ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿ ಬಿಜೆಪಿ ಮುಖಂಡರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, 'ಕರ್ನಾಟಕ ಕಾಂಗ್ರೆಸ್, ಎಟಿಎಂ ಸರ್ಕಾರ' ಎಂಬ ಘೋಷಣಾ ಫಲಕವುಳ್ಳ ಎಟಿಎಂ ಮಾದರಿಗಳನ್ನು ಪ್ರದರ್ಶಿಸಿದರು.

ಸಂಸದ ಡಿ.ವಿ. ಸದಾನಂದಗೌಡ ಮಾತನಾಡಿ, 'ಅಕ್ರಮ ಹಣದ ಬಗ್ಗೆ ತನಿಖೆ ನಡೆದರೆ, ಕಾಂಗ್ರೆಸ್‌ನ ಮುಖವಾಡ ಕಳಚಲಿದೆ. ಭ್ರಷ್ಟಾಚಾರದಲ್ಲಿ ತೊಡಗಿ ಜನರ ಹಣವನ್ನು ದೋಚುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ' ಎಂದರು.

'ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ, ಹಲವು ಹಗರಣಗಳಾದವು. ಇದರ ವಿರುದ್ಧ ಹೋರಾಟ ನಡೆಸಿದ್ದ ಬಿಜೆಪಿ, ಕಾಂಗ್ರೆಸ್ ಮುಕ್ತ ಭಾರತಕ್ಕೆ ಸಂಕಲ್ಪ ಮಾಡಿತು. ರಾಜ್ಯವೂ ಕಾಂಗ್ರೆಸ್ ಮುಕ್ತವಾಗಿದ್ದರೆ, ಇಂಥ ಪರಿಸ್ಥಿತಿ ಬರುತ್ತಿರಲಿಲ್ಲ. ಜನರಿಗೆ ಆಸೆ ಆಮಿಷ ತೋರಿಸಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್, ಜನರ ನಂಬಿಕೆ ಕಳೆದುಕೊಂಡಿದೆ' ಎಂದು ಹೇಳಿದರು.

ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್, 'ಕಾಂಗ್ರೆಸ್ ಸರ್ಕಾರ, ಎಡವಟ್ಟುಗಳ ಸರ್ಕಾರ. ಆಡಳಿತ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ' ಎಂದು ದೂರಿದರು.

'ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮಿತಿ ಮೀರಿದೆ. ಗುತ್ತಿಗೆದಾರರು ಹಾಗೂ ಬಿಲ್ಡರ್‌ಗಳಿಂದ ಹಣ ವಸೂಲಿ ಮಾಡಲಾಗುತ್ತಿದೆ. ಐಟಿ ದಾಳಿ ವೇಳೆ ಸಿಕ್ಕ ಹಣವೇ ಇದಕ್ಕೆ ಸಾಕ್ಷಿ. ಹಣದ ಬಗ್ಗೆ ತನಿಖೆ ನಡೆದರೆ, ಕಾಂಗ್ರೆಸ್ ಮುಖಂಡರ ನಿಜಬಣ್ಣ ಹೊರಗೆ ಬರುತ್ತದೆ' ಎಂದು ಅವರು ಹೇಳಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣ್, ಛಲವಾದಿ ನಾರಾಯಣಸ್ವಾಮಿ, ಮುಖಂಡರಾದ ಭಾಸ್ಕರ ರಾವ್, ಜಗದೀಶ್ ಹಿರೇಮನಿ ಪ್ರತಿಭಟನೆಯಲ್ಲಿದ್ದರು.

ಗಸ್ತು ದೋಣಿ ಖರೀದಿಗೆ ಮುಂದಾದ ಸೇನೆ

ನವದೆಹಲಿ(ಪಿಟಿಐ): ಗಡಿಗಳಲ್ಲಿನ ಗಸ್ತು ಹಾಗೂ ದಾಳಿಯ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ 6 ಗಸ್ತು ದೋಣಿಗಳು, 8 'ಲ್ಯಾಂಡಿಂಗ್ ಕ್ರಾಫ್ಟ್ ಅಸಾಲ್ಟ್' (ಎಲ್‌ಸಿಎ) ಹಾಗೂ 118 ಕಣ್ಗಾವಲು ವ್ಯವಸ್ಥೆಗಳ ಖರೀದಿಗೆ ಸೇನೆ ಮುಂದಾಗಿದೆ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಪೂರ್ವ ಲಡಾಕ್ ಬಳಿಯ ಪಾಂಗಾಂಗ್ ಸರೋವರವೂ ಸೇರಿದಂತೆ ಗಡಿಗಳಲ್ಲಿರುವ ಜಲಕಾಯಗಳಲ್ಲಿ ಕಣ್ಗಾವಲನ್ನು ಹೆಚ್ಚಿಸುವುದಕ್ಕಾಗಿ ಗಸ್ತು ನಾವೆಗಳನ್ನು ಖರೀದಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಯುದ್ಧನೌಕೆಗಳಲ್ಲಿರುವ ಯೋಧರನ್ನು ಶತ್ರು ಸೈನಿಕರು ಇರುವ ತೀರಗಳತ್ತ ಕ್ಷಿಪ್ರವಾಗಿ ಕರೆದೊಯ್ಯಲು ಬಳಸುವ ಬೋಟುಗಳನ್ನು 'ಲ್ಯಾಂಡಿಂಗ್ ಕ್ರಾಫ್ಟ್ ಅಸಾಲ್ಟ್' (ಎಲ್‌ಸಿಎ) ಎನ್ನಲಾಗುತ್ತದೆ.

ಈ ದೋಣಿಗಳು ಹಾಗೂ ಎಲ್‌ಸಿಎಗಳು ಹಾಗೂ ಕಣ್ಗಾವಲು ವ್ಯವಸ್ಥೆಗಳ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿ ಸೇನೆಯು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ನವೆಂಬರ್ 28 ಕೊನೆಯ ದಿನವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಈಗ, ಗಡಿಗಳಲ್ಲಿ ಕಣ್ಗಾವಲನ್ನು ಸಾಮರ್ಥ್ಯ ಹೆಚ್ಚಿಸುವುದಕ್ಕಾಗಿ ಈ ಪರಿಕರಗಳನ್ನು ಖರೀದಿಸಲು ಸೇನೆ ಮುಂದಾಗಿರುವುದು ಗಮನಾರ್ಹ.

ಮ್ಯಾನ್‌ಹೋಲ್ ಸ್ವಚ್ಛತೆ; ನಾಲ್ವರ ವಿರುದ್ಧ ಪ್ರಕರಣ ದಾಖಲು

ಎಚ್.ಡಿ.ಕೋಟೆ: ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕೆಲಸ ಮಾಡಿದ್ದಕ್ಕೆ ಸಾಕ್ಷಿಯಾಗಿ ಡಿ.ದರ್ಜೆ ನೌಕರರೊಬ್ಬರು ಶುಶ್ರೂಷಕಿಗೆ ಕಳಿಸಿದ್ದ, ಮ್ಯಾನ್‌ಹೋಲ್‌ಗೆ ಇಳಿದು ಸ್ವಚ್ಛತೆ ಮಾಡಿರುವ ವಿಡಿಯೋ ಬಹಿರಂಗಗೊಂಡು, ನಾಲ್ವರ ವಿರುದ್ಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ಪತ್ರೆ ಸ್ವಚ್ಛತೆಯ ಗುತ್ತಿಗೆ ಪಡೆದ ಬೆಂಗಳೂರಿನ ಎಸ್‌ಎಲ್‌ಎನ್ ಕಂಪನಿಯ ಗುತ್ತಿಗೆದಾರ ಸಂತೋಷ್ ಕುಮಾರ್, ವೈದ್ಯಾಧಿಕಾರಿ ಡಾ.ಸೋಮಣ್ಣ, ಶುಶ್ರೂಷಕಿ ಪ್ರಮೀಳಾ ಹಾಗೂ 'ಡಿ' ಗ್ರೂಪ್ ನೌಕರ ಪರಶುರಾಮ ವಿರುದ್ಧ ಪ್ರಕರಣ ದಾಖಲಾಗಿದೆ.

ಶುಶ್ರೂಷಕಿಯ ಸೂಚನೆ ಮೇರೆಗೆ ಪರಶುರಾಮ ಅವರು ಅ.13 ರಂದು ಕೆ.ಆರ್.ನಗರದ ಸಂಬಂಧಿಕ ಮುನಿಯ ಅವರಿಂದ ಮ್ಯಾನ್‌ಹೋಲ್ ಸ್ವಚ್ಛಗೊಳಿಸಿದ್ದರು ಎನ್ನಲಾಗಿದೆ. ನಂತರ ಅವರು, 'ಡಾ.ಸೋಮಣ್ಣ ಹಾಗೂ ಪರಿಮಳಾ ಅವರು ನಮ್ಮಿಬ್ಬರನ್ನು ಬಲವಂತವಾಗಿ ಶೌಚಾಲಯದ ಗುಂಡಿಯನ್ನು ಸ್ವಚ್ಛಗೊಳಿಸಲು ತಿಳಿಸಿದ್ದಾರೆ' ಎಂದು ಹೇಳಿರುವ ವಿಡಿಯೊ ಹರಿದಾಡಿತ್ತು.

'ಸಮಯಕ್ಕೆ ಪ್ರಾಮುಖ್ಯ ನೀಡಿದ್ದ ವಿಶ್ವೇಶ್ವರಯ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣಕ್ಕಿಂತ ಸಮಯ ಬಹಳ ಮುಖ್ಯ ಎಂದು ಅರಿತಿದ್ದ ಎಂ. ವಿಶ್ವೇಶ್ವರಯ್ಯ ಅವರು ಸಮಯವನ್ನು ವ್ಯರ್ಥ ಮಾಡದೇ ಕಾರ್ಯನಿರ್ವಹಿಸಿದ್ದರು ಎಂದು ಸಾಹಿತಿ ಆರ್. ಲಕ್ಷ್ಮೀನಾರಾಯಣ ತಿಳಿಸಿದರು.

ಕರ್ನಾಟಕ ವಿಕಾಸ ರಂಗ ಮತ್ತು ಕನ್ನಡ ಗೆಳೆಯರ ಬಳಗ ಹಮ್ಮಿಕೊಂಡಿದ್ದ 'ಕನ್ನಡ ಬಾವುಟ ಹಾರಿಸಿದವರು' ಉಪನ್ಯಾಸ ಮಾಲಿಕೆ–13ರಲ್ಲಿ ಅವರು ಮಾತನಾಡಿದರು.

ಭದ್ರಾವತಿ ಉಕ್ಕು ಕಾರ್ಖಾನೆ, ಮೈಸೂರು ಲ್ಯಾಂಪ್ಸ್, ಸೋಪು ಕಾರ್ಖಾನೆ, ಶಿಂಸಾ ಜಲವಿದ್ಯುತ್ ಯೋಜನೆ, ಮೈಸೂರು ವಿ.ವಿ, ಪಾಲಿಟೆಕ್ನಿಕ್, ಬೆಂಗಳೂರು ಎಂಜಿನಿಯರಿಂಗ್ ಕಾಲೇಜು, ಮೈಸೂರು ಬ್ಯಾಂಕ್ ಹೀಗೆ ಅನೇಕ ಸಂಸ್ಥೆ ಸ್ಥಾಪಿಸಿದ್ದರು ಎಂದು ನೆನಪು ಮಾಡಿಕೊಂಡರು.

ಕೆ.ಆರ್. ಜಲಾಶಯವನ್ನು 90 ಅಡಿಯಿಂದ 124 ಅಡಿಗಳಿಗೆ ಎತ್ತರಿಸುವಲ್ಲಿ ವಿಶ್ವೇಶ್ವರಯ್ಯ ಅವರ ತಾಂತ್ರಿಕ ಪರಿಣತಿ ಕೆಲಸ ಮಾಡಿತ್ತು. 1924ರಲ್ಲಿ ಕಾವೇರಿ ಒಪ್ಪಂದ ಆದಾಗ ಮೈಸೂರು ಸಂಸ್ಥಾನಕ್ಕೆ ಅನ್ಯಾಯವಾಯಿತು ಎಂದು ವಿಶ್ವೇಶ್ವರಯ್ಯ ಕಣ್ಣೀರು ಹಾಕಿದ್ದರು. ಈಗಲೂ ಈ ಅನ್ಯಾಯದ ಫಲವನ್ನು ಕನ್ನಡಿಗರಲ್ಲಿ ಅನುಭವಿಸುತ್ತಿದ್ದಾರೆ ಎಂದು ಸಾಹಿತಿ ರಾ.ನಂ. ಚಂದ್ರಶೇಖರ ಹೇಳಿದರು.

ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ ಅಧ್ಯಕ್ಷತೆ ವಹಿಸಿದ್ದರು. ಎಚ್‌ಎಎಲ್ ನಿವೃತ್ತ ಎಂಜಿನಿಯರ್ ಬಾ.ಹ. ಉಪೇಂದ್ರ ಮಾತನಾಡಿದರು.

ಕರ್ನಾಟಕ ವಿಕಾಸ ರಂಗ ಮತ್ತು ಕನ್ನಡ ಗೆಳೆಯರ ಬಳಗ ಹಮ್ಮಿಕೊಂಡಿದ್ದ 'ಕನ್ನಡ ಬಾವುಟ ಹಾರಿಸಿದವರು' ಉಪನ್ಯಾಸ ಮಾಲಿಕೆ ಕಾರ್ಯಕ್ರಮದಲ್ಲಿ ಬಿಎಂಶ್ರೀ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು

ಪಟಾಕಿ ದುರಂತ: ಮ್ಯಾಜಿಸ್ಟ್ರಿಯಲ್ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ತಿಬೆಲೆ ಪಟಾಕಿ ದುರಂತಕ್ಕೆ ಸಂಬಂಧಪಟ್ಟಂತೆ ಮ್ಯಾಜಿಸ್ಟ್ರಿಯಲ್ ತನಿಖೆ ನಡೆಸಲು ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮಲಾನ್ ಆದಿತ್ಯ ಬಿಸ್ವಾಸ್ ಅವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿದ್ದು, ವಿಚಾರಣೆ ನಡೆಸಿ ವರದಿ ಸಲ್ಲಿಸಲು ಮೂರು ತಿಂಗಳ ಗಡುವು ನಿಗದಿಪಡಿಸಲಾಗಿದೆ.

ಕರ್ನಾಟಕ– ತಮಿಳುನಾಡು ಗಡಿಯಲ್ಲಿರುವ ಅತ್ತಿಬೆಲೆಯ ಶ್ರೀ ಬಾಲಾಜಿ ಟ್ರೇಡರ್ಸ್ ಮಳಿಗೆಯಲ್ಲಿ ಬೆಂಕಿ ಅವಘಡ ಸಂಭವಿಸಿ, 16 ಮಂದಿ ಮೃತಪಟ್ಟಿದ್ದರು. ಈ ಬಗ್ಗೆ ಅತ್ತಿಬೆಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದ್ಯ ಪ್ರಕರಣದ ತನಿಖೆಯನ್ನು ಸಿಐಡಿ ನಡೆಸುತ್ತಿದೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್ ವರದಿಯೊಂದನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದರು. ವರದಿ ಪರಿಶೀಲನೆ ನಡೆಸಿರುವ ಸರ್ಕಾರ, ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಿದೆ.

'ಪಟಾಕಿ ಅವಘಡಕ್ಕೆ ಕಾರಣವೇನು? ಪಟಾಕಿ ಮಳಿಗೆಗೆ ಅನುಮತಿ ಪಡೆಯಲಾಗಿತ್ತಾ? ಮಾಲೀಕರಿಂದ ಯಾವೆಲ್ಲ ದಾಖಲೆ ಪಡೆದು ಪರವಾನಗಿ ನೀಡಲಾಗಿತ್ತು ? ಪರವಾನಗಿ ನೀಡುವಲ್ಲಿ ಲೋಪವಾಗಿದೆಯಾ ? ಲೋಪ ಎಸಗಿದವರು ಯಾರು ? ಅವಘಡ ಆಕಸ್ಮಿಕವೋ ಅಥವಾ ನಿರ್ಲಕ್ಷ್ಯದಿಂದ ಆಗಿದೆಯಾ ? ನಷ್ಟ ಎಷ್ಟಾಗಿದೆ ? ಎಂಬ ಬಗ್ಗೆ ಪಟಾಕಿ ದಾಸ್ತಾನು ಮಳಿಗೆಗಳ ಸ್ಫೋಟಕ ಕಾಯ್ದೆಯನ್ವಯ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಯುವತಿ ಜೊತೆ ಒಡನಾಟ: ಸಹೋದ್ಯೋಗಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 8ನೇ ಮೈಲಿಯ ಕಂಪನಿಯೊಂದರ ಎಂಜಿನಿಯರ್ ಲೋಕೇಶ್ ಕೊಲೆ ಪ್ರಕರಣ ಭೇದಿಸಿರುವ ಮಾದನಾಯಕನಹಳ್ಳಿ ಠಾಣೆ ಪೊಲೀಸರು, ಸಹೋದ್ಯೋಗಿ ಸೇರಿ ಇಬ್ಬರನ್ನು ಬಂಧಿಸಿದ್ದಾರೆ.

'ದಾವಣಗೆರೆಯ ಲೋಕೇಶ್ ಅವರನ್ನು ಇತ್ತೀಚೆಗೆ ಅಪಹರಣ ಮಾಡಿ, ತಲೆ ಜಜ್ಜಿ ಕೊಲೆ ಮಾಡಲಾಗಿತ್ತು. ಈ ಬಗ್ಗೆ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೊಂಡು, ಸಹೋದ್ಯೋಗಿ ಪ್ರತಾಪ್ ಹಾಗೂ ಈತನ ಸ್ನೇಹಿತ ಮಂಜುನಾಥ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಬೆಂಗಳೂರು ಗ್ರಾಮಾಂತರ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದರು.

'ಕಂಪನಿಯಲ್ಲಿದ್ದ ಯುವತಿಯೊಬ್ಬಳನ್ನು ಲೋಕೇಶ್ ಹಾಗೂ ಪ್ರತಾಪ್ ಇಷ್ಟಪಡುತ್ತಿದ್ದರು. ಆದರೆ, ಯುವತಿಯು ಲೋಕೇಶ್ ಜೊತೆ ಒಡನಾಟ ಹೊಂದಿದ್ದರು. ಇದೇ ಕಾರಣಕ್ಕೆ ಪ್ರತಾಪ್, ಲೋಕೇಶ್ ಅವರನ್ನು ಅಪಹರಿಸಿ ಕೊಲೆ ಮಾಡಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ಯುವತಿಗೆ ಕೆಲಸ ಕೊಡಿಸಿದ್ದ ಪ್ರತಾಪ್: 'ಚಿಕ್ಕಬಳ್ಳಾಪುರದ ಪ್ರತಾಪ್, ಕೆಲ ವರ್ಷಗಳ ಹಿಂದೆಯಷ್ಟೇ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದ. ಬಾಲ್ಯ ಸ್ನೇಹಿತೆಯಾಗಿದ್ದ ಯುವತಿಗೂ ಅದೇ ಕಂಪನಿಯಲ್ಲಿ ಕೆಲಸಕೊಡಿಸಿದ್ದ. ಆರಂಭದಲ್ಲಿ ಇಬ್ಬರೂ ಚೆನ್ನಾಗಿ ಮಾತನಾಡಿಕೊಂಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಡಿಪ್ಲೊಮಾ ಮುಗಿಸಿದ್ದ ಲೋಕೇಶ್, ಕೆಲ ತಿಂಗಳ ಹಿಂದೆಯಷ್ಟೇ ಎಂಜಿನಿಯರ್ ಆಗಿ ಕಂಪನಿಗೆ ಸೇರಿದ್ದರು. ಯುವತಿ ಜೊತೆ ಸ್ನೇಹ ಬೆಳೆಸಿದ್ದರು. ಕೆಲದಿನಗಳಲ್ಲಿ ಇಬ್ಬರ ನಡುವೆ ಹೆಚ್ಚು ಒಡನಾಟ ಬೆಳೆದಿತ್ತು. ಇಬ್ಬರೂ ಹಲವೆಡೆ ಸುತ್ತಾಡುತ್ತಿದ್ದರು. ಇದನ್ನು ನೋಡಿದ್ದ ಪ್ರತಾಪ್, ಲೋಕೇಶ್‌ಗೆ ತಾಕೀತು ಮಾಡಿದ್ದ. ಇದೇ ವಿಚಾರವಾಗಿ ಇಬ್ಬರ ನಡುವೆ ಗಲಾಟೆಯೂ ಆಗಿತ್ತು' ಎಂದು ಮೂಲಗಳು ಹೇಳಿವೆ.

ಮೆಟ್ರೊ ನಿಲ್ದಾಣ ಬಳಿ ಅಪಹರಣ: 'ಲೋಕೇಶ್ ಅವರು ಅಕ್ಟೋಬರ್ 5ರಂದು ಕೆಲಸ ಮುಗಿಸಿಕೊಂಡು ನಾಗಸಂದ್ರ ಮೆಟ್ರೊ ನಿಲ್ದಾಣ ಬಳಿ ನಡೆದುಕೊಂಡು ಹೊರಟಿದ್ದರು. ಅವರನ್ನು ಬೈಕ್‌ನಲ್ಲಿ ಅಪಹರಣ ಮಾಡಿದ್ದ ಪ್ರತಾಪ್ ಹಾಗೂ ಮಂಜುನಾಥ್, ಕುಕ್ಕನಹಳ್ಳಿ ಬಳಿಯ ಜಮೀನೊಂದಕ್ಕೆ ಕರೆದೊಯ್ದಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಲೋಕೇಶ್ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ತಲೆ ಮೇಲೆ ಕಲ್ಲು ಎತ್ತಿಹಾಕಿ ಜಜ್ಜಿ ಕೊಂದಿದ್ದರು. ನಂತರ, ಸ್ಥಳದಿಂದ ಪರಾರಿಯಾಗಿದ್ದರು. ಮೃತದೇಹ ನೋಡಿದ್ದ ಜಮೀನು ಮಾಲೀಕ ಠಾಣೆಗೆ ದೂರು ನೀಡಿದ್ದರು. ಲೋಕೇಶ್ ಬಗ್ಗೆ ಕಂಪನಿಯಲ್ಲಿ ವಿಚಾರಿಸಿದಾಗ, ಪ್ರತಾಪ್ ಜೊತೆ ಜಗಳವಾಗಿದ್ದ ಸಂಗತಿ ಗೊತ್ತಾಗಿತ್ತು. ಪ್ರತಾಪ್‌ನನ್ನು ವಶಕ್ಕೆ ಪಡೆದಾಗ ತಪ್ಪೊಪ್ಪಿಕೊಂಡ' ಎಂದು ಮೂಲಗಳು ಹೇಳಿವೆ.

ಗಾಜಾ ಆಸ್ಪತ್ರೆ ಮೇಲೆ ದಾಳಿ: 500 ಸಾವು

ಒಂದನೇ ಪುಟದಿಂದ...

ಆಸ್ಪತ್ರೆಯಲ್ಲಿದ್ದ ರೋಗಿಗಳು, ಗಾಯಾಳುಗಳನ್ನು ದಾಳಿ ಹಿನ್ನೆಲೆಯಲ್ಲಿ ಬಲವಂತವಾಗಿ ಬೇರೆಡೆಗೆ ಸ್ಥಳಾಂತರಿಸಲಾಯಿತು.ನಗರದ ಇತರೆ ಆಸ್ಪತ್ರೆಗಳಲ್ಲಿಯೂ ಹಲವು ನಿರಾಶ್ರಿತರು ಆಶ್ರಯ ಪಡೆದಿದ್ದಾರೆ ಎಂದು ಸಚಿವಾಲಯವು ತಿಳಿಸಿದೆ.

ಅಕ್ಟೋಬರ್ 7ರಂದು ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವೆ ಸಂಘರ್ಷವು ಆರಂಭವಾದ ನಂತರ ಈವರೆಗೆ ಗಾಜಾಪಟ್ಟಿಯಲ್ಲಿ ಸುಮಾರು 3,000 ಜನರು ಹಾಗೂ ಇಸ್ರೇಲ್‌ನಲ್ಲಿ ಸುಮಾರು 1,400 ಜನರು ಸತ್ತಿದ್ದಾರೆ.

ಶೋಕ: ಗಾಜಾದ ಆಸ್ಪತ್ರೆಯೊಂದರ ಮೇಲೆ ನಡೆದ ದಾಳಿಗೆ ನೂರಾರು ಜನರು ಬಲಿಯಾದ ಕೃತ್ಯದಿಂದಾಗಿ ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮ್ಮದ್ ಅಬ್ಬಾಸ್ 3 ದಿನ ಶೋಕ ಘೋಷಿಸಿದ್ದಾರೆ.

ಇದು, ಹತ್ಯಾಕಾಂಡವಲ್ಲದೇ ಬೇರೇನೂ ಅಲ್ಲ. ಇಂತ ನರಮೇಧವನ್ನು ತಡೆಯಲು ಅಂತರರಾಷ್ಟ್ರೀಯ ಸಮುದಾಯ ತಕ್ಷಣಕ್ಕೆ ಮಧ್ಯಪ್ರವೇಶಿಸಬೇಕು ಎಂದು ನಾವು ಕೋರುತ್ತೇವೆ. ದೀರ್ಘಕಾಲ ಮೌನವನ್ನು ಸಹಿಸಲು ಆಗುವುದಿಲ್ಲ ಎಂದು ಹೇಳಿದ್ದಾರೆ.

ಇಸ್ರೇಲ್ ಸೇನೆ ಪ್ರತಿಕ್ರಿಯೆ: ಇಸ್ರೇಲ್‌ನ ಸೇನಾ ವಕ್ತಾರರಾದ ಡೇನಿಯಲ್ ಹಗರಿ ಅವರು, ಆಸ್ಪತ್ರೆಯ ದಾಳಿ ಮತ್ತು ಸಾವುಗಳನ್ನು ಕುರಿತು ಯಾವುದೇ ಮಾಹಿತಿ ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

'ನಾವು ವಿವರ ಪಡೆಯುತ್ತಿದ್ದು, ಈ ಬಗ್ಗೆ ಮಾಹಿತಿ ನೀಡುತ್ತೇವೆ. ಇದು, ಇಸ್ರೇಲ್‌ನ ವಾಯುದಾಳಿ ಎಂದು ಹೇಳಲು ಮಾಹಿತಿ ಇಲ್ಲ' ಎಂದಿದ್ದಾರೆ.

ಭೇಟಿ ರದ್ದು: ದಾಳಿ ಹಿನ್ನೆಲೆಯಲ್ಲಿ ಬುಧವಾರ ಅಮೆರಿಕ ಅಧ್ಯಕ್ಷ ಜೋ ಬೈಡನ್ ಜೊತೆ ನಡೆಸಬೇಕಿದ್ದ ಭೇಟಿಯನ್ನು ಅಧ್ಯಕ್ಷ ಮಹಮ್ಮದ್ ಅಬ್ಬಾಸ್ ರದ್ದುಪಡಿಸಿದ್ದಾರೆ ಎಂದು ಪ್ಯಾಲೆಸ್ಟೀನ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಸಕ್ಕರೆ ಸಚಿವ ಶಿವಾನಂದ ಪಾಟೀಲ

25ರಿಂದಲೇ ಕಬ್ಬು ಅರೆಯಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬರ ಹಿನ್ನೆಲೆಯಲ್ಲಿ ಒಂದು ವಾರ ಮೊದಲೇ, ಅಂದರೆ ಇದೇ 25 ರಿಂದಲೇ ಕಬ್ಬು ಅರೆಯುವಿಕೆ ಆರಂಭಿಸಲು ಎಲ್ಲ ಸಕ್ಕರೆ ಕಾರ್ಖಾನೆಗಳಿಗೆ ಸೂಚಿಸಲಾಗಿದೆ' ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬರ ಪರಿಸ್ಥಿತಿಯಿಂದ ಕಬ್ಬು ಒಣಗುತ್ತಿದೆ. ಹಂಗಾಮಿಗೆ ಬೇಗನೆ ಕಬ್ಬು ಅರೆಯುವಿಕೆ ಆರಂಭಿಸುವಂತೆ ಬೆಳೆಗಾರರು ಮನವಿ ಮಾಡಿದ್ದಾರೆ' ಎಂದರು.

ಇಳುವರಿ ಕಡಿಮೆ ಸಾಧ್ಯತೆ: 'ಮಳೆ ಕೊರತೆಯಿಂದ ಅಕ್ಟೋಬರ್‌ನಲ್ಲಿಯೇ ಕಬ್ಬು ಕಟಾವು ಮಾಡುವುದರಿಂದ ಇಳುವರಿ ಸ್ವಲ್ಪ ಕಡಿಮೆ ಆಗಲಿದೆ' ಎಂದರು.

'ಈ ಬಾರಿ 3.50 ಲಕ್ಷ ಹೆಕ್ಟೇರ್‌ನಿಂದ 4.50 ಲಕ್ಷ ಹೆಕ್ಟೇರ್‌ನಲ್ಲಿ ಕಬ್ಬು ಇದೆ. ಸುಮಾರು 1 ಲಕ್ಷ ಹೆಕ್ಟೇರ್‌ನಲ್ಲಿ ಕಬ್ಬು ಕಟಾವಿಗೆ ಬಂದಿಲ್ಲ. 74 ಕಾರ್ಖಾನೆಗಳಲ್ಲಿ ಕಳೆದ ಬಾರಿ ಕಬ್ಬು ಅರೆಯುವಿಕೆ ಮಾಡಲಾಗಿತ್ತು. ಈ ಬಾರಿ 75 ರಿಂದ 78 ಕಾರ್ಖಾನೆಗಳಲ್ಲಿ ಕಬ್ಬು ಅರೆಯಬಹುದು. ಇದರಿಂದ 1,800 ಮೆಗಾ ವಾಟ್ ಕೋಜನ್ ಉತ್ಪಾದನೆಯಾಗಲಿದ್ದು, ಇದರಿಂದ ಸದ್ಯ ಇರುವ ಲೋಡ್ ಶೆಡ್ಡಿಂಗ್ ತಡೆಗೂ ಸಹಕಾರಿ ಆಗಲಿದೆ' ಎಂದರು.

'ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಎಫ್‌ಆರ್‌ಪಿಗಿಂತ ಹೆಚ್ಚು ಹಣ ಕೊಡಿಸಲಾಗಿದ್ದು, ರೈತರಿಗೆ ನಯಾ ಪೈಸೆ ಬಾಕಿ ಇಲ್ಲ. ಬುಳವಾಡ ಬಸವೇಶ್ವರ ಸಕ್ಕರೆ ಕಾರ್ಖಾನೆಯಿಂದ ₹ 28 ಕೋಟಿ ಬಾಕಿ ಇತ್ತು. ಕಾರ್ಖಾನೆಯ ಉಪಕರಣಗಳನ್ನು ಜಪ್ತಿ ಮಾಡಿ ರೈತರಿಗೆ ಹಣ ಕೊಡಿಸಲಾಗಿದೆ' ಎಂದರು.

ವಿದ್ಯುನ್ಮಾನ ಮಾಪನ ಯಂತ್ರ ಕಡ್ಡಾಯ: 'ಕಬ್ಬು ಬೆಳೆಗಾರರಿಗೆ ತೂಕ, ಇನ್ನಿತರೆಯಲ್ಲಿ ಮೋಸ ಆಗಬಾರದೆಂದು ವಿದ್ಯುನ್ಮಾನ ಮಾಪನ ಯಂತ್ರ ಕಡ್ಡಾಯ ಮಾಡಲಾಗುವುದು. ತಪಾಸಣೆಗೆ ಕಾರ್ಯಪಡೆಯನ್ನೂ ರಚಿಸಲಾಗುತ್ತಿದೆ. ರೈತರು ಲಿಖಿತ ದೂರು ನೀಡಿದರೆ ಪರಿಶೀಲಿಸುತ್ತೇವೆ' ಎಂದರು.

'ಮಹಾರಾಷ್ಟ್ರ ಮಾದರಿಯಲ್ಲಿ ರಾಜ್ಯದಲ್ಲಿಯೂ ಸಕ್ಕರೆ ನಿರ್ವಹಣೆ, ನಿಯಂತ್ರಣಕ್ಕೆ ಕಾಯ್ದೆ ತರುವ ಚಿಂತನೆ ಇದೆ' ಎಂದೂ ಹೇಳಿದರು.

'ಸಕ್ಕರೆ ಉತ್ಪಾದನೆ ಕಡಿಮೆ ಸಾಧ್ಯತೆ'

'ರೈತರಿಗೆ ಎಥೆನಾಲ್ ಲಾಭಾಂಶ ಕೊಡುವ ಬಗ್ಗೆ ಸಕ್ಕರೆ ನಿಯಂತ್ರಣ ಮಂಡಳಿಯಲ್ಲಿ ನಿರ್ಧರಿಸಲಾಗುವುದು. ಈ ಬಾರಿ ಸಕ್ಕರೆ ಉತ್ಪಾದನೆ ಕಡಿಮೆ ಆಗಬಹುದು. ಬೇಡಿಕೆಯಷ್ಟು ಸಕ್ಕರೆ ಮಾರುಕಟ್ಟೆಗೆ ಬಾರದೇ ಇರಬಹುದು' ಎಂದು ಸಚಿವ ಶಿವಾನಂದ ಪಾಟೀಲ ಕಳವಳ ವ್ಯಕ್ತಪಡಿಸಿದರು.

ಸಲುಗೆ: ಕೊಲೆ ಎಸಗಿದ ದಂಪತಿ ಬಂಧನ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸಜ್ಜನ್ ಸಿಂಗ್ (33) ಕೊಲೆ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಬಿಹಾರದ ರಾಜೇಶ್‌ಕುಮಾರ್ ಹಾಗೂ ಈತನ ಪತ್ನಿ ನೇಹಾಕುಮಾರಿ ಬಂಧಿತರು. ಇವರಿಬ್ಬರು ಸೇರಿಕೊಂಡು ಬಿಹಾರದ ಸಜ್ಜನ್ ಸಿಂಗ್ ಅವರನ್ನು ಮಾರಕಾಸ್ತ್ರಗಳಿಂದ ಹೊಡೆದು ಕೊಂದಿದ್ದರು' ಎಂದು ಪೊಲೀಸರು ಹೇಳಿದರು.

'ಮೂವರು ಕೆಲ ವರ್ಷಗಳ ಹಿಂದೆಯಷ್ಟೇ ಬಿಹಾರದಿಂದ ನಗರಕ್ಕೆ ಬಂದಿದ್ದರು. ಸಜ್ಜನ್ ಹಾಗೂ ರಾಜೇಶ್, ಆರ್‌ಎಂಸಿ ಯಾರ್ಡ್‌ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ನೇಹಾಕುಮಾರಿ ಸಹ ಸ್ವಚ್ಛತೆ ಕೆಲಸ ಮಾಡಿಕೊಂಡಿದ್ದರು. ಒಂದೇ ರಾಜ್ಯದವರಾಗಿದ್ದರಿಂದ, ಮೂವರ ನಡುವೆ ಆತ್ಮೀಯತೆ ಇತ್ತು' ಎಂದು ತಿಳಿಸಿದರು.

'ನೇಹಾಕುಮಾರಿ ಜೊತೆ ಹೆಚ್ಚು ಒಡನಾಟ ಇಟ್ಟುಕೊಂಡಿದ್ದ ಸಜ್ಜನ್ ಸಿಂಗ್, ಸಲುಗೆ ಬೆಳೆಸಿದ್ದ. ಈ ಸಂಗತಿ ಆರಂಭದಲ್ಲಿ ರಾಜೇಶ್ ಅವರಿಗೆ ಗೊತ್ತಿರಲಿಲ್ಲ. ನೇಹಾಕುಮಾರಿ ಹಾಗೂ ಸಜ್ಜನ್, ಆಗಾಗ ಭೇಟಿಯಾಗಿ ಖಾಸಗಿ ಕ್ಷಣಗಳನ್ನು ಕಳೆಯುತ್ತಿದ್ದರು.'

'ಇತ್ತೀಚೆಗೆ ನೇಹಾಕುಮಾರಿ ಹಾಗೂ ಸಜ್ಜನ್ ನಡುವೆ ಮನಸ್ತಾಪ ಉಂಟಾಗಿತ್ತು. ತನ್ನನ್ನು ಮಾತನಾಡಿಸದಂತೆ ನೇಹಾಕುಮಾರಿ ಹೇಳಿದ್ದರು. ಅದಕ್ಕೆ ಒಪ್ಪದ ಸಜ್ಜನ್, ಸಲುಗೆ ಮುಂದುವರಿಸುವಂತೆ ಪೀಡಿಸಲಾರಂಭಿಸಿದ್ದರು. ಕಿರುಕುಳ ಹೆಚ್ಚಾಗಿದ್ದರಿಂದ ನೇಹಾಕುಮಾರಿ, ಪತಿ ರಾಜೇಶ್‌ಗೆ ವಿಷಯ ತಿಳಿಸಿದ್ದರು. ನಂತರ, ಇಬ್ಬರು ಸೇರಿ ಹತ್ಯೆಗೆ ಸಂಚು ರೂಪಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸೋಮೇಶ್ವರನಗರದಲ್ಲಿ ಸಜ್ಜನ್ ಸಿಂಗ್ ಜೊತೆ ದಂಪತಿ ಜಗಳ ತೆಗೆದಿದ್ದರು. ಇದೇ ಸಂದರ್ಭದಲ್ಲಿ ಆರೋಪಿ ರಾಜೇಶ್, ಸಜ್ಜನ್ ಕೈ–ಕಾಲುಗಳು, ಹೊಟ್ಟೆ ಹಾಗೂ ಎದೆಗೆ ಹೊಡೆದಿದ್ದ. ತೀವ್ರ ರಕ್ತಸ್ರಾವದಿಂದ ಸಜ್ಜನ್ ಮೃತಪಟ್ಟಿದ್ದರು. ಮೃತದೇಹವನ್ನು ಬೇರೆಡೆ ಎಸೆದು ಆರೋಪಿಗಳು ಪರಾರಿಯಾಗಿದ್ದರು' ಎಂದು ತಿಳಿಸಿವೆ.

ನವವರ್ಣ

ಎಸ್‌ಜೆ ಆರ್ ಮಹಿಳಾ ಕಾಲೇಜಿನ ಸಿಬ್ಬಂದಿ, ರಾಜಾಜಿನಗರ, ಬೆಂಗಳೂರು

ಔಷಧ ನಿಯಂತ್ರಣ ಇಲಾಖೆ ಸಿಬ್ಬಂದಿ, ಅರಮನೆ ರಸ್ತೆ, ಬೆಂಗಳೂರು

ವಿಜಯಲಕ್ಷ್ಮಿ ಮತ್ತು ಸಂಗಡಿಗರು, ಮತ್ತಿಕೆರೆ, ಬೆಂಗಳೂರು

ಡೆಕ್ಕನ್ ಹ್ಯಾಬಿಟ್ಯಾಟ್ ಅಪಾರ್ಟ್‌ಮೆಂಟ್‌ನ ಸ್ನೇಹಿತೆಯರು, ಯಶವಂತಪುರ, ಬೆಂಗಳೂರು

ಆರ್‌ಎನ್‌ಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ಸಿಬ್ಬಂದಿ, ರಾಜರಾಜೇಶ್ವರಿ ನಗರ, ಬೆಂಗಳೂರು

ವೆಂಕಟರಮಣ ಮಹಿಳಾ ಸಂಘದ ಸದಸ್ಯರು, ಶ್ರೀನಗರ, ಬೆಂಗಳೂರು

ಇಶಿತಾ ಮತ್ತು ಅಶ್ವಿನಿ, ಚಿಕ್ಕಮಗಳೂರು

ಲಿಖಿತಾ ಬಿ., ಕನಕನಗರ, ಬೆಂಗಳೂರು

ಪ್ರೆಸಿಡೆನ್ಸಿ ಕಾಲೇಜ್ (ಸ್ವಾಯತ್ತ) ಬೋಧಕೇತರ ಸಿಬ್ಬಂದಿ

ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗದ ಸಿಬ್ಬಂದಿ, ಕೆಪಿಟಿಸಿಎಲ್ ಕಾವೇರಿ ಭವನ, ಬೆಂಗಳೂರು

ಎಲ್‌ಐಸಿ ಸಿಬ್ಬಂದಿ, ಶಿವಮೊಗ್ಗ

ನಾರಾಯಣಮ್ಮ ಮತ್ತು ಕುಟುಂಬ, ಎಚ್‌ಎಸ್‌ಆರ್ ಬಡಾವಣೆ, ಬೆಂಗಳೂರು

ಶೈಲಾ ರಮೇಶ್ ಮತ್ತು ಸ್ನೇಹಿತೆಯರು, ನೆಲಮಂಗಲ

ಸಂಧ್ಯಾ ಮತ್ತು ಸ್ನೇಹಿತೆಯರು, ಕೆಂಗೇರಿ ಉಪನಗರ, ಬೆಂಗಳೂರು

ಜ್ವಾಲಿನಿ ಶರತ್ ಮತ್ತು ಸ್ನೇಹಿತೆಯರು, ರಾಜರಾಜೇಶ್ವರಿ ನಗರ, ಬೆಂಗಳೂರು

ಹೇಮಾ ಮತ್ತು ಗೆಳತಿಯರು, ಎಚ್‌ಎಂಟಿ ಬಡಾವಣೆ, ಬೆಂಗಳೂರು

ವೈಷ್ಣವಿ, ವಿದ್ಯಾರಣ್ಯಪುರ

ರಂಜಿತ ಮತ್ತು ಸ್ನೇಹಿತೆಯರು, ಬೆಂಗಳೂರು

ಸಿದ್ಧಿವಿನಾಯಕ ಭಜನೆ ಮಂಡಳಿ, ಕತ್ರಿಗುಪ್ಪೆ, ಬೆಂಗಳೂರು

ಅನ್ನಪೂರ್ಣೇಶ್ವರಿ ಮಹಿಳಾ ಬಳಗ, ವೀರಭದ್ರನಗರ, ಬೆಂಗಳೂರು

ಲೋಕಾಯುಕ್ತ ಕಚೇರಿ ವಕೀಲೆಯರು, ಬೆಂಗಳೂರು

ಸುಚಿತ್ರ ಮತ್ತು ಗೆಳತಿಯರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು

ಅಂಬುಜ ಬಿ.ಎಂ ಮತ್ತು ಸ್ನೇಹಿತೆಯರು, ಹೈಕೋರ್ಟ್ ಸಿಬ್ಬಂದಿ, ಬೆಂಗಳೂರು

ಚೈತ್ರಾ ಮತ್ತು ಗೆಳತಿಯರು, ಉತ್ತರಹಳ್ಳಿ, ಬೆಂಗಳೂರು



ಪರಿಮಳವು ಬಣ್ಣವನ್ನು ಬದಲಿಸೀತೆ?

ಅಮೃತೇಶ್ವರಿ ಬಿ.

ನಮ್ಮ ಪಂಚೇಂದ್ರಿಯಗಳು ವಾತಾವರಣದಿಂದಾಗುವ ದೃಶ್ಯ, ವಾಸನೆ, ಶಬ್ದ, ರುಚಿ, ಹಾಗೂ ಸ್ಪರ್ಶ ಇಂತಹ ನೂರಾರು ಅನುಭವಗಳನ್ನು ಪ್ರತಿಕ್ಷಣವೂ ದಾಖಲಿಸುತ್ತಲಿರುತ್ತವೆ. ನಮ್ಮ ಮಿದುಳು ಈ ಮಾಹಿತಿಗಳ ರಾಶಿಯಿಂದ, ಉದಾಹರಣೆಗೆ, ಯಾವುದೇ ವಸ್ತುವಿನ ವಾಸನೆ ಹಾಗೂ ಮೃದುತ್ವ, ಔನ್ನತ್ಯ (ಪಿಚ್), ಬಣ್ಣ ಹಾಗೂ ಅದರ ಸಂಗೀತದ ಆಯಾಮಗಳು – ಹೀಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾಹಿತಿಗಳನ್ನು ಕ್ರೋಡೀಕರಿಸಿ ಒಂದು ವಿಷಯವನ್ನು ಅರ್ಥೈಸಿಕೊಳ್ಳುತ್ತದೆ. ಈ ರೀತಿಯ ಇಂದ್ರಿಯಾನುಭವಗಳ ಸಂಯೋಜನೆಯಿಂದಾಗಿ ಮಿದುಳು ನಮಗೆ ಒಂದು ಸಂದೇಶವನ್ನು ನೀಡುತ್ತಿರುತ್ತದೆ. ನಮಗೆ ಹೆಚ್ಚಿನ ಉಷ್ಣತೆಯನ್ನು ನೆನೆದಾಗ ಕೆಂಪು ಕೇಸರಿ ಹಳದಿಗಳಂತಹ ಬೆಚ್ಚಗಿನ ಬಣ್ಣಗಳ ಜೊತೆಗೆ ಕಲ್ಪಿಸಿಕೊಳ್ಳುವಂತಾಗುತ್ತದೆ, ಮೆಲುಧ್ವನಿಯನ್ನು ಕೇಳಿದಾಗ ಇಳಿತಗ್ಗುಗಳಿಲ್ಲದ ವಿಶಾಲವಾದ ಪ್ರಶಾಂತ ಪ್ರದೇಶಗಳು ಹಾಗೂ ಬಣ್ಣಗಳನ್ನು ನೋಡಿದಾಗ ಆಯಾ ಬಣ್ಣಕ್ಕೆ ಹೊಂದುವ ಸ್ವಾದವಿರುವ ಆಹಾರಪದಾರ್ಥಗಳು ನಮ್ಮ ಕಣ್ಣ ಮುಂದೆ ಬರುತ್ತವೆ. ಕೇಸರಿಬಣ್ಣವನ್ನು ನೋಡಿದ ಕೂಡಲೇ ಕಿತ್ತಳೆಹಣ್ಣಿನ ನೆನಪಾಗಿ ಬಾಯಲ್ಲಿ ನೀರೂರುವ ಹಾಗೆ! ಎಂದರೆ ಪರಿಮಳವು ಬಣ್ಣವನ್ನು ಬದಲಿಸಿದಂತೆಯೇ ಎಲ್ಲವೇ? ಇದೋ 'ಫ್ರಂಟಿಯರ್ಸ್ ಇನ್ ಸೈಕಾಲಜಿ' ಪತ್ರಿಕೆಯಲ್ಲಿ ಮೊನ್ನೆ ಹೀಗೊಂದು ಲೇಖನ ಪ್ರಕಟವಾಗಿದೆ. ನಾವು ಗ್ರಹಿಸುವ ವಾಸನೆಯು ನಾವು ನೋಡುವ ಬಣ್ಣವನ್ನು ಗ್ರಹಿಸುವುದರಲ್ಲಿ ವ್ಯತ್ಯಾಸ ತರಬಹುದು ಎಂದು ಲಂಡನ್ನಿನ ಲಿವರ್‌ಪೂಲ್ ವಿಶ್ವವಿದ್ಯಾನಿಲಯದ ಡಾ. ರ್ಯಾನ್ ವಾರ್ಡ್ ಮತ್ತು ಸಂಗಡಿಗರು ಪ್ರಾಯೋಗಿಕವಾಗಿ ನಿರೂಪಿಸಿದ್ದಾರೆ.

ಇವರು 20ರಿಂದ 57 ವಯಸ್ಸಿನ 24 ಮಹಿಳೆ ಹಾಗೂ ಪುರುಷರನ್ನು ಪರೀಕ್ಷೆಗೊಡ್ಡಿ, ವಾಸನೆ ಹಾಗೂ ಬಣ್ಣವನ್ನು ಅವರ ಗ್ರಹಿಕೆ ಹೇಗೆ ಸಂಯೋಜಿಸಿಕೊಳ್ಳಬಲ್ಲದು ಎಂದು ಪರೀಕ್ಷಿಸಿದ್ದಾರೆ. ಯಾವುದೇ ಇಂದ್ರಿಯಾನುಭವಗಳನ್ನು ಪ್ರಚೋದಿಬಲ್ಲಂತಹ ಪ್ರಚೋದಕಗಳಿಲ್ಲದಂತಹ ಒಂದು ಕೋಣೆಯಲ್ಲಿ ಪರದೆಯ ಮುಂದೆ ಇವರೆಲ್ಲರನ್ನೂ ಕುಳ್ಳಿರಿಸಿದ್ದಾರೆ. ಇವರಲ್ಲಿ ಯಾರಿಗೂ ಬಣ್ಣಗುರುಡು ಹಾಗೂ ವಾಸನೆಯನ್ನು ಗ್ರಹಿಸಲಾರದಂತಹ ಸಮಸ್ಯೆ ಇಲ್ಲದವರನ್ನೇ ಆಯ್ಕೆ ಮಾಡಿಕೊಳ್ಳಲಾಗಿತ್ತೆನ್ನಿ. ಪ್ರಯೋಗದ ಸಂದರ್ಭದಲ್ಲಿ ಡಿಯೋಡರೆಂಟುಗಳು ಅಥವಾ ಪರಿಮಳದ್ರವ್ಯಗಳನ್ನು ಹಚ್ಚಿಕೊಂಡಿರಲಿಲ್ಲವಂತೆ. ಹಲವಾರು ಬಗೆಯ ಪರಿಮಳಗಳನ್ನು ಆ ಪ್ರತ್ಯೇಕ ಕೋಣೆಯೊಳಗೆ ಐದು ನಿಮಿಷಗಳ ಕಾಲ ಪಸರಿಸಲಾಯಿತಂತೆ. ಕ್ಯಾರಮೆಲ್, ಚೆರ್ರಿ, ಕಾಫಿ, ನಿಂಬೆ ಹಾಗೂ ಪುದೀನ ಇವುಗಳ ಪರಿಮಳಗಳನ್ನು ಹಾಗೇ ಯಾದೃಚ್ಛಿಕವಾಗಿ ಆರಿಸಿಕೊಳ್ಳಲಾಗಿತ್ತು. ಯಾವುದೇ ವಾಸನೆಯಿಲ್ಲದ ನೀರನ್ನು ನಿಯಂತ್ರಣವಾಗಿ ತೆಗೆದುಕೊಂಡಿದ್ದರು. ಅನಂತರ ಇವುಗಳಲ್ಲಿ ಒಂದು ಸುಗಂಧವನ್ನು ಅಲ್ಟ್ರಾಸೋನಿಕ್ ಡಿಫ್ಯೂಸರ್‌ನ ಮೂಲಕ ಐದು ನಿಮಿಷಗಳ ಕಾಲ ಪಸರಿಸಿದರು. ಇವರ ಫಲಿತಾಂಶದ ಪ್ರಕಾರ ಕ್ಯಾರಮೆಲ್ ಅಂದರೆ ಸುಟ್ಟಿರುವ ವಾಸನೆಯನ್ನು ಗ್ರಹಿಸಿದಾಗ ನಮಗೆ ಕಡುಕಂದು ಹಾಗೂ ಕಡುಹಳದಿ ಬಣ್ಣವು ನೆನೆಪಿಗೆ ಬರುತ್ತದಂತೆ. ರಸ್ತೆಯಲ್ಲಿ ಹೋಗುತ್ತಿದ್ದಾಗ ಕಾಫಿಯ ಘಮ ಮೂಗಿಗೆ ಬಡಿದಾಗ ನಾವು ಕಣ್ಣುಮುಚ್ಚಿ ಅದನ್ನು ಅನುಭವಿಸುತ್ತಿದ್ದಂತೆಯೇ ಕಡುಕಂದು ಅಥವಾ ಕಡುಗೆಂಪು ಬಣ್ಣವೂ, ಚೆರ್ರಿಹಣ್ಣಿನ ಸ್ವಾದವನ್ನು ನೆನೆದಾಗ ಗುಲಾಬಿಯೋ ಕೆಂಪುಬಣ್ಣವೋ ಮತ್ತು ಪುದೀನದ ಸುಗಂಧ ಪಸರಿಸಿದಾಗ ನೀಲಿ ಅಥವಾ ಹಸಿರುಬಣ್ಣವೋ ಕಣ್ಣ ಮುಂದೆ ತೆರೆದುಕೊಳ್ಳುವ ಹಾಗೆ. ಅನಂತರ ಒಂದು ಚೌಕಾಕಾರದೊಳಗೆ ಹಲವಾರು ಬಗೆಯ ಬಣ್ಣಗಳನ್ನು ಯಾದೃಚ್ಛಿಕವಾಗಿ ಬಳಿದಿರುವ ಪರದೆಯನ್ನು ಭಾಗವಹಿಸಿದ ಅಭ್ಯರ್ಥಿಗಳಿಗೆ ತೋರಿಸಿದರು. ನಂತರ ಅವುಗಳನ್ನು ಎರಡು ರೀತಿಯ ಬಣ್ಣಗಳಾಗಿ ವಿಭಾಗಿಸಲು ಹೇಳಿದರು. ಒಂದು ಹಳದಿಯಿಂದ ನೀಲಿ, ಮತ್ತೊಂದು ಹಸಿರುಬಣ್ಣದಿಂದ ಕೆಂಪುಬಣ್ಣದ ಕಡೆಗೆ. ಒಮ್ಮೆ ಇದು ಪೂರ್ತಿಯಾದ ನಂತರ ಅದನ್ನೇ ಪುನರಾವರ್ತಿಸುವುದು. ಆಯ್ಕೆ ಮಾಡಿದ್ದ ಎಲ್ಲಾ ಪರಿಮಳಗಳನ್ನೂ ಐದು ಬಾರಿ ಪಸರಿಸಿದರಂತೆ. ಅದು ಪೂರ್ಣವಾಗುವವರೆಗೂ ಬಣ್ಣಗಳ ಜೋಡಣೆಯನ್ನು ಪುನರಾವರ್ತಿಸಿದರಂತೆ. ಭಾಗವಹಿಸಿದವರು ಈ ಎಲ್ಲಾ ಬಣ್ಣಗಳನ್ನು ಒಂದೇ ಸಮನಾಗಿ ಸರಿದೂಗಿಸಿ, ಅದರ ಅಂತಿಮ ಬಣ್ಣ ಏಳು ಬಣ್ಣ ಸೇರಿ ಬಿಳಿಬಣ್ಣವಾಗುವ ರೀತಿಯಲ್ಲಿ ತಿಳಿಯಾದ ಬೂದುಬಣ್ಣಕ್ಕೆ ತರುವುದಾಗಿತ್ತು. ಅರ್ಥಾತ್, ಅವರು ಜೋಡಿಸಿದ ಬಣ್ಣಗಳ ಅನುಕ್ರಮವು ತಿಳಿ ಬೂದುಬಣ್ಣದಲ್ಲಿ ಕೂಡಿಕೊಂಡಿರುವ ಎಲ್ಲಾ ಬಣ್ಣಗಳ ಸರಿಯಾದ ಮಿಶ್ರಣವಾಗಿರಬೇಕಿತ್ತು. ಆದರೆ ಇದನ್ನು ಮಾಡುವಲ್ಲಿ ಸುಮಾರು ಭಾಗವಹಿಸಿದವರೆಲ್ಲರೂ ಸೋತರು. ಅವರು ಜೋಡಿಸಿದ ಕ್ರಮವು ತಿಳಿಬೂದುಬಣ್ಣಕ್ಕೆ ದೂರವೇ ಇತ್ತಂತೆ. ಉದಾಹರಣೆಗೆ, ಕಾಫಿಯ ಪರಿಮಳವನ್ನು ಪಸರಿಸಿದಾಗ ಅವರು ಜೋಡಿಸಿದ ಬಣ್ಣಗಳ ಕ್ರಮವು ತಿಳಿಬೂದುಬಣ್ಣದ ಮಿಶ್ರಣವಾಗಿರದೆ ಕಂದುಮಿಶ್ರಿತ ಕೆಂಪುಬಣ್ಣವಾಗಿತ್ತು. ಅಂತೆಯೇ ಕ್ಯಾರಮೆಲ್ ಪರಿಮಳವನ್ನು ಪಸರಿಸಿದಾಗ ಭಾಗವಹಿಸಿದವರೆಲ್ಲರೂ ಜೋಡಿಸಿದ ಬಣ್ಣದ ಸಂಯೋಜನೆಯು ಅಚ್ಚನೀಲಿ ಬಣ್ಣದ್ದಾಗಿತ್ತು.

ಆದರೆ ಪುದೀನ ಪರಿಮಳವನ್ನು ಪಸರಿಸಿದಾಗ ಮಾತ್ರ ಫಲಿತಾಂಶ ಬೇರೆಯೇ ಆಗಿತ್ತು. ಅಂದರೆ ಎಲ್ಲರೂ ಜೋಡಿಸಿದ ಬಣ್ಣಗಳ ಕ್ರಮವು ತಿಳಿಬೂದುಬಣ್ಣಕ್ಕೆ ಹತ್ತಿರವಾಗಿತ್ತು. ಅರ್ಥಾತ್, ಐದರಲ್ಲಿ ನಾಲ್ಕು ಅದುವೇ ನಿಂಬೆ, ಚೆರ್ರಿ, ಕ್ಯಾರಮೆಲ್ ಹಾಗೂ ಕಾಫಿ ಪರಿಮಳಗಳನ್ನು ಪಸರಿಸಿದಾಗ ಬಣ್ಣಗಳ ಗ್ರಹಿಕೆಯು ವಾರ್ಡ್ ಮತ್ತು ಸಂಗಡಿಗರ ಅಂದಾಜಿನಂತೆಯೇ ಇತ್ತಂತೆ. ಮಿದುಳು ಒಂದು ಮಾಹಿತಿಯನ್ನು ಸಂಯೋಜಿಸುವಲ್ಲಿ ಎರಡು ಅಥವಾ ಹೆಚ್ಚು ಇಂದ್ರಿಯ ಅನುಭವಗಳ ಕ್ರೋಡೀಕರಣವು ಬಹಳ ಮಹತ್ವದ್ದು ಹಾಗೂ ನಾವು ಗ್ರಹಿಸಿದ ವಾಸನೆಯು ಕೆಲವೊಮ್ಮೆ ನಾವು ಅಂದಾಜಿಸುವ ಬಣ್ಣವನ್ನೇ ಬದಲಾಯಿಸಿಬಿಡಬಲ್ಲದ್ದು ಎನ್ನುತ್ತಾರೆ, ವಾರ್ಡ್. ಅರ್ಥಾತ್, ಗ್ರಹಿಸಿದ ವಾಸನೆಯು ನಾವು ಗ್ರಹಿಸುವ ಬಣ್ಣವನ್ನು ಬದಲಿಸುತ್ತದೆ ಎಂದಷ್ಟೇ.

ಇನ್ನೂ ಎಷ್ಟರ ಮಟ್ಟಿಗೆ ವಾಸನೆಯು ಬಣ್ಣದ ಗ್ರಹಿಕೆಯನ್ನು ಪ್ರಭಾವಿಸಬಲ್ಲದ್ದು ಎಂಬುದನ್ನು ಪತ್ತೆ ಮಾಡಬೇಕು ಹಾಗೂ ಅತಿ ವಿರಳವಾಗಿ ಸಿಗುವ ಪರಿಮಳ ಅಥವಾ ಮೊದಲ ಬಾರಿಗೆ ಅನುಭವಿಸಿದ ಹೊಸ ವಾಸನೆಗೂ ಇದೇ ರೀತಿಯ ಪರಿಣಾಮವಿರುತ್ತದೆಯೇ ಎನ್ನುವುದನ್ನು ಪರೀಕ್ಷಿಸಬೇಕು ಎನ್ನುತ್ತಾರೆ, ವಾರ್ಡ್. ವಾಸ್ತವವಾಗಿ ಯಾವುದೇ ಬಣ್ಣವು ನಮಗೆ ಒಂದು ಬಣ್ಣವಾಗಿ ಕಂಡರೂ, ವೈಜ್ಞಾನಿಕವಾಗಿ ಅದು ಹಲವು ಬಣ್ಣಗಳ ಮಿಶ್ರಣ ಅಥವಾ ಮಿದುಳು ಅದನ್ನು ಗ್ರಹಿಸುವ ರೀತಿಯದು. ಆದರೆ ನಮ್ಮ ಮೂಗಿಗೆ ಬಡಿದ ಪರಿಮಳವು ನಮ್ಮ ಬಣ್ಣಗಳ ಗ್ರಹಿಕೆಯನ್ನು ಬದಲಿಸುತ್ತದೆ ಎನ್ನುವುದು ವಿಚಿತ್ರವೆನಿಸಿದರೂ ಸತ್ಯ.

ಆಕರಕೋಶಗಳು ಆಧುನಿಕ ಸಂಜೀವಿನಿ

ಗಣೇಶ್ ಭಟ್ ನೆಲಮಾವ್

ಮೂರಡಿಯ ವಾಮನ ಈರಡಿಗಳಲ್ಲಿ ಭೂಮಂಡಲವನ್ನು ಅಳೆಯಬಲ್ಲ ತ್ರಿವಿಕ್ರಮನಾಗಿ ಬೆಳೆದಂತೆ, ಒಂದು ಸಣ್ಣ ಬಿಂದುವಿನ ಗಾತ್ರದಲ್ಲಿ ಆವಿರ್ಭವಿಸಿದ ಕೋಶವೊಂದು ಅತ್ಯಂತ ಸಂಕೀರ್ಣವಾದ ಜೀವಿಯಾಗಿ ಬೆಳೆದು ನಿಲ್ಲುವುದು ಅನುದಿನ ನಮ್ಮ ಕಣ್ಣೆದುರೇ ಘಟಿಸುವ ಒಂದು ಪವಾಡವೇ ಸರಿ. ಏಷ್ಟೆಲ್ಲ ಅಸಾಮಾನ್ಯ ಕಾರ್ಯಗಳನ್ನು ಸಾಧಿಸುವ ಮನುಷ್ಯನೆಂಬ ಜೀವಿ ಹುಟ್ಟುವಾಗಿನ ಗಾತ್ರ, ಈ ವಾಕ್ಯದ ಕೊನೆಯಲ್ಲಿರುವ ಪೂರ್ಣವಿರಾಮದಷ್ಟೇ ಎಂದು ಅರಿವಾದಾಗ 'ಈ ವಿಚಿತ್ರಕೆ ನಮಿಸೋ' ಎನ್ನದೇ ಇರಲಾಗದು. ಮನುಷ್ಯನ ಜೀವನಯಾನದ ಈ ಆದಿಬಿಂದುವಿನ ಹೆಸರು 'ಯುಗ್ಮಜ' (zygote). ಇದು ಒಂದು ಅಂಡಾಣು ಮತ್ತು ಒಂದು ವೀರ್ಯಾಣುವಿನ ಸಮ್ಮಿಲನದಿಂದ ಉಂಟಾದ ಜೀವಕೋಶ. ಈ ಕೋಶವು ಒಂದಿರುವುದು ಎರಡಾಗಿ, ಎರಡು ನಾಲಕ್ಕಾಗಿ, ನಾಲ್ಕು ಎಂಟಾಗಿ – ಹೀಗೆ ಎರಡರ ಮಗ್ಗಿಯನ್ನನುಸರಿಸುತ್ತ, ಮಾಂಸಖಂಡ, ಹೃದಯ, ನರಕೋಶಗಳು ಮುಂತಾಗಿ ವಿವಿಧ ರೀತಿಯ ಜೀವಕೋಶಗಳು ಸೃಷ್ಟಿಯಾಗುತ್ತವೆ. ಈ ಎಲ್ಲ ರೀತಿಯ ಕೋಶಗಳು ಒಂದೇ ರೀತಿಯ ಜೀವಕೋಶಗಳಿಂದ ರೂಪಗೊಂಡಂತಹವು. ಅಂದರೆ ಕೆಲವು ವಿಶಿಷ್ಟ ಜೀವಕೋಶಗಳು ಬೇರೆ ಯಾವುದೇ ರೀತಿಯ ಜೀವಕೋಶಗಳಾಗಿ ಬದಲಾಗುವ ಸಾಮರ್ಥ್ಯವುಳ್ಳಂತಹವು. ಈ ಕೋಶಗಳಿಗೆ 'ಆಕರಕೋಶಗಳು' (stem cells) ಎಂದು ಹೆಸರು. ವೈದ್ಯಕೀಯ ಜಗತ್ತಿನಲ್ಲಿ ಹೊಸ ಕ್ರಾಂತಿಯನ್ನೇ ತರಬಲ್ಲ ಆಶಾಭಾವನೆ ಮೂಡಿಸಿರುವ ಈ ಕೋಶಗಳು ಇಪ್ಪತ್ತೊಂದನೆಯ ಶತಮಾನದ ಅತಿ ಮುಖ್ಯ ಬೆಳವಣಿಗೆ ಎನ್ನಬಹುದು.

ನಮ್ಮ ಶರೀರ ಒಂದು ಕಾರ್ಖಾನೆಯಂತೆ. ಇದರಲ್ಲಿರುವ ಕೆಲಸಗಾರರೆಂದರೆ ನಮ್ಮ ಜೀವಕೋಶಗಳು. ಹೇಗೆ ಒಂದು ಕಾರ್ಖಾನೆಯಲ್ಲಿ ಒಂದು ವಿಭಾಗದ ಕೆಲಸಗಾರನಿಗೆ ಇನ್ನೊಂದು ವಿಭಾಗದ ಕೆಲಸ ಮಾಡುವುದು ಸಾಧ್ಯವಿರುವುದಿಲ್ಲವೋ ಅದೇ ರೀತಿ ನಮ್ಮ ಶರೀರದ ಒಂದೊಂದು ಅಂಗದಲ್ಲಿರುವ ಜೀವಕೋಶಗಳು ಆ ನಿರ್ದಿಷ್ಟ ಕೆಲಸವನ್ನು ಮಾತ್ರ ಮಾಡುವಂತೆ ರಚಿತವಾಗಿರುತ್ತವೆ. ಹೃದಯದಲ್ಲಿನ ಕೋಶ ಕಣ್ಣಿನಲ್ಲಿರುವ ಕೋಶದ ಕೆಲಸವನ್ನು ಮಾಡಲಾರದು. ಆದರೆ ಆಕರಕೋಶಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಇವು ಯಾವುದೇ ವಿಧದ ಕೋಶಗಳಾಗಿ ಮಾರ್ಪಾಡಾಗುತ್ತವೆ.

ನಮ್ಮ ದೇಹದಲ್ಲಿ ಅಪಘಾತ, ರೋಗಗಳಿಂದಾಗಿ ಜೀವಕೋಶಗಳು ಗಾಸಿಯಾಗುವುದು, ಸಾಯುವುದು ಸಾಮಾನ್ಯ. ಅಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಅದೇ ಅಂಗಾಂಶದಲ್ಲಿರುವ ಜೀವಕೋಶಗಳು ವಿಭಜನೆಗೊಂಡು, ನಾಶವಾದ ಜೀವಕೋಶದ ಸ್ಥಾನವನ್ನು ತುಂಬುತ್ತದೆ. ಕೆಲವು ಅಂಗಾಂಶಗಳಲ್ಲಿ ಕೋಶಗಳು ಪುನರುತ್ಪತ್ತಿ ಆಗಲಾರವು. ಅಂತಹ ಅಂಗಾಂಶಗಳಲ್ಲಿ ಆಕರ ಕೋಶಗಳು ಇರುತ್ತವೆ. ಈ ಆಕರಕೋಶಗಳು ಗಾಸಿಯಾದ ಜೀವಕೋಶಗಳ ಸ್ಥಾನವನ್ನು ತುಂಬುತ್ತವೆ. ಆಕರಕೋಶಗಳ ಈ ಗುಣವನ್ನು ನಿಯಂತ್ರಿಸಲು ಸಾಧ್ಯವಾದರೆ ಅವುಗಳನ್ನು ನಮಗೆ ಬೇಕಾದಂತೆ ದುಡಿಸಿಕೊಳ್ಳಬಹುದೇ? ಈ ಪ್ರಶ್ನೆಯೇ ಆಕರಕೋಶಗಳ ಕುರಿತು ಸಂಶೋಧನೆಗಳು ಆರಂಭವಾಗಲು ಕಾರಣವಾದ ಮಂತ್ರ.

ಆಕರಕೋಶಗಳಲ್ಲಿ ಮೂರು ವಿಧಗಳು. ಭ್ರೂಣ ಆಕರ ಕೋಶಗಳು, ಪ್ರೌಢ ಆಕರ ಕೋಶಗಳು, ಮತ್ತು ಪ್ರೇರಿತ ಸರ್ವಸಮರ್ಥ ಆಕರಕೋಶಗಳು (iPSC). ಭ್ರೂಣ ಆಕರಕೋಶಗಳು ಭ್ರೂಣಗಳಲ್ಲಿ ಕಂಡುಬರುವಂತಹವು. ಇವು ಯಾವುದೇ ಕೋಶಗಳಾಗಿ ಬದಲಾಗುವ ಸಾಮರ್ಥ್ಯವುಳ್ಳವು. ಪ್ರೌಢ ಆಕರಕೋಶಗಳೆಂದರೆ ವಿವಿಧ ಅಂಗಾಂಶಗಳ ಕೋಶಗಳ ಜೊತೆ ಇದ್ದು ಆ ಅಂಗಾಂಶದೊಳಗಿನ ನಿರ್ದಿಷ್ಟ ಕೋಶಗಳಾಗಿ ಬದಲಾಗುವ ಸಾಮರ್ಥ್ಯವುಳ್ಳವು. iPSCಗಳೆಂದರೆ ಪ್ರಯೋಗಾಲಯದಲ್ಲಿ ಪ್ರೌಢ ಆಕರಕೋಶಗಳನ್ನು ನಿರ್ದೇಶಿಸಿ ಕೃತಕವಾಗಿ ಭ್ರೂಣ ಆಕರಕೋಶಗಳನ್ನಾಗಿಸಲಾಗಿರುತ್ತದೆ. ಈ ಕೋಶಗಳ ಗಡಿಯಾರವನ್ನು ವಿಜ್ಞಾನಿಗಳು ಹಿಮ್ಮುಖವಾಗಿ ತಿರುಗಿಸಿದ್ದಾರೆನ್ನಬಹುದು. ಇವುಗಳು ಭ್ರೂಣ ಆಕರಕೋಶಗಳಂತೆಯೇ ಸಾಮರ್ಥ್ಯವನ್ನು ಹೊಂದಿವೆ.



ಇಂತಹ ಆಕರಕೋಶಗಳು ಯಾವುದೇ ನಿರ್ದಿಷ್ಟ ಕೋಶಗಳಾಗಿ ಮಾರ್ಪಡುವ ಸಾಮರ್ಥ್ಯ ಹೊಂದಿರುವುದರಿಂದ ವೈದ್ಯಕೀಯದಲ್ಲಿ ಎದುರಾಗುವ ಕೆಲವು ಮುಖ್ಯ ಸಮಸ್ಯೆಗಳಿಗೆ ಪರಿಹಾರವಾಗಿ ಒದಗಬಲ್ಲವು. ಬಿಳಿ ರಕ್ತಕಣಗಳನ್ನು ಉತ್ಪಾದಿಸುವ ಅಸ್ಥಿಮಜ್ಜೆ ಸರಿಯಾಗಿ ಕೆಲಸ ಮಾಡದಿದ್ದಾಗ ರಕ್ತದ ಕ್ಯಾನ್ಸರ್ ಉಂಟಾಗುತ್ತದೆ. ಇದಕ್ಕೆ ಚಿಕಿತ್ಸೆಯಾಗಿ ರೋಗಿಯಿಂದಲೇ ಪಡೆದ ಅಥವಾ ರೋಗಿಗೆ ಹೊಂದುವ ದಾನಿಯಿಂದ ಪಡೆದ ಅಸ್ಥಿಮಜ್ಜೆಯ ಆಕರಕೋಶಗಳನ್ನು ರೋಗಿಗೆ ನೀಡಲಾಗುತ್ತಿದೆ. ಮೇದೋಜೀರಕ ಗ್ರಂಥಿಯಲ್ಲಿ ಇನ್ಸುಲಿನ್ ಉತ್ಪಾದಿಸುವ ಜೀವಕೋಶಗಳು ನಾಶವಾಗುವುದರಿಂದ ಮಧುಮೇಹ ಉಂಟಾಗುತ್ತದೆ. ಆಕರಕೋಶಗಳನ್ನು ಇನ್ಸುಲಿನ್ ಉತ್ಪಾದಕ ಜೀವಕೋಶಗಳಾಗಿ ಮಾರ್ಪಡಿಸಿ ಮಧುಮೇಹವನ್ನು ಗುಣಪಡಿಸುವ ಸಾಧ್ಯತೆ ಇದೆ. ರೋಗ ಅಥವಾ ಅಪಘಾತಗಳಿಂದಾಗಿ ಒಬ್ಬ ವ್ಯಕ್ತಿಯ ಅಂಗಗಳು ನಿಷ್ಕ್ರಿಯವಾದಾಗ ಬೇರೊಬ್ಬ ವ್ಯಕ್ತಿಯಿಂದ ದಾನ ಪಡೆದ ಅಂಗವನ್ನು ಕಸಿ ಮಾಡಬೇಕಾಗುತ್ತದೆ. ಆದರೆ ನಮ್ಮ ಶರೀರದಲ್ಲಿರುವ ರೋಗನಿರೋಧಕ ವ್ಯವಸ್ಥೆ ಕಸಿ ಮಾಡಲ್ಪಟ್ಟ ಅಂಗವನ್ನು 'ಪರಕೀಯ' ಎಂದೇ ಭಾವಿಸಿ ಅದರ ಮೇಲೆ ದಾಳಿ ಮಾಡುವ ಸಾಧ್ಯತೆ ಇರುತ್ತದೆ. ಇದರ ಬದಲು, ಅಂಗಾಂಗ ಕಸಿಯ ಅವಶ್ಯಕತೆ ಇರುವ ರೋಗಿಯಿಂದಲೇ ಕೋಶಗಳನ್ನು ಪಡೆದು ಆಕರಕೋಶವಾಗಿಸಿ, ಆ ಆಕರಕೋಶಗಳಿಂದಲೇ ಅಂಗಾಶವನ್ನು ಸೃಷ್ಟಿಸಿ ಅದನ್ನು ಕಸಿ ಮಾಡಿದರೆ ರೋಗಿಯ ಶರೀರ ಅದನ್ನು ತನ್ನದೇ ಎಂದು ಭಾವಿಸುತ್ತದೆ. ಮುಂದೊಂದು ದಿನ, ನಮ್ಮ ದೇಹದಿಂದ ತೆಗೆದ ಕೋಶಗಳನ್ನು ಪ್ರಯೋಗಾಲಯದಲ್ಲಿ ಕಾಪಿಟ್ಟು, ಅವಶ್ಯಕತೆ ಇರುವಾಗ ಅಂಗಾಗಗಳನ್ನು ಪ್ರಯೋಗಾಲಯದಲ್ಲೇ ಸೃಷ್ಟಿಸಿ ಕಸಿ ಮಾಡಬಹುದಾದ ಅನುಕೂಲ ಕೂಡ ಸಾಧ್ಯವಾಗಬಹುದು. ಹೃದ್ರೋಗ, ಅಲ್ಜೈಮರ್ಸ್, ಬೆನ್ನುಹುರಿಯ ಸಮಸ್ಯೆಗಳು ಸೇರಿದಂತೆ ಹಲವು ಸಂಕೀರ್ಣ ಸಮಸ್ಯೆಗಳಿಗೆ ಸಂಪೂರ್ಣವಾಗಿ ಚಿಕಿತ್ಸೆ ನೀಡಲು ಸಾಧ್ಯವಾಗಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಜೀವ ಕ್ರಿಯೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

10) ಸಣ್ಣ ಕರಳಿನಲ್ಲಿರುವ ಕಂಡುಬರುವ ಕೊಬ್ಬುಗಳು ದೊಡ್ಡದೊಡ್ಡ ದುಂಡುಕಣಗಳ ರೂಪದಲ್ಲಿದ್ದು ಕಿಣ್ವಗಳಿಗೆ ಅದರ ಮೇಲೆ ವರ್ತಿಸುವುದು ಕಷ್ಟವಾಗುತ್ತದೆ. ....ದ ಲವಣಗಳು ಅವುಗಳನ್ನು ಚಿಕ್ಕಚಿಕ್ಕ ದುಂಡುಕಣಗಳಾಗಿ ವಿಭಜಿಸಿ ಕಿಣ್ವಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ

ಎ) ಪಿತ್ತರಸ ಬಿ) ರಕ್ತ ಸಿ) ಮೂತ್ರ ಡಿ) ಹೃದಯ

ಉತ್ತರ:- (ಎ) ಪಿತ್ತರಸ

11) ಕರಳಿನ ರಸದಲ್ಲಿರುವ ಕಿಣ್ವಗಳು ಪ್ರೋಟಿನ್ ಅನ್ನು ಏನನ್ನಾಗಿ ಪರಿವರ್ತಿಸುತ್ತವೆ?

ಎ) ಅಮಿನೋ ಆಮ್ಲ ಬಿ) ಗ್ಲಿಸರಾಲ್ ಸಿ) ಗ್ಲುಕೋಸ್ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ಅಮಿನೋ ಆಮ್ಲ

12) ರಕ್ತವು ಆಹಾರವನ್ನು ಹೀರಿಕೊಳ್ಳಲು ಸಹಾಯ ಮಾಡುವ ವಿಲ್ಲೈಗಳು ಎಲ್ಲಿವೆ?

ಎ) ಜಠರ ಬಿ) ವಪೆ ಸಿ) ಗುದದ್ವಾರ ಡಿ) ಸಣ್ಣ ಕರಳು

ಉತ್ತರ:- (ಡಿ) ಸಣ್ಣ ಕರಳು

13) ಆಕ್ಸಿಜನ್ ಬಳಕೆಯಿಂದ ನಡೆಯುವ ಪೈರುವೇಟ್ ವಿಭಜನೆಯು ಎಲ್ಲಿ ನಡೆಯುತ್ತದೆ?

ಎ) ಗುದನಾಳ ಬಿ) ಅಮಿಬಾ ಸಿ) ಮೈಟೋಕಾಂಡ್ರಿಯಾ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಸಿ) ಮೈಟೋಕಾಂಡ್ರಿಯಾ

14) ಮಾನವನ ಹೃದಯದಲ್ಲಿ ಎಲ್ಲಿ ಅನಿಲಗಳ ವಿನಿಮಯ ನಡೆಯುತ್ತದೆ?

ಎ) ಶ್ವಾಸನಾಳ ಬಿ) ಮೃದ್ವಸ್ಥಿಯ ಉಂಗುರ ಸಿ) ಮೂಗಿನ ದ್ವಾರ ಡಿ) ಗಾಳಿ ಗೂಡು

ಉತ್ತರ:- (ಡಿ) ಗಾಳಿಗೂಡು

15) ಶ್ವಾಸನಾಳದ ಮೇಲ್ಭಾಗವು .... ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ವಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ದೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮಪಾನವು ಈ ಕೂದಲನ್ನು ನಾಶ ಮಾಡುತ್ತದೆ

ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್ ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ಸಿಲಿಯಾ (Cilia)

10) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದು ಜೀರ್ಣ ಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್

ಉತ್ತರ:- (ಸಿ) ಹೈಡ್ರೋಕ್ಲೋರಿಕ್ ಆಮ್ಲ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತ್ತಿದ್ದು ಅವು ಸ್ರವಿಸುವ ಕಿಣ್ವಗಳು ಈ ಕೆಳಗಿನವುಗಳನ್ನು ಏನನ್ನಾಗಿ ಪರಿವರ್ತಿಸುತ್ತವೆ?

(ಅ) ಪ್ರೋಟೀನ್ (ಬ) ಸಂಕೀರ್ಣ ಕಾರ್ಬೋಹೈಡ್ರೇಟ್ (ಕ) ಕೊಬ್ಬು

ಉತ್ತರ:- ಸಣ್ಣ ಕರಳಿನ ಬತ್ತಿಯಲ್ಲಿರುವ ಗ್ರಂಥಿಗಳು ರಸವನ್ನು ಸ್ರವಿಸುತಿದ್ದು ಅವು ಸ್ರವಿಸುವ ಕಿಣ್ವಗಳು

ಅ) ಪ್ರೋಟೀನ್‌ಗಳನ್ನು ಅಮಿನೋ ಆಮ್ಲಗಳಾಗಿ ಪರಿವರ್ತಿಸುತ್ತದೆ

ಬಿ) ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್‌ಗಳಾಗಿ ಪರಿವರ್ತಿಸುತ್ತವೆ

ಕ) ಕೊಬ್ಬನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

2) ಯಾವುದಕ್ಕೆ ವಾಯುವಿಕೆ ಉಸಿರಾಟ ಎನ್ನುವರು?

ಉತ್ತರ:- ಮೈಟ್ರೋಕಾಂಡ್ರಿಯಾದಲ್ಲಿ ಆಕ್ಸಿಜನ್ ಬಳಸಿ ಪೈರುವೇಟ್ ಅಣುವನ್ನು ವಿಭಜಿಸಿ ಮೂರು ಕಾರ್ಬನ್ ಡೈ ಆಕ್ಸೈಡ್ ಅಣುವನ್ನು ಉಂಟು ಮಾಡಲಾಗುತ್ತದೆ ಅಲ್ಲದೇ ನೀರನ್ನು ಬಿಡುಗಡೆ ಮಾಡಲಾಗುತ್ತದೆ. ಈ ಪ್ರಕ್ರಿಯೆ ಗಾಳಿಯ(ಆಕ್ಸಿಜನ್) ಉಪಸ್ಥಿತಿಯಲ್ಲಿ ನಡೆಯುವುದರಿಂದ ಇದನ್ನು ವಾಯುವಿಕೆ ಉಸಿರಾಟ

3) ಬೆಳಗಿನ ಸಮಯದಲ್ಲಿ ಸಸ್ಯಗಳು ಯಾಕೆ ಕಾರ್ಬನ್ ಡೈ ಆಕ್ಸೈಡ್‌ಬಿಡುಗಡೆ ಮಾಡುವುದಿಲ್ಲ?

ಉತ್ತರ:- ಸಸ್ಯಗಳು ಬೆಳಗಿನ ಉಸಿರಾಟ ಕ್ರಿಯೆ ಸಮಯದಲ್ಲಿ ಕಾರ್ಬನ್ ಡೈ ಆಕ್ಸೈಡ್ ಅನ್ನು ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬಳಸಿಕೊಳ್ಳುತ್ತವೆ ಹೀಗಾಗಿ ಆ ಹೊತ್ತಿನಲ್ಲಿ ಕಾರ್ಬನ್ ಡೈ ಆಕ್ಸೈಡ್ ಬಿಡುಗಡೆ ಮಾಡುವುದಿಲ್ಲ. ಇದರ ಬದಲು ಆಕ್ಸಿಜನ್ ಬಿಡುಗಡೆ ಮಾಡುತ್ತವೆ.

4) ಗಾಳಿಯಲ್ಲಿರುವ ಆಕ್ಸಿಜನ್ ಅನ್ನು ನಮ್ಮ ದೇಹದಲ್ಲಿ ಎಲ್ಲಿರುವ ರಕ್ತವು ದೇಹದ ಎಲ್ಲಾ ಜೀವ ಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ?

ಉತ್ತರ:- ಅಲ್ವಿಯೋಲಾರ್ ರಕ್ತನಾಳದಲ್ಲಿರುವ ರಕ್ತವು ಗಾಳಿಯಲ್ಲಿರುವ ಆಕ್ಸಿಜನ್ ಅನ್ನು ದೇಹದ ಎಲ್ಲಾ ಜೀವಕೋಶಗಳಿಗೆ ಸರಬರಾಜು ಮಾಡಲು ಪಡೆದುಕೊಳ್ಳುತ್ತದೆ.

5) ನಮ್ಮ ಜಠರದಲ್ಲಿ ಲೋಳೆಯ ಪಾತ್ರವೇನು?

ಉತ್ತರ: ಲೋಳೆಯು ಹೈಡ್ರೋಕ್ಲೋರಿಕ್ ಆಮ್ಲದಿಂದ ಜಠರಕ್ಕೆ ಆಗುವ ಹಾನಿಯನ್ನು ತಡೆಯುತ್ತದೆ.

6) ಎಟಿಪಿಯನ್ನು ವಿಸ್ತರಿಸಿ

ಉತ್ತರ:- ಅಡಿನೋಸೈನ್ ಟ್ರೈ ಫಾಸ್ಫೇಟ್

7) ಆಹಾರದ ಜೀರ್ಣಕ್ರಿಯೆಯಲ್ಲಿ ಲಾಲಾರಸದ ಪಾತ್ರವೇನು?

ಉತ್ತರ:- ಲಾಲಾರಸ ಗ್ರಂಥಿಗಳು ಸ್ರವಿಸುವ ಲಾಲಾರಸದಿಂದ ಆಹಾರವು ತೇವಗೊಳ್ಳುವುದು. ಲಾಲಾರಸದಲ್ಲಿರುವ ಸಲಿವರಿ ಆಮಲೈಸ್ ಎಂಬ ಕಿಣ್ವವು ಪಿಷ್ಟವನ್ನು ಸಕ್ಕರೆಯಾಗಿ ಪರಿವರ್ತಿಸುವುದು.

8) ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಯಾವುವು?

ಉತ್ತರ:- ಸ್ವಪೋಷಕ ಪೋಷಣೆಗೆ ಅಗತ್ಯವಾದ ಪರಿಸ್ಥಿತಿಗಳು ಎಂದರೆ

* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಕಚ್ಚವಸ್ತುಗಳಾದ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಲಭ್ಯವಿರಬೇಕು
* ದ್ಯುತಿಸಂಶ್ಲೇಷಣೆ ಕ್ರಿಯೆಗೆ ಬೇಕಾದ ಸೂರ್ಯನ ಬೆಳಕು ಮತ್ತು ಕ್ಲೋರೋಫಿಲ್ ಇರಬೇಕು

9) ಸ್ವಪೋಷಕ ಮತ್ತು ಪರಪೋಷಕಗಳಿರುವ ವ್ಯತ್ಯಾಸವನ್ನು ಬರೆಯಿರಿ

ಉತ್ತರ:- ತಮ್ಮ ಆಹಾರವನ್ನು ತಾವೇ ತಯಾರಿಸುವ ಜೀವಿಗಳನ್ನು ಸ್ವಪೋಷಕಗಳು ಎನ್ನುವರು ಆದರೆ ಆಹಾರಕ್ಕಾಗಿ ಇತರ ಜೀವಿಗಳನ್ನು ಅವಲಂಬಿಸಿರುವವರನ್ನು ಪರಪೋಷಕ ಜೀವಿಗಳು ಎನ್ನುವರು.

(ಮುಂದುವರಿಯುವುದು......)

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

MATHEMATICS

DETERMINANTS

10. Find the determinant of the following eqns:

$$3x + 2y + 5z = 32$$
$$2x + 5y + 3z = 31$$
$$5x + 3y + 2z = 27$$

Soln :– Given equations are –

$$3x + 2y + 5z = 32$$
$$2x + 5y + 3z = 31$$
$$5x + 3y + 2z = 27$$

$$\text{is } \Delta = \begin{vmatrix} 3 & 2 & 5 \\ 2 & 5 & 3 \\ 5 & 3 & 2 \end{vmatrix} = 3(1) - 2(-11) + 5(-19)$$
$$= 3 + 22 - 95$$
$$= -70$$

11. If $A = \begin{bmatrix} 3 & 2 & x \\ 4 & 1 & -1 \\ 0 & 3 & 4 \end{bmatrix}$ **is a singular matrix, find x.**

Soln :– Consider, matrix $A = \begin{bmatrix} 3 & 2 & x \\ 4 & 1 & -1 \\ 0 & 3 & 4 \end{bmatrix}$

is a singular matrix, hence $|A| = 0$

$$\Rightarrow \begin{vmatrix} 3 & 2 & x \\ 4 & 1 & -1 \\ 0 & 3 & 4 \end{vmatrix} = 0$$
$$\Rightarrow 3(4+3) - 2(16-0) + x(12-0) = 0$$
$$\Rightarrow 21 - 32 + 12x = 0 \Rightarrow 12x - 11 = 0$$
$$\Rightarrow x = \frac{11}{12}$$

Minors and co-factors

Minor of an element a_{ij} of the determinant of matrix A is the determinant obtained by deleting i^{th} row and j^{th} column, and it is denoted by M_{ij}.

ii) Co-factor of an element a_{ij} is given by

$$A_{ij} = (-1)^{i+j} M_{ij}.$$

iii) Value of determinant of a matrix A is obtained by the sum of products of elements of a row (or a column) with corresponding co-factors.

Eg :– $|A| = a_{11}A_{11} + a_{12}A_{12} + a_{13}A_{13}$

iv) If elements of a row (or column) are multiplied with co-factors of element of any other row (or column), then their sum is zero.

Eg :– $|A| = a_{11}A_{21} + a_{12}A_{22} + a_{13}A_{23}$

Answer the following :-

1) Write a brief note on Minor of an element.

Soln :– Consider, $A = \begin{bmatrix} a_{11} & a_{12} & a_{13} \\ b_{11} & b_{12} & b_{13} \\ c_{11} & c_{12} & c_{13} \end{bmatrix}$

a square matrix of order 3

The minor of an element a_{ij} is defined to be the 2^{nd} order determinant obtained by deleting i^{th} row and j^{th} column and is denoted by A_{ij}

Eg :– $A_{11} = \begin{vmatrix} b_{12} & b_{13} \\ c_{12} & c_{13} \end{vmatrix}$; $A_{12} = \begin{vmatrix} a_{11} & a_{13} \\ b_{11} & b_{13} \end{vmatrix}$;

$A_{13} = \begin{vmatrix} a_{11} & a_{12} \\ b_{11} & b_{12} \end{vmatrix}$ etc.,

2) Write a brief note on Co-factor of an element.

Soln :– Consider, $A = \begin{bmatrix} a_{11} & a_{12} & a_{13} \\ b_{11} & b_{12} & b_{13} \\ c_{11} & c_{12} & c_{13} \end{bmatrix}$

a square matrix of order 3

The Co – factor of an element a_{ij} denoted by C_{ij} is defined by $C_{ij} = (-1)^{i+j} \cdot a_{ij}$., where A_{ij} is the minor of a_{ij}.

Thus, $C_{11} = A_{11}, C_{12} = -A_{12}, C_{13} = A_{13}$

$C_{21} = -A_{21}, C_{22} = -A_{22}, C_{23} = -A_{23}$

$C_{31} = A_{31}, C_{32} = -A_{32}, C_{33} = A_{33}$

3) What is Adjoint of matrix A?

Soln :– Adjoint of a matrix is the transpose of cofactor matrix of A & denoted by adj A

If $A = \begin{bmatrix} a_{11} & a_{12} & a_{13} \\ b_{11} & b_{12} & b_{13} \\ c_{11} & c_{12} & c_{13} \end{bmatrix}$

the adjoint of A is defined by

$$\text{adj } A = \begin{bmatrix} C_{11} & C_{12} & C_{13} \\ C_{21} & C_{22} & C_{23} \\ C_{31} & C_{32} & C_{33} \end{bmatrix}^{1} = \begin{bmatrix} C_{11} & C_{21} & C_{31} \\ C_{12} & C_{22} & C_{32} \\ C_{13} & C_{23} & C_{33} \end{bmatrix}$$

4) What is inverse of a square matrix?

Ans :– If A is a non – singular (i.e., $|A| \neq 0$) matrix then the inverse of A is $A^{-1} = \frac{\text{adj } A}{|A|}$

5) Find the adjoint of $\begin{bmatrix} 4 & -7 \\ -2 & 5 \end{bmatrix}$

Soln :– Given that $\begin{bmatrix} 4 & -7 \\ -2 & 5 \end{bmatrix}$

$$C_{11} = A_{11} = 5$$
$$C_{12} = -A_{12} = -(-2) = 2$$
$$C_{21} = -A_{21} = -(-7) = 7$$
$$C_{22} = A_{22} = 4$$

$$\therefore \text{adj } A = \begin{bmatrix} 5 & 2 \\ 7 & 4 \end{bmatrix}' = \begin{bmatrix} 5 & 7 \\ 2 & 4 \end{bmatrix}$$

(Contd......)

ತಮಿಳುನಾಡಿನ ವಿರುಧುನಗರ, ಶಿವಕಾಶಿಯ ಪಟಾಕಿ ಘಟಕಗಳಲ್ಲಿ ಅವಘಡ

ಪ್ರತ್ಯೇಕ ಸ್ಫೋಟ: 14 ಸಾವು

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಎರಡು ಪ್ರತ್ಯೇಕ ಪಟಾಕಿ ಘಟಕಗಳಲ್ಲಿ ಮಂಗಳವಾರ ಹಠಾತ್ ಸ್ಫೋಟ ಸಂಭವಿಸಿ ಒಟ್ಟು 14 ಮಂದಿ ಮೃತಪಟ್ಟು ಇತರ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿರುಧುನಗರ ಜಿಲ್ಲೆಯ ಶ್ರೀವಿಲ್ಲಿಪುತ್ತೂರು ಬಳಿ ಪಟಾಕಿ ಘಟಕದಲ್ಲಿ 13 ಹಾಗೂ ಶಿವಕಾಶಿ ಜಿಲ್ಲೆಯ ಕಿಚನಾಯಕನಪಟ್ಟಿಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ.

ಶ್ರೀವಿಲ್ಲಿಪುತ್ತೂರು ಸಮೀಪದ ಪಟಾಕಿ ಘಟಕದಲ್ಲಿ 15 ಕಾರ್ಮಿಕರು ಪಟಾಕಿಗಳ ಪ್ಯಾಕಿಂಗ್ ಕಾರ್ಯದಲ್ಲಿ ತೊಡಗಿದ್ದಾಗ ಸ್ಫೋಟ ಸಂಭವಿಸಿದೆ. ಈ ಅವಘಡದಲ್ಲಿ 13 ಮಂದಿ ಮೃತಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿ ಪಟಾಕಿ ಮಾಲೀಕನನ್ನು ಬಂಧಿಸಲಾಗಿದೆ' ಎಂದು ಜಿಲ್ಲಾಧಿಕಾರಿ ವಿ.ಪಿ.ಜಯಶೀಲನ್ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಶ್ರೀವಿಲ್ಲಿಪುತ್ತೂರು ಬಳಿ ಪ್ಯಾಕಿಂಗ್‌ನಲ್ಲಿ ತೊಡಗಿದ್ದ ಕಾರ್ಮಿಕರ ಸಾವು
- ಮೃತರ ಕುಟುಂಬಕ್ಕೆ ತಲಾ ₹ 3 ಲಕ್ಷ, ಗಾಯಾಳುಗಳಿಗೆ ತಲಾ ₹ 1 ಲಕ್ಷ ಪರಿಹಾರ
- ಕೋಣೆಯೊಂದರಲ್ಲಿ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ ಪಟಾಕಿಗಳು

ಗಾಯಗೊಂಡವರನ್ನು ಶ್ರೀವಿಲ್ಲಿಪುತ್ತೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

'ಕೋಣೆಯೊಂದರಲ್ಲಿ ಪಟಾಕಿಗಳ ದಾಸ್ತಾನು ಮಾಡಲಾಗಿತ್ತು. ಇದಕ್ಕೆ ಪರವಾನಗಿ ಪಡೆದಿರಲಿಲ್ಲ. ಅಲ್ಲದೇ, ಅವಘಡ ಸಂಭವಿಸಿದ ಸ್ಥಳದಲ್ಲಿ ಪ್ಯಾಕಿಂಗ್ ಕೈಗೊಳ್ಳಲು ಕೂಡ ಪರವಾನಗಿ ಹೊಂದಿರಲಿಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಘಟನೆ ಕುರಿತು ತನಿಖೆಗೆ ಆದೇಶಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಶಿವಕಾಶಿ ಜಿಲ್ಲೆ ಕಿಚನಾಯಕನಪಟ್ಟಿಯಲ್ಲಿನ ಘಟಕದಲ್ಲಿ ಪಟಾಕಿ ತಯಾರಿಸಲು ರಾಸಾಯನಿಕಗಳನ್ನು ಮಿಶ್ರಣ ಮಾಡುವಾಗ ಸ್ಫೋಟ ಸಂಭವಿಸಿ, ಒಬ್ಬ ಕಾರ್ಮಿಕ ಮೃತಪಟ್ಟಿದ್ದಾರೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ಈ ಅವಘಡಗಳಲ್ಲಿ ಮೃತಪಟ್ಟವರ ಕುಟುಂಬಕ್ಕೆ ₹ 3 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹ 1 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಶಿವಕಾಶಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾವಿರಕ್ಕೂ ಹೆಚ್ಚು ಪಟಾಕಿ ತಯಾರಿಕೆ ಘಟಕಗಳಿವೆ. ದೇಶದಲ್ಲಿನ ಬೇಡಿಕೆಯ ಶೇ 90ರಷ್ಟು ಪಟಾಕಿಗಳು ಈ ಜಿಲ್ಲೆಯಲ್ಲಿನ ಘಟಕಗಳಿಂದಲೇ ಪೂರೈಕೆಯಾಗುತ್ತವೆ.

ಮಣಿಪುರ: ಶಸ್ತ್ರಾಸ್ತ್ರ ಜಪ್ತಿ

ಇಂಫಾಲ (ಪಿಟಿಐ): ಮಣಿಪುರ ರಾಜ್ಯದ ಇಂಫಾಲ ಪೂರ್ವ, ಬಿಷ್ಣುಪುರ್ ಮತ್ತು ಚುರಚಾಂದಪುರ ಜಿಲ್ಲೆಗಳಲ್ಲಿ ಭದ್ರತಾ ಪಡೆಗಳು ಮಂಗಳವಾರ ದೊಡ್ಡ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಜಪ್ತಿ ಮಾಡಿವೆ ಎಂದು ಪೊಲೀಸರು ತಿಳಿಸಿದ್ದಾರೆ.

'ಇಂಫಾಲ ಪೂರ್ವ ಜಿಲ್ಲೆಯಲ್ಲಿ ಜಪ್ತಿ ಮಾಡಿರುವ ಶಸ್ತ್ರಾಸ್ತ್ರಗಳಲ್ಲಿ ಎಂಟು ಬಂದೂಕು, 62 ಮದ್ದುಗುಂಡು, 19 ಸ್ಫೋಟಕಗಳು, ನಾಡಬಂದೂಕು, ಗ್ರೆನೆಡ್‌ಗಳು, ಎರಡು ವೈರ್‌ಲೆಸ್ ಸೆಟ್‌ಗಳು, ಐದು ಬುಲೆಟ್‌ಪ್ರೂಫ್ ಜಾಕೆಟ್‌ಗಳು ಸೇರಿವೆ.

ಚುರಚಾಂದಪುರ ಜಿಲ್ಲೆಯ ಓಲ್ಡ್ ಡಂಪಿ ಗ್ರಾಮದಲ್ಲಿ 9 ಎಂಎಂ ಪಿಸ್ತೂಲ್, ಎರಡು ಬಂದೂಕು, ಗ್ರೆನೆಡ್, ಸುಧಾರಿತ ಬಾಂಬ್, 21 ರೌಂಡ್ಸ್ ಅಧಿಕ ಸಾಮರ್ಥ್ಯದ ಮಷಿನ್ ಗನ್ ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮದುವೆ: ₹4.25 ಲಕ್ಷ ಕೋಟಿ ವರಮಾನ ನಿರೀಕ್ಷೆ



ಬೆಂಗಳೂರು: ದೇಶದಲ್ಲಿ ಈ ಬಾರಿ ಮದುವೆ ಸಮಾರಂಭವು ದೊಡ್ಡ ಮಟ್ಟದಲ್ಲಿ ಇರುವ ನಿರೀಕ್ಷೆ ಮಾಡಲಾಗಿದೆ. ನವೆಂಬರ್ 23ರಿಂದ ಡಿಸೆಂಬರ್ 15ರವರೆಗಿನ ಅವಧಿಯಲ್ಲಿ 35 ಲಕ್ಷ ಮದುವೆಗಳು ನಡೆಯಲಿದ್ದು, ಅದರಿಂದ ಒಟ್ಟು ₹4.25 ಲಕ್ಷ ಕೋಟಿ ವರಮಾನ ಸೃಷ್ಟಿಯಾಗುವ ಅಂದಾಜು ಮಾಡಲಾಗಿದೆ.

ಅಖಿಲ ಭಾರತ ವರ್ತಕರ ಒಕ್ಕೂಟ (ಸಿಎಐಟಿ) ನಡೆಸಿರುವ ಸಮೀಕ್ಷೆಯಿಂದ ಈ ಮಾಹಿತಿ ತಿಳಿದುಬಂದಿದೆ. ರಾಷ್ಟ್ರ ರಾಜಧಾನಿ ದೆಹಲಿಯಲ್ಲಿಯೇ 3.5 ಲಕ್ಷ ಮದುವೆಗಳು ನಡೆಯಲಿದ್ದು, ₹1 ಲಕ್ಷ ಕೋಟಿ ಮೌಲ್ಯದ ವಹಿವಾಟು ಆಗುವ ನಿರೀಕ್ಷೆ ಇದೆ ಎಂದು ಒಕ್ಕೂಟವು ತಿಳಿಸಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 32 ಲಕ್ಷ ಮದುವೆಗಳು ನಡೆದಿದ್ದು, ವಹಿವಾಟಿನ ಒಟ್ಟು ಮೌಲ್ಯವು ಒಟ್ಟು ₹3.75 ಲಕ್ಷ ಕೋಟಿ ಆಗಿತ್ತು ಎಂದು ತಿಳಿಸಿದೆ.

ಬ್ಯಾಂಕ್ವೆಟ್ ಹಾಲ್, ಹೋಟೆಲ್, ಸಮುದಾಯ ಕೇಂದ್ರಗಳು ಸೇರಿದಂತೆ ಹಲವು ಸ್ಥಳಗಳಲ್ಲಿ ಮದುವೆ ಸಮಾರಂಭದ ಬೇಡಿಕೆಗೆ ಸಕಲ ಸಿದ್ಧತೆಗಳು ನಡೆಯುತ್ತಿವೆ ಎಂದು ಮಹಾಸಂಘದ ರಾಷ್ಟ್ರೀಯ ಅಧ್ಯಕ್ಷ ಬಿ.ಸಿ. ಭಾರ್ತಿಯಾ ಹೇಳಿದ್ದಾರೆ.

ಮದುವೆ ಸಮಾರಂಭದ ಬೇಡಿಕೆಗೆ ದೇಶದಾದ್ಯಂತ ವ್ಯಾಪಾರಿಗಳು ಭರದ ಸಿದ್ಧತೆ ನಡೆಸುತ್ತಿದ್ದಾರೆ. ಮನೆಗೆ ಬಣ್ಣ ಬಳಿಯುವುದರಿಂದ ಹಿಡಿದು ಶುಭ ಕಾರ್ಯಕ್ರಮಗಳಿಗೆ ಖರೀದಿ, ಚಿನ್ನಾಭರಣ, ಅಲಂಕಾರ, ಆಹಾರ ತಿನಿಸು, ಕೇಟರಿಂಗ್ ಸೇವೆಗಳು, ಕ್ಯಾಬ್, ತರಕಾರಿ ವ್ಯಾಪಾರಿಗಳು, ಫೋಟೊಗ್ರಾಫರ್, ವಿಡಿಯೋಗ್ರಾಫರ್, ಡಿ.ಜೆ... ಹೀಗೆ ಪ್ರತಿಯೊಬ್ಬರೂ ಸಜ್ಜಾಗುತ್ತಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕೇಂದ್ರ ಮಸೂದೆಗಳ ಅಧ್ಯಯನ; ಸಿ.ಎಂಗೆ ವರದಿ ಸಲ್ಲಿಕೆ

ಬೆಂಗಳೂರು: ಲೋಕಸಭೆಯಲ್ಲಿ ಮಂಡಿಸಿದ್ದ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, ಭಾರತೀಯ ಸಾಕ್ಷ್ಯ ಮಸೂದೆಗಳ ಅಧ್ಯಯನಕ್ಕಾಗಿ ರಚಿಸಿದ್ದ ಸಮಿತಿ ಮಂಗಳವಾರ ಸಿ.ಎಂ ಸಿದ್ದರಾಮಯ್ಯ ಅವರಿಗೆ ವರದಿಯನ್ನು ಸಲ್ಲಿಸಿತು.

ವರದಿ ಸ್ವೀಕರಿಸಿದ ಸಿದ್ದರಾಮಯ್ಯ ಅವರು, 'ಕಾನೂನು ಸಚಿವ ಎಚ್.ಕೆ. ಪಾಟೀಲ ಅಧ್ಯಕ್ಷತೆಯ ಸಮಿತಿ ವರದಿ ಸಲ್ಲಿಸಿದೆ. ಪರಿಣತ ಸದಸ್ಯರು ಪರಿಶ್ರಮ, ಜ್ಞಾನ, ಅನುಭವದ ಆಧಾರದಲ್ಲಿ ವರದಿ ಸಿದ್ಧಪಡಿಸಿದ್ದಾರೆ. ವರದಿ ಪರಿಶೀಲಿಸಿ, ಸರ್ಕಾರ ಕೇಂದ್ರಕ್ಕೆ ಅಭಿಪ್ರಾಯವನ್ನು ತಿಳಿಸಲಿದೆ. ಮಸೂದೆಗಳನ್ನು ಕುರಿತು ಚರ್ಚಿಸಲಿದೆ' ಎಂದು ಹೇಳಿದರು.

ಮಯೂರ, ಸುಧಾ ಓದಿರಿ

ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ.

ಸಂಖ್ಯೆ: ಅಬಿವಾಮ.ಕ/ಟೆಂಡರ್/ಆಹಾರ/01/2023–24 ದಿನಾಂಕ: 16.10.2023

ಇ–ಟೆಂಡರ್ ಪ್ರಕಟಣೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಮೃಗಾಲಯಕ್ಕೆ, ಒಂದು ವರ್ಷದ ಅವಧಿಗೆ ಅಗತ್ಯವಿರುವ ಆಹಾರ ಧಾನ್ಯಗಳು ಸರಬರಾಜು ಮಾಡಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿಗಳ ಪ್ರಕಾರ ಈ ಮೃಗಾಲಯದಲ್ಲಿ ನೋಂದಾಯಿಸಿರುವ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕೆಟಿಪಿಪಿ ಕಾಯ್ದೆ ಇ–ಪೋರ್ಟಲ್ ಮೂಲಕ ಘಟಕವಾರು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಇಂಡೆಂಟ್ ಸಂಖ್ಯೆ:ZAK/2023-24/IND0012/CALL-2. ಅಂದಾಜು ಮೊತ್ತ (ರೂ.ಗಳಲ್ಲಿ): Rs. 89,37,412.00. ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ): Rs.8,93,741.00.

1. ಈ ಟೆಂಡರ್ ಪ್ರಕಟಣೆ ಪ್ರತಿಯು **https://kppp.karnataka.gov.in** ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ–ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ ದಿನಾಂಕ: **16.10.2023,** ಪೂರ್ವಬಾವಿ ಸಭೆ ದಿನಾಂಕ: **21.10.2023** ಕೊನೆಯ ದಿನಾಂಕ: **31.10.2023** ಸಾಯಂಕಾಲ **4.00** ಗಂಟೆವರೆಗೆ ತಾಂತ್ರಿಕ ಬಿಡ್‌ಟೆಂಡರ್ ತೆರೆಯುವ ದಿನಾಂಕ: **02.11.2023** ಸಾಯಂಕಾಲ **4.00** ಗಂಟೆಗೆ ಮತ್ತು ಆರ್ಥಿಕ ಬಿಡ್‌ಟೆಂಡರ್ ತೆರೆಯುವ ದಿನಾಂಕ: **04.11.2023 4.30** ಗಂಟೆಯ ನಂತರ ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಹಾಕಿರುವ ಸವಿವರಟೆಂಡರ್ ಪ್ರಕಟಣೆಯಿಂದ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶ್ರೀ ಅಟಲ್ ಬಿಹಾರಿ ವಾಜಪೇಯಿಜೂಲಾಜಿಕಲ್ ಪಾರ್ಕ್, ಕಮಲಾಪುರ
ಹೊಸಪೇಟೆತಾಲ್ಲೂಕು ವಿಜಯನಗರಜಿಲ್ಲೆ

ಡಿಐಪಿಆರ್/ವಿಜಯನಗರ/182/ಕೆಎಸ್‌ಎಂಸಿಎ/2023–24

(ಸಾರಿಗೆ ಇಲಾಖೆ)
ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ, ಬೆಂಗಳೂರು.

ಸಂ: ಸಾಆ/ಪೀಕ–3/ಪಿಆರ್–259/2022–23 ದಿನಾಂಕ: 06.10.2023

ಇ–ಟೆಂಡರ್ ಪ್ರಕಟಣೆ

ಬಾಗಲಕೋಟೆಯಲ್ಲಿರುವ ಗಣಕೀಕೃತ ಚಾಲನಾ ಪರೀಕ್ಷಾ ಪಥದ ನಿರ್ವಹಣೆ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್‌ಜಾಲ ಮೂಲಕ ವೆಬ್‌ಸೈಟ್ ವಿಳಾಸ **kppp.karnataka.gov.in** ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: **+91–8046010000/+91–8068948777** ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ–ಪೋರ್ಟಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03.11.2023 ರ ಅಪರಾಹ್ನ 3:00 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: **080–22235176** ಯನ್ನು ಸಂಪರ್ಕಿಸಬಹುದು.

ಸಹಿ/–
ಸಾರಿಗೆ ಆಯುಕ್ತರ ಪರವಾಗಿ
ಬೆಂಗಳೂರು

ವಾಸಾಸಂಇ/ವಾ.ಪ್ರ/1743/ಎಂಎಎ/2023–24

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ KSFIC WOOD IS GOOD
(ಕರ್ನಾಟಕ ರಾಜ್ಯ ಸರ್ಕಾರದ ಅಧೀನ ಸಂಸ್ಥೆ)
ಆರ್.ಎಂ.ಪಿ. ಘಟಕ, 3ನೇ ಮಹಡಿ, ವನವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂರವಾಣಿ : 080–23445646
ಇ–ಮೇಲ್ : rmrmp.2008@rediffmail.com

ಸಂಖ್ಯೆ: ಕೆಎಸ್‌ಎಫ್‌ಐಸಿ/ಆರ್‌ಎಂ–ಆರ್‌ಎಂಪಿ/ಪಲ್ಪ್‌ವುಡ್ ಮತ್ತು ಫೈರ್‌ವುಡ್ ಸೇಲ್/ಸಿಆರ್–01/2023–24 ದಿನಾಂಕ : 11.10.2023

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ, ಆರ್‌ಎಂಪಿ ಘಟಕ, ಬೆಂಗಳೂರು ಇವರ ವತಿಯಿಂದ ತಯಾರಿಸುವ ನೀಲಗಿರಿ/ಅಕೇಷಿಯಾ ಪಲ್ಪ್‌ವುಡ್ ಮತ್ತು ಉರುವಲು ಕಟ್ಟಿಗೆಯನ್ನು ಮಾರಾಟ ಮಾಡುವ ಪ್ರಯುಕ್ತ ದಿನಾಂಕ: **27.10.2023ರ ಸಂಜೆ 05.30 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿ ದರಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಕೈಗಾರಿಕೆ / ಸಾರ್ವಜನಿಕರು / ಸಂಸ್ಥೆಯವರು ನಿಗದಿತ ಇಎಂಡಿಯನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಾವತಿಸಿ ಭಾಗವಹಿಸಬಹುದು. ದಿನಾಂಕ: 11.10.2023ರ ಟೆಂಡರ್ ಪ್ರಕಟಣೆ ಮತ್ತು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–46010000 ಮತ್ತು 080–68948777. ಹೆಚ್ಚಿನ ವಿವರಗಳನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಮತ್ತು ಪ್ರಾದೇಶಿಕ ವ್ಯವಸ್ಥಾಪಕರು

ವಾಸಾಸಂಇ/ವಾಪ್ರ/ಜಿಎ/1728/2023–24

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570 001
Ph : +91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com

ಸಂ. ಸರಬ/ವಿವ/168/2023–24 ಅಕ್ಟೋಬರ್ 03, 2023

ಅಲ್ಪಾವಧಿ ಮರು–ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಸಹ ಆಸ್ಪತ್ರೆಗಳಾದ ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ ಮತ್ತು ಪಿ.ಕೆ.ಟಿ.ಬಿ. ಮತ್ತು ಸಿ.ಡಿ. ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ಔಷಧಿ (ಮೆರೋಫಿನಂ ಇಂಜೆಕ್ಷನ್) ಮತ್ತಿತರ ಪದಾರ್ಥಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ವಿದ್ಯುನ್ಮಾನ ವೇದಿಕೆ ಮುಖಾಂತರ ಅಲ್ಪಾವಧಿ ಮರು–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ–ಪೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಮೂಲಕ ದಿ: 16.10.2023 ರಿಂದ ಪಡೆಯಬಹುದಾಗಿದ್ದು, ದಿ: 30.10.2023 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/– ನಿರ್ದೇಶಕರು ಮತ್ತು ಡೀನ್

DIPR/DDMYS/KSMCA/525/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–2/JJM/Ten.Nofi/2023–24/1368
ದಿನಾಂಕ:16.10.2023

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ –2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಮತ್ತು ಕಂಪ್ಲಿ ತಾಲ್ಲೂಕಿನ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:16.10.2023 ರಿಂದ 26.10.2023** ರಂದು ಸಂಜೆ **4.00** ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ:27.10.2023** ರಂದು ಸಂಜೆ **5.00** ಗಂಟೆಗೆ ತೆರೆಯಲಾಗುವುದು ಹಾಗೂ **ದಿನಾಂಕ:21.10.2023** ರಂದು ಬೆಳಗ್ಗೆ **11.00** ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ:25.10.2023** ರ ಸಂಜೆ **4.00** ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/361/ಕೆಎಸ್‌ಎಂಸಿಎ/2023–24

ಕೃಷಿ ವಿಶ್ವವಿದ್ಯಾಲಯ ಧಾರವಾಡ
ಕುಲಸಚಿವರ ಕಾರ್ಯಾಲಯ, ಕೃಷಿನಗರ, ಧಾರವಾಡ–5

ಸಂಖ್ಯೆ:ಕುಸ:ನೇವಿ:ಜಾಹಿ–62/2023 ದಿನಾಂಕ: 11.10.2023

ತಿದ್ದುಪಡಿ ಅಧಿಸೂಚನೆ

ವಿಷಯ: ಧಾರವಾಡ ಕೃವಿವಿಯಡಿಯ ಕೃಷಿ ವಿಜ್ಞಾನ ಕೇಂದ್ರಗಳಲ್ಲಿನ ವಿವಿಧ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು.
ಉಲ್ಲೇಖ: ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕುಸ:ನೇವಿ:ಜಾಹಿ–62/2023, ದಿ.26.9.2023.

ಉಲ್ಲೇಖಿತ ಈ ಕಚೇರಿ ಅಧಿಸೂಚನೆಗೆ ಅಲ್ಪ ಮಾರ್ಪಾಡು ಮಾಡಲಾಗಿದ್ದು, ಅಧಿಸೂಚಿತ ಹುದ್ದೆಗಳಾದ Subject Matter Specialist (Home Science – Food Science & Nutrition) ಮತ್ತು Subject Matter Specialist (Plant Pathology) ಗಳನ್ನು ಕ್ರಮವಾಗಿ Subject Matter Specialist (Home Science) ಮತ್ತು Subject Matter Specialist (Plant Protection) ಎಂದು ಓದಿಕೊಳ್ಳುವುದು. ತತ್ಪರಿಣಾಮವಾಗಿ ಸದರಿ ಹುದ್ದೆಗಳಿಗೆ ನಿಗದಿತ ವಿದ್ಯಾರ್ಹತೆಗಳನ್ನು ಮಾರ್ಪಡಿಸಲಾಗಿದ್ದು ಅದರೊಂದಿಗೆ ಉಲ್ಲೇಖ(1)ರಡಿ ಅಧಿಸೂಚಿತ ಎಲ್ಲಾ ಹುದ್ದೆಗಳಿಗೆ ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವನ್ನು 10.11.2023 ರವರೆಗೆ ವಿಸ್ತರಿಸಲಾಗಿದೆ. ಈ ತಿದ್ದುಪಡಿ ಅಧಿಸೂಚನೆಯನ್ನು ವಿವಿಯ ಅಧಿಕೃತ ಜಾಲತಾಣ **(http://www.uasd.edu)** ದಲ್ಲಿ ವೀಕ್ಷಿಸಬಹುದು.

ಆದೇಶದ ಮೇರೆಗೆ,
ಸಹಿ/–
ಕುಲಸಚಿವರು

ವಾ.ಸಾ.ಇ/ಧಾ/391/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಯಲ್ಲಾಪುರ ವಿಭಾಗ, ಯಲ್ಲಾಪುರ
ಯಲ್ಲಾಪುರ ವಿಭಾಗ, ಯಲ್ಲಾಪುರದ ಕಿರವತ್ತಿ ಮತ್ತು ಮುಂಡಗೋಡ ಡಿಪೋಗಳಲ್ಲಿರುವ ಟಿಂಬರ್ ಇ–ಟೆಂಡರ್ ಕಂ ಹರಾಜಿನ ವಿವರವಾದ ಪ್ರಕಟಣೆ
ಕರ್ನಾಟಕ ಅರಣ್ಯ ಕೋಡ್, 1976
ಅನುಬಂಧ XVIII A (ನಿಯಮ 64)

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು(ಅರಣ್ಯ ಸಂಪನ್ಮೂಲ ನಿರ್ವಹಣೆ) ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ ಅಪ್ರಮುಅಸಂ(ಅಸಂ.ನಿ)ಬಿ3:ಸೇಲ್ಸ್:ಸಿಆರ್–06: 2022–23 ದಿನಾಂಕ:–05.10.2023 ಅಪ್ರಮುಅಸಂ(ಅಸಂನಿ)ಬಿ3:ಸೇಲ್ಸ್: ಸಿಆರ್–49: 2019–20 ದಿನಾಂಕ:–21.11.2022 ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ FEE 168 FDP 2017 ದಿನಾಂಕ:14–11–2017 ಮತ್ತು 27–02–2018, ಸರ್ಕಾರದ ಆದೇಶ ಸಂಖ್ಯೆ FEE 25 FDP 2020 ದಿನಾಂಕ:16.08.2022

ನಂ.ಎ4:ಡಿಟಿಎಸ್: ನವೆಂಬರ್–2023 ಸೇಲ್2 ಸಿಆರ್–3:2023–24 ದಿನಾಂಕ: 10.10.2023

ಸಾರ್ವಜನಿಕರ ಮಾಹಿತಿಗಾಗಿ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಕಂಡ ಪ್ರಕಾರಗಳಾದ ಮತ್ತು ಪ್ರಮಾಣದಲ್ಲಿನ ಯಲ್ಲಾಪುರ ವಿಭಾಗದ ಮುಂಡಗೋಡ ಮತ್ತು ಕೀರ್ವಟ್ಟಿ ಸರ್ಕಾರಿ ಮರದ ಡಿಪೋಗಳಲ್ಲಿ ದಾಸ್ತಾನು ಮಾಡಲಾದ ಮತ್ತು ಸಂಗ್ರಹಿಸಿಡಲಾದ ಮರ ಮತ್ತು ಇತರ ಅರಣ್ಯ ಉತ್ಪನ್ನಗಳನ್ನು ಕೀರ್ವಟ್ಟಿ ಸರ್ಕಾರಿ ಮರಗಳ ಡಿಪೋವಿನಲ್ಲಿ **06.11.2023, 07.11.2023, 08.11.2023, 09.11.2023** (ಎಲ್ಲಾ ನಾಲ್ಕು ಸೆಷನ್‌ಗಳು) ಮತ್ತು **10.11.2023 (I, II, III** ಸೆಷನ್‌ಗಳು) ಮತ್ತು ಮುಂಡಗೋಡ ಸರ್ಕಾರಿ ಮರಗಳ ಡಿಪೋವಿನಲ್ಲಿ **15.11.2023, 16.11.2023, 17.11.2023, 18.11.2023** (ಎಲ್ಲಾ ನಾಲ್ಕು ಸೆಷನ್‌ಗಳು)ರಂದು ಬೆಳಿಗ್ಗೆ 10.00 ಗಂಟೆಯಿಂದ ಎಲ್ಲಾ ಸಂಗ್ರಹ ಉತ್ಪನ್ನಗಳೂ ಪೂರ್ಣಗೊಳ್ಳುವವರೆಗೆ ಒಂದು ಅಥವಾ ಹೆಚ್ಚಿನ ಸೆಷನ್‌ಗಳಿಗೆ ಎಂಎಸ್‌ಟಿಸಿ ಪೋರ್ಟಲ್‌ನಲ್ಲಿ ಸಾರ್ವಜನಿಕ ಇ–ಟೆಂಡರ್ ಕಂ ಹರಾಜು ಮೂಲಕ ಮಾರಾಟ ಮಾಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲ್ಲಾಪುರ ವಿಭಾಗ, ಯಲ್ಲಾಪುರ, ಇವರು ಮಾರಾಟ ನಡೆಸುವ

ಯಾವುದೇ ಸ್ಪಷ್ಟೀಕರಣಕ್ಕಾಗಿ, ನೀವು ಸಂಪರ್ಕಿಸಹುದು:
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸರ್ಕಾರಿ ಟಿಂಬರ್ ಡಿಪೋ, ಕಿರವತ್ತಿ
acfgtdkwt@gmail.com Ph: 08419-238534
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಸರ್ಕಾರಿ ಟಿಂಬರ್ ಡಿಪೋ, ಮುಂಡಗೋಡ
acfgtdmundgod@gmail.com Ph: 08301-222152
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲ್ಲಾಪುರ ವಿಭಾಗ, ಯಲ್ಲಾಪುರ
yellapurdcf5@yahoo.com, dcfyellapur@gmail.com
Ph: 08419-261273
ಶ್ರೀ ದಾಮೋಧರ್, ವ್ಯವಸ್ಥಾಪಕರು, ಎಂಎಸ್‌ಟಿಸಿ. ಲಿಮಿಟೆಡ್, ಬೆಂಗಳೂರು.
Mobile No: 98410022252 / 9535347426 / 9980147110

ಸಹಿ/– (ಎಸ್.ಜಿ. ಹೆಗ್ಡೆ, ಭಾ.ಪೊ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಯಲ್ಲಾಪುರ ವಿಭಾಗ, ಯಲ್ಲಾಪುರ

DIPR/KWR/KSMCA/285/23-24 Dt.16.10.2023

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
ದೂರವಾಣಿ: 080–23407011–25, ವೆಬ್‌ಸೈಟ್:www.kssidc.co.in ಇ–ಮೇಲ್: kssidcho@vsnl.com

ಸಂಖ್ಯೆ:ಕೈ.ವ.ಬೆಂ.ವಿಭಾಗ/ಚನ್ನಪಟ್ಟಣ/ಕ್ರಾಫ್ಟ್/ಪಾರ್ಕ್/ಹಂಚಿಕೆ/2023 ದಿನಾಂಕ:17.10.2023

ಚನ್ನಪಟ್ಟಣ ತಾಲ್ಲೂಕು, ತಗಚಗೆರೆ ಕೈಗಾರಿಕಾ ವಸಾಹತುವಿನಲ್ಲಿರುವ ಕ್ರಾಫ್ಟ್ ಪ್ರಾತ್ಯಕ್ಷಿಕ ಮತ್ತು ವಸ್ತು ಪ್ರದರ್ಶನ ಕೇಂದ್ರದ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ಹಂಚಿಕೆ ಸಲುವಾಗಿ ಪ್ರಕಟಣೆ

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕು, ತಗಚಗೆರೆ ಕೈಗಾರಿಕಾ ವಸಾಹತುವಿನಲ್ಲಿ ನಿರ್ಮಿಸಿರುವ ಕ್ರಾಫ್ಟ್ ಪ್ರಾತ್ಯಕ್ಷಿಕ ಮತ್ತು ವಸ್ತು ಪ್ರದರ್ಶನ ಕೇಂದ್ರವನ್ನು (ಎ.ಟಿ.ಎಂ ಮತ್ತು ಉಪಹಾರ ಗೃಹ ಸೇರಿ) ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಸಂಬಂಧ ಆಸಕ್ತ ಸಾರ್ವಜನಿಕರಿಂದ/ನಿಗಮ/ಮಂಡಳಿ/ಸಂಘ ಸಂಸ್ಥೆಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.11.2023 ರಂದು ಸಂಜೆ 5.00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ.

ಸ್ಥಳ	ಕ್ರಾಫ್ಟ್ ಪ್ರಾತ್ಯಕ್ಷಿಕೆ ಮತ್ತು ವಸ್ತು ಪ್ರದರ್ಶನ ಕೇಂದ್ರದ ಒಳ ಆವರಣದ (carpet area) ಒಟ್ಟು ವಿಸ್ತೀರ್ಣ (ಚ.ಮೀ.)	ತಾತ್ಕಾಲಿಕವಾಗಿ ಪ್ರತಿ ತಿಂಗಳ ಬಾಡಿಗೆ (ಪ್ರತಿ ಚ.ಮೀ.ಗೆ)	ತಾತ್ಕಾಲಿಕವಾಗಿ ಪ್ರತಿ ತಿಂಗಳ ಬಾಡಿಗೆ (ರೂ.ಗಳಲ್ಲಿ)
ಕೈಗಾರಿಕಾ ವಸಾಹತು, ತಗಚಗೆರೆ ಚನ್ನಪಟ್ಟಣ ತಾಲ್ಲೂಕು.	1. Carpet Area 1606.50 2. Open Area 3306.22	41.00 20.50	ರೂ 65,867/– ರೂ 67,778/–
			ಒಟ್ಟು ರೂ.1,33,645/– +18% ಜಿ.ಎಸ್.ಟಿ

ನಿಗದಿತ ಅರ್ಜಿ ನಮೂನೆಗಳನ್ನು ಷರತ್ತು ಹಾಗೂ ನಿಬಂಧನೆಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು (ಕೈ.ವ), ಬೆಂಗಳೂರು ವಿಭಾಗ (ಸಂಚಾರಿ ದೂರವಾಣಿ ಸಂಖ್ಯೆ: 9513316637) ಅಥವಾ ನಿಗಮದ ವೆಬ್‌ಸೈಟ್ ಮೂಲಕವೂ ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ನಿಗದಿತ ಅರ್ಜಿ ನಮೂನೆಯನ್ನು ನಿಗಮದ ವೆಬ್‌ಸೈಟ್ ತಾಣ **www.kssidc.co.in** ನಲ್ಲಿ ಮಾತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ನಿಯಮ ಹಾಗೂ ನಿಬಂಧನೆಗಳು
1. ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆ ಜೊತೆ ರೂ. 5,000/– (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 2,360/– ಪರಿಶೀಲನಾ ಶುಲ್ಕ (ತೆರಿಗೆ ಸೇರಿದಂತೆ) ವನ್ನು ಡಿಮಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸಬೇಕು.
2. ಕ್ರಾಫ್ಟ್ ಪ್ರಾತ್ಯಕ್ಷಿಕ ಮತ್ತು ವಸ್ತು ಪ್ರದರ್ಶನ ಕೇಂದ್ರವನ್ನು "ಹೇಗಿದೆಯೋ ಹಾಗೆ" (As is where is basis) 11 ತಿಂಗಳ ಅವಧಿಗೆ ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತದೆ.
3. 11 ತಿಂಗಳ ನಂತರ ಶೇಕಡ 10 ರಷ್ಟು ಬಾಡಿಗೆ ಹೆಚ್ಚಳ ಮಾಡಲಾಗುವುದು.
4. ಹಂಚಿಕೆಯಾದಲ್ಲಿ 10 ತಿಂಗಳ ಮುಂಗಡ ಠೇವಣಿಯಾಗಿ ರೂ.13,36,450/– ಗಳನ್ನು ಹುಂಡಿ ಮೂಲಕ ಪಾವತಿಸಬೇಕಾಗುತ್ತದೆ.
5. ಕರಕುಶಲ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿಗಮ/ಮಂಡಳಿ/ಸಂಘ ಸಂಸ್ಥೆಗಳಿಗೆ/ವ್ಯಕ್ತಿಗಳಿಗೆ ಆದ್ಯತೆ ನೀಡಲಾಗುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜಿಎ/1742/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಾಗಲಕೋಟೆ
ದೂರವಾಣಿ ಸಂ : 08354–235576, 235591 e-mail-ds.zp.karbgk@nic.in

ಸಂಖ್ಯೆ:ಜಿಪಂಬಾ/ಆಡಳಿತ/ಸಿಆರ್–/2023–24 ದಿನಾಂಕ :17.10.2023.

ಟೆಂಡರ ಪ್ರಕಟಣೆ

2023–24ನೇ ಸಾಲಿಗೆ ಬಾಗಲಕೋಟೆ ಜಿಲ್ಲಾ ಪಂಚಾಯತಿಯಲ್ಲಿ ಮಂಜೂರಾಗಿ ಖಾಲಿ ಇರುವ ಶೀಘ್ರಲಿಪಿಗಾರರು–2, ಬೆರಳಚ್ಚುಗಾರರು–09, ವಾಹನ ಚಾಲಕರು–04 ಹಾಗೂ ಗ್ರೂಪ್ ಡಿ–11 ಹೀಗೆ ಒಟ್ಟು 26 ಹುದ್ದೆಗಳನ್ನು ಹೊರಸಂಪನ್ಮೂಲದಿಂದ ಪಡೆಯಲು ಸಂಸ್ಥೆಯನ್ನು ಆಯ್ಕೆ ಮಾಡಲು ಕರ್ನಾಟಕ ಪಾರದರ್ಶಕ ಅಧಿನಿಯಮ 1999 ನಿಯಮಗಳು 2000ರ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ Karnataka Public Procurement Portal ಮೂಲಕ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಅಪಲೋಡ್ ಮಾಡಲು ದಿನಾಂಕ: **02.11.2023** ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವಿಳಾಸ: **http://kppp.karnataka.gov.in** ರಲ್ಲಿ ಪರಿಶೀಲಸಿ ಸೂಕ್ತ ದಾಖಲೆಗಳೊಂದಿಗೆ ಇ–ಟೆಂಡರ್ ಸಲ್ಲಿಸಬಹುದು, ಟೆಂಡರ್ ನಂ:RDPR/2023-24/SE0360.

ಸಹಿ/– ಉಪ ಕಾರ್ಯದರ್ಶಿಗಳು,
ಜಿಲ್ಲಾ ಪಂಚಾಯತ, ಬಾಗಲಕೋಟೆ

ವಾ.ಸಾ.ಇ/ಬಾಗಲಕೋಟ/158/2023–24/ದೇಶಪಾಂಡೆಪಬ್ಲಿಸಿಟಿ

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ಕ್ರ.ಸಂ:ಜಿನಕೋ–5/ಇಂದಿರಾ ಕ್ಯಾಂಟೀನ್/ಟೆಂಡರ್/ಸಿ.ಆರ್–01/2023–24 ದಿನಾಂಕ:13.10.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ವಿಜಯಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ತ್ವರಿತವಾಗಿ ಊಟ, ತಿಂಡಿ ಆಹಾರ ಸರಬರಾಜು ಮಾಡಲು ಆಸಕ್ತಿಯುಳ್ಳ ಸರಬರಾಜುದಾರರಿಗೆ ದ್ವಿ ಲಕೋಟಿ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದ್ದು, ಪ್ಯಾಕೇಜ್‌ಗಳ ವಿವರ ಈ ಕೆಳಕಂಡಂತೆ ಇದೆ.

1) ಪ್ಯಾಕೇಜ ನಂ: 1 ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 4 ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸರಬರಾಜು ಮತ್ತು ಸೇವೆ ಅಂದಾಜು ಮೊತ್ತ ರೂ. 452.60 ಲಕ್ಷ. ಇ.ಎಂ.ಡಿ. ರೂ. 6.79 ಲಕ್ಷ ಟೆಂಡರ್ ದಸ್ತಾವೇಜನಲ್ಲಿ ಇರುವಂತೆ. (ಇಂಡೆಂಟ್ ನಂ: DMA/2023-24/SE1130)

2) ಪ್ಯಾಕೇಜ ನಂ: 2 ವಿಜಯಪುರ ಜಿಲ್ಲೆಯ ಚಾಲ್ತಿಯಲ್ಲಿರುವ ಬಸವನ ಬಾಗೇವಾಡಿ ಮತ್ತು ಇಂಡಿ ಪುರಸಭೆ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಮತ್ತು ಸೇವೆ ಅಂದಾಜು ಮೊತ್ತ ರೂ. 181.04 ಲಕ್ಷ. ಇ.ಎಂ.ಡಿ. ರೂ. 2.72 ಲಕ್ಷ ಟೆಂಡರ್ ದಸ್ತಾವೇಜನಲ್ಲಿ ಇರುವಂತೆ. (ಇಂಡೆಂಟ್ ನಂ: DMA/2023-24/SE1128)

ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಪಾರ್ಮನಲ್ಲಿ ನೊಂದಾಯಿಸಿದ ಸರಬರಾಜುದಾರರು ಭಾಗವಹಿಸತಕ್ಕದ್ದು, ಇ.ಎಂ.ಡಿ ಮತ್ತು ಟೆಂಡರ್ ಪ್ರೊಸೆಸಿಂಗ್ ಫೀ ಯನ್ನು ಆನ್‌ಲೈನ್‌ನಲ್ಲಿ ಪಾವತಿಸತಕ್ಕದ್ದು. ಟೆಂಡರ್ ದಾಖಲೆಗಳನ್ನು www.kppp.karnataka.gov.in ನಲ್ಲಿ ಪಡೆದು ಸಲ್ಲಿಸತಕ್ಕದ್ದು, (1) ದಾಖಲೆ ಸಲ್ಲಿಸಲು ಕೊನೆಯ **ದಿನಾಂಕ: 02.11.2023 ಸಾಯಂಕಾಲ 5.00 ಘಂಟೆಗೆ. (2)** ತಾಂತ್ರಿಕ ದಾಖಲೆಗಳನ್ನು ತೆರೆಯುವ **ದಿನಾಂಕ: 03.11.2023 ಸಾಯಂಕಾಲ 5.15 ಘಂಟೆಗೆ (3)** ಆರ್ಥಿಕ ದಾಖಲೆಗಳನ್ನು ತೆರೆಯುವ **ದಿನಾಂಕ: 10.11.2023 ಬೆಳಿಗ್ಗೆ 11.00 ಘಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಈ ಕಾರ್ಯಾಲಯಕ್ಕೆ ಖುದ್ದಾಗಿ ಕಛೇರಿ ವೇಳೆಯಲ್ಲಿ ಹಾಗೂ ಇ–ಮೇಲ್ ಮುಖಾಂತರ (ka.vijapura.dudc@gmail.com) ಸಂಪರ್ಕಿಸುವದು.

ಸಹಿ/–
ಜಿಲ್ಲಾಧಿಕಾರಿಗಳು, ವಿಜಯಪುರ

ವಾಸಾಸಂಇ/ವಿಜಯಪುರ/216/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಬೆಂಗಳೂರು ದಕ್ಷಿಣ ವಿಭಾಗ, ಅಮೃತ್‌ನಗರ, ಕೋಣನಕುಂಟೆ ಮುಖ್ಯರಸ್ತೆ, ಸೌದಾಮಿನಿ ಲೇಔಟ್, ಬೆಂಗಳೂರು–62

ನಂ.ಬಿಬಿಎಂಪಿ/ಇಇ/ಬಿಎಸ್‌ಡಿ/ಟಿಇಎನ್‌ಡಿ/07/2023–24 ದಿನಾಂಕ: 17–10–2023

ಅಲ್ಪಾವಧಿಯ ಟೆಂಡರ್‌ಗೆ ಆಹ್ವಾನ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ) (ಏಕ ಲಕೋಟೆ ವಿಧಾನ)

ಕಾರ್ಯನಿರ್ವಾಹಕ ಅಭಿಯಂತರರು, (ಬೆಂಗಳೂರು ದಕ್ಷಿಣ ವಿಭಾಗ), ಬಿಬಿಎಂಪಿ, ಬೆಂಗಳೂರು–62 ಇವರು ಕೆಳಗೆ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲ್ಪಟ್ಟ ಅಥವಾ ಅದಕ್ಕೆ ಸಮನಾದ ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿ/ ಬಿಡಬ್ಲ್ಯೂಎಸ್‌ಎಸ್‌ಬಿ/ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳೊಂದಿಗೆ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ಉತ್ತರಹಳ್ಳಿ ಉಪ ವಿಭಾಗದ ವಾರ್ಡ್ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು (ಹೊಸ ವಾರ್ಡ್ ಸಂಖ್ಯೆ 202 – ಉತ್ತರಹಳ್ಳಿ, 203 – ಸುಬ್ರಹ್ಮಣ್ಯಪುರ, 204 – ವಸಂತಪುರ, 205 – ಯಲಚೇನಹಳ್ಳಿ)	60.00	1,20,000/–
2	ಅಂಜನಾಪುರ ಉಪ ವಿಭಾಗದ ವಾರ್ಡ್ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು (ಹೊಸ ವಾರ್ಡ್ ನಂ. 206 – ಕೋಣನಕುಂಟೆ, 207 – ಆರ್‌ಬಿಐ ಲೇಔಟ್, 208 – ಅಂಜನಾಪುರ, 209 – ಗೊಟ್ಟಿಗೆರೆ)	60.00	1,20,000/–
3	ಬೇಗೂರು ಉಪ ವಿಭಾಗದ ವಾರ್ಡ್ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು (ಹೊಸ ವಾರ್ಡ್ ನಂ. 210 – ಕಾಳೇನ ಅಗ್ರಹಾರ, 211 – ಬೇಗೂರು, 212 – ನಾಗನಾಥಪುರ, 225 – ಕೂಡ್ಲು)	60.00	1,20,000/–

ವೇಳಾಪಟ್ಟಿ: (1) ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **26.10.2023ರ ಸಂಜೆ 04.00 ಗಂಟೆವರೆಗೆ. (2)** ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ **27.10.2023ರ ಸಂಜೆ 04.30 ಗಂಟೆಗೆ.**

ವಿವರಗಳು, ನೋಂದಣಿ ಮತ್ತು ಇ–ಪಾವತಿಗಾಗಿ ಜಿಓಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ಗೆ ಭೇಟಿ ನೀಡಿ ಅಥವಾ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಹಾಯವಾಣಿ 91–8046010000, 91–8068948777 ಅನ್ನು ಸಂಪರ್ಕಿಸಿ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಬೆಂಗಳೂರು ದಕ್ಷಿಣ ವಿಭಾಗ, ಬಿಬಿಎಂಪಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬಿಟಿಎಂ ಬಡಾವಣೆ ವಿಭಾಗ, ಬಿಬಿಎಂಪಿ ಸಂಕೀರ್ಣ, 2ನೇ ಮಹಡಿ, ಲಷ್ಕರ್ ಹೊಸೂರು ರಸ್ತೆ, ಆಡುಗೋಡಿ,ಬೆಂಗಳೂರು.–560 030

ಸಂಖ್ಯೆ : ಕಾಪಾಅ/ಬಿಟಿಎಂ/ಸಅ/ಇ–ಪ್ರೊಕ್/08/2023–24 ದಿನಾಂಕ: 16.10.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ, ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)
1.	2023–24ನೇ ಸಾಲಿಗಾಗಿ ಬಿಟಿಎಂ ಬಡಾವಣೆ ವಿಧಾನಸಭಾ ಕ್ಷೇತ್ರದ ಬಿಟಿಎಂ ಬಡಾವಣೆ ಉಪ ವಿಭಾಗದ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿಗಳು.	75.00	1,50,000/-
2.	2023–24ನೇ ಸಾಲಿಗಾಗಿ ಬಿಟಿಎಂ ಬಡಾವಣೆ ವಿಧಾನಸಭಾ ಕ್ಷೇತ್ರದ ಕೋರಮಂಗಲ ಉಪ ವಿಭಾಗದ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿಗಳು.	60.00	1.20,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) **ಪೂರ್ವಭಾವಿ ಸಭೆ: 25.10.2023ರ ಸಂಜೆ 3.00 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **31.10.2023 ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02.11.2023ರ ಬೆಳಿಗ್ಗೆ 11.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–46010000 / 68948777 ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಅಬ್ದುಲ್ ಕಲಾಂ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in

ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ
2023–24ನೇ ಸಾಲಿನ IIT, IIIT, NIT, IIM, IISER, AIIMS,NLU, INI & IUSLA ಗಳಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ರಾಜ್ಯದ ಅರ್ಹ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಪ್ರೋತ್ಸಾಹಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಆನ್‌ಲೈನ್ ಅರ್ಜಿ:
2023–24ನೇ ಸಾಲಿನಲ್ಲಿ IIT, IIIT, NIT, IIM, IISER, AIIMS,NLU, INI & IUSLA ಗಳಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರವೇಶ ಪಡೆದಿರುವ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಕೋರ್ಸ್‌ನ ಪೂರ್ಣ ಅವಧಿಯಲ್ಲಿ ಒಂದು ಬಾರಿಗೆ ಪ್ರೋತ್ಸಾಹಧನವನ್ನು ನೀಡಲು ಆನ್ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ:
- ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.11.2023.

ಅರ್ಹತೆಗಳು:
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು.
- ಕೋರ್ಸ್– ಪೂರ್ಣಾವಧಿ
- ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ (ಬ್ಯಾಕ್‌ಲಾಗ್) ವಿದ್ಯಾರ್ಥಿಗಳಿಗೆ ಈ ಪ್ರೋತ್ಸಾಹಧನ ಪಡೆಯುವ ಅವಕಾಶವಿರುವುದಿಲ್ಲ.

ಅರ್ಜಿದಾರರಿಗೆ ಸೂಚನೆಗಳು:
- ಅರ್ಜಿದಾರರು https://sevasindhu.karnataka.gov.in/Sevasindhu/DepartmentServices ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ .
- ಅರ್ಜಿ ಸಲ್ಲಿಸಿದ ಪ್ರತಿಯನ್ನು ಅಗತ್ಯ ದಾಖಲೆಗಳೊಂದಿಗೆ ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ–16ಸಿ, ಮೌಲಾನಾ ಅಬ್ದುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್‌ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052 ಇಲ್ಲಿಗೆ ನಿಗದಿಪಡಿಸಿದ ದಿನಾಂಕದಂದು ಸಲ್ಲಿಸುವುದು. ಹಾರ್ಡ್ ಕಾಪಿಯನ್ನು ಸಲ್ಲಿಸುವ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.
- ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡಲು ವಿವರವಾದ ಸೂಚನೆಗಳು /ವಿಧಾನಗಳು ಮತ್ತು FAQs ಇಲ್ಲಿ ಲಭ್ಯವಿದೆ. https://dom.karnataka.gov.in.

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ಜಾಲತಾಣ https://dom.karnataka.gov.in ಅನ್ನು ವೀಕ್ಷಿಸಿ.

ದಿನಾಂಕ : 17.10.2023
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.

DIPR/CP/1740/Zen/2023-24

ಕಡತ ಟಿಪ್ಪಣಿ ಇಂಗ್ಲಿಷ್‌ನಲ್ಲಿ ಬೇಡ: ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಆಡಳಿತದಲ್ಲಿ ಕನ್ನಡಕ್ಕೆ ಆದ್ಯತೆ ಇರಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಲವು ಸಚಿವರು ಮತ್ತು ಅಧಿಕಾರಿಗಳು ಕಡತಗಳಲ್ಲಿ ಇಂಗ್ಲಿಷ್‌ನಲ್ಲೇ ಟಿಪ್ಪಣಿ ಬರೆಯುತ್ತಾರೆ. ಈ ರೀತಿ ಇಂಗ್ಲಿಷ್ ಭಾಷೆಯ ಮೇಲೆ ವ್ಯಾಮೋಹ ಸರಿಯಲ್ಲ. ಆಡಳಿತದಲ್ಲಿ ಕನ್ನಡಕ್ಕೇ ಆದ್ಯತೆ ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಭ್ರಮ–50ರ ಲಾಂಛನ ಬಿಡುಗಡೆ ಮಾಡಿ ಮಾತ ನಾಡಿದ ಅವರು, 'ಕೇಂದ್ರ ಸರ್ಕಾರ ಹಾಗೂ ಇತರ ರಾಜ್ಯಗಳ ಜತೆ ಪತ್ರ ವ್ಯವಹಾರ ನಡೆಸುವಾಗ ಇಂಗ್ಲಿಷ್ ಬಳಸ ಬಹುದು. ರಾಜ್ಯದಲ್ಲಿ ಕನ್ನಡದಲ್ಲೇ ವ್ಯವಹರಿಸಬೇಕು' ಎಂದರು.

ಕನ್ನಡ ಆಡಳಿತ ಭಾಷೆ ಎಂದು ಘೋಷಣೆಯಾಗಿ ಹಲವು ವರ್ಷಗಳು ಕಳೆದರೂ ಸರಿಯಾಗಿ ಪಾಲನೆಯಾಗಿಲ್ಲ. ನಿರ್ಲಕ್ಷ್ಯವೇ ಇದಕ್ಕೆ ಕಾರಣ ಇರಬಹುದು. ಕರ್ನಾಟಕ ದಲ್ಲಿ ಕನ್ನಡವನ್ನು ಮಾತನಾಡುವಂತಹ, ಕನ್ನಡದ ಅನಿವಾರ್ಯವನ್ನು ಸೃಷ್ಟಿಸುವ ಅಗತ್ಯವಿದೆ ಎಂದು ಹೇಳಿದರು.

'ಕನ್ನಡಿಗರಲ್ಲಿ ಔದಾರ್ಯ ಜಾಸ್ತಿ ಇದೆ. ನೆರೆಯ ಅನೇಕ ರಾಜ್ಯಗಳಲ್ಲಿ ಅಲ್ಲಿನ ಸ್ಥಳೀಯ ಭಾಷೆಯನ್ನು ಕಲಿಯದಿದ್ದರೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಆದರೆ, ಕನ್ನಡ ಬಾರದಿದ್ದರೂ ಕರ್ನಾಟಕದಲ್ಲಿ ಬದುಕಬಹುದು. ಹೊರ ರಾಜ್ಯಗಳಿಂದ ಬಂದವರಿಗೆ ನಮ್ಮ ಭಾಷೆಯನ್ನು ಕಲಿಸುವ ಬದಲಿಗೆ ನಾವೇ ಅವರ ಭಾಷೆ ಕಲಿತು ವ್ಯವಹರಿಸುತ್ತಿದ್ದೇವೆ. ರಾಜ್ಯದಲ್ಲಿ ವಾಸಿಸುವ ಪ್ರತಿಯೊಬ್ಬರೂ ಕನ್ನಡ ಭಾಷೆಯಲ್ಲಿ ಮಾತನಾಡುವಂತಾಗಬೇಕು' ಎಂದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದ ಕರ್ನಾಟಕ ಸಂಭ್ರಮ–50ರ ಲಾಂಛನ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಕಾರ್ಯದರ್ಶಿ ಎನ್. ಮಂಜುಳಾ ಮತ್ತು ಸಚಿವ ಶಿವರಾಜ ತಂಗಡಗಿ ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

₹1 ಲಕ್ಷ ಹೆಚ್ಚುವರಿ ಬಹುಮಾನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಹ್ವಾನಕ್ಕೆ ಪ್ರತಿಕ್ರಿಯಿಸಿ 271 ಮಂದಿ ಲಾಂಛನಗಳನ್ನು ರಚಿಸಿ ಕಳುಹಿಸಿದ್ದರು. ಅದರಲ್ಲಿ ರವಿರಾಜ್ ಜಿ. ಹುಲಗೂರು ರಚಿಸಿದ ಲಾಂಛನವನ್ನು ಆಯ್ಕೆ ಮಾಡಲಾಗಿದೆ.

ರವಿರಾಜ್ ಅವರಿಗೆ ಇಲಾಖೆಯಿಂದ ₹25,000 ಬಹುಮಾನದ ಚೆಕ್ ವಿತರಿಸಲಾಯಿತು. ಬಿಬಿಎಂಪಿಯಿಂದ ಹೆಚ್ಚುವರಿಯಾಗಿ ₹1 ಲಕ್ಷ ನೀಡುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಕಟಿಸಿದರು.

1956ರ ನವೆಂಬರ್ 1ರಂದು ಕರ್ನಾಟಕದ ಏಕೀಕರಣವಾಯಿತು. 1973ರ ನವೆಂಬರ್ 1ರಂದು ಕರ್ನಾಟಕ ಎಂದು ನಾಮಕರಣ ವಾಯಿತು. ಕರ್ನಾಟಕ ಸಂಭ್ರಮ–50ರ ಆಚರಣೆ ಕಳೆದ ವರ್ಷವೇ ಆರಂಭ ವಾಗಬೇಕಿತ್ತು. ಆದರೆ, ಬಿಜೆಪಿ ಸರ್ಕಾರ ಆ ಕೆಲಸ ಮಾಡಲಿಲ್ಲ. ಹಾಗೆಯೇ ಬಿಟ್ಟರೆ ಲೋಪವಾಗುತ್ತದೆ ಎಂಬ ಕಾರಣದಿಂದ ತಮ್ಮ ಸರ್ಕಾರ 2023ರ ನವೆಂಬರ್ 1 ರಿಂದ 2024ರ ನ.1 ರವರೆಗೆ ಕರ್ನಾಟಕ ಸಂಭ್ರಮ–50 ಹಮ್ಮಿಕೊಂಡಿದೆ ಎಂದು ತಿಳಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಕನ್ನಡದ ನೆಲ, ಜಲ, ಭಾಷೆ ಎಲ್ಲವನ್ನೂ ಒಳಗೊಂಡಂತೆ 50ರ ಸಂಭ್ರಮ ಆಚರಿಸ ಲಾಗುವುದು' ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, 'ಕರ್ನಾಟಕದ ನಾಮಕರಣ ಸಮಾರಂಭವು ಬೆಂಗಳೂರು, ಹಂಪಿ ಮತ್ತು ಗದಗದಲ್ಲಿ ನಡೆದಿತ್ತು. ಅದೇ ಮಾದರಿಯಲ್ಲಿ 50ರ ಸಂಭ್ರಮದ ಮೊದಲ 3 ದಿನದ ಕಾರ್ಯಕ್ರಮ ನಡೆಯಲಿವೆ' ಎಂದು ತಿಳಿಸಿದರು.

ಕಾನೂನು ಸಚಿವ ಎಚ್.ಕೆ. ಪಾಟೀಲ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್, ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್ ಇದ್ದರು.

'ಮೈತ್ರಿಯಿಂದ ಕಾಂಗ್ರೆಸ್‌ಗೆ ಲಾಭ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಿಂದ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಲಾಭವಾಗಲಿದೆ' ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು.

'ನಮ್ಮ ಪಕ್ಷವು ಜನರನ್ನು ಹೊರತುಪಡಿಸಿ ಯಾರನ್ನೂ ಅವಲಂಬಿಸಿಲ್ಲ. ಹಿಂದೆ ಬಿಜೆಪಿ ಮತ್ತು ಜೆಡಿಎಸ್ ಪ್ರತ್ಯೇಕವಿದ್ದಾಗಲೂ ನಮಗೆ ಅನುಕೂಲವಾಗಿದೆ. ಜನರು ಆಶೀರ್ವದಿಸಿದರೆ, ಲೋಕಸಭೆಯಲ್ಲಿ ಹೆಚ್ಚಿನ ಸ್ಥಾನ ಗಳಿಸುತ್ತೇವೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಜೆಡಿಎಸ್‌ನಲ್ಲಿನ ಬೆಳವಣಿಗೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಜೆಡಿಎಸ್‌ನ ಬೈಲಾ ನನಗೆ ಗೊತ್ತಿಲ್ಲ. ಸಿ.ಎಂ ಇಬ್ರಾಹಿಂ ಅಧ್ಯಕ್ಷತೆಯ ಜಾತ್ಯತೀತ ಜನತಾದಳ ಅಧಿಕೃತವೋ, ಇನ್ನೊಂದು ಅಧಿಕೃತವೋ ನೋಡಬೇಕು. ಇಬ್ರಾಹಿಂ ಬುದ್ಧಿವಂತರು. ಅವರ ಪಕ್ಷದ ಬಗ್ಗೆ ನಾನೇನು ಹೇಳಲಿ' ಎಂದರು.

'ಇಬ್ರಾಹಿಂ ನಿಲುವು ಸರಿಯಿದೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯ ರಾಜಕಾರಣದ ಇಂದಿನ ಪರಿಸ್ಥಿತಿಯಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಅವರ ನಿಲುವು ಸರಿಯಿದೆ. ನಾನು ಅಧ್ಯಕ್ಷನಾಗಿದ್ದರೆ ಎಚ್.ಡಿ. ಕುಮಾರಸ್ವಾಮಿ ಅವರನ್ನು ಪಕ್ಷದಿಂದ 6 ವರ್ಷಕ್ಕೆ ಉಚ್ಚಾಟಿಸುತ್ತಿದ್ದೆ' ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಜೆಡಿಎಸ್ ರಾಷ್ಟ್ರಾಧ್ಯಕ್ಷರಿಗೆ ವಿಧೇಯನಾಗಿರುತ್ತೇನೆ ಎಂದು ಇಬ್ರಾಹಿಂ ಹೇಳಿದ್ದಾರೆ. ಜಾತ್ಯತೀತವಾದವನ್ನು ಕೊಲೆ ಮಾಡಿ ಜಾತಿವಾದಿ, ಕೋಮುವಾದಿಗಳ ಜೊತೆ ಕುಮಾರಸ್ವಾಮಿ ಮದುವೆಯಾದರೆ ಒಪ್ಪಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ರಾಜ್ಯಾಧ್ಯಕ್ಷರಾಗಿ ಸಿ.ಎಂ.ಇಬ್ರಾಹಿಂ ಅವರಿಗೆ ಸಂಪೂರ್ಣ ಅಧಿಕಾರವಿದೆ. ಮತೀಯವಾದಿಗಳ ಜೊತೆ ಕೈ ಜೋಡಿಸಿರುವ ಕುಮಾರಸ್ವಾಮಿ ವಿರುದ್ಧ ಕ್ರಮ ಜರುಗಿಸಲಿದ್ದಾರೆ' ಎಂದರು.

ಸುದ್ದಿ 2 ನಿಮಿಷ

ಹಣ ಕೊಟ್ಟೆ ಕೆಲಸ ಮಾಡಿಸುತ್ತೇನೆ: ಶೃಂಗೇರಿ ಶಾಸಕ ರಾಜೇಗೌಡ

ಚಿಕ್ಕಮಗಳೂರು: 'ನನ್ನ ಕೆಲಸ ಆಗಬೇಕೆಂದರೆ ಇವತ್ತೂ ನಾನು ಹಣ ಕೊಡುತ್ತೇನೆ' ಎಂದು ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ ಹೇಳಿದರು.

ಶೃಂಗೇರಿ ತಾಲ್ಲೂಕಿನ ಕೆರೆ ಮತ್ತು ನೆಮ್ಮಾರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಲಂಚ ಕೇಳುವ ಆರೋಪಗಳಿರುವ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



'ಸಮಯಕ್ಕೆ ಸರಿಯಾಗಿ ಕೆಲಸ ಮಾಡಿದರೆ ನಾನೇ ಹಣ ಕೊಡುತ್ತೇನೆ. ಲಂಚಕ್ಕೂ ಟಿಪ್ಸ್‌ಗೂ ವ್ಯತ್ಯಾಸ ಇದೆ. ಮಲೆನಾಡಿನ ಜನ ಸಹೃದಯರು, ತಮ್ಮ ಕೆಲಸ ಸಮಯಕ್ಕೆ ಸರಿಯಾಗಿ ಮಾಡಿಕೊಟ್ಟರೆ ಟಿಪ್ಸ್ ಕೊಡುತ್ತಾರೆ' ಎಂದರು.

'ಶ್ರೀಮಂತರಿಗೊಂದು, ಬಡವರಿಗೊಂದು ಮಾಡಬಾರದು. ಗೌರವ ಉಳಿಸಿಕೊಳ್ಳಬೇಕು. ಜನರಿಗೆ ಅನ್ಯಾಯ ಆಗದಂತೆ ಕೆಲಸ ಮಾಡಬೇಕು' ಎಂದು ಹೇಳಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಶಾಸಕ ಟಿ.ಡಿ. ರಾಜೇಗೌಡ, 'ಜನರನ್ನು ಸತಾಯಿಸಬೇಡಿ, ಹಿಂಸೆ ಕೊಟ್ಟು ಲಂಚ ವಸೂಲಿ ಮಾಡಬೇಡಿ, ತಕ್ಷಣಕ್ಕೆ ಜನರ ಕೆಲಸ ಮಾಡಿಕೊಟ್ಟರೆ ಅವರೇ ಪ್ರೀತಿಯಿಂದ ಟಿಪ್ಸ್ ಕೊಡುತ್ತಾರೆ ಎಂಬ ಅರ್ಥದಲ್ಲಿ ಈ ಹೇಳಿಕೆ ನೀಡಿದ್ದೇನೆ' ಎಂದು ಶಾಸಕರು ಸ್ಪಷ್ಟಪಡಿಸಿದರು.

ಶಿವಾಜಿ ಮಹಾರಾಜರ ಭಾವಚಿತ್ರ ವಿರೂಪ: ದೂರು ದಾಖಲು

ಯಾದಗಿರಿ: ಹಿಂದೂ ಧರ್ಮದ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ವಿಡಿಯೊ ಮತ್ತು ಭಾವಚಿತ್ರಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿರುವ ಆರೋಪದ ಮೇಲೆ ಇಬ್ಬರ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

ಅರ್ಷನ್ ಶೇಖ್, ಅಬಿದ್ ಶೇಖ್ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಲಾಡಿಸ್ ಗಲ್ಲಿಯ ನಿವಾಸಿ ಶಿವಕುಮಾರ ದೂರು ನೀಡಿದ್ದಾರೆ.

ದೂರಿನಲ್ಲಿ ಏನಿದೆ?: ಅಂಬಾಭವಾನಿ ದೇವಿಯ ಪಾದದ ಬಳಿ ಶಿವಾಜಿ ಮಹಾರಾಜರು ಕುಳಿತು ಪ್ರಸಾದ ಸ್ವೀಕರಿಸುವ ಮೂಲ ಚಿತ್ರವನ್ನು ತೆಗೆದುಹಾಕಿ ಅಂಬಾಭವಾನಿ ಭಾವಚಿತ್ರವಿದ್ದಲ್ಲಿ ಟಿಪ್ಪು ಸುಲ್ತಾನ್ ಭಾವಚಿತ್ರವನ್ನು ಹಾಕಿ, ಕಾಲಡಿಯಲ್ಲಿ ಶಿವಾಜಿ ಕುಳಿತಿರುವಂತೆ ಚಿತ್ರವನ್ನು ಎಡಿಟ್ ಮಾಡಿ ಅವಮಾನಿಸಲಾಗಿದೆ. ವಿಡಿಯೊ ಮತ್ತು ಫೋಟೊಗಳು ಎಡಿಟ್ ಮಾಡಿದವರು, ಫಾರ್ವರ್ಡ್ ಮಾಡಿದವರು ಮತ್ತು ಸ್ಟೇಟಸ್‌ಗೆ ಹಾಕಿಕೊಂಡವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.

ಈ ಕುರಿತು ನಗರ ಪೊಲೀಸ್ ಠಾಣೆ ಪಿಎಸ್‌ಐ ಪರಶುರಾಮ ಪ್ರತಿಕ್ರಿಯಿಸಿ, 'ಆರೋಪಿಗಳ ವಿರುದ್ಧ ಕಲಂ 295 ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ನಡೆಸಲಾಗುತ್ತಿದ್ದು, ಆರೋಪಿಗಳನ್ನು ಶೀಘ್ರವೇ ಬಂಧಿಸಲಾಗುವುದು' ಎಂದು ತಿಳಿಸಿದರು.

ನೇಣು ಬಿಗಿದಂತೆ ಗ್ರಾ.ಪಂ. ಸದಸ್ಯನ ದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪೇಟೆ: ತಾಲ್ಲೂಕಿನ ಬೂಕನಕೆರೆ ಹೋಬಳಿಯ ವ್ಯಾಪ್ತಿಯ ಗಂಜಿಗೆರೆ ಗ್ರಾಮದ ಗ್ರಾಮ ಪಂಚಾಯಿತಿ ಕಚೇರಿಯ ಆವರಣದಲ್ಲಿ ಪಂಚಾಯಿತಿ ಸದಸ್ಯ ದೇವರಾಜೇಗೌಡ (62) ಅವರ ಮೃತದೇಹ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಮಂಗಳವಾರ ಪತ್ತೆಯಾಗಿದೆ.

ಪೂವನಹಳ್ಳಿಯ ಅವರು ಕಚೇರಿ ಗೋಡೆಯ ಕಿಟಕಿಯ ಸರಳಿಗೆ ನೇಣು ಹಾಕಿಕೊಂಡಿರುವುದು ಅನುಮಾನ ಮೂಡಿಸಿದೆ. ಈ ಕುರಿತು ಸಮಗ್ರ ತನಿಖೆ ನಡೆಸುವಂತೆ ಕೋರಿ ಅವರ ಕುಟುಂಬದ ಸದಸ್ಯರು ದೂರು ನೀಡಿದ್ದಾರೆ.

ನನ್ನನ್ನು ಭೇಟಿಯಾದವರ ಮಾಹಿತಿ ಸಿಎಂ, ಡಿಸಿಎಂಗೆ ನೀಡಿದ್ದೇನೆ– ಶೆಟ್ಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸೇರಲು ಮುಂದಾಗಿರುವ 42 ಜನರ ಪಟ್ಟಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಳಿಯಿದೆ. ನನ್ನ ಕಡೆ ಬಂದವರನ್ನು ಪಕ್ಷದ ನಾಯಕರಿಗೆ ಪರಿಚಯ ಮಾಡಿಸುತ್ತೇನೆ ಅಷ್ಟೆ. ಹಾಲಿ ಶಾಸಕರು ನನ್ನನ್ನು ಸಂಪರ್ಕ ಮಾಡಿಲ್ಲ' ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಜಗದೀಶ ಶೆಟ್ಟರ್ ಹೇಳಿದರು.

'ಬಿಜೆಪಿಯ ಹಲವು ನಾಯಕರು ಕಾಂಗ್ರೆಸ್‌ಗೆ ಸೇರ್ಪಡೆ ಆಗಲಿದ್ದಾರೆ' ಎಂಬ ವಿಚಾರದ ಕುರಿತು ಮಂಗಳವಾರ ಪ್ರತಿಕ್ರಿಯಿಸಿದ ಅವರು, 'ನನ್ನನ್ನು ಭೇಟಿ ಮಾಡಿದವರ ಮಾಹಿತಿಯನ್ನು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ನೀಡಿದ್ದೇನೆ' ಎಂದರು.

ರಮೇಶ ಜಾರಕಿಹೊಳಿ ಭೇಟಿ ಆಗಿಲ್ಲ: ಶೆಟ್ಟರ್ ಅವರನ್ನು ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಮಂಗಳವಾರ ಭೇಟಿಯಾಗಿದ್ದಾರೆ ಎಂಬ ವದಂತಿ ಹರಡಿತ್ತು. ಈ ಬಗ್ಗೆ ಸ್ಪಷ್ಟನೆ ನೀಡಿದ ಶೆಟ್ಟರ್, 'ರಮೇಶ ಜಾರಕಿಹೊಳಿ ಭೇಟಿಯಾಗಿದ್ದಾರೆ ಎಂದು ಯಾರು ಹೇಳಿದ್ದು' ಎಂದು ಮರುಪ್ರಶ್ನೆ ಹಾಕಿದರು.

'ಈ ಹಿಂದೆ ಹಲವು ಬಾರಿ ರಮೇಶ ಜಾರಕಿಹೊಳಿ ಬಾರಿ ಭೇಟಿ ಆಗಿದ್ದಾರೆ. ಆದರೆ, ಇವತ್ತು (ಮಂಗಳವಾರ) ಭೇಟಿಯಾಗಿಲ್ಲ. ಅಲ್ಲದೆ, ರಮೇಶ ಜಾರಕಿಹೊಳಿ ಜತೆ ಎಂದೂ ರಾಜಕೀಯ ಚರ್ಚೆ ಮಾಡಿಲ್ಲ' ಎಂದರು.

ಬಿಜೆಪಿಯವರು ಸತ್ಯ ಹರಿಶ್ಚಂದ್ರರಾ?: 'ಚುನಾವಣೆಗೆ ಕಾಂಗ್ರೆಸ್ ಹಣ ಸಂಗ್ರಹಿಸುತ್ತಿದೆ' ಎಂಬ ಬಿಜೆಪಿ ನಾಯಕರ ಆರೋಪಕ್ಕೆ ತಿರುಗೇಟು ನೀಡಿದ ಶೆಟ್ಟರ್, 'ಬಿಜೆಪಿಯಲ್ಲಿ ಇರುವವರು ಸತ್ಯ ಹರಿಶ್ಚಂದ್ರರಾ? ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಹಲವು ಹಗರಣಗಳ ಆರೋಪ ಕೇಳಿಬಂತು. ತಾವು ಸತ್ಯ ಹರಿಶ್ಚಂದ್ರರು ಎಂದು ಬಿಜೆಪಿಯವರು ಹೇಳಲಿ ನೋಡೋಣ' ಎಂದು ಶೆಟ್ಟರ್ ಸವಾಲು ಹಾಕಿದರು.

'ವಿರೋಧ ಪಕ್ಷದ ನಾಯಕನನ್ನೇ ಆಯ್ಕೆ ಮಾಡಲು ಬಿಜೆಪಿಗೆ ಆಗಿಲ್ಲ. ಬಿಜೆಪಿ ಕಾರ್ಯಕರ್ತರೆಲ್ಲ ನೊಂದಿದ್ದಾರೆ. ಮೊದಲು ಬಿಜೆಪಿ ನಾಯಕರು ತಮ್ಮ ಮನೆಯನ್ನು ಸರಿ ಮಾಡಿಕೊಳ್ಳಲಿ' ಎಂದೂ ವಾಗ್ದಾಳಿ ನಡೆಸಿದರು.

ಬಳ್ಳಾರಿ ಭೂಸಂತ್ರಸ್ತರ ಜತೆ ಸಂವಾದದಲ್ಲಿ ನಿವೃತ್ತ ನ್ಯಾ. ವಿ. ಗೋಪಾಲಗೌಡ ಅಭಿಮತ

'ಭೂಮಿ ಕೊಡಿ, ಇಲ್ಲವೇ ಸೂಕ್ತ ಪರಿಹಾರ ನೀಡಿ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ಆರ್ಸೆಲರ್ ಮಿತ್ತಲ್ ಕಂಪನಿ ಸೇರಿದಂತೆ ಉದ್ಯಮಗಳಿಗಾಗಿ ಜಿಲ್ಲೆಯಲ್ಲಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ನ್ಯಾಯಸಮ್ಮತ ಪರಿಹಾರ ನೀಡಬೇಕು. ಇಲ್ಲವೇ ಸಂಬಂಧಪಟ್ಟ ರೈತರಿಗೆ ಭೂಮಿ ವಾಪಸ್ ಕೊಡಬೇಕು' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಒತ್ತಾಯಿಸಿದರು.

ವಿ.ಗೋಪಾಲ ಗೌಡ

ಇಲ್ಲಿನ ಬಾಬು ಜಗಜೀವನ್‌ರಾಂ ಭವನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಸಿಐಟಿಯು ಸೇರಿದಂತೆ ವಿವಿಧ ಸಂಘಟನೆಗಳು ಭೂ ಸಂತ್ರಸ್ತರ ಜತೆ ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಜತೆ ಸಭೆ: ಭರವಸೆ

'ಜಮೀನು ಕಳೆದುಕೊಂಡು ಅತಂತ್ರಗೊಂಡ ಜಿಲ್ಲೆಯ ರೈತರ ನಿಯೋಗವನ್ನು ದಸರಾ ಬಳಿಕ ಬೆಂಗಳೂರಿಗೆ ಕರೆದೊಯ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ. ನಾಗೇಂದ್ರ ತಿಳಿಸಿದರು.

'ಈ ಸಮಸ್ಯೆಯನ್ನು ಮುಖ್ಯಮಂತ್ರಿ ಗಮನಕ್ಕೆ ತಂದಿದ್ದು, ಕೈಗಾರಿಕಾ ಸಚಿವರ ಬಳಿ ಚರ್ಚಿಸಲಾಗಿದೆ. ರೈತರಿಗೆ ನಿಜಕ್ಕೂ ಅನ್ಯಾಯವಾಗಿದೆ' ಎಂದರು.

'13 ವರ್ಷಗಳ ಬಳಿಕ ಆರ್ಸೆಲರ್ ಮಿತ್ತಲ್ ಕಂಪನಿ ಜಮೀನು ಬೇಡ ಎಂದು ಹೇಳಿದೆ. ಹಾಗಿದ್ದರೆ ಇಷ್ಟು ವರ್ಷ ಇಟ್ಟುಕೊಂಡಿದ್ದು ಏಕೆ? ಪಾವಗಡದಲ್ಲಿ ಸೌರ ವಿದ್ಯುತ್ ಘಟಕಕ್ಕೆ ಜಮೀನು ಕೊಟ್ಟ ರೈತರಿಗೆ ವರ್ಷಕ್ಕೆ ₹22 ಸಾವಿರ ನೀಡಲಾಗುತ್ತಿದೆ. ಅದರಂತೆ ಈ ರೈತರಿಗೂ ಪರಿಹಾರ ಕೊಡಬೇಕು' ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಆಗ್ರಹಿಸಿದರು.

'ಆರ್ಸೆಲರ್ ಮಿತ್ತಲ್ ಕಂಪನಿ ತನಗೆ ಮಂಜೂರು ಮಾಡಿದ 2,643 ಎಕರೆ ಜಮೀನು ಬೇಡವೆಂದು ಹೇಳಿದೆ. ಆದರೆ, 13 ವರ್ಷದಿಂದ ಉಳುಮೆ ಮತ್ತು ದುಡಿಮೆ ಇಲ್ಲದೆ ಸಂಕಷ್ಟ ಅನುಭವಿಸಿದ ರೈತರಿಗೆ ನಷ್ಟ ತುಂಬಿಕೊಡುವವರು ಯಾರು? ನಷ್ಟ ತುಂಬಿಕೊಡಲು ಮಿತ್ತಲ್ ಸ್ವತ್ತುಗಳನ್ನು ಜಪ್ತಿ ಮಾಡಬೇಕು' ಎಂದರು.

'ಮಿತ್ತಲ್ ತಮಗೆ ಜಮೀನು ಬೇಡವೆಂದು ಹೇಳಿರುವುದರಿಂದ ಈ ವಿಷಯವನ್ನು ಸಚಿವ ಸಂಪುಟದ ಮುಂದೆ ಇಟ್ಟು ರೈತರಿಗೆ ಜಮೀನು ವಾಪಸ್ ಕೊಡಬೇಕು. ಇಲ್ಲವೆ ಸುಪ್ರೀಂ ಕೋರ್ಟ್ ತೀರ್ಪಿನಂತೆ ಎಕರೆಗೆ ₹30 ಲಕ್ಷ ಪರಿಹಾರ ಕೊಡಬೇಕು. ಬಡ್ಡಿ ಎಲ್ಲ ಸೇರಿ ರೈತರಿಗೆ ಎಕರೆಗೆ ₹1 ಕೋಟಿ ಸಿಗಲಿದೆ. ಇದಾಗದಿದ್ದರೆ ಜಮೀನನ್ನು ಯಾರಿಗಾದರೂ ಕೊಡಿ, 40:60ರ ಆಧಾರದಲ್ಲಿ ಹಂಚಿಕೆ ಮಾಡಿ' ಎಂದು ಅವರು ಹೇಳಿದರು.

'ನಾನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆಗಿದ್ದಾಗ ಪಶ್ಚಿಮ ಬಂಗಾಳದಲ್ಲಿ ಟಾಟಾ ಕಂಪನಿಗೆ ಹಂಚಿಕೆ ಮಾಡಿದ್ದ ಜಮೀನು ವಿವಾದ ನನ್ನ ಪೀಠದ ಮುಂದೆ ಬಂದಿತ್ತು. ಪ್ರಕರಣದ ವಿಚಾರಣೆ ನಡೆಸಿ ಜಮೀನನ್ನು ರೈತರಿಗೆ ಹಿಂದಿರುಗಿಸುವಂತೆ ತೀರ್ಪು ನೀಡಿದ್ದೇನೆ. ಈ ತೀರ್ಪನ್ನು ಆಧಾರವಾಗಿಟ್ಟುಕೊಂಡು ರಾಜ್ಯ ಸರ್ಕಾರ ಬಳ್ಳಾರಿ ಜಮೀನುಗಳನ್ನು ರೈತರಿಗೆ ವಾಪಸ್ ಕೊಡಬೇಕು' ಎಂದು ಗೋಪಾಲಗೌಡರು ಸಲಹೆ ಮಾಡಿದರು.

'ಯಾವುದೇ ಯೋಜನೆಗಳಿಗೆ ರೈತರ ಜಮೀನು ಸ್ವಾಧೀನಪಡಿಸಿಕೊಂಡ ಸಂದರ್ಭದಲ್ಲಿ ಸಂತ್ರಸ್ತರ ಪರಿಹಾರ ಮತ್ತು ಪುನರ್ವಸತಿ ಸರ್ಕಾರದ ಹೊಣೆ. ಈ ಹೊಣೆಯನ್ನು ಸರ್ಕಾರ ಸಮರ್ಪಕವಾಗಿ ನಿಭಾಯಿಸದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವೇನಿರುತ್ತದೆ. ಪ್ರಜಾಪ್ರಭುತ್ವ ಎಂದರೆ ಜನರ ಬದುಕಿನಲ್ಲಿ ಚೆಲ್ಲಾಟ ಆಡುವುದೇ' ಎಂದು ಅವರು ಕೇಳಿದರು.

'ರಾಜ್ಯದಲ್ಲಿ ಜನಪರ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಸರ್ಕಾರ ನಿಮ್ಮ ಸಮಸ್ಯೆಗಳನ್ನು ಕೇಳಿ ಪರಿಹಾರ ಮಾಡಬಹುದು. ಆದರೆ, ಸರ್ಕಾರ ಕಣ್ಣು, ಕಿವಿ ತೆರೆಯಬೇಕಾದರೆ ನೀವು ಒಗ್ಗಟ್ಟಿನ ಹೋರಾಟ ನಡೆಸಬೇಕು. ಈ ಭಾಗದ ಜನಪ್ರತಿನಿಧಿಗಳು ಮತ್ತು ರಾಜಕಾರಣಿಗಳು ಮುಖ್ಯಮಂತ್ರಿ ಜತೆ ರೈತರ ಭೇಟಿಗೆ ಅವಕಾಶ ಕಲ್ಪಿಸಬೇಕು' ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಬಿ. ನಾಗೇಂದ್ರ, ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಇದ್ದರು.

ದುಷ್ಕರ್ಮಿಗಳಿಂದ ನಂದಿ ವಿಗ್ರಹ ಭಗ್ನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಶಹಾಬಾದ್ ತಾಲ್ಲೂಕಿನ, ಚಿತ್ತಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮುತ್ತಗಾ ಗ್ರಾಮದ ಕಂಠಿ ಬಸವೇಶ್ವರ ದೇವಸ್ಥಾನದಲ್ಲಿನ ನಂದಿ ವಿಗ್ರಹವನ್ನು ದುಷ್ಕರ್ಮಿಗಳು ಮಂಗಳವಾರ ಭಗ್ನಗೊಳಿಸಿದ್ದಾರೆ.

'ಗ್ರಾಮದ ಹೊರವಲಯದ ಕಂಠಿ ಬಸವೇಶ್ವರ ದೇವಸ್ಥಾನದ ಗದ್ದುಗೆ ಮೇಲೆ ನಂದಿ ವಿಗ್ರಹ ಪ್ರತಿಷ್ಠಾಪಿಸಲಾಗಿತ್ತು. ವಿಗ್ರಹದ ಮುಖವನ್ನು ಕಿತ್ತ ದುಷ್ಕರ್ಮಿಗಳು, ಗರ್ಭ ಗುಡಿಯ ಮುಂದೆ ಹಾಕಿ ವಿರೂಪಗೊಳಿಸಿದ್ದಾರೆ.

ಭಗ್ನಗೊಂಡ ನಂದಿ ವಿಗ್ರಹ

ಬೆಳಿಗ್ಗೆ ದೇವರ ಪೂಜೆಗೆ ಬಂದಾಗ ಕೃತ್ಯ ನಡೆದಿರುವುದು ಗೊತ್ತಾಗಿದೆ' ಎಂದು ಗ್ರಾಮಸ್ಥರು ಹೇಳಿದ್ದಾರೆ.

ಕೆಲ ದಿನಗಳ ಹಿಂದಷ್ಟೆ ಹಲಕರ್ಟಿ ಗ್ರಾಮದಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ಅಪಮಾನ ಮಾಡಲಾಗಿತ್ತು. ಈಗ ನಂದಿ ವಿಗ್ರಹವನ್ನು ಭಗ್ನಗೊಳಿಸಿದ್ದಾರೆ. ಈ ದುಷ್ಕೃತ್ಯ ಎಸಗಿರುವ ಆರೋಪಿಗಳನ್ನು ಕೂಡಲೇ ಪತ್ತೆಹಚ್ಚಿ ಬಂಧಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸ್ಥಳದಲ್ಲಿ ಕೆಲ ಹೊತ್ತು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಶಹಾಬಾದ್ ಠಾಣೆಯ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿದರು.

ರಾಜ್ಯದ ಗ್ರಿಡ್‌ಗೆ ವಿದ್ಯುತ್ ಪೂರೈಕೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ವಿದ್ಯುತ್ ಕೊರತೆ ಎದುರಾಗಿರುವುದರಿಂದ ರಾಜ್ಯದಲ್ಲಿರುವ ಎಲ್ಲ ವಿದ್ಯುತ್ ಉತ್ಪಾದನಾ ಘಟಕಗಳು ಗರಿಷ್ಠ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸಿ, ರಾಜ್ಯದ ಗ್ರಿಡ್‌ಗೆ (ಜಾಲ) ಪೂರೈಸಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ವಿದ್ಯುಚ್ಛಕ್ತಿ ಕಾಯ್ದೆ – 2003ರ ಸೆಕ್ಷನ್ 11ರ ಅಡಿ ಇಂಧನ ಇಲಾಖೆ ಈ ಆದೇಶವನ್ನು ಹೊರಡಿಸಿದೆ.

ರಾಜ್ಯದ ಗ್ರಿಡ್‌ಗಳಿಗೆ ಪೂರೈಕೆಯಾಗುವ ವಿದ್ಯುತ್‌ಗೆ ಎಸ್ಕಾಂಗಳು (ವಿದ್ಯುತ್ ಸರಬರಾಜು ಕಂಪನಿಗಳು), ಕೆಇಆರ್‌ಸಿ ಷರತ್ತಿನಂತೆ ಯೂನಿಟ್‌ಗೆ ₹4.86ರಂತೆ ಪಾವತಿಸಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಎಸ್ಕಾಂಗಳ ಜೊತೆ ಒಪ್ಪಂದ ಮಾಡಿಕೊಂಡ ಸಾಮರ್ಥ್ಯಕ್ಕಿಂತ ಹೆಚ್ಚು ಉತ್ಪಾದಿಸಿದ ವಿದ್ಯುತ್ ಅನ್ನು ರಾಜ್ಯದ ಜಾಲಕ್ಕೆ ನೀಡಬೇಕೆಂದು ಉಡುಪಿ ಪವರ್ ಕಾರ್ಪೊರೇಷನ್ (ಯುಪಿಸಿಎಲ್) ಘಟಕಕ್ಕೂ ಸೂಚನೆ ನೀಡಲಾಗಿದೆ.

ಅಲ್ಲದೆ, ಪೂರೈಸಿದ ವಿದ್ಯುತ್‌ನ ಬಿಲ್ ಮೊತ್ತವನ್ನು 5 ದಿನಗಳ ಒಳಗೆ ಪಾವತಿಸಿದರೆ ಬಿಲ್ ಮೊತ್ತದಲ್ಲಿ ಶೇ 2ರಷ್ಟು, 30 ದಿನಗಳ ಒಳಗೆ ಪಾವತಿಸಿದರೆ ಶೇ 1ರಷ್ಟು ವಿನಾಯಿತಿ ನೀಡಬಹುದು. 30 ದಿನಗಳ ಒಳಗೆ ಬಿಲ್ ಮೊತ್ತ ಪಾವತಿಸಬೇಕು. ರಾಜ್ಯಕ್ಕೆ ವಿದ್ಯುತ್ ಪೂರೈಸುವ ಪರವಾನಗಿ ಹೊಂದಿರುವ ಅಂತರರಾಜ್ಯ ವಿದ್ಯುತ್ ಉತ್ಪಾದನಾ ಘಟಕಗಳಿಗೆ ಈ ಆದೇಶ ಅನ್ವಯಿಸುವುದಿಲ್ಲ ಎಂದೂ ವಿವರಿಸಲಾಗಿದೆ.

ಹಲವೆಡೆ ಎರಡು ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡು, ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳ ಕೆಲವು ಪ್ರದೇಶದಲ್ಲಿ ಬುಧವಾರ ಹಾಗೂ ಗುರುವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡು ಜಿಲ್ಲೆಗಳ ಅಲ್ಲಲ್ಲಿ ಚದುರಿದಂತೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ, ಕಳೆದ 24 ಗಂಟೆಗಳಲ್ಲಿ ಮೈಸೂರು ಜಿಲ್ಲೆಯ ಸಾಲಿಗ್ರಾಮದಲ್ಲಿ 9 ಸೆಂ.ಮೀ, ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ 8, ಕೊಡಗಿನ ವಿರಾಜಪೇಟೆಯಲ್ಲಿ 6, ಮಂಗಳೂರು ವಿಮಾನ ನಿಲ್ದಾಣ ವ್ಯಾಪ್ತಿಯಲ್ಲಿ 5, ಚಿಕ್ಕಮಗಳೂರಿನ ಜಯಪುರದಲ್ಲಿ 4, ಪಣಂಬೂರು, ಉಡುಪಿ, ತಿ.ನರಸೀಪುರ, ಹುಣಸೂರಿನಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ಮಹಿಷ ದಸರಾದಲ್ಲಿ ಭಗವಾನ್: ಒಕ್ಕಲಿಗರ ಸಂಘ ವಿರೋಧ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದಲ್ಲಿ ಅ.20ರಂದು ಮಹಿಷ ದಸರಾ ಆಚರಣೆಗೆ ಸಿದ್ಧತೆ ನಡೆದಿದೆ. ವಿಚಾರವಾದಿ ಕೆ.ಎಸ್. ಭಗವಾನ್ ಭಾಗವಹಿಸಲಿದ್ದು, ಇದಕ್ಕೆ ಶ್ರೀರಾಮ ಸೇನೆ ಮತ್ತು ಒಕ್ಕಲಿಗರ ಸಂಘದಿಂದ ವಿರೋಧ ವ್ಯಕ್ತವಾಗಿದೆ.

'ಮಹಿಷ ದಸರಾ ಆಚರಣಾ ಸಮಿತಿ, ದಲಿತ, ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಮಹಿಷ ದಸರಾ ಆಚರಣೆ ಮಾಡಲಾಗುವುದು. ಅಂದು ಹನುಮಂತಪ್ಪ ವೃತ್ತದಿಂದ ಎಂ.ಜಿ. ರಸ್ತೆ ಮೂಲಕ ಆಜಾದ್ ಪಾರ್ಕ್ ತನಕ ಮಹಿಷಾಸುರ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಯಲಿದೆ. ಕೆಎಸ್. ಭಗವಾನ್ ಮತ್ತು ಮಹೇಶ್ ಚಂದ್ರಗುರು ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಅನುಮತಿ ಕೊಡಬೇಕು' ಎಂದು ಆಚರಣಾ ಸಮಿತಿಯವರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಈ ನಡುವೆ ಭಗವಾನ್ ಭಾಗವಹಿಸುತ್ತಿರುವುದರಿಂದ ಕಾರ್ಯಕ್ರಮಕ್ಕೆ ಅನುಮತಿ ನೀಡಬಾರದು ಎಂದು ಶ್ರೀರಾಮ ಸೇನೆ ಮತ್ತು ಒಕ್ಕಲಿಗರ ಸಂಘ ಜಿಲ್ಲಾಧಿಕಾರಿಗೆ ಪ್ರತ್ಯೇಕ ಮನವಿ ಸಲ್ಲಿಸಿವೆ.

ಭಗವಾನ್ ಅವರನ್ನು ಸರ್ಕಾರ ಕೂಡಲೇ ಬಂಧಿಸಬೇಕು. ಅ.20ರಂದು ಚಿಕ್ಕಮಗಳೂರಿನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿಗೆ ನೀಡಿರುವ ಮನವಿ ಪತ್ರದಲ್ಲಿ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ರಾಜಶೇಖರ್ ತಿಳಿಸಿದ್ದಾರೆ.

'ಹಿಂದೂ ಧರ್ಮ ಮತ್ತು ಒಕ್ಕಲಿಗ ಸಮುದಾಯದ ಬಗ್ಗೆ ಭಗವಾನ್ ಅವರು ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಹಿಂದೂ ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟು ಮಾಡಿರುವ ಅವರನ್ನು ಗಡಿಪಾರು ಮಾಡಬೇಕು. ಚಿಕ್ಕಮಗಳೂರು ಕಾರ್ಯಕ್ರಮಕ್ಕೆ ಬರದಂತೆ ನಿರ್ಬಂಧ ಹೇರಬೇಕು' ಎಂದು ಶ್ರೀರಾಮ ಸೇನೆ ವಿಭಾಗ ಅಧ್ಯಕ್ಷ ರಂಜಿತ್ ಶೆಟ್ಟಿ ಅವರು ಒತ್ತಾಯಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಮಹಿಷ ದಸರಾ ಆಚರಣಾ ಸಮಿತಿಯ ದಂಟರಮಕ್ಕಿ ಶ್ರೀನಿವಾಸ್, ಮರ್ಲೆ ಅಣ್ಣಯ್ಯ, ಹುಣಸೇಮಕ್ಕಿ ಲಕ್ಷ್ಮಣ ಮತ್ತು ಇತರರು, 'ಕಾರ್ಯಕ್ರಮಕ್ಕೆ ಅಡ್ಡಿಪಡಿಸಲು ಕೆಲವು ಸಂಘಟನೆಗಳು ಸಂಚು ರೂಪಿಸಿವೆ. ಅಂಥವರನ್ನು ಬಂಧಿಸಿ ಕಾರ್ಯಕ್ರಮಕ್ಕೆ ಸೂಕ್ತ ರಕ್ಷಣೆಯನ್ನು ಜಿಲ್ಲಾಡಳಿತ ಒದಗಿಸಬೇಕು' ಎಂದು ಒತ್ತಾಯಿಸಿದರು.

'ಮಹಿಷ ದಸರಾ ಆಚರಣೆಗೆ ಶ್ರೀರಾಮ ಸೇನೆ ವಿರೋಧಿಸಿದರೆ ಮುಂದಿನ ದಿನಗಳಲ್ಲಿ ಇದೇ ರೀತಿಯ ಪ್ರತಿರೋಧವನ್ನು ಅವರು ಎದುರಿಸಬೇಕಾಗುತ್ತದೆ. ದತ್ತ ಜಯಂತಿ ಸೇರಿ ಮುಂದಿನ ದಿನಗಳಲ್ಲಿ ಶ್ರೀರಾಮ ಸೇನೆಯ ಯಾವುದೇ ಕಾರ್ಯಕ್ರಮಗಳಿಗೆ ಪ್ರಮೋದ್ ಮುತಾಲಿಕ್ ಬಂದರೆ ಪ್ರತಿಭಟನೆ ಎದುರಿಸಬೇಕಾಗುತ್ತದೆ. ಶಾಂತಿ ಕದಡುವ ಉದ್ದೇಶ ನಮಗಿಲ್ಲ. ಸಂಘರ್ಷಕ್ಕೆ ಬಂದರೆ, ನಾವು ಸುಮ್ಮನೆ ಕೂರುವುದಿಲ್ಲ. ಜಿಲ್ಲಾಡಳಿತ ಸೂಕ್ಷ್ಮತೆ ಅರಿತು ಸೂಕ್ತ ರಕ್ಷಣೆ ನೀಡಬೇಕು' ಎಂದು ಆಗ್ರಹಿಸಿದರು.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್: 25536625, 25536789

IFT NO: ಕಹಾಮ/ಅಭಿ/MECH -CONSULTANT/1757/2023–24 ದಿನಾಂಕ: 16–10–2023

ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)

ಕರ್ನಾಟಕ ಸಹಕಾರ ಹಾಲು ಮಂಡಳವು ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ತಾಂತ್ರಿಕ ಸಲಹೆಗಾರರ ಸೇವೆಯನ್ನು ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟಿ ಪದ್ಧತಿಯ ಟೆಂಡರನ್ನು (Technical and financial) ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಬೆಂಗಳೂರಿನ ರಾಜಾನುಕುಂಟೆಯ ಸರಹದ್ದಿನಲ್ಲಿ ನೂತನವಾಗಿ ಸ್ಥಾಪಿಸಲಾಗುತ್ತಿರುವ ಪ್ರತಿ ತಿಂಗಳಿಗೆ 1000 ನಿಂದ 1200 MT ರವರಗೆ ವಿಸ್ತರಿಸಬಹುದಾದ ಪೌಚ್ ಫಿಲಂ ಘಟಕ ಯೋಜನೆಯ ಮೆಕ್ಯಾನಿಕಲ್ ಕೆಲಸಗಳಿಗಾಗಿ ಅಗತ್ಯತೆಯಂತೆ ತಾಂತ್ರಿಕ ಸಲಹೆಗಾರರ ಸೇವೆಯನ್ನು ಒದಗಿಸುವುದು	1 ಜಾಬ್	3,75,000/–	18 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 18–10–2023 ರಿಂದ 27–10–2023 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27–10–2023 ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 30–10–2023 ರಂದು ಸಾಯಂಕಾಲ 4.30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

ದಸರಾ ಕವಿಗೋಷ್ಠಿಯಲ್ಲಿ ಎಚ್.ವಿಶ್ವನಾಥ್ ವಾಗ್ದಾಳಿ

'ಕವಿಗಳ ಸಲಹೆ ಪಡೆಯದೇ ಆಯೋಜನೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಧಾನ ಪರಿಷತ್ತಿನಲ್ಲಿ ಸಾಹಿತ್ಯ ವಲಯವನ್ನು ಪ್ರತಿನಿಧಿಸುತ್ತಿರುವ ನನ್ನ ಅಭಿಪ್ರಾಯವನ್ನೇ ದಸರಾ ಕವಿಗೋಷ್ಠಿ ಕುರಿತು ಕೇಳಿಲ್ಲ. ಅಧಿಕಾರಿಗಳು ತಮ್ಮಿಷ್ಟದಂತೆ ಆಯೋಜಿಸಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಆಕ್ಷೇಪಿಸಿದರು.

ನಗರದ ಕಲಾಮಂದಿರದಲ್ಲಿ ಮಂಗಳವಾರ ನಡೆದ 'ದಸರಾ ಕವಿಗೋಷ್ಠಿ'ಯ ಉದ್ಘಾಟನೆಯಲ್ಲಿ ಮಾತನಾಡಿದ ಅವರು, 'ಕವಿಗಳು, ಸಾಹಿತ್ಯಾಸಕ್ತ ರಾಜಕಾರಣಿಗಳೊಂದಿಗೆ ಚರ್ಚಿಸಿ ಸಲಹೆ ಪಡೆಯಬೇಕಿತ್ತು' ಎಂದರು.

'ದೀಪಾಲಂಕಾರ ನೋಡಿದರೆ ದಸರಾ ಚೆನ್ನಾಗಿದೆ ಎಂದನ್ನಿಸುತ್ತದೆ. ಆದರೆ, ಉತ್ಸವ ಕಳೆಗುಂದಿದೆ. ಎಲ್ಲಿಯೂ ಜನಪ್ರತಿನಿಧಿಗಳ ಉಪಸ್ಥಿತಿ ಇಲ್ಲ. ಅಧಿಕಾರಿಗಳ ದರ್ಬಾರ್ ನಡೆಯುತ್ತಿದೆ' ಎಂದು ಹೇಳಿದರು.

ಮೈಸೂರಿನಲ್ಲಿ ದಸರಾ ಕವಿಗೋಷ್ಠಿಯನ್ನು ಮಂಗಳವಾರ ಕವಿ ಜಯಂತ ಕಾಯ್ಕಿಣಿ ಉದ್ಘಾಟಿಸಿದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷೆ ಪ್ರೊ.ವಿಜಯಕುಮಾರಿ ಎಸ್. ಕರಿಕಲ್, ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್, ಉಪ ಮೇಯರ್ ರೂಪಾ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಲೇಖಕ ಕುಂ.ವೀರಭದ್ರಪ್ಪ, ಕವಯಿತ್ರಿ ಮಾಲತಿ ಪಟ್ಟಣಶೆಟ್ಟಿ, ಮೇಯರ್ ಶಿವಕುಮಾರ್, ಉಪಸಮಿತಿ ಉಪವಿಶೇಷಾಧಿಕಾರಿ ದಾಸೇಗೌಡ ಇದ್ದರು –ಪ್ರಜಾವಾಣಿ ಚಿತ್ರ

ಓದುಗರಿಗಿಂತ ಕವಿಗಳೇ ಹೆಚ್ಚು: 'ಕನ್ನಡದಲ್ಲಿ ಓದುಗರಿಗಿಂತ ಹೆಚ್ಚಾಗಿ ಕವಿಗಳಿದ್ದಾರೆ. ಅವರಿಗಿಂತ ಹೆಚ್ಚಾಗಿ ಪ್ರಶಸ್ತಿಗಳಿವೆ. ಪ್ರಶಸ್ತಿಗಳಿಗಿಂತ ಬದುಕಿನಲ್ಲಿ ಹೊಸತನ್ನು ಹುಡುಕುವುದು ಮುಖ್ಯ ಎಂಬುದನ್ನು ಕವಿ ಅರಿಯಬೇಕು' ಎಂದು ಗೋಷ್ಠಿಯನ್ನು ಉದ್ಘಾಟಿಸಿದ ಜಯಂತ ಕಾಯ್ಕಿಣಿ ಹೇಳಿದರು.

'ದೇಶವೆಂದರೆ ಒಂದೇ ಕೋಡು ಗಂಬದ ಮೇಲೆ ನಿಂತ ಸರ್ಕಸ್ಸಿನ ಡೇರೆಯಲ್ಲ, ಸಾವಿರ ಕಂಬಗಳ ಚಪ್ಪರದಲ್ಲಿ ನಿಂತಿದೆ. ಕವಿಯು ಕನ್ನಡಿ ನೋಡುವಾಗ ಹಿಂದೆ ಇರುವ ಕುಟುಂಬ, ಸಮಾಜ ಸೇರಿದಂತೆ ಮಾನವೀಯ ಜಗತ್ತನ್ನು ಕಾಣಬೇಕು. ಆಗ ಕನ್ನಡಿ ಕವಿತೆಯಾಗುತ್ತದೆ' ಎಂದರು.

'ಶುಭಾಶಯ ಕೋರಲಾರೆ'

'ವಿಜಯದಶಮಿ, ನರಕ ಚತುರ್ದಶಿ, ದೀಪಾವಳಿ ಎಲ್ಲವೂ ಸೂತಕದ ದಿನಗಳು. ದಕ್ಷಿಣ ಭಾರತದ ಪೂರ್ವಿಕರಾದ ನರಕಾಸುರ, ಬಲಿ ಚಕ್ರವರ್ತಿ, ಹಿರಣ್ಯಕಶಿಪು, ರಾವಣ, ಮಹಿಷಾಸುರ ಅವರನ್ನು ಯಜ್ಞ–ಯಾಗಗಳನ್ನು ವಿರೋಧಿಸಿದ ವಿಚಾರವಾಗಿ ವ್ಯವಸ್ಥಿತವಾಗಿ ಕೊಲೆ ಮಾಡಿದ ದಿನಗಳು. ಹೀಗಾಗಿ ಶುಭಾಶಯ ಕೋರಲಾರೆ' ಎಂದು ಕುಂ.ವೀರಭದ್ರಪ್ಪ ಹೇಳಿದರು.

ರಾಷ್ಟ್ರ ಪ್ರಶಸ್ತಿ ಸಂಭ್ರಮ

ದೆಹಲಿಯಲ್ಲಿ ಮಂಗಳವಾರ ನಡೆದ 69ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ 777 ಚಾರ್ಲಿ ಸಿನಿಮಾದ ನಟ, ನಿರ್ಮಾಪಕ ರಕ್ಷಿತ್ ಶೆಟ್ಟಿ ಮತ್ತು ನಿರ್ದೇಶಕ ಕಿರಣ್ ರಾಜ್ ಪ್ರಶಸ್ತಿ ಸ್ವೀಕರಿಸಿದರು

ಮಂಚದಡಿ ಭಾರಿ ಪ್ರಮಾಣದ ನಗದು ಸಂಗ್ರಹ ಪ್ರಕರಣ • ಮತ್ತೆ ಹಾಜರಾಗಲು ಸೂಚನೆ

ಐ.ಟಿ ಅಧಿಕಾರಿಗಳಿಂದ ಪ್ರದೀಪ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಮಂಚದಡಿ ಭಾರಿ ಪ್ರಮಾಣದ ನಗದು ಸಂಗ್ರಹಿಸಿಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ಅವರ ಮಗ ಪ್ರದೀಪ್ ಅವರನ್ನು ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ಮಂಗಳವಾರ ಇಡೀ ದಿನ ವಿಚಾರಣೆ ನಡೆಸಿದ್ದಾರೆ.

ಗುರುವಾರದಿಂದ ಭಾನುವಾರದವರೆಗೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮತ್ತು ದೆಹಲಿಯ 55 ಸ್ಥಳಗಳಲ್ಲಿ ಐ.ಟಿ ಅಧಿಕಾರಿಗಳು ಶೋಧ ನಡೆಸಿದ್ದರು. ನಗರದ ಸುಲ್ತಾನ್‌ಪಾಳ್ಯದ ಬಳಿಯ ಆತ್ಮಾನಂದ ಕಾಲೋನಿಯಲ್ಲಿನ ಪ್ರದೀಪ್ ಮನೆಯಲ್ಲಿ ₹20 ಕೋಟಿಗೂ ಹೆಚ್ಚು ನಗದನ್ನು ಗುರುವಾರ ವಶಪಡಿಸಿಕೊಳ್ಳಲಾಗಿತ್ತು.

ಪ್ರದೀಪ್ ಅವರಿಗೆ ನೋಟಿಸ್ ಜಾರಿ ಮಾಡಿದ್ದ ತನಿಖಾಧಿಕಾರಿಗಳು, ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದರು. ಮಂಗಳವಾರ ಬೆಳಿಗ್ಗೆ ಆದಾಯ ತೆರಿಗೆ ಇಲಾಖೆ ಕಚೇರಿಗೆ ಬಂದ ಪ್ರದೀಪ್, ರಾತ್ರಿಯವರೆಗೂ ವಿಚಾರಣೆ ಎದುರಿಸಿದರು.

'ಮತ್ತೆ ಹಾಜರಾಗಲು ಸೂಚನೆ': ಮೊದಲ ದಿನದ ವಿಚಾರಣೆ ಮುಗಿಸಿ ಹೊರಬಂದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಪ್ರದೀಪ್, 'ಮನೆಯಲ್ಲಿ ₹20.02 ಕೋಟಿ ನಗದು ಪತ್ತೆಯಾಗಿತ್ತು. ಅದು ರಿಯಲ್ ಎಸ್ಟೇಟ್ ವಹಿವಾಟಿನ ಹಣ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಸೂಕ್ತ ಮಾಹಿತಿ ನೀಡಿದ್ದೇನೆ' ಎಂದರು.

'ಅಕ್ಟೋಬರ್ 26ರಂದು ಮತ್ತೆ ವಿಚಾರಣೆಗೆ ಬರುವಂತೆ ನನಗೆ ಸೂಚಿಸಿದ್ದಾರೆ. ಸ್ನೇಹಿತ ಪ್ರಮೋದ್ ಆನಂದ್ ಅವರಿಗೂ ನೋಟಿಸ್ ನೀಡಿದ್ದು, ಇದೇ ಶನಿವಾರ (ಅ.21) ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದ್ದಾರೆ' ಎಂದು ತಿಳಿಸಿದರು.

ದಾಖಲೆಗಳ ಪರಿಶೀಲನೆ: ನಾಲ್ಕು ದಿನಗಳ ಕಾರ್ಯಾಚರಣೆಯಲ್ಲಿ ಒಟ್ಟು ₹102 ಕೋಟಿ ಮೌಲ್ಯದ ನಗದು, ಚಿನ್ನ ಮತ್ತು ವಜ್ರದ ಆಭರಣಗಳನ್ನು ಐ.ಟಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಗುತ್ತಿಗೆದಾರರು, ಉದ್ಯಮಿಗಳು, ಮಧ್ಯವರ್ತಿಗಳ ಮನೆಗಳಿಂದ ಭಾರಿ ಪ್ರಮಾಣದ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ. ದಾಖಲೆಗಳ ಪರಿಶೀಲನೆ ಮಂಗಳವಾರದಿಂದ ಆರಂಭವಾಗಿದ್ದು, ಹಲವು ತಂಡಗಳನ್ನು ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. ನಗದು, ಚಿನ್ನಾಭರಣ ಮತ್ತು ದಾಖಲೆಗಳು ಪತ್ತೆಯಾದ ಸ್ಥಳಗಳ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿನ ದೃಶ್ಯಾವಳಿಗಳನ್ನು ಆದಾಯ ತೆರಿಗೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಸೋಲಿನ ಭಯದಿಂದ ದಾಳಿ: ಸಿದ್ದರಾಮಯ್ಯ

ಬೆಂಗಳೂರು: ಪಂಚರಾಜ್ಯಗಳ ಚುನಾವಣೆಯಲ್ಲಿ ಸೋಲಿನ ಭಯದಿಂದ ಮೋದಿ ಸರ್ಕಾರ ಉದ್ಯಮಿಗಳು ಮತ್ತು ಗುತ್ತಿಗೆದಾರರ ಮೇಲೆ ದಾಳಿ ಮಾಡಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿ ಕಾರಿದ್ದಾರೆ.

ಈ ಕುರಿತು 'ಎಕ್ಸ್' ಮೂಲಕ ಹರಿಹಾಯ್ದಿರುವ ಅವರು, ಕಾರ್ಪೊರೇಟ್ ಭ್ರಷ್ಟಾಚಾರದ ಮೂಲಕ ಲಕ್ಷಾಂತರ ಕೋಟಿ ರೂಪಾಯಿ ಲೂಟಿ ಹೊಡೆದು ದೇಶವನ್ನೇ ಅದಾನಿ ಕೈಗೆ ಒತ್ತೆ ಇಟ್ಟಿರುವ ಬಿಜೆಪಿಗರು ಭ್ರಷ್ಟಾಚಾರದ ಬಗ್ಗೆ ಮಾತನಾಡುವುದೇ ಕುಚೋದ್ಯ ಎಂದಿದ್ದಾರೆ. ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ನಾಯಕರ ಮೇಲೆ ಎಷ್ಟು ಬಾರಿ ಐ.ಟಿ, ಇ.ಡಿ ದಾಳಿ ಮಾಡಲಾಗಿದೆ ಎಂಬ ಪಟ್ಟಿಯನ್ನೂ ಅವರು ಬಿಡುಗಡೆ ಮಾಡಿದ್ದಾರೆ.

ಪಂಚ ರಾಜ್ಯ ಚುನಾವಣೆಗಳು ಮಾತ್ರವಲ್ಲ, ಮುಂದಿನ ಲೋಕಸಭಾ ಚುನಾವಣೆಯಲ್ಲೂ ಬಿಜೆಪಿ ಸೋಲುವುದು ಖಚಿತ. ಹೀಗಾಗಿ ಬಿಜೆಪಿಗೆ ಹಣ ಬರುತ್ತಿಲ್ಲ. ಕರ್ನಾಟಕದಲ್ಲಿ ಶೇ 40 ಕಮಿಷನ್‌ನ ಬಹುದೊಡ್ಡ ಮೂಲ ನಿಂತು ಹೋಗಿದೆ. ಇದಕ್ಕಾಗಿ ಉದ್ಯಮಿಗಳು ಮತ್ತು ಗುತ್ತಿಗೆದಾರರನ್ನು ಬೆದರಿಸಿ ಹಣ ವಸೂಲಿ ಮಾಡಲು ದಾಳಿ ಮಾಡಿಸುತ್ತಿದ್ದಾರೆ ಎಂದು ಆರೋಪ ಮಾಡಿದ್ದಾರೆ.

ಗುತ್ತಿಗೆದಾರರೊಬ್ಬರನ್ನು ಹಣಕ್ಕಾಗಿ ಪೀಡಿಸಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡಿದ್ದ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಮತ್ತು ಭ್ರಷ್ಟಾಚಾರದ ಆರೋಪದ ಮೇಲೆ ಜೈಲಿಗೆ ಹೋಗಿ ಬಂದ ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಮಗ ವಿಜಯೇಂದ್ರ ಕೂಡಾ ಸತ್ಯಹರಿಶ್ಚಂದ್ರರಂತೆ ಮಾತನಾಡುತ್ತಿರುವುದು ತಮಾಷೆಯಾಗಿ ಕಾಣುತ್ತಿದೆ ಎಂದು ಸಿದ್ದರಾಮಯ್ಯ ಅವರು ವ್ಯಂಗ್ಯವಾಡಿದ್ದಾರೆ.

ಈಶ್ವರಪ್ಪ, ಮುನಿರತ್ನ, ಡಾ.ಸುಧಾಕರ್ ಮತ್ತು ಬಿ.ಸಿ.ಪಾಟೀಲ ಅವರ ಮೇಲೆ ಶೇ 40 ಕಮಿಷನ್ ಪಡೆದ ಆರೋಪವಿದೆ. ಬಿಟ್ ಕಾಯಿನ್ ಪ್ರಕರಣದಲ್ಲಿ ಬಸವರಾಜ ಬೊಮ್ಮಾಯಿ ಮತ್ತು ನಳಿನ್‌ಕುಮಾರ್ ಕಟೀಲ್ ಹೆಸರು ಕೇಳಿ ಬಂದಿದೆ. ಪಿಎಸ್ಐ ನೇಮಕಾತಿ ಹಗರಣದಲ್ಲಿ ಡಾ. ಅಶ್ವತ್ಥನಾರಾಯಣ, ಬಿ.ವೈ.ವಿಜಯೇಂದ್ರ, ಆರಗ ಜ್ಞಾನೇಂದ್ರ ಶಾಮೀಲಾಗಿರುವ ಆರೋಪ ಎದುರಿಸುತ್ತಿದ್ದಾರೆ. ಚುನಾವಣಾ ಟಿಕೆಟ್ ವಂಚನೆ ಪ್ರಕರಣದಲ್ಲಿ ಬಿ.ಎಲ್.ಸಂತೋಷ್, ಸುನಿಲ್ ಕುಮಾರ್, ಸಿ.ಟಿ. ರವಿ ಅವರ ಹೆಸರುಗಳನ್ನು ಆರೋಪಿಗಳೇ ಉಲ್ಲೇಖಿಸಿದ್ದಾರೆ. ಇವರೆಲ್ಲರೂ ಸೇರಿ ನಮ್ಮ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತಿರುವುದು ಹಾಸ್ಯಾಸ್ಪದ ಎಂದು ಸಿದ್ದರಾಮಯ್ಯ ಅವರು ಹೇಳಿದ್ದಾರೆ.

'ಮೈತ್ರಿಗೆ ಒಪ್ಪಿದವರಿಂದ ಈಗ ಹಿಂದೇಟು'

ಒಂದನೇ ಪುಟದಿಂದ...

'ವಿಧಾನಸಭೆ ಚುನಾವಣೆ ಮುಗಿದ ಬಳಿಕ ಇಬ್ರಾಹಿಂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆದರೆ, ಹುದ್ದೆಯಲ್ಲಿ ಮುಂದುವರಿಯುವಂತೆ ದೇವೇಗೌಡರು ಹೇಳಿದ್ದರು. ಅಲ್ಪಸಂಖ್ಯಾತರಿಗೆ ಸ್ಥಾನಮಾನ ನೀಡಬೇಕು ಎಂಬ ಉದ್ದೇಶದಿಂದ ಇಬ್ರಾಹಿಂ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿದವರೇ ದೇವೇಗೌಡರು' ಎಂದರು.

ಬಂಡಾಯವಿಲ್ಲ: 'ರಾಜ್ಯದಲ್ಲಿ ಜೆಡಿಎಸ್ ಇಬ್ಭಾಗ ಆಗುವ ಪ್ರಶ್ನೆ ಉದ್ಭವಿಸುವುದಿಲ್ಲ. ಇಬ್ರಾಹಿಂ ಅವರ ಜತೆ ಮಾತನಾಡುವುದಾಗಿ ದೇವೇಗೌಡರು ಹೇಳಿದ್ದಾರೆ. ಅವರು ಹೊಸ ಕೋರ್ ಕಮಿಟಿ ರಚಿಸುವ ಮುನ್ನವೇ ನಾವು ಕೂಡ ಅವರನ್ನು ಭೇಟಿಮಾಡಿ ಚರ್ಚಿಸುತ್ತೇವೆ. ಪಕ್ಷದ ಅಧ್ಯಕ್ಷರಾಗಿ ಮುಂದುವರಿಯುವಂತೆ ಮನವಿ ಮಾಡುತ್ತೇವೆ' ಎಂದು ಜಿ.ಟಿ. ದೇವೇಗೌಡ ಹೇಳಿದರು. 'ಪಕ್ಷವನ್ನು ಉಳಿಸುವ ಮಹತ್ತರವಾದ ಜವಾಬ್ದಾರಿ ಇಬ್ರಾಹಿಂ ಅವರ ಮೇಲಿದೆ. ಕಾಂಗ್ರೆಸ್ ಜತೆ ಸೇರಿ ಜೆಡಿಎಸ್ ಮುಗಿಸುವ ಕೆಲಸವನ್ನು ಅವರು ಮಾಡಬಾರದು. ಆ ರೀತಿಯ ತಪ್ಪು ಮಾಡುವುದಿಲ್ಲ ಎಂಬ ಭರವಸೆಯೂ ಇದೆ' ಎಂದು ಹೇಳಿದರು.

ಇಬ್ರಾಹಿಂ ವಿರುದ್ಧ ಕ್ರಮಕ್ಕೆ ಆಗ್ರಹ

ಪಕ್ಷದ ನಾಯಕತ್ವದ ವಿರುದ್ಧ ಬಂಡಾಯ ಎದ್ದು, ತಮ್ಮದೇ ನೈಜ ಜೆಡಿಎಸ್ ಎಂದು ಘೋಷಿಸಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ವಿರುದ್ಧ ಕ್ರಮ ಜರುಗಿಸಬೇಕು ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಟಿ.ಎ. ಶರವಣ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರನ್ನು ಆಗ್ರಹಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಪಕ್ಷದ ಎಲ್ಲ ಶಾಸಕರ ಜತೆ ಚರ್ಚಿಸಿದ ಬಳಿಕವೇ ಮೈತ್ರಿಯ ನಿರ್ಧಾರ ಕೈಗೊಳ್ಳಲಾಗಿತ್ತು. ನಾನೂ ಸಭೆಯಲ್ಲಿದ್ದೆ, ಇಬ್ರಾಹಿಂ ಕೂಡ ಇದ್ದರು. ತೀರ್ಮಾನಕ್ಕೆ ಒಪ್ಪಿದ್ದ ಅವರು ಈಗ ಮಾತಿನಿಂದ ಹಿಂದೆ ಸರಿಯುತ್ತಿದ್ದಾರೆ. ಇಂತಹ ಹೇಳಿಕೆಗಳಿಂದ ಪಕ್ಷದ ಕಾರ್ಯಕರ್ತರಿಗೆ ತಪ್ಪು ಸಂದೇಶ ರವಾನೆಯಾಗುತ್ತದೆ' ಎಂದರು.

'ಇಬ್ರಾಹಿಂ ಅವರ ನಡೆಯನ್ನು ಪಕ್ಷದ ನಾಯಕರು ಗಂಭೀರವಾಗಿ ಪರಿಗಣಿಸಬೇಕು. ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಐ.ಟಿ ಅಧಿಕಾರಿಗಳಿಗೆ ಸಿಕ್ಕ ಹಣ ಬಿಜೆಪಿಯದ್ದು: ಡಿಕೆಶಿ

ಬೆಂಗಳೂರು: 'ಆದಾಯ ತೆರಿಗೆ (ಐ.ಟಿ) ಇಲಾಖೆ ಅಧಿಕಾರಿಗಳು ನಡೆಸಿದ ದಾಳಿಯಲ್ಲಿ ಪತ್ತೆಯಾಗಿರುವ ಹಣ ಬಿಜೆಪಿಗೆ ಸೇರಿದ್ದು. ಆ ಹಣಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಯಾವ ಸಂಬಂಧವೂ ಇಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಐ.ಟಿ ಅಧಿಕಾರಿಗಳು ಕೆಲವು ಡೈರಿ, ಪುಸ್ತಕಗಳನ್ನು ವಶಪಡಿಸಿಕೊಂಡಿದ್ದಾರೆ ಎಂಬ ಮಾಹಿತಿ ನನಗೆ ಸಿಕ್ಕಿದೆ. ಆ ದಾಖಲೆಗಳು ಬಹಿರಂಗವಾದರೆ ಎಲ್ಲವೂ ಗೊತ್ತಾಗುತ್ತದೆ. ಅವರು ಮೊದಲು ದಾಖಲೆ ಬಹಿರಂಗಪಡಿಸಲಿ, ಬಳಿಕ ನನ್ನಲ್ಲಿ ಇರುವ ಮಾಹಿತಿಯನ್ನು ಹೇಳುವೆ' ಎಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ನಡೆಸಿರುವುದು ಬಿಜೆಪಿ. ಆ ಪಕ್ಷವೇ ಭ್ರಷ್ಟಾಚಾರದ ಹಿಮಾಲಯ ಪರ್ವತ ಇದ್ದಂತೆ. ಅದಕ್ಕಾಗಿಯೇ ಜನರು ಬಿಜೆಪಿಯನ್ನು ಅಧಿಕಾರದಿಂದ ಕಿತ್ತೆಸೆದಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಮಗಾರಿಗಳ ಗುತ್ತಿಗೆ ಪಡೆದಿದ್ದ ಗುತ್ತಿಗೆದಾರರ ಬಳಿ ಹಣ ಪತ್ತೆಯಾಗಿದೆ. ಅದು ಬಿಜೆಪಿಗೆ ಸೇರಿದ ಹಣ ಎಂದು ಹೇಳಿದರು.

'ಕಾಂಗ್ರೆಸ್ ಹೈಕಮಾಂಡ್ ನಡುಗುತ್ತಿದೆ' ಎಂಬ ಆರ್. ಅಶೋಕ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಶಿವಕುಮಾರ್, 'ನಡುಗುತ್ತಿರುವುದು ಕಾಂಗ್ರೆಸ್ ಹೈಕಮಾಂಡ್ ಅಲ್ಲ, ಬಿಜೆಪಿ ಹೈಕಮಾಂಡ್. ಈ ಭ್ರಷ್ಟಾಚಾರ ಕ್ಕೆಲ್ಲ ಅಡಿಪಾಯವೇ ಆರ್.ಅಶೋಕ, ನಕಲಿ ಸ್ವಾಮಿ, ಲೂಟಿ ರವಿ, ನವರಂಗಿ ನಾರಾಯಣ, ಬ್ಲ್ಯಾಕ್ ಮೇಲರ್‌ಗಳು. ಈ ಅಕ್ರಮದ ಹಿಂದೆ ಇವರ ಹೆಸರಿದೆ. ಯಾರಿಂದ ತನಿಖೆ ಮಾಡಿಸುತ್ತಾರೋ ಮಾಡಿಸಲಿ. ಈ ವಿಚಾರವಾಗಿ ತನಿಖೆ ಆಗಲಿ. ಅದನ್ನೇ ನಾವು, ನಮ್ಮ ನಾಯಕರು ಹೇಳುತ್ತಿದ್ದೇವೆ. ಅವರ ಕಾಲದಲ್ಲಿ ಆಗಿರುವ ಬ್ರಹ್ಮಾಂಡ ಭ್ರಷ್ಟಾಚಾರವೇ ಇದಕ್ಕೆ ಅಡಿಪಾಯ' ಎಂದರು.

'ಆದಾಯ ತೆರಿಗೆ ಅಧಿಕಾರಿಗಳು ತಮ್ಮ ದಾಳಿ ಮುಗಿಸಿ ಅಧಿಕೃತ ಹೇಳಿಕೆ ಪ್ರಕಟಿಸಲಿ ಎಂದು ನಾವು ಇಷ್ಟು ದಿನ ಮಾತನಾಡಿರಲಿಲ್ಲ. ನಿನ್ನೆ ಐಟಿ ಅಧಿಕಾರಿಗಳು ಹೇಳಿಕೆ ನೀಡಿದ್ದಾರೆ. ಐಟಿ, ಇ.ಡಿ ಎಲ್ಲಾ ತನಿಖಾ ಸಂಸ್ಥೆಗಳು ಅವರ ಕೈಯಲ್ಲಿವೆ. ಈಗ ದಾಖಲೆಗಳು ಅವರ ಬಳಿಯೇ ಇವೆ. ಅವುಗಳನ್ನು ಬಿಚ್ಚಿಡಲಿ' ಎಂದು ಸವಾಲು ಹಾಕಿದರು.

'ಕಲೆಕ್ಷನ್ ಮಾಸ್ಟರ್ ಕಾಂಗ್ರೆಸ್' ಎಂಬ ಪೋಸ್ಟರ್ ಅನ್ನು ಬಿಜೆಪಿಯು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಬಗ್ಗೆ ಕೇಳಿದಾಗ, 'ಬಿಜೆಪಿಯ ಭ್ರಷ್ಟಾಚಾರ ಹಿಮಾಲಯ ಪರ್ವತ ದಷ್ಟಿದೆ. ಮುಖ್ಯಮಂತ್ರಿ ಹುದ್ದೆಗೆ ₹2,500 ಕೋಟಿ ಸಂಗ್ರಹ ಮಾಡಲಾಗಿತ್ತು. ಮುಖ್ಯಮಂತ್ರಿ ಕಚೇರಿಯಲ್ಲೇ ಎಷ್ಟು ಭ್ರಷ್ಟಾಚಾರ ನಡೆದಿತ್ತು ಎಂದು ಬಿಜೆಪಿಯ ಶಾಸಕರು, ಮಾಜಿ ಮಂತ್ರಿಗಳೇ ಹೇಳಿದ್ದಾರೆ. ಈಗ ಮಾತಾಡುತ್ತಿರುವವರು ಅದನ್ನು ಒಮ್ಮೆ ನೋಡಲಿ' ಎಂದು ಹೇಳಿದರು.

ಮತ್ತಷ್ಟು ಮಂದಿಗೆ ನೋಟಿಸ್ ಸಾಧ್ಯತೆ

ಮನೆಗಳಲ್ಲಿ ಬೃಹತ್ ಪ್ರಮಾಣದ ನಗದು ದಾಸ್ತಾನು ಇರಿಸಿಕೊಂಡಿದ್ದ ಪ್ರದೀಪ್ ಮತ್ತು ಸಂತೋಷ್ ಕೃಷ್ಣಪ್ಪ ಜತೆ ನಂಟು ಹೊಂದಿರುವ ಇನ್ನೂ ಹಲವರಿಗೆ ಆದಾಯ ತೆರಿಗೆ ಅಧಿಕಾರಿಗಳು ನೋಟಿಸ್ ಜಾರಿ ಮಾಡುವ ಸಾಧ್ಯತೆ ಇದೆ.

ಎರಡೂ ಕಟ್ಟಡಗಳಿಗೆ ನಗದು ಸಾಗಿಸಿ ತಂದ ವ್ಯಕ್ತಿಗಳ ಪತ್ತೆಗೆ ಪ್ರಯತ್ನ ಮುಂದುವರಿದಿದೆ. ರಾಜಕಾರಣಿಗಳ ಕೆಲವು ನಿಕಟವರ್ತಿಗಳು, ವಾಸ್ತುಶಿಲ್ಪಿ ನಗದು ದಾಸ್ತಾನಿನಲ್ಲಿ ಭಾಗಿಯಾದ ಸುಳಿವು ಲಭಿಸಿದೆ. ಅವರ ಹಿಂದಿರುವ ವ್ಯಕ್ತಿಗಳ ಪತ್ತೆಗೆ ಅಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎನ್ನಲಾಗಿದೆ.

ಐದು ಸ್ಥಳಗಳಲ್ಲಿ ಇ.ಡಿ ಶೋಧ

ಬೆಂಗಳೂರು: ಬ್ಯಾಂಕ್‌ನಿಂದ ಸಾಲ ಪಡೆದು ವಂಚಿಸಿದ್ದ ಆರೋಪದ ಮೇಲೆ ನಗರದ ಉದ್ಯಮಿಯೊಬ್ಬರ ಮನೆ ಸೇರಿದಂತೆ ಐದು ಸ್ಥಳಗಳ ಮೇಲೆ ಮಂಗಳವಾರ ದಾಳಿಮಾಡಿದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ಉದ್ಯಮಿಯು ಎಂಟು ಬ್ಯಾಂಕ್‌ಗಳಿಂದ ₹883 ಕೋಟಿಗೂ ಹೆಚ್ಚು ಸಾಲ ಪಡೆದು ವಂಚಿಸಿರುವ ಆರೋಪವಿದೆ. ಈ ಸಂಬಂಧ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ತನಿಖೆ ಆರಂಭಿಸಿದೆ.

ಅಪ್ಪೋ ಸರ್ಕ್ಯೂಟ್ಸ್ ಇಂಡಿಯಾ ಲಿಮಿಟೆಡ್ ಕಂಪನಿ ಹೆಸರಿನಲ್ಲಿ ಸಾಲ ಪಡೆದು ವಂಚಿಸಲಾಗಿತ್ತು.

ಕಸವನಹಳ್ಳಿಯಲ್ಲಿರುವ ಉದ್ಯಮಿಯ ಮನೆ, ಕಂಪನಿಗಳ ಕಚೇರಿಗಳು ಸೇರಿದಂತೆ ಆರು ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಬೆಳಿಗ್ಗೆ ಆರಂಭವಾದ ದಾಳಿ ಸಂಜೆಯವರೆಗೂ ನಡೆದಿದೆ ಎಂದು ಮೂಲಗಳು ಈ ಕುರಿತು ಮಾಹಿತಿ ನೀಡಿವೆ.

'ಡಿಕೆಶಿ ಡಿಸಿಎಂ ಆಗಿರುವುದು ದೌರ್ಭಾಗ್ಯ'

ಬೆಂಗಳೂರು: 'ಲೂಟಿಯನ್ನೇ ನಿತ್ಯ ಕಾಯಕ, ದಂಧೆಯನ್ನೇ ದಿನದ ಧನಾರ್ಜನೆಗೆ ರಹದಾರಿ ಮಾಡಿಕೊಂಡು ಕಂಡ ಕಂಡವರ ಜಮೀನುಗಳಿಗೆ ಬೇಲಿ ಬಿಗಿದು ಅವರ ರಕ್ತ ಹೀರುತ್ತಿರುವ ಡಿ.ಕೆ. ಶಿವಕುಮಾರ್ ಈ ರಾಜ್ಯದ ಉಪ ಮುಖ್ಯಮಂತ್ರಿ ಆಗಿರುವುದು ಕನ್ನಡಿಗರ ದೌರ್ಭಾಗ್ಯ' ಎಂದು ಜೆಡಿಎಸ್ ವಾಗ್ದಾಳಿ ನಡೆಸಿದೆ. ಪಕ್ಷದ ಅಧಿಕೃತ 'ಎಕ್ಸ್' ಖಾತೆಯಲ್ಲಿ ಶಿವಕುಮಾರ್ ವಿರುದ್ಧ ಟೀಕಾಪ್ರಹಾರ ನಡೆಸಿದ್ದು, 'ಇವರ ಹೈಕಮಾಂಡ್ ಕೃಪಾಪೋಷಿತ ಅಕ್ರಮಗಳಿಗೆ ಕೊನೆ ಇದ್ದೇ ಇದೆ. ಇವರ ಭಂಡಾರ ಎಲ್ಲವೂ ಜನರಿಗೆ ಗೊತ್ತಾಗಿದೆ. ಈಗ ಬಾಲ ಸುಟ್ಟ ಬೆಕ್ಕಿನಂತೆ ವಿಲವಿಲ ಒದ್ದಾಡುತ್ತಿದ್ದಾರೆ' ಎಂದು ಹೇಳಿದೆ.

'ಇಡೀ ಕಾಂಗ್ರೆಸ್ ಪಕ್ಷವೇ ಪರ್ಸಂಟೇಜ್ ಪಟಾಲಂ ಆಗಿದೆ. ಕರ್ನಾಟಕವನ್ನು ಪಕ್ಷದ ಹೈಕಮಾಂಡ್‌ಗೆ ಒತ್ತೆ ಇಟ್ಟಿದ್ದಾರೆ. ಎಸ್‌ಎಸ್ಟಿ, ವೈಎಸ್‌ಟಿ ನೋಡಿ ಜನರು ಬೆಚ್ಚಿಬಿದ್ದಿದ್ದಾರೆ' ಎಂದು ಟೀಕಿಸಿದೆ.

ಬೊಮ್ಮಾಯಿಗೆ ಹೃದಯ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯಲ್ಲಿ ಮಂಡಿ ಶಸ್ತ್ರಚಿಕಿತ್ಸೆಗಾಗಿ ಅವರು ಸೋಮವಾರ ಹೋದ ಸಂದರ್ಭದಲ್ಲಿ ಹೃದಯದಲ್ಲಿ ಬ್ಲಾಕೇಜ್ ಇರುವುದು ಕಂಡುಬಂದಿತ್ತು. ಬಳಿಕ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾದರು. ತೆರೆದ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಆಪ್ತ ಮೂಲಗಳು ತಿಳಿಸಿವೆ.

ಈ ಕುರಿತು 'ಎಕ್ಸ್' (ಟ್ವೀಟ್) ಮಾಡಿರುವ ಬೊಮ್ಮಾಯಿ,'ನನಗೆ ಲಘು ಶಸ್ತ್ರ ಚಿಕಿತ್ಸೆ ಆಗಿದ್ದು, ವೈದ್ಯರ ಸಲಹೆ ಮೇರೆಗೆ ಈಗ ಸಂಪೂರ್ಣ ವಿಶ್ರಾಂತಿ ಪಡೆಯುತ್ತಿದ್ದೇನೆ. ಆದಷ್ಟು ಬೇಗ ಸಂಪೂರ್ಣ ಗುಣಮುಖನಾಗಿ ನಿಮ್ಮ ಮುಂದೆ ಬರಲು ಕಾತುರದಿಂದ ಕಾಯುತ್ತಿದ್ದೇನೆ. ಸದ್ಯ ಆಸ್ಪತ್ರೆಯಲ್ಲಿರುವ ಕಾರಣ, ನೀವೆಲ್ಲರೂ ಆಸ್ಪತ್ರೆಗೆ ನನ್ನನ್ನು ನೋಡಲು ಬಂದರೆ, ಆಸ್ಪತ್ರೆಯಲ್ಲಿರುವ ಇತರ ರೋಗಿಗಳಿಗೆ ತೊಂದರೆ ಆಗುತ್ತದೆ. ಆದ್ದರಿಂದ ಯಾರೂ ಆಸ್ಪತ್ರೆಗೆ ಬರಬಾರದು' ಎಂದು ಮನವಿ ಮಾಡಿದ್ದಾರೆ.

ಬನಶಂಕರಿಯಲ್ಲಿ ಕಳವು ಮಾಡಿ ಸಿಕ್ಕಿಬಿದ್ದಿದ್ದ

ಕಳ್ಳತನ: ಕಾನ್‌ಸ್ಟೆಬಲ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೂರು ಕಡೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಕಾನ್‌ಸ್ಟೆಬಲ್ ಯಲ್ಲಪ್ಪ ಅವರನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಳ್ಳಾರಿಯ ಯಲ್ಲಪ್ಪ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆಯ ಕಾನ್‌ಸ್ಟೆಬಲ್ ಆಗಿ ಕೆಲಸ ಮಾಡುತ್ತಿದ್ದ. ಸೂಕ್ತ ಪುರಾವೆಗಳನ್ನು ಆಧರಿಸಿ ಯಲ್ಲಪ್ಪನನ್ನು ಇತ್ತೀಚೆಗೆ ಬಂಧಿಸಲಾಗಿದ್ದು, ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಎಸ್. ಗಿರೀಶ್ ಹೇಳಿದರು.

'ಯಲ್ಲಪ್ಪ, ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಇತ್ತೀಚೆಗೆ ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ಕಳ್ಳತನ ನಡೆದಿತ್ತು. ಪ್ರಕರಣದ ತನಿಖೆ ಕೈಗೊಂಡಾಗ, ಯಲ್ಲಪ್ಪನ ಬಗ್ಗೆ ಸುಳಿವು ಸಿಕ್ಕಿತ್ತು' ಎಂದು ತಿಳಿಸಿದರು.

ಅಮಾನತಾಗಿದ್ದ ಯಲ್ಲಪ್ಪ: 'ಆರೋಪಿ ಯಲ್ಲಪ್ಪ, ಈ ಹಿಂದೆ ಬನಶಂಕರಿ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ. ಈ ಸಂದರ್ಭದಲ್ಲಿ ಕಳ್ಳತನ

ಯಲ್ಲಪ್ಪ

ಪ್ರಕರಣದಲ್ಲಿ ಕೆಲ ಆರೋಪಿಗಳು ಸಿಕ್ಕಿಬಿದ್ದಿದ್ದರು. ಯಲ್ಲಪ್ಪನೇ ಕಳ್ಳತನ ಮಾಡಲು ಸಹಕಾರ ನೀಡುತ್ತಿದ್ದನೆಂದು ಆರೋಪಿಗಳು ಹೇಳಿಕೆ ನೀಡಿದ್ದರು. ಇದೇ ಕಾರಣಕ್ಕೆ ಯಲ್ಲಪ್ಪನನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳ ಹೇಳಿಕೆ ಸುಳ್ಳು ಎಂಬುದಾಗಿ ವಾದಿಸಿದ್ದ ಯಲ್ಲಪ್ಪ, ಪುನಃ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದ. ಹಲವು ತಿಂಗಳಿನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

ಒಂಟಿಯಾಗಿ ಕಳ್ಳತನಕ್ಕೆ ಇಳಿದಿದ್ದ: 'ಕಳ್ಳರ ಜೊತೆ ಒಡನಾಟವಿಟ್ಟುಕೊಂಡಿದ್ದ ಯಲ್ಲಪ್ಪ, ಅವರ ಮೂಲಕ ಕಳ್ಳತನ ಮಾಡಿಸುತ್ತಿದ್ದ. ಕಡಿಮೆ ಕಮಿಷನ್ ಸಿಗುತ್ತಿತ್ತು. ಜೊತೆಗೆ, ಕಳ್ಳರು ಸಿಕ್ಕಿಬಿದ್ದಾಗ ಯಲ್ಲಪ್ಪ ಹೆಸರು ಹೇಳುತ್ತಿದ್ದರು. ಇದೇ ಕಾರಣಕ್ಕೆ ಯಲ್ಲಪ್ಪ, ಒಂಟಿಯಾಗಿ ಕಳ್ಳತನ ಮಾಡಲು ತೀರ್ಮಾನಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾತ್ರಿ ಹೊತ್ತು ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ. ಇದುವರೆಗೂ ಈತ, 4 ಕೆ.ಜಿ ಬೆಳ್ಳಿ ಸಾಮಗ್ರಿ, 24 ಗ್ರಾಂ ಚಿನ್ನಾಭರಣ ಹಾಗೂ ₹50 ಸಾವಿರ ನಗದು ಕದ್ದಿದ್ದ. ಮದುವೆಗೆ ಹಣ ಬೇಕಿರುವುದಾಗಿ ಹೇಳಿ ಬಳ್ಳಾರಿಯಲ್ಲಿರುವ ವ್ಯಾಪಾರಿಯೊಬ್ಬರಿಗೆ ಬೆಳ್ಳಿ ಸಾಮಗ್ರಿ ಹಾಗೂ ಚಿನ್ನ ಮಾರಿದ್ದ. ಎಲ್ಲವನ್ನೂ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಯಲ್ಲಪ್ಪ, ಹೆಚ್ಚು ಹಣ ಸಂಪಾದಿಸಬೇಕೆಂದು ಕೃತ್ಯ ಎಸಗುತ್ತಿದ್ದನೆಂದು ಗೊತ್ತಾಗಿದೆ. ಆದರೆ, ಈತ ಮಾನಸಿಕ ಖಿನ್ನತೆಗೆ ಒಳಗಾಗಿರುವ ಅನುಮಾನವೂ ಇದೆ' ಎಂದು ಹೇಳಿವೆ.

'ನರೇಗಾ: ₹ 478.46 ಕೋಟಿ ಬಾಕಿ'

ಒಂದನೇ ಪುಟದಿಂದ...

'ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ಗುಳೆ ಹೋಗುವವರ ಸಂಖ್ಯೆ ಕಡಿಮೆ ಮಾಡುವುದು ಮತ್ತು ನೆಲೆಸಿರುವ ಸ್ಥಳಗಳಲ್ಲಿಯೇ ಉದ್ಯೋಗ ಅವಕಾಶಗಳನ್ನು ಕಲ್ಪಿಸುವುದು ನರೇಗಾ ಯೋಜನೆಯ ಮುಖ್ಯ ಉದ್ದೇಶ. ವೇತನ ಪಾವತಿ ವಿಳಂಬದಿಂದಾಗಿ ಕಾರ್ಮಿಕರು ತಮ್ಮ ನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗದೆ ಉದ್ಯೋಗ ಅರಸಿಕೊಂಡು ನಗರ ಪ್ರದೇಶಗಳಿಗೆ ವಲಸೆ ಹೋಗಲು ಆರಂಭಿಸಿದ್ದಾರೆ' ಎಂದೂ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

'ನಾವು 2022–23ನೇ ಆರ್ಥಿಕ ವರ್ಷದ ಬಳಕೆ ಪ್ರಮಾಣಪತ್ರ, ವಾರ್ಷಿಕ ಲೆಕ್ಕಪತ್ರದ ವಿವರಗಳನ್ನು ಮತ್ತು ಪ್ರಸಕ್ತ ಸಾಲಿನ ಆಗಸ್ಟ್ 30ರ ವರೆಗಿನ ವೇತನ ಬಳಕೆ ಪ್ರಮಾಣಪತ್ರವನ್ನು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಸೆ. 22ರಂದೇ ಸಲ್ಲಿಸಿದ್ದೇವೆ. ರಾಜ್ಯ ಸರ್ಕಾರವು 2023-24ರ ಸಾಲಿನ ಅನುಮೋದಿತ ಕಾರ್ಮಿಕ ಬಜೆಟ್‌ನಂತೆ ನರೇಗಾ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ವೇತನ ಅನುದಾನವನ್ನು ಶೀಘ್ರ ಬಿಡುಗಡೆ ಮಾಡಬೇಕು' ಎಂದಿದ್ದಾರೆ.

'ಅ.16ರವರೆಗೆ ₹ 540.92 ಕೋಟಿ ಬಾಕಿ'

'ರಾಜ್ಯಕ್ಕೆ ನರೇಗಾ ಕಾಮಗಾರಿಗೆ ಸಂಬಂಧಿಸಿದಂತೆ ಅ.16ರವರೆಗೆ ಕೇಂದ್ರ ಸರ್ಕಾರ ₹540.92 ಕೋಟಿ ಬಿಡುಗಡೆ ಮಾಡಲು ಬಾಕಿ ಇದೆ. ತಕ್ಷಣ ಹಣ ಬಿಡುಗಡೆ ಮಾಡಬೇಕು' ಎಂದು ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದ್ದಾರೆ.

ಈ ಬಗ್ಗೆ 'X' (ಟ್ವೀಟ್) ಮಾಡಿರುವ ಅವರು, 'ಬ್ಯಾಂಕಿನಲ್ಲಿ ವೇತನ ಬಾಕಿ ಮೊತ್ತ ₹493.22 ಕೋಟಿ ಮತ್ತು ಹಣಕಾಸಿನ ದಾಖಲೆಯ ಪ್ರಕಾರ ₹47.70 ಕೋಟಿ ಕೇಂದ್ರದಿಂದ ಬಿಡುಗಡೆ ಆಗಬೇಕಿದೆ. ರಾಜ್ಯದ ಬಿಜೆಪಿ ಸಂಸದರು ಮತ್ತು ನಾಯಕರು ಯಾವಾಗ ಧೈರ್ಯ ಪ್ರದರ್ಶಿಸುತ್ತಾರೆ ಮತ್ತು ರಾಜ್ಯದ ಜನರಹಿತಾಸಕ್ತಿಗಳನ್ನು ಕಾಪಾಡುತ್ತಾರೆ' ಎಂದು ಪ್ರಶ್ನಿಸಿದ್ದಾರೆ.

ಉದ್ಯೋಗ ವಾಣಿ

WANTED

Josco Jewellers, India's No. 1 Jewellery Group, is on the lookout for male candidates for their New Bengaluru showroom for the post of:

MANAGER-PUBLIC RELATIONS

Looking for a self-motivated team player with good liaison and multi-linguistic skills, proficiency in Kannada language and pleasing personality. He must be comfortable working on the field and has quality local contacts so as to invite new potential customers. He should generate relationships with prospective customers to be closed by sales and work with the sales, marketing and operations teams to meet the business targets.

He must have 10 years of experience in similar field. Candidates from the same area are preferred. Age: 40-45 years.

Interested candidates may send your detailed resume with photo within 3 days to careers@joscogroup.com

JOSCO JEWELLERS

TONICO

IN MEMORY OF

K. C. RAGHU

27.03.1964- 15.10.2023

"Om. Lead me from unreal to real; lead me from darkness to light; lead me from death to immortality. Om, Shanti, Shanti, Shanti"- Brihadaranyaka Upanishad

Remembered by

His wife Deepa Vishwanathan, and daughter Sindhu Raghu;
His mother Kenchamma;
His brothers KC Ravi, KC Shiva, KC Mahendra, KC Shankar
and their families;
Staff and management of Pristine Organics Private Limited and
Pristine Laboratories.



❦ ಸುಭಾಷಿತ ❦

ಮಳೆ ಬರಲಿ, ಚಳಿ ಇರಲಿ, ಬಿಸಿಲು ಕುದಿಸುತಲಿರಲಿ, ಮಂಜು ಸುರಿಯುತಲಿರಲಿ, ಮುಮ್ಮುಖದ ಋತುಮಾನ ಹೇಗೇ ಇರಲಿ, ನಗುತ ಒಲಿವೆವು ನಾವು, ನಗುತಾ ಒಲಿಸುವೆವು.

-ದ.ರಾ.ಬೇಂದ್ರೆ

ಒಲಿಂಪಿಕ್ ಅಂಗಳಕ್ಕೆ ಕ್ರಿಕೆಟ್ ಹೊಸ ಅವಕಾಶಗಳಿಗೆ ಹಾದಿ

ಒಲಿಂಪಿಕ್ ಕೂಟವೆಂದರೆ ಬರೀ ಕ್ರೀಡಾಮೇಳವಷ್ಟೇ ಅಲ್ಲ, ಮನುಕುಲದ ಶಾಂತಿ, ಸೌಹಾರ್ದ ಮತ್ತು ಭ್ರಾತೃತ್ವದ ಸಂದೇಶ ಸಾರುವ ಬೃಹತ್ ವೇದಿಕೆ. ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಈ ಕೂಟದಲ್ಲಿ ವಿಶ್ವದ ಎಲ್ಲ ದೇಶಗಳ ಕ್ರೀಡಾಪಟುಗಳೂ ತಮ್ಮ ಹೆಜ್ಜೆಗುರುತು ಮೂಡಿಸಲು ಕಾತರಿಸುತ್ತಾರೆ. ಈಗ ಅಂತಹದೊಂದು ಅವಕಾಶ ಕ್ರಿಕೆಟ್ ಆಟಕ್ಕೂ ದೊರಕಿದೆ. 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಗೆ ಅಂತರರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್ (ಐಒಸಿ) ಅನುಮೋದನೆ ನೀಡಿದೆ. ಐಒಸಿಯ 141ನೇ ಅಧಿವೇಶನದಲ್ಲಿ ಭಾಗವಹಿಸಿದ್ದ 99 ಸದಸ್ಯ ರಾಷ್ಟ್ರಗಳಲ್ಲಿ ಟ್ವೆಂಟಿ-20 ಮಾದರಿಯ ಕ್ರಿಕೆಟ್ ಸೇರಿದಂತೆ ಒಟ್ಟು ಐದು ಆಟಗಳ ಸೇರ್ಪಡೆಯ ಪರವಾಗಿ 97 ದೇಶಗಳು ಮತ ಚಲಾಯಿಸಿದವು. 123 ವರ್ಷಗಳ ಹಿಂದೆ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಕ್ರಿಕೆಟ್ ಅವಕಾಶ ಪಡೆದಿತ್ತು. ಆದರೆ, ದೀರ್ಘ ಸಮಯ ಬೇಕಾಗುತ್ತದೆ ಎಂಬ ಕಾರಣಕ್ಕೆ ಅನಂತರ ಕೈಬಿಡಲಾಯಿತು. ಆಗ ಟೆಸ್ಟ್ ಕ್ರಿಕೆಟ್ ಮಾದರಿ ಮಾತ್ರ ಇದ್ದುದು ಇದಕ್ಕೆ ಕಾರಣ. ಕ್ರಿಕೆಟ್ ಆಡುವ ರಾಷ್ಟ್ರಗಳ ಸಂಖ್ಯೆಯೂ ಕಡಿಮೆ ಎಂಬುದು ಐಒಸಿಯ ಸಮರ್ಥನೆಯಾಗಿತ್ತು. ಏಕದಿನ ಮಾದರಿ (ಫಿಫ್ಟಿ-50) ಪ್ರವರ್ಧಮಾನಕ್ಕೆ ಬಂದ ನಂತರವೂ ಐಒಸಿ ಪಟ್ಟು ಸಡಿಲಿಸಲಿಲ್ಲ. ಆದರೆ ಎರಡು ದಶಕಗಳಿಂದ ಟಿ20 ಕ್ರಿಕೆಟ್ ಮಾದರಿಗೆ ಲಭಿಸಿರುವ ಅಪಾರ ಜನಪ್ರಿಯತೆ ಮತ್ತು ಹಣದ ಹರಿವು ಒಲಿಂಪಿಕ್ ಕೂಟದಲ್ಲಿ ಕ್ರಿಕೆಟ್ ಸೇರ್ಪಡೆಗೊಳ್ಳಲು ಪ್ರಮುಖ ಕಾರಣವಾಗಿವೆ.

ಒಲಿಂಪಿಕ್ ಕೂಟವನ್ನು ಐಸಿಸಿಯ ಸದಸ್ಯ ಮಂಡಳಿಗಳು ಗಂಭೀರವಾಗಿ ಪರಿಗಣಿಸಬೇಕು

ಈ ನಿರ್ಧಾರದಿಂದ ಒಲಿಂಪಿಕ್ ಆಂದೋಲನ ಹಾಗೂ ಕ್ರಿಕೆಟ್ ಕ್ರೀಡೆ ಎರಡಕ್ಕೂ ಲಾಭ ಇದೆ. ವಿಶ್ವದಾದ್ಯಂತ ಇರುವ ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳ ವಲಯಕ್ಕೂ ಒಲಿಂಪಿಕ್ ಆಂದೋಲನ ವಿಸ್ತರಿಸಲಿದೆ. ಪ್ರಸ್ತುತ ಕ್ರಿಕೆಟ್ ಬರೀ ಕ್ರೀಡೆಯಾಗಿ ಉಳಿದಿಲ್ಲ, ಅದರ ಸುತ್ತ ಬಹುದೊಡ್ಡ ವಾಣಿಜ್ಯ ವಲಯವೇ ಬೆಳೆದಿದೆ. ಕೋಟಿ ಕೋಟಿ ಡಾಲರ್‌ಗಳ ಆರ್ಥಿಕ ಚಟುವಟಿಕೆಗಳು ನಡೆಯುತ್ತಿವೆ. ಒಲಿಂಪಿಕ್ಸ್‌ಗೆ ಸೇರ್ಪಡೆ ಆಗಿರುವುದರಿಂದ ಕ್ರಿಕೆಟ್ ಆಟವು ಅಮೆರಿಕ, ಯುರೋಪ್ ದೇಶಗಳ ಮಾರುಕಟ್ಟೆಗೆ ಲಗ್ಗೆ ಇಡಲು ಅನುಕೂಲವಾಗಲಿದೆ. ಈಗಾಗಲೇ ಅಮೆರಿಕದಲ್ಲಿ ಕ್ರಿಕೆಟ್ ಜನಪ್ರಿಯತೆ ಗಳಿಸುತ್ತಿದೆ. ಮುಂದಿನ ವರ್ಷ ಅಮೆರಿಕದಲ್ಲಿಯೇ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ. ಒಲಿಂಪಿಕ್ ಕೂಟಕ್ಕೆ ಸೇರ್ಪಡೆಯೊಂದಿಗೆ ಕ್ರಿಕೆಟ್ ಆಡುವ ದೇಶಗಳ ಸಂಖ್ಯೆಯೂ ಹೆಚ್ಚುವ ನಿರೀಕ್ಷೆ ಇದೆ. ಭವಿಷ್ಯದಲ್ಲಿ ವಿಶ್ವಕಪ್ ಟೂರ್ನಿಗಳಲ್ಲಿಯೂ ತಂಡಗಳ ಸಂಖ್ಯೆ ಹೆಚ್ಚಲಿದೆ. ಇದರಿಂದಾಗಿ ಐಸಿಸಿಯಲ್ಲಿ ಸದಸ್ಯ ರಾಷ್ಟ್ರಗಳ ಸಂಖ್ಯಾಬಲ ಹೆಚ್ಚಲಿದ್ದು, ಸದ್ಯ ಕೆಲವೇ ದೇಶಗಳು ಹೊಂದಿರುವ ಏಕಸ್ವಾಮ್ಯಕ್ಕೂ ಕಡಿವಾಣ ಬೀಳಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಹಲವಾರು ದಾಖಲೆ ಮತ್ತು ಕೋಟ್ಯಂತರ ಹಣ ಗಳಿಸಿದರೂ ತಾವು ಒಲಿಂಪಿಯನ್ ಆಗಲಿಲ್ಲ ಎಂಬ ಕ್ರಿಕೆಟಿಗರ ಕೊರಗು ಕೂಡ ನೀಗಬಹುದು. ಭಾರತದ ಮಟ್ಟಿಗೆ ಹೇಳುವುದಾದರೆ, ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವ ಸಾಧ್ಯತೆಯು ಕ್ರಿಕೆಟ್ ಸೇರ್ಪಡೆಯಿಂದ ಹೆಚ್ಚಿದೆ. ಈಚೆಗೆ ಭಾರತದ ಪುರುಷ ಮತ್ತು ಮಹಿಳಾ ತಂಡಗಳು ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕಗಳನ್ನು ಜಯಿಸಿದ್ದವು. ಪ್ರಸ್ತುತ ಕ್ರಿಕೆಟ್ ಕ್ಷೇತ್ರದಲ್ಲಿ ಅತಿ ಹೆಚ್ಚು ತಾರಾವರ್ಚಸ್ಸು ಮತ್ತು ಆರ್ಥಿಕ ಬಲ ಇರುವುದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಎಂಬುದರಲ್ಲಿ ಅನುಮಾನವೇ ಇಲ್ಲ. ಅಮೆರಿಕದಲ್ಲಿ ನಡೆದ ಮೇಜರ್ ಲೀಗ್ ಕ್ರಿಕೆಟ್‌ನಲ್ಲಿ ಭಾರತದ ಕೆಲವು ಉದ್ಯಮಿಗಳೇ ಫ್ರಾಂಚೈಸಿಗಳ ಸಹಮಾಲೀಕತ್ವ ಹೊಂದಿದ್ದಾರೆ. ಅಮೆರಿಕ, ಜರ್ಮನಿ, ಫ್ರಾನ್ಸ್ ತಂಡಗಳಲ್ಲಿ ಈಗಾಗಲೇ ಭಾರತೀಯ ಆಟಗಾರರು ಮತ್ತು ಆಟಗಾರ್ತಿಯರು ಇದ್ದಾರೆ. ತರಬೇತುದಾರರು, ಸ್ಕೋರರ್‌ಗಳು ಮತ್ತಿತರರು ಅಲ್ಲಿ ಉದ್ಯೋಗಿಗಳಾಗಿದ್ದಾರೆ. ಕ್ರಿಕೆಟ್ ಜತೆಗೆ ಸ್ಕ್ವಾಷ್, ಬೇಸ್‌ಬಾಲ್/ಸಾಫ್ಟ್‌ಬಾಲ್, ಲಕ್ರೋಸ್ ಮತ್ತು ಫ್ಲ್ಯಾಗ್ ಫುಟ್‌ಬಾಲ್ ಕೂಡ ಒಲಿಂಪಿಕ್ಸ್‌ಗೆ ಸೇರ್ಪಡೆಗೊಳ್ಳಲಿವೆ. ಭಾರತದ ಮಟ್ಟಿಗೆ ಸ್ಕ್ವಾಷ್, ಪದಕ ತಂದುಕೊಡುವ ಕ್ರೀಡೆಯಾಗಿದೆ. ಏಷ್ಯನ್ ಕ್ರೀಡಾಕೂಟದಲ್ಲಿ ಸ್ಕ್ವಾಷ್ ಸ್ಪರ್ಧೆಯಲ್ಲಿ ಭಾರತ ತಂಡವು ಎರಡು ಚಿನ್ನ ಸೇರಿದಂತೆ ಐದು ಪದಕಗಳನ್ನು ಜಯಿಸಿತ್ತು. ಕ್ರಿಕೆಟಿಗರಿಗೆ ಫ್ರಾಂಚೈಸಿ ಲೀಗ್‌ಗಳಲ್ಲಿ ಸಿಗುವಷ್ಟು ಪ್ರಮಾಣದ ಹಣ ಒಲಿಂಪಿಕ್ ಕೂಟದಲ್ಲಿ ಜಯಿಸುವುದರಿಂದ ಸಿಗಲಿಕ್ಕಿಲ್ಲ. ಆದರೆ ವಿಶ್ವದ ಅಗ್ರಗೌರವ ಗಳಿಸುವ ಅವಕಾಶ ಆಟಗಾರರಿಗೆ ಸಿಗುತ್ತದೆ. ಆದ್ದರಿಂದ ಒಲಿಂಪಿಕ್ ಕೂಟವನ್ನು ಐಸಿಸಿಯ ಸದಸ್ಯ ಮಂಡಳಿಗಳು ಗಂಭೀರವಾಗಿ ಪರಿಗಣಿಸಬೇಕು.

ದಿನದ ಟ್ವೀಟ್

ಬೆಂಬಲ ಬೆನ್ನಿಗಿರಲಿ

ವಿವಿಧ ಅಧ್ಯಯನಗಳ ಪ್ರಕಾರ, ಶೇ 5– 20ರಷ್ಟು ಮಕ್ಕಳು ಡಿಸ್ಲೆಕ್ಸಿಯ (ಕಲಿಕಾ ನ್ಯೂನತೆ) ಸಮಸ್ಯೆ ಹೊಂದಿರುತ್ತಾರೆ. ಅಕ್ಟೋಬರ್, ರಾಷ್ಟ್ರೀಯ ಡಿಸ್ಲೆಕ್ಸಿಯ ಜಾಗೃತಿ ಮಾಸವಾಗಿದ್ದು, ಪೋಷಕರು ಈ ನ್ಯೂನತೆಯ ಬಗ್ಗೆ ಕನಿಷ್ಠ ಮಟ್ಟದ ಅರಿವನ್ನಾದರೂ ಹೊಂದಿರಲೇಬೇಕು. ನಾನು ಮತ್ತು ನಿಖಿಲ್ ಕಾಮತ್ (ಸಹ ಸಂಸ್ಥಾಪಕ, ಜರೋದಾ) ಶಾಲೆಯಲ್ಲಿ ಹೆಚ್ಚಾಗಿ ಶೈಕ್ಷಣಿಕ ಪ್ರಗತಿ ಸಾಧಿಸಲಿಲ್ಲವಾದರೂ ಜೀವನದಲ್ಲಿ ಮುಂದೆ ಬಂದೆವು. ನಮ್ಮ ಎಲ್ಲ ಪ್ರಯತ್ನಕ್ಕೂ ಪೋಷಕರ ಬೆಂಬಲ ಸಿಕ್ಕಿದ್ದೇ ಅದಕ್ಕೆ ಪ್ರಮುಖ ಕಾರಣ. ಶಾಲಾ ಕಾಲೇಜುಗಳಲ್ಲಿ ತೆಗೆಯುವ ಅಂಕಗಳೇ ಎಲ್ಲವೂ ಅಲ್ಲ. ಅದರಲ್ಲೂ ಮಕ್ಕಳಿಗೆ ಕಲಿಕೆಯಲ್ಲಿ ಸಮಸ್ಯೆಗಳಿದ್ದರೆ ಪೋಷಕರ ಗ್ರಹಿಕೆ ಮತ್ತು ಬೆಂಬಲ ಇನ್ನೂ ಹೆಚ್ಚು ಮುಖ್ಯವಾಗುತ್ತದೆ.

ನಿತಿನ್ ಕಾಮತ್
ಸಂಸ್ಥಾಪಕ ಮತ್ತು ಸಿಇಒ, ಜರೋದಾ ಕಂಪನಿ

ಕಿಡಿನುಡಿ

ನಮ್ಮ ದೇಶದ ಪೊಲೀಸ್ ತನಿಖಾ ವೈಖರಿ ಮತ್ತು ನ್ಯಾಯದಾನಕ್ಕೆ ಕನ್ನಡಿ ಹಿಡಿದಿದೆ!

(ನಿಥಾರಿ ಸರಣಿ ಹತ್ಯೆ ಪ್ರಕರಣದಲ್ಲಿ ಪ್ರಮುಖ ಆರೋಪಿಗಳು ಸಾಕ್ಷ್ಯಾಧಾರದ ಕೊರತೆಯಿಂದಾಗಿ ಅಲಹಾಬಾದ್ ಹೈಕೋರ್ಟ್‌ನಿಂದ ಖುಲಾಸೆಗೊಂಡಿರುವುದಕ್ಕೆ ಪ್ರತಿಕ್ರಿಯೆ)



ವಂದನಾ ಸಿಂಗ್, ವಕೀಲೆ

25 ವರ್ಷಗಳ ಹಿಂದೆ
ಭಾನುವಾರ, 18-10-1998

● **ಕಲ್ಬುರ್ಗಿ: ಭೀಮಾ ನದಿ ಪ್ರವಾಹ ಇಳಿಮುಖ**

ಕಲ್ಬುರ್ಗಿ, ಅ. 17– 48 ಗಂಟೆಗಳಿಂದ ಕಲ್ಬುರ್ಗಿ ಜಿಲ್ಲೆ ಮಳೆಯಿಂದ ಮುಕ್ತಿ ಹೊಂದಿರುವುದು ಹಾಗೂ ಭೀಮಾ ನದಿಯ ಪ್ರವಾಹ ಸ್ವಲ್ಪ ಮಟ್ಟಿಗೆ ಇಳಿಮುಖ ಆಗಿರುವುದು ಪ್ರವಾಹಪೀಡಿತ ಗ್ರಾಮಸ್ಥರಿಗೆ ಸಮಾಧಾನ ತಂದಿದೆ.

ಮಹಾರಾಷ್ಟ್ರದ ಉಜನಿ ಜಲಾಶಯದ ಅಧಿಕ ನೀರನ್ನು ಭೀಮಾ ನದಿಗೆ ಬಿಡಲಾಗಿ, ಜಿಲ್ಲೆಯ ಹಲವಾರು ಗ್ರಾಮಗಳು ಜಲಾವೃತಗೊಂಡಿದ್ದವು. ಅಧಿಕ ಮಳೆಯಿಂದಾಗಿ ಮತ್ತು ಪ್ರವಾಹದಿಂದಾಗಿ ಹಲವಾರು ಗ್ರಾಮಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಪ್ರವಾಹದಿಂದಾಗಿ ಕಲ್ಬುರ್ಗಿ–ಜೇವರ್ಗಿ ರಸ್ತೆಯಲ್ಲಿರುವ ಭೀಮಾ ಸೇತುವೆಯ ಬಳಿ ರಸ್ತೆಯು ಬಿರುಕುಬಿಟ್ಟಿದ್ದ ಕಾರಣ, ಕಲ್ಬುರ್ಗಿ–ಬೆಂಗಳೂರು ಸಂಚಾರವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.

● **ಬ್ರಿಜೇಶ್ ಪಟೇಲ್ ಕೆಎಸ್‌ಸಿಎ ಕಾರ್ಯದರ್ಶಿ**

ಬೆಂಗಳೂರು, ಅ. 17– ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ನೂತನ ಕಾರ್ಯದರ್ಶಿ ಆಗಿ ಮಾಜಿ ಟೆಸ್ಟ್ ಆಟಗಾರ ಬ್ರಿಜೇಶ್ ಪಟೇಲ್ ಇಂದು ರಾತ್ರಿ ಆಯ್ಕೆಯಾದರು. ಅಧ್ಯಕ್ಷರಾಗಿ ಕೆ.ಎಂ. ರಾಂಪ್ರಸಾದ್ ಚುನಾಯಿತರಾದರು.

ಈ ಚುನಾವಣೆಯಲ್ಲಿ ಬ್ರಿಜೇಶ್ ವಿರುದ್ಧ ಕೆಎಸ್‌ಸಿಎ ಹಾಲಿ ಕಾರ್ಯದರ್ಶಿ ಸಿ. ನಾಗರಾಜ್ ಸ್ಪರ್ಧಿಸಿದ್ದರು.

50 ವರ್ಷಗಳ ಹಿಂದೆ
ಗುರುವಾರ, 18-10-1973

● **ಸಮಾಜವಾದದ ಮಾತು: ಸರ್ಕಾರಿ ಉದ್ಯಮ ಬೆಳೆಸಲು ನಿಷ್ಠೆ ಇಲ್ಲ**

ಬೆಂಗಳೂರು, ಅ. 17– ಸಮಾಜವಾದದ ಮಾತನಾಡುವ ಸರ್ಕಾರಕ್ಕೆ ಸರ್ಕಾರಿ ಉದ್ಯಮ ಬೆಳೆಯಬೇಕೆಂಬ ನಿಷ್ಠೆ ಇಲ್ಲವೆಂದು ಇಂದು ವಿಧಾನ ಪರಿಷತ್ತಿನಲ್ಲಿ ಟೀಕಿಸಿದ ವಿರೋಧ ಪಕ್ಷದ ನಾಯಕ ರಾಮಕೃಷ್ಣ ಹೆಗಡೆ ಅವರು, ಆಲಸ್ಯದ ಧೋರಣೆಯಿಂದ ಸರ್ಕಾರ 'ರೆಂಕೋ' ಅವನತಿಗೆ ಕಾರಣವಾಗಿದೆ ಎಂದು ಆರೋಪಿಸಿದರು.

'ರೆಂಕೋ' ಕಾರ್ಖಾನೆ ಬಗ್ಗೆ ಸರ್ಕಾರಿ ಉದ್ಯಮ ಸಮಿತಿಯ ವರದಿ ವಿಚಾರದಲ್ಲಿ ಎರಡೂವರೆ ಗಂಟೆಯ ಚರ್ಚೆ ಪ್ರಾರಂಭಿಸಿದ ಹೆಗಡೆ ಅವರು, ಆಲಸ್ಯದ ನೀತಿಯಿಂದ 'ರೆಂಕೋ'ವಿಗೆ ದಕ್ಕಬೇಕಾಗಿದ್ದ ಒಂದೂವರೆ ಕೋಟಿ ರೂಪಾಯಿ ಬಂಡವಾಳದ ಎಲೆಕ್ಟ್ರಾನಿಕ್ ಉದ್ಯಮ ನಷ್ಟವಾಯಿತು ಎಂದು ವಿವರಿಸಿದರು.

● **ವೈದ್ಯರೊಬ್ಬರ ವರ್ತನೆ: ಆಪಾದನೆ ಸ್ಥಿರವಾದಲ್ಲಿ ಉಗ್ರ ಕ್ರಮದ ಭರವಸೆ**

ಬೆಂಗಳೂರು, ಅ. 17– ಆಸ್ಪತ್ರೆಗೆ ಬಂದ ಗರ್ಭಿಣಿಯೊಬ್ಬರಿಗೆ ಸಕಾಲದಲ್ಲಿ ವೈದ್ಯಕೀಯ ಸೇವೆ ನೀಡಲಿಲ್ಲವೆಂಬ ಆಪಾದನೆಗೆ ಗುರಿಯಾಗಿರುವ ಚಿಂತಾಮಣಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಬಾಲಮಣಿ ಅವರನ್ನು ಈಗ ಸೋಮವಾರಪೇಟೆಗೆ ವರ್ಗಾಯಿಸಲಾಗಿದೆ. ಆಪಾದನೆ ಸ್ಥಿರವಾದಲ್ಲಿ ಸಸ್ಪೆಷನ್‌ಗಿಂತ ತೀವ್ರ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ಎಚ್. ಸಿದ್ಧವೀರಪ್ಪ ಅವರು ಇಂದು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ನೈಸರ್ಗಿಕ ಸಂಪನ್ಮೂಲದ ಸದ್ಬಳಕೆಗೆ ಪರಿಸರಸ್ನೇಹಿ ತಂತ್ರಜ್ಞಾನ ಅಳವಡಿಕೆ ಅಗತ್ಯ

ಕೊಳೆ ಕಳೆಯಬಲ್ಲ ಕಾಬಾಳೆ!

ವಿಶ್ಲೇಷಣೆ

ಕೇಶವ ಎಚ್. ಕೊರ್ಸೆ

ತೊಂಬತ್ತರ ದಶಕದ ಮಧ್ಯಭಾಗವದು. ಚೆನ್ನೈನ ಎಂ.ಎಸ್.ಸ್ವಾಮಿನಾಥನ್ ಸಂಶೋಧನಾ ಸಂಸ್ಥೆಯು 'ಸುಸ್ಥಿರ ತಂತ್ರಜ್ಞಾನ' ಕುರಿತ ರಾಷ್ಟ್ರೀಯ ಸಮ್ಮೇಳನವೊಂದನ್ನು ಆಯೋಜಿಸಿತ್ತು. 'ಹಸಿರುಕ್ರಾಂತಿ'ಯು ಸೃಜಿಸಿದ್ದ ಅಪಾಯಗಳ ಅಗಾಧತೆಯನ್ನು ಅದಾಗಲೇ ಅರಿತಿದ್ದ ವಿಜ್ಞಾನಿ ಸ್ವಾಮಿನಾಥನ್, ಆ ಸವಾಲುಗಳನ್ನು ಮೀರಲು ಸಾಂಸ್ಥಿಕ ಉಪಾಯಗಳನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದ ದಿನಗಳವು.

ಬೆಂಗಳೂರಿನ ಐಐಎಸ್‌ಸಿ ರೂಪಿಸಿದ್ದ ಹೊಗೆರಹಿತ ಅಸ್ತ್ರಒಲೆ, ಮುಂಬೈ ಐಐಟಿ ಅಭಿವೃದ್ಧಿಪಡಿಸಿದ್ದ ಜೈವಿಕ ಅನಿಲ ಯಂತ್ರ, ಟೆರಿ ಸಂಸ್ಥೆ ಸಂಶೋಧಿಸಿದ್ದ ಕೊಳಚೆ ಸಂಸ್ಕರಣೆ ವಿಧಾನ, ಕೇರಳದಲ್ಲಿ ಬಳಸತೊಡಗಿದ್ದ ಲಾರಿ ಬೇಕರ್ ವಿಧಾನದ ಪರಿಸರಸ್ನೇಹಿ ಮನೆಗಳು... ಹೀಗೆ, ದೇಶದಾದ್ಯಂತದ ಹಲವಾರು ವಿಶಿಷ್ಟ ತಂತ್ರಜ್ಞಾನಗಳ ಕುರಿತು ಅಲ್ಲಿ ಚರ್ಚೆಯಾಗಿತ್ತು. ಅವುಗಳ ಭವಿಷ್ಯ ಹಾಗೂ ಪ್ರಸ್ತುತತೆಯು ಆಗ ಅಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದ ನನ್ನ ಊಹೆಗೆ ನಿಲುಕಿರದಿದ್ದರೂ, ಆ ಚರ್ಚೆಗಳಲ್ಲಿದ್ದ ವೈವಿಧ್ಯ ಕಂಡು ಚಕಿತನಾಗಿದ್ದೆ. ಅಂಥ 'ಹಸಿರುತಂತ್ರ'ಗಳನ್ನೆಲ್ಲ ಪ್ರಯೋಗಕ್ಕಿಳಿಸುವ ಸಂಶೋಧನೆಗಳು ಮುಂದಿನ ದಿನಗಳಲ್ಲಿ ನಿರಂತರ ಸಾಗಿಬಂದದ್ದು ಈಗ ಇತಿಹಾಸ.

ಮೂರು ದಶಕಗಳ ನಂತರದ ಈಗಿನ ಪರಿಸ್ಥಿತಿಯನ್ನು ಅವಲೋಕಿಸಿದರೆ, ಜಾಗತಿಕ ಪರಿಸರ ಆರೋಗ್ಯ ಇನ್ನಷ್ಟು ತೀವ್ರವಾಗಿ ಕುಸಿಯುತ್ತಿದೆ, ಹವಾಮಾನ ಬದಲಾವಣೆಯಿಂದಾಗಿ ಜೈವಿಕ ಪರಿಸರದ ಅಡಿಪಾಯ ಧ್ವಂಸಗೊಳ್ಳುತ್ತಿದೆ. ಹೀಗಾಗಿ, ಅಭಿವೃದ್ಧಿ ವಿಧಾನಗಳು ಪರಿಸರ ಸುರಕ್ಷತೆಯ ಚೌಕಟ್ಟು ಮೀರದಂತೆ ನೋಡಿಕೊಳ್ಳಲು, ಸುಸ್ಥಿರ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಈಗ ಆಯ್ಕೆಯಲ್ಲ, ಅನಿವಾರ್ಯವಾಗಿದೆ!

ಭಾರತದಲ್ಲಿನ ಪರಿಸರ ಪರಿಸ್ಥಿತಿಯಂತೂ ಜನಸಂಖ್ಯಾ ಹೆಚ್ಚಳದಿಂದಾಗಿ ಇನ್ನಷ್ಟು ಜಟಿಲವಾಗುತ್ತಿದೆ. ಅಭಿವೃದ್ಧಿ ಯೋಜನೆಗಳು ಹಾಗೂ ಉದ್ಯಮಗಳಲ್ಲಿ ಸುರಕ್ಷಿತ ತಂತ್ರಜ್ಞಾನಗಳನ್ನು ಸಂತುಲಿತಗೊಳಿಸಬೇಕಾದದ್ದು ಇಂದಿನ ತುರ್ತೇ ಸರಿ. ನೈಸರ್ಗಿಕ ಸಂಪನ್ಮೂಲಗಳ ಮಿತಬಳಕೆ, ಸರಕುಗಳ ಮರುಬಳಕೆ, ತ್ಯಾಜ್ಯದ ಸಂಸ್ಕರಣೆ ಹಾಗೂ ಪುನರ್ಬಳಕೆಯಂತಹ ಅಂಶಗಳ 'ಚಕ್ರೀಯ ಆರ್ಥಿಕತೆ' ಸಾರುವುದು ಇದನ್ನೇ. ಜಗತ್ತಿನ ಮೂರು ಪ್ರಮುಖ ಆರ್ಥಿಕತೆಗಳಲ್ಲಿ ಸ್ಥಾನ ಪಡೆಯುವತ್ತ ದೇಶವು ಈಗ ಸಾಗಿರುವಾಗ, ಈ ಬಗೆಯ ಪರಿಸರಸ್ನೇಹಿ ತಂತ್ರಜ್ಞಾನ ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳುವ ಉದ್ಯಮದ ವಾತಾವರಣ ನಿರ್ಮಾಣವಾಗಬೇಕಿದೆ. ಈ ತಿಂಗಳ ಮೊದಲ ವಾರದಲ್ಲಿ ಚೆನ್ನೈ ಐಐಟಿಯಲ್ಲಿ ಉದ್ಘಾಟನೆಯಾದ ಉನ್ನತಮಟ್ಟದ 'ಸುಸ್ಥಿರ ಅಭಿವೃದ್ಧಿ ಕೇಂದ್ರ'ವು ದೇಶವಿದೇಶಗಳ ಗಮನ ಸೆಳೆದಿರುವುದು ಈ ಕಾರಣಕ್ಕಾಗಿ.

ಸುಸ್ಥಿರ ತಂತ್ರಜ್ಞಾನದ ವ್ಯಾಪ್ತಿ ಹಿಗ್ಗಿಸುವ ಸಂಶೋಧನೆಗಳ ಜೊತೆಗೆ, ಮಾನವ ಸಂಪನ್ಮೂಲ ವೃದ್ಧಿ, ಕೌಶಲ ತರಬೇತಿ, ಅವುಗಳ ಅನುಷ್ಠಾನಕ್ಕೆ ಆರ್ಥಿಕ ಕ್ರೋಡೀಕರಣ, ಅವನ್ನು ಕೈಗೆತ್ತಿಕೊಳ್ಳಬಲ್ಲ ನವೋದ್ಯಮಿಗಳಿಗೆ ಮಾರ್ಗದರ್ಶನ– ಈ ಎಲ್ಲ ಆಯಾಮಗಳಲ್ಲಿ ಕಾರ್ಯಕ್ರಮ ರೂಪಿಸುವ ಆಶಯ ಚೆನ್ನೈ ಐಐಟಿಯದು. ಪರಿಸರ ಅಸಮತೋಲನದ ಸಂಕಟಗಳಿಂದ ಹೊರಬರಲು ವಿಶ್ವವು ಶ್ರಮಿಸುತ್ತಿರುವ ಈ ಗಳಿಗೆಯಲ್ಲಿ, ಈ ಬಗೆಯ ಪ್ರಯತ್ನಗಳು ನಿಜಕ್ಕೂ ಆಶಾವಾದ ಹುಟ್ಟಿಸುವಂಥವು.

ಇಂಥ ತಂತ್ರಜ್ಞಾನಗಳ ಕುರಿತು ಯಾಕಿಷ್ಟು ನಿರೀಕ್ಷೆ? ಸಮಕಾಲೀನ ಸಮಸ್ಯೆಯೊಂದಕ್ಕೆ ಪರಿಣಾಮಕಾರಿ ಪರಿಹಾರ ಒದಗಿಸಬಲ್ಲ ಸರಳ ತಂತ್ರವೊಂದನ್ನು ಪರಿಶೀಲಿಸುವುದರೊಂದಿಗೆ ಅದನ್ನು ಅರ್ಥೈಸಿಕೊಳ್ಳಬಹುದು. ಉದ್ಯಾನಗಳಲ್ಲೋ ಮನೆಯಂಗಳದ ಕೈತೋಟದಲ್ಲೋ ನೀವು 'ಕಾಬಾಳೆ ಗಿಡ'ವನ್ನು ನೋಡಿರುತ್ತೀರಿ. ಶುಂಠಿಗಿಡದ ವರ್ಗ ಹಾಗೂ ಬಾಳೆಗಿಡದ ಸಹೋದರ ಕುಟುಂಬದ ಸಸ್ಯವಿದು. ಗಡ್ಡೆಯಿಂದ ಚಿಗುರಿ ಆಳೆತ್ತರಕ್ಕೆ ಗುಂಪಾಗಿ ಬೆಳೆಯುವ ಗಿಡ. ಎರಡು ಅಡಿ ಉದ್ದದ ಬಾಳೆಎಲೆಯನ್ನು ಹೋಲುವ ಹಸಿರು ಎಲೆಗಳು, ಗಿಣಿಯಂತೆ ತೋರುವ ಬಣ್ಣಬಣ್ಣದ ಹೂಗಳು! ದೂರದಿಂದಲೇ ನೋಡುಗರ ಮನದಲ್ಲಿ ಸಂತಸದ ತಂಗಾಳಿ ಮೂಡಿಸಬಲ್ಲ ಈ ಹೂಗಿಡವೆಂದರೆ, ಹೂತೋಟಿಗರೆಲ್ಲರಿಗೂ ಅಚ್ಚುಮೆಚ್ಚು.

ಈ ಅಲಂಕಾರಿಕ ಹೂಗಿಡ ಇದೀಗ ಸುಸ್ಥಿರ ಅಭಿವೃದ್ಧಿ ವಿಧಾನಗಳಲ್ಲಿ ತೊಡಗಿಕೊಂಡಿರುವ ವೃತ್ತಿಪರರೆಲ್ಲರ ಗಮನ ಸೆಳೆಯುತ್ತಿದೆ. ಜನವಸತಿಯ ಕೊಳಚೆಯನ್ನು ಸಂಸ್ಕರಿಸಲು ಈ ಗಿಡವನ್ನು ಆಧರಿಸಿದ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಬಹುದು ಎಂಬುದನ್ನು, ಮೂರು ದಶಕಗಳಿಂದ ವಿವಿಧ ಬಗೆಯಲ್ಲಿ ಕೈಗೊಂಡಿರುವ ಪ್ರಯೋಗಗಳು ನಿರೂಪಿಸಿವೆ. ನಗರಗಳಲ್ಲಿ ಈಗ ಬಳಕೆಯಲ್ಲಿರುವ ಕೊಳಚೆ ಶುದ್ಧೀಕರಣ ಘಟಕಗಳ ಸ್ಥಾಪನೆ ಹಾಗೂ ನಿರ್ವಹಣೆ ಬಹಳ ವೆಚ್ಚದಾಯಕ ತಾನೇ? ಇದಕ್ಕೆ ಭ್ರಷ್ಟಾಚಾರವೂ ಜೊತೆಯಾಗಿ, ಭಾರತದ ಬಹುತೇಕ ಪಟ್ಟಣಗಳ ಕೊಳಚೆ ಸಂಸ್ಕರಣೆ ಅರೆಬರೆಯಾಗಿಯೇ ಸಾಗಿದೆ. ಅಲ್ಲಿಂದ ಹೊರಬಿದ್ದ ಕಶ್ಮಲಯುಕ್ತ ನೀರು ಜಲಮೂಲ ಸೇರಿ, ಸಾರ್ವಜನಿಕ ಆರೋಗ್ಯವನ್ನು ಹದಗೆಡಿಸುತ್ತಿದೆ. ಇಂಥ ಸಂದರ್ಭದಲ್ಲಿ, ಕಡಿಮೆ ವೆಚ್ಚದಿಂದ ಸರಳವಾಗಿ ರೂಪಿಸಬಹುದಾದ 'ಕಾಬಾಳೆ ಗಿಡ'ದ ತಂತ್ರಜ್ಞಾನ ವರವಾಗುವ ಎಲ್ಲ ಸಾಧ್ಯತೆಗಳಿವೆ.

ಕೊಳಚೆ ಹೊರಬಿಡುವ ಸ್ಥಳದಲ್ಲಿ ಕೃತಕ ಜೌಗೊಂದನ್ನು ನಿರ್ಮಿಸಿ, ಈ ಗಿಡಗಳನ್ನು ಒತ್ತೊತ್ತಾಗಿ ಬೆಳೆಸಲಾಗುತ್ತದೆ. ಒಂದೆರಡು ಸಾವಿರ ಚದರ ಅಡಿಯ ಅಂಥ ಜೌಗನ್ನು 'ಕಾಬಾಳೆ ಗದ್ದೆ' ಎನ್ನಬಹುದು. ಊರು–ಕೇರಿಯಿಂದ ಹರಿದುಬರುವ ಕೊಳಚೆಯನ್ನು ಈ ಜೌಗಿನಲ್ಲಿ ಹರಿಬಿಡಲಾಗುವುದು. ಪಟ್ಟಣ- ನಗರಗಳಲ್ಲಾದರೆ, ಕೊಳಚೆನೀರು ಸಂಸ್ಕರಣೆಗೆ ಬಳಸುವ ಸಂಚಯ ಹೊಂಡ, ಜೈವಿಕ ಸೋಸುಹೊಂಡ ಹಾಗೂ ಆಮ್ಲಜನಕ ಹೆಚ್ಚಿಸುವ ಕೊಳದಿಂದ ಹರಿದುಬರುವ ಅರೆ ಸಂಸ್ಕರಿಸಿದ ನೀರನ್ನು ಈ ಕಾಬಾಳೆಗದ್ದೆಗೆ ಹಾಯಿಸಬಹುದು. ಕೊಳಚೆಯು ಆ ಜೌಗಿನಗುಂಟ ನಿಧಾನವಾಗಿ ಹರಿದು ಮತ್ತೊಂದು ತುದಿ ತಲುಪುವ ವೇಳೆಗೆ, ಕೊಳಚೆನೀರು ಸಂಸ್ಕರಣೆಯಾಗಿ ಬಹುತೇಕ ಶುದ್ಧನೀರು ಹೊರ ಹರಿಯತೊಡಗುತ್ತದೆ! ಇದನ್ನು ಕೃಷಿಗೋ ಜಲಮರುಪೂರಣಕ್ಕೋ ಬಳಸಬಹುದು.

ಈ ಚಮತ್ಕಾರ ಘಟಿಸುವುದು ಹೇಗೆ? ವೇಗವಾಗಿ ಬೆಳೆಯುವ ಈ ಗಿಡದ ಬುಡದಲ್ಲಿ ಗಡ್ಡೆಗಳಿದ್ದು, ಅಸಂಖ್ಯ ನಾರುಬೇರಿನ ಜಾಲವಿದೆ. ಇವಕ್ಕೆ ಅಂಟಿಕೊಂಡು ಅಪಾರ ಪ್ರಮಾಣದ ಬ್ಯಾಕ್ಟೀರಿಯಾಗಳು ವೃದ್ಧಿಯಾಗಿ, ನೀರಿನ ಲವಣಗಳನ್ನೆಲ್ಲ ಹೀರಿಕೊಳ್ಳುತ್ತವೆ. ಸಾರಜನಕವನ್ನು ಗಿಡವು ಬಳಸುವ ನೈಟ್ರೇಟ್ ಪೋಷಕಾಂಶವಾಗಿ ಪರಿವರ್ತಿಸುತ್ತದೆ. ಗಿಡದ ಬೇರು, ಗಡ್ಡೆಯಲ್ಲಿರುವ ವಾಯು-ಚೀಲದಂತಿರುವ ದೊಡ್ಡ ಜೀವಕೋಶಗಳು ಅಪಾರ ಪ್ರಮಾಣದಲ್ಲಿ ಕೊಳಚೆನೀರನ್ನು ಹೀರಿ, ಕರಗಿರುವ ಲವಣಾಂಶಗಳನ್ನು ಇರಿಸಿಕೊಂಡು, ಶುದ್ಧನೀರನ್ನು ಹೊರಬಿಡುತ್ತವೆ. ಹೀಗೆ, ನೀರಲ್ಲಿರುವ ಇಂಗಾಲ, ಸಾರಜನಕ, ರಂಜಕ, ಮ್ಯಾಗ್ನೀಶಿಯಂ, ಭಾರಲೋಹದಂತಹವುಗಳ ಪ್ರಮಾಣ ಕಡಿಮೆಯಾಗುತ್ತದೆ. ಸಾವಿರಾರು ಗಿಡಗಳ ಗಡ್ಡೆ, ಬೇರುಗಳ ಜಾಲದಲ್ಲಿ ಈ ಪ್ರಕ್ರಿಯೆ ನಿರಂತರ ಪುನರಾವರ್ತನೆಯಾದಾಗ, ಲವಣಾಂಶದ ಪ್ರಮಾಣ ತಗ್ಗಿ, ಆಮ್ಲಜನಕ ಹೆಚ್ಚಿ, ಆಮ್ಲೀಯತೆ ತಟಸ್ಥವಾಗಿ, ನೀರು ಸಹಜ ಸ್ಥಿತಿಗೆ ಬರತೊಡಗುತ್ತದೆ.

ಅಲ್ಲಿ ಸುಲಭವಾಗಿ ಬೆಳೆಯುವ ಕಾಬಾಳೆ ಗಿಡಗಳನ್ನು ವರ್ಷಕ್ಕೆ ಒಂದೆರಡು ಬಾರಿ ಕೊಯಿಲು ಮಾಡಬಹುದು. ಅಪಾರ ಲವಣಾಂಶವಿರುವ ಈ ದ್ರವ್ಯರಾಶಿಯನ್ನು ಪೋಷಕಾಂಶಯುಕ್ತ ಸಾವಯವ ಗೊಬ್ಬರವಾಗಿಸಬಹುದು. ಅಷ್ಟೇಅಲ್ಲ, ಅದರ ಗಡ್ಡೆಗಳನ್ನು ಕೊಳೆಸಿ ಪಡೆಯುವ 'ಪಾಲಿಲ್ಯಾಕ್ಟಿಕ್ ಆಮ್ಲ'ವನ್ನು (ಪಿಎಲ್ಎ), ಸುಲಭವಾಗಿ ಮಣ್ಣಿನಲ್ಲಿ ಕರಗುವ 'ಜೈವಿಕ ಪ್ಲಾಸ್ಟಿಕ್' ಉತ್ಪಾದನೆಗೆ ಬಳಸಬಹುದೆಂದು ಸಂಶೋಧನೆಗಳು ತೋರಿಸಿವೆ. ದೈನಂದಿನ ಬಳಕೆ ಉತ್ಪನ್ನಗಳ ಪ್ಯಾಕೇಜಿಂಗ್ ಹಾಗೂ ಸಾಗಣೆಯಲ್ಲಿ ಬಳಸಿ ಬಿಸಾಡುತ್ತಿರುವ ಪೆಟ್ರೋಲಿಯಂ ಮೂಲದ ಪ್ಲಾಸ್ಟಿಕ್ ಒಂದು ಜಾಗತಿಕ ಸಮಸ್ಯೆಯಾಗಿರುವಾಗ, ಅದರ ಬದಲು ಮಣ್ಣಲ್ಲಿ ಮಣ್ಣಾಗಬಲ್ಲ ಈ ಜೈವಿಕ ಪ್ಲಾಸ್ಟಿಕ್ ಬಳಕೆ ಸಾಧ್ಯವಾದರೆ, ಜಾಗತಿಕ ಪರಿಸರಕ್ಕೆ ದೊಡ್ಡ ಜೀವದಾನ ನೀಡಿದಂತಲ್ಲವೇ?

ಇಂಥ ಸುಸ್ಥಿರ ತಂತ್ರಜ್ಞಾನಗಳನ್ನು ಅಭಿವೃದ್ಧಿ ವಿಧಾನಗಳ ಮುಖ್ಯವಾಹಿನಿಗೆ ತರುವ ನೀತಿಯನ್ನು ಸರ್ಕಾರ ಆದ್ಯತೆಯಲ್ಲಿ ರೂಪಿಸಬೇಕು. ಬಹುಶಃ, ಇತ್ತೀಚೆಗೆ ವಿಧಿವಶರಾದ ಎಂ.ಎಸ್.ಸ್ವಾಮಿನಾಥನ್ ಅವರನ್ನು ಸ್ಮರಿಸುವ ಉತ್ಕೃಷ್ಟ ಮಾರ್ಗವಾಗಬಲ್ಲದು ಅದು.

ಚುರುಮುರಿ

ಕ್ರಿಕೆಟ್ ಆಫರ್

● ಮಣ್ಣೆರಾಜು

ಟಿ.ವಿ. ಖರೀದಿಸಲು ಶಂಕ್ರಿ, ಸುಮಿ ಬಂದಿದ್ದರು.

'ಹಬ್ಬಕ್ಕೆ ಬಟ್ಟೆ, ಒಡವೆ ಖರೀದಿಸುವಂತೆ ಕ್ರಿಕೆಟ್ ಹಬ್ಬಕ್ಕೆ ಹೊಸ ಟಿ.ವಿ. ಕೊಳ್ಳುವುದು ಒಳ್ಳೆಯ ಸಂಪ್ರದಾಯ ಸಾರ್...' ಎನ್ನುತ್ತಾ ಟಿ.ವಿ. ಅಂಗಡಿ ಓನರ್ ಸ್ವಾಗತಿಸಿದ.

'ಟಿ.ವಿಯ ಬೆಲೆಗೆ ಒಡವೆ ಕೊಳ್ಳಬಹುದಿತ್ತು. ಆದರೆ ನಮ್ಮ ಸಂಬಂಧಿಯೊಬ್ಬರು ದೊಡ್ಡ ಸ್ಕ್ರೀನ್ ಟಿ.ವಿ. ಕೊಂಡು ನಮಗೆ ಹೊಟ್ಟೆ ಉರಿಸಿದ್ದಾರೆ. ಆ ಸಂಕಟ ನಿವಾರಣೆಗೆ ಟಿ.ವಿ. ಕೊಳ್ಳಲು ಬಂದಿದ್ದೇವೆ' ಎಂದಳು ಸುಮಿ.

'ಗುಣಮಟ್ಟದ ಟಿ.ವಿ. ತೋರಿಸಿ' ಅಂದ ಶಂಕ್ರಿ.

'ಈ ಟಿ.ವಿಯಲ್ಲಿ ಕ್ರಿಕೆಟ್ ನೋಡುತ್ತಿದ್ದರೆ ಸ್ಟೇಡಿಯಂನಲ್ಲಿ ಕುಳಿತು ನೋಡುವಂತಹ ಅನುಭವವಾಗುತ್ತದೆ. ರೋಹಿತ್ ಶರ್ಮಾ ಸಿಕ್ಸರ್ ಹೊಡೆದ ಚೆಂಡು ನಿಮ್ಮ ತಲೆ ಮೇಲೆ ಬಂದು ಬಿತ್ತೇನೋ ಅಂತ ಅನಿಸುತ್ತದೆ. ವಿರಾಟ್ ಕೊಹ್ಲಿ ಬಾರಿಸುವ ಬೌಂಡರಿಯ ಬಾಲು ನಿಮ್ಮ ಕಾಲಬುಡಕ್ಕೆ ಬಂದು ಬೀಳುವಂತಹ ಫೀಲಿಂಗ್ ಬರುತ್ತದೆ'.

'ದೀರ್ಘ ಬಾಳಿಕೆಯ ರಿಮೋಟ್ ಕೊಡಿ. ಹಾರ್ದಿಕ್ ಪಾಂಡ್ಯ ಔಟಾದರೆ ನನ್ನ ಗಂಡ ಸಂಕಟದಿಂದ ರಿಮೋಟನ್ನು ನೆಲಕ್ಕೆ ಬಡಿದು ಹಾಳು ಮಾಡ್ತಾರೆ' ಅಂದಳು ಸುಮಿ.

'ಈ ರಿಮೋಟ್‌ನಲ್ಲಿ ತಲೆ ಚಚ್ಚಿಕೊಂಡರೂ ಗಾಯವಾಗಲ್ಲ, ನೆಲಕ್ಕೆ ಬಡಿದರೂ ರಿಮೋಟ್ ಒಡೆಯಲ್ಲ' ಅಂದ ಓನರ್.

'ಚಾನೆಲ್ ಚೇಂಜ್ ಮಾಡುವಂತೆ ಹೆಂಡತಿಯ ಸ್ವಭಾವ ಚೇಂಜ್ ಮಾಡುವ ರಿಮೋಟ್ ಇದೆಯೇ?' ಓನರ್‌ಗೆ ಪಿಸುಗುಟ್ಟಿದ ಶಂಕ್ರಿ.

'ಹೆಂಡ್ತೀನೆ ಒಂದು ರಿಮೋಟ್. ಆಕೆ ಚೇಂಜ್ ಮಾಡಿದಂತೆ ಗಂಡ ಚೇಂಜ್ ಆಗಿ ಬಾಳುವುದು ಜಾಣತನ ಸಾರ್...' ಅಂತ ನಕ್ಕ.

'ವಿಶ್ವಕಪ್ ಆಫರ್ ಇದೆಯಾ?' ಸುಮಿ ಕೇಳಿದಳು.

'ಇದೆ ಮೇಡಂ. ಭಾರತವು ಕಪ್ ಗೆದ್ದರೆ ಇಪ್ಪತ್ತು ಪರ್ಸೆಂಟ್ ಕ್ಯಾಷ್‌ಬ್ಯಾಕ್ ಕೊಡ್ತೀವಿ' ಅಂದ. ಶಂಕ್ರಿ, ಸುಮಿ ಖುಷಿಯಾಗಿ ಟಿ.ವಿ. ಖರೀದಿಸಿ ಹೊರಟರು.

ಸಂಗತ

ವಸ್ತ್ರ ಅನುಬಂಧ: ಮರುಬಳಕೆಗಿರಲಿ ಅವಕಾಶ

ವಸ್ತುಗಳ ಮರುಬಳಕೆಗೆ ಅವಕಾಶ ಕಲ್ಪಿಸುವುದು ಸಂಸ್ಕೃತಿಯಾಗಿ ಬೆಳೆಯಬೇಕು

● ಮಲ್ಲಿಕಾರ್ಜುನ ಹೆಗ್ಗಳಗಿ

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಖಾದಿ ಧೋತರವನ್ನೇ ಸೀರೆ ಮಾಡಿಕೊಂಡು ಅವರ ಮಗಳು ಮಣಿಬೆನ್ ಧರಿಸುತ್ತಿದ್ದರು. ಮಣಿಬೆನ್ ನೂತ ನೂಲಿನಿಂದಲೇ ಸಿದ್ಧವಾದ ಬಟ್ಟೆಯನ್ನು ಪಟೇಲರು ಧರಿಸುತ್ತಿದ್ದರು. ಪಟೇಲರು ಉಪಪ್ರಧಾನಿಯಾಗಿದ್ದಾಗಲೂ ತಂದೆ, ಮಗಳು ಈ 'ವಸ್ತ್ರ ಅನುಬಂಧ'ವನ್ನು ಪಾಲಿಸುತ್ತಿದ್ದರು. ನಂದಿ ಬೆಟ್ಟದಲ್ಲಿ ವಿಶ್ರಾಂತಿಗಾಗಿ ತಂಗಿದ್ದ ಪಟೇಲರ ಜೊತೆಗಿದ್ದ ಮಣಿಬೆನ್ ಅವರಿಗೆ ರೇಷ್ಮೆ ಸೀರೆ ಉಡುಗೊರೆ ಕೊಡಲು ಅಭಿಮಾನಿಗಳು ಬಂದಿದ್ದರು. ತಮ್ಮ ಈ ಅನುಬಂಧವನ್ನು ವಿವರಿಸಿ ಅವರು ಉಡುಗೊರೆ ಪಡೆಯಲು ನಿರಾಕರಿಸಿದ್ದರು.

ಬಟ್ಟೆಬರೆ, ಪುಸ್ತಕ ಮರುಬಳಕೆಯ ಕುರಿತು 'ಅಡ್ಡಗೋಡೆ ಮೆಟ್ಟನಿಲ್ಲಲಿ ಕರುಣೆಯ ಗೋಡೆ' ಎಂಬ ಪತ್ರವನ್ನು (ವಾ.ವಾ., ಅ. 10) ಓದಿದಾಗ, ಪಟೇಲ್ ಅವರ ಮಗಳು ತಂದೆಯ ಧೋತರವನ್ನು ಮರುಬಳಕೆ ಮಾಡುತ್ತಿದ್ದ ಅಪರೂಪದ ಸಂಗತಿ ನೆನಪಾಯಿತು.

ತಮಗೆ ಬೇಡವಾದ ವಸ್ತುಗಳನ್ನು ಅವಶ್ಯವಿದ್ದವರಿಗೆ ವ್ಯವಸ್ಥಿತವಾಗಿ ತಲುಪಿಸುವುದು ಒಂದು ಒಳ್ಳೆಯ ಸೇವೆ. ಕೊಟ್ಟವರಿಗೆ ಭಾರವಾಗದ, ಪಡೆದುಕೊಂಡವರಿಗೆ ಬೆಳಕಾಗುವ ಕಾರ್ಯವಿದು. ಇದನ್ನು ಪ್ರೀತಿ, ಶ್ರದ್ಧೆಯಿಂದ ಮಾಡಬೇಕು. 60–70ರ ದಶಕದಲ್ಲಿ ನಾವು ವಿದ್ಯಾರ್ಥಿಗಳಾಗಿದ್ದಾಗ, ಉತ್ತೀರ್ಣರಾಗಿ ಮುಂದಿನ ಕ್ಲಾಸಿಗೆ ಹೋದವರ ಪಠ್ಯಪುಸ್ತಕಗಳನ್ನು ಪಡೆದುಕೊಳ್ಳುತ್ತಿದ್ದೆವು. ಅವುಗಳಿಗೆ ಹೊಸ ಕವರ್ ತೊಡಿಸಿ, ಕಿತ್ತ ಪುಟಗಳಿಗೆ ಅಂಟು ಲೇಪಿಸಿ ಸರಿಪಡಿಸುತ್ತಿದ್ದೆವು. ಇವೇ ಪುಸ್ತಕಗಳನ್ನು ನಮ್ಮ ನಂತರ ಬರುವ ವಿದ್ಯಾರ್ಥಿಗಳಿಗೆ ಪರೀಕ್ಷೆಯ ನಂತರ ಹಸ್ತಾಂತರಿಸುತ್ತಿದ್ದೆವು. ಒಂದು ಪಠ್ಯಪುಸ್ತಕ 5–6 ವರ್ಷ ಉಪಯೋಗ ಆಗುತ್ತಿತ್ತು. ಸರ್ಕಾರಿ ಶಾಲೆಗಳಲ್ಲಿ ಈ ಪದ್ಧತಿ ಸ್ವಲ್ಪ ಮಟ್ಟಿಗೆ ಈಗಲೂ ಜಾರಿಯಲ್ಲಿದೆ. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರತಿವರ್ಷ ಹೊಸ ಪುಸ್ತಕ ಪೂರೈಸುತ್ತಿವೆ.

ವಸ್ತುಗಳ ಮರುಬಳಕೆಯನ್ನು ಆರ್ಥಿಕ ಉಳಿತಾಯದ ದೃಷ್ಟಿಯಿಂದಲೂ ನೋಡುವುದು ಬಹಳ ಮುಖ್ಯ. ಉಚಿತವಾಗಿ ಸಿಗುವ ಹಳೆಯ ವಸ್ತುಗಳನ್ನು ಅಗತ್ಯ ಎಂದು ಪರಿಗಣಿಸಿ ಪಡೆದವರಿಗೆ ದೊಡ್ಡ ಊರುಗೋಲು. ಹೊಸ ವಸ್ತುಗಳನ್ನು ಕೊಳ್ಳಲು ಕೆಲವರಿಗೆ ಸಾಧ್ಯವಾಗುವುದಿಲ್ಲ. ಈ ಕಾರಣಕ್ಕಾಗಿ ಅವರು ಪರಿತಪಿಸಬೇಕಾಗುತ್ತದೆ. ತಮಗೆ ಉಪಯೋಗವಿಲ್ಲದ ವಸ್ತುವನ್ನು ಅಗತ್ಯ ಇರುವವರಿಗೆ ಕೊಟ್ಟರೆ ಅವರ ಬದುಕು ಸುಗಮವಾಗುತ್ತದೆ.

ಪತ್ರಿಕೆ ಹಂಚುವ ಹುಡುಗನೊಬ್ಬನಿಗೆ ನನ್ನ ಸ್ನೇಹಿತರೊಬ್ಬರು ತಮ್ಮ ಹಳೆಯ ಸೈಕಲ್ ನೀಡಿದರು. ಈಗ ಅವನು ಖುಷಿಯಿಂದ ಪಾರ್ಟ್‌ಟೈಮ್ ಕೆಲಸ ಮಾಡುತ್ತಾ ಶಿಕ್ಷಣ ಮುಂದುವರಿಸಿದ್ದಾನೆ.

ಪತ್ರಕರ್ತ ಪಿ.ಲಂಕೇಶ್ ತಮ್ಮ 'ಸುಮ್ಮನೆ ಕಳೆದ ಒಂದು ದಿನ' ಪ್ರಬಂಧದಲ್ಲಿ, ಶರ್ಟಿನ ಕಿತ್ತುಹೋದ ಗುಂಡಿಯನ್ನು ಮನೆಯಲ್ಲಿಯ ಸೂಜಿ ದಾರದಿಂದ ಸರಿಪಡಿಸಿ ಬಳಸತೊಡಗಿದ್ದನ್ನು ವಿವರಿಸಿದ್ದಾರೆ. ಪ್ರತಿ ಮನೆಯಲ್ಲಿ ಸೂಜಿ, ದಾರ, ಗುಂಡಿಗಳನ್ನು ಇಟ್ಟುಕೊಂಡಿರಬೇಕು ಎಂಬ ಸಲಹೆ ಬಹಳ ಉಪಯುಕ್ತವಾಗಿದೆ. ಮನೆಯಲ್ಲಿಯ ಬಟ್ಟೆಗಳನ್ನು ಸರಿಪಡಿಸಿ ಪುನಃ ಬಳಸುವಂತೆ ಸರಳವಾಗಿ ಮಾಡಬಹುದಾಗಿದೆ.

ಗ್ರಾಮೀಣ ಮಹಿಳೆಯರು ಹಳೆಯ ಬಟ್ಟೆಗಳನ್ನು ಕಲಾತ್ಮಕವಾಗಿ ಜೋಡಿಸಿ ಕೌದಿಗಳನ್ನು ಸಿದ್ಧಪಡಿಸುತ್ತಾರೆ. ಚಳಿಗಾಲದಲ್ಲಿ ಬೆಚ್ಚಗೆ, ಬೇಸಿಗೆಯಲ್ಲಿ ತಂಪು ನೀಡುವ ವಿಶೇಷ ಗುಣ ಕೌದಿಗೆ ಇದೆ. ಕೌದಿಯನ್ನು ಜನಪ್ರಿಯಗೊಳಿಸಿದರೆ ಗ್ರಾಮೀಣ ಮಹಿಳೆಯರಿಗೆ ಉದ್ಯೋಗಾವಕಾಶ ದೊರೆಯುವುದು.

ಕೊಪ್ಪಳ ಜಿಲ್ಲೆಯ ಕಾರಟಗಿ ಪಟ್ಟಣದ ಸಮಾಜ ಕಾರ್ಯಕರ್ತ ಕೆ.ಸುಗಪ್ಪ ಅವರು ಮುಖ್ಯಪೇಟೆಯ ಚೌಕದಲ್ಲಿ ದೊಡ್ಡ ಕಪಾಟು ಇರಿಸಿ, ಅದರಲ್ಲಿ ಸಾರ್ವಜನಿಕರು ತಮಗೆ ಅವಶ್ಯವಿರದ ಬಟ್ಟೆಗಳನ್ನು ಇಡಲು ವ್ಯವಸ್ಥೆ ಮಾಡಿದ್ದಾರೆ. ಅವಶ್ಯವಿದ್ದವರು ಈ ಬಟ್ಟೆಗಳನ್ನು ತೆಗೆದುಕೊಂಡು ಹೋಗಬಹುದು. ಇದರ ಉಸ್ತುವಾರಿಗೆ ಒಬ್ಬ ಕೆಲಸಗಾರನನ್ನು ನೇಮಕ ಮಾಡಿದ್ದಾರೆ. ಜಮಖಂಡಿ, ಮುಧೋಳದಂತಹ ಊರುಗಳಲ್ಲಿ ಬಟ್ಟೆ ಹಾಗೂ ಇತರ ವಸ್ತುಗಳನ್ನು ಸಂಗ್ರಹಿಸಿ, ಅವಶ್ಯ ಇರುವವರಿಗೆ ವಿತರಿಸುವ ಕೇಂದ್ರಗಳು ಕೆಲಸ ಮಾಡುತ್ತಿವೆ. ಇವು ಹೆಚ್ಚು ಕ್ರಿಯಾತ್ಮಕವಾಗಿ ಕೆಲಸ ಮಾಡಿದರೆ ಬಹಳಷ್ಟು ಜನರಿಗೆ ನೆರವಾಗುವುದು.

ಹೀಗೆ ದೊರೆಯುವ ಬಟ್ಟೆಗಳನ್ನು ನೇರವಾಗಿ ಬಳಸದೆ, ಚೆನ್ನಾಗಿ ತೊಳೆದು ಬಿಸಿಲಿಗೆ ಒಣಗಿಸಿ ಧರಿಸಬೇಕು. ಬಳಸುವ ಕಲೆ ತಿಳಿದಿದ್ದರೆ ಬಟ್ಟೆ ಎಂದೂ ಹಳೆಯದಾಗುವುದಿಲ್ಲ.

ಕೃಷಿ ಕಾರ್ಮಿಕರು ಬೆಳೆಗಳ ಮಧ್ಯೆ ನಿಂತು ಕೆಲಸ ಮಾಡುವಾಗ ಮೈತುಂಬಾ ಬಟ್ಟೆ ಧರಿಸುವುದು ಅವಶ್ಯವಾಗಿರುತ್ತದೆ. ಕಬ್ಬು ಕಟಾವು ಮಾಡುವ ಕಾರ್ಮಿಕರಿಗೆ ತಿಂಗಳಲ್ಲಿ ಮೂರು– ನಾಲ್ಕು ಜೋಡಿ ಬಟ್ಟೆಗಳು ಬೇಕಾಗುತ್ತವೆ. ಇವರಲ್ಲಿ ಕೆಲವರು ಜನರಿಂದ ಬಟ್ಟೆಗಳನ್ನು ಸಂಗ್ರಹಿಸಿ ಅಥವಾ ಹಳೆಯ ಬಟ್ಟೆ ವ್ಯಾಪಾರಸ್ಥರಿಂದ ಖರೀದಿಸಿ ಬಳಸುತ್ತಾರೆ. ಸಕ್ಕರೆ ಕಾರ್ಖಾನೆಗಳು ಈ ವಿಷಯದಲ್ಲಿ ಕಾರ್ಮಿಕರಿಗೆ ಆಸರೆಯಾಗಿ ನಿಲ್ಲಬೇಕು.

ಭೂದಾನ ಚಳವಳಿಯ ಪ್ರವರ್ತಕ ವಿನೋಬಾ ಭಾವೆ ಅವರು ತಾಯಿ ಧರಿಸುತ್ತಿದ್ದ ಸೀರೆಯನ್ನು ಸದಾ ತಮ್ಮ ಬಳಿ ಇಟ್ಟುಕೊಳ್ಳುತ್ತಿದ್ದರು. ಈ ಸೀರೆ ಅಮ್ಮ ಜೊತೆಗಿದ್ದ ಅನುಭವ ಕೊಡುತ್ತದೆ ಎಂದು ಅವರು ಹೇಳುತ್ತಿದ್ದರು. ಬಟ್ಟೆಯೊಂದಿಗೆ ಭಾವನಾತ್ಮಕ ಬೆಸುಗೆ ಕೂಡ ಇರುತ್ತದೆ ಎಂಬುದಕ್ಕೆ ಇದು ನಿದರ್ಶನವಾಗಿದೆ.

ತಮಗೆ ಅವಶ್ಯವಿರದ ವಸ್ತುಗಳನ್ನು ತಮ್ಮ ಮನೆಯ ಮುಂದೆ ಇಡುವುದು, ಅವಶ್ಯವಿದ್ದವರು ತೆಗೆದುಕೊಂಡು ಹೋಗುವುದು ಜರ್ಮನ್ ದೇಶದಲ್ಲಿ ಒಂದು ಸಂಸ್ಕೃತಿಯಾಗಿ ರೂಪುಗೊಂಡಿದೆ. ಅಲ್ಲಿ ಎಲ್ಲರ ಮನೆಗಳ ಮುಂದೆ ತಮಗೆ ಅವಶ್ಯವಿಲ್ಲದ ವಸ್ತುಗಳನ್ನು ಇಟ್ಟಿರುವ ಚಿತ್ರವನ್ನು ಕಾಣಬಹುದು. ನಮ್ಮಲ್ಲಿಯೂ ವಸ್ತುಗಳ ಮರುಬಳಕೆಗೆ ಅವಕಾಶ ಕಲ್ಪಿಸುವುದು ಒಂದು ಸಂಸ್ಕೃತಿಯಾಗಿ ಬೆಳೆಯಬೇಕು.

ವಾಚಕರ ವಾಣಿ

ರೈತರ ಪಂಪ್‌ಸೆಟ್‌ಗೆ ಸಿಗಲಿ ಸಮರ್ಪಕ ವಿದ್ಯುತ್

ರಾಜ್ಯದಲ್ಲಿ ಸಮರ್ಪಕವಾಗಿ ಮಳೆಯಾಗದ ಕಾರಣ ರೈತರು ಕಂಗಾಲಾಗಿ ಹೋಗಿದ್ದಾರೆ. ಹೊಳೆ, ಬಾವಿ ಮೂಲಕ ನೀರಾವರಿ ಸೌಲಭ್ಯವನ್ನು ಪಡೆಯಲು ಸಮರ್ಪಕ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಬರೀ ಮೂರು ತಾಸು ವಿದ್ಯುತ್ ನೀಡುವುದರಿಂದ ಬೆಳೆಗಳಿಗೆ ನೀರುಣಿಸಲು ಆಗುತ್ತಿಲ್ಲ. ರೈತರಿಗೆ ಗೊಬ್ಬರ ಮತ್ತು ಕೀಟನಾಶಕವನ್ನು ಸರ್ಕಾರ ಕಡಿಮೆ ಬೆಲೆಗೆ ನೀಡಿದರೆ ಅತ್ಯಂತ ಉಪಯೋಗವಾಗುತ್ತದೆ.

ರಾತ್ರಿ ವೇಳೆ ಸರ್ಕಾರಿ ಅಧಿಕಾರಿಗಳು ಕೆಲಸ ಮಾಡುವುದಿಲ್ಲ, ರಾಜಕಾರಣಿಗಳೂ ಮನೆ ಬಿಟ್ಟು ಆಚೆ ಬರುವುದಿಲ್ಲ. ಅಂತಹುದರಲ್ಲಿ ರೈತರು ರಾತ್ರಿ ಹೊತ್ತು ಹೊಲಕ್ಕೆ ಹೋಗಿ ನೀರು ಬಿಡಬೇಕು, ರಾತ್ರಿ ವೇಳೆ ಕೊಡುವ ಲೈನ್ ಪಾಳಿ ಸಲುವಾಗಿ ನಿದ್ದೆಗೆಡಬೇಕು. ಆದರೆ ಅದನ್ನೂ ಸರಿಯಾಗಿ ನೀಡುತ್ತಿಲ್ಲ. ನೀರಿಲ್ಲದೆ ಮತ್ತು ತಾಪಮಾನ ಹೆಚ್ಚಳದಿಂದ ಬೆಳೆಗಳು ಒಣಗುತ್ತಿವೆ. ಕನಿಷ್ಠ 7 ತಾಸು ವಿದ್ಯುತ್ ನೀಡಬೇಕು ಹಾಗೂ ರೈತರಿಗೆ ಅನುಕೂಲವಾಗುವಂತೆ ಮುಂಜಾನೆ ಲೈನ್ ಪಾಳಿ ಕೊಡಬೇಕು.

ಭೂಮಿಕಾ ರಂಗಪ್ಪ ದಾಸರಡ್ಡಿ, ಬಿದರಿ

ಕೆನ್ನಾಲಿಗೆಗೆ ಆಹುತಿಯಾಗದಿರಲಿ ಸಾಮರಸ್ಯ

ಅತಿಯಾದರೆ ಅಮೃತವೂ ವಿಷವಾಗುತ್ತದೆ ಎಂಬುದನ್ನು ಲೇಖಕ ಕೆ.ಎಸ್.ಭಗವಾನ್ ಅವರು ಅರಿತರೆ ಒಳ್ಳೆಯದು. ಕುವೆಂಪು ಅವರ ಮಾತುಗಳನ್ನು ಕಾರ್ಯಕ್ರಮವೊಂದರಲ್ಲಿ ಉಲ್ಲೇಖಿಸಿ ಅವರೀಗ ಮತ್ತೊಮ್ಮೆ ವಿವಾದಕ್ಕೆ ಸಿಲುಕಿದ್ದಾರೆ. ತಮ್ಮ ಈ ಮಾತುಗಳ ಮೂಲಕ ಒಕ್ಕಲಿಗ ಸಮುದಾಯವನ್ನೇ ಗುರಿ ಮಾಡಿಕೊಂಡ ಭಗವಾನ್, ಚಪ್ಪಾಳೆ, ಕೇಕೆ, ಸಿಳ್ಳೆಗಳಿಂದ ಆನಂದತುಂದಿಲರಾಗಿ ಅದೇ ಮಾತುಗಳನ್ನು ಪುನರುಚ್ಚಾರ ಮಾಡಿದರೇ ವಿನಾ ಕುವೆಂಪು ಅವರ ಮುಂದುವರಿದ ಮಾತುಗಳನ್ನು ಅರ್ಥೈಸುವ ಉದ್ದೇಶ ಅವರಿಗೆ ಇದ್ದಂತಿರಲಿಲ್ಲ!

ಜನಜಾಗೃತಿ, ವೈಚಾರಿಕ ಪ್ರಜ್ಞೆಯ ವಿಧಾನದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವಾದರೂ ರಾಜ್ಯದಲ್ಲಿ ಜಾತಿ ಸಂಘರ್ಷ ಭುಗಿಲೇಳುವ ಸಾಧ್ಯತೆ ಇರುತ್ತದೆ. ವೈಚಾರಿಕತೆಯ ಹೆಸರಿನಲ್ಲಿ ಸಮಾಜದ ಶಾಂತಿಯನ್ನು ಕದಡುವ ಇಂತಹ ಹೇಳಿಕೆಗಳನ್ನು ಸಾಮರಸ್ಯ ಬಯಸುವ ಎಲ್ಲರೂ ವಿರೋಧಿಸಬೇಕಾಗಿದೆ.

ಗೋವಿಂದರಾಜು ಪಟೇಲ್, ಬೆಂಗಳೂರು

ಕನ್ನಡ ದಸರಾ ಆದ ಮೈಸೂರು ದಸರಾ!

ಈ ಬಾರಿಯ ದಸರಾವನ್ನು ಉದ್ಘಾಟಿಸಿದ ಚಿತ್ರಸಾಹಿತಿ ಹಂಸಲೇಖ, ತಮ್ಮ ಭಾಷಣದುದ್ದಕ್ಕೂ ಉತ್ಕಟವಾದ ಕನ್ನಡಪ್ರೇಮವನ್ನು ಮೆರೆದಿದ್ದಾರೆ. ಕನ್ನಡಕ್ಕೆ, ಕನ್ನಡ ನಾಡಿಗೆ ಆಗಬೇಕಾಗಿರುವ ಕೆಲಸಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ನಾವು ಒಂದು ಕ್ಷಣ ಮೈಸೂರು ದಸರಾ ಎಂಬುದನ್ನು ಮರೆತು, ಕನ್ನಡ ಸಾಹಿತ್ಯ ಸಮ್ಮೇಳನ ಎಂಬಂತೆ ಮೈಮರೆತೆವು. ಈ ಮೂಲಕ ಹಂಸಲೇಖ ಅವರು ಹೊಸ ಪರಂಪರೆಗೆ ನಾಂದಿ ಹಾಡಿದ್ದಾರೆ.

ಕನ್ನಡ ಇಂದು ಸಂಕ್ರಮಣದ ಸ್ಥಿತಿಯಲ್ಲಿದೆ. ಒಕ್ಕೂಟ ಭಾರತ ನಡೆಸುವ ಬಹುತೇಕ ಉದ್ಯೋಗ ನೇಮಕಾತಿ ಪರೀಕ್ಷೆಗಳು ಈಗಲೂ ಇಂಗ್ಲಿಷ್ ಜೊತೆಗೆ ಹಿಂದಿ ಮಾಧ್ಯಮದಲ್ಲಿ ಮಾತ್ರ ಇರುತ್ತವೆ. ಯುಪಿಎಸ್‌ಸಿ ಪೂರ್ವಭಾವಿ ಪರೀಕ್ಷೆಯ ಕತೆಯೂ ಇದೇ ಆಗಿದೆ. ಅಂತೆಯೇ ಆಯಾ ರಾಜ್ಯದಲ್ಲಿ ಸೃಷ್ಟಿಯಾಗುವ ಹುದ್ದೆಗಳನ್ನು ಬಹುತೇಕ ಆಯಾ ರಾಜ್ಯದವರಿಗೇ ಮೀಸಲಿಡಬೇಕು. ದೇಶದ ಆಡಳಿತವು ಬ್ರಿಟಿಷರಿಂದ ಹಿಂದಿಯವರಿಗೆ ಕೈ ಬದಲಿಸಿತೇನೋ ಎಂಬಂತೆ ಮೇಲ್ನೋಟಕ್ಕೆ ಕಾಣುತ್ತಿದೆ. ಭಾರತವು ಎಲ್ಲರ ಭಾರತ ಆಗಬೇಕಿದೆ. ಈ ಎಲ್ಲಾ ಸಮಸ್ಯೆಗಳನ್ನು ಕನ್ನಡ ನಾಡು ಪರಿಹರಿಸಿಕೊಳ್ಳಬೇಕಿದೆ. ಹಂಸಲೇಖ ಅವರು ದಸರಾದಲ್ಲಿ ಕನ್ನಡದೀಪ ಹಚ್ಚುವ ಮೂಲಕ ಹೊಸ ಮನ್ವಂತರಕ್ಕೆ ಮುನ್ನುಡಿ ಬರೆದಿದ್ದಾರೆ. ಮೈಸೂರು ದಸರಾವನ್ನು ಕನ್ನಡ ದಸರಾವನ್ನಾಗಿ ಬದಲಾಯಿಸಿದ್ದಾರೆ.

ಗಿರೀಶ್ ಮತ್ತೇರ, ಯರಗಟ್ಟಿಹಳ್ಳಿ, ಚನ್ನಗಿರಿ

ಜಾತಿ ಜನಗಣತಿಗೆ ವಿರೋಧವೇಕೆ?

1931ರಲ್ಲಿ ನಡೆಸಲಾದ ಜಾತಿ ಜನಗಣತಿಯ ನಂತರ ಆ ಬಗೆಯ ಗಣತಿ ಈವರೆಗೂ ನಡೆದಿಲ್ಲ. 1941ರಲ್ಲಿ ಭಾರತದ ಜನಗಣತಿ ಆಯೋಗವು ಜನಗಣತಿ ಮಾಡಿದ್ದರೂ ಅದನ್ನು ಪ್ರಕಟಿಸಲಿಲ್ಲ ಎನ್ನುವ ವರದಿಯಿದೆ. ಇದೀಗ, ಜಾತಿಗಣತಿ ಅತ್ಯವಶ್ಯವಾಗಿದ್ದು, ಸರ್ಕಾರ ಈ ದಿಸೆಯಲ್ಲಿ ಮುಂದಾಗಬೇಕೆಂದು ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ, ಅದರಲ್ಲೂ, 'ಅತಿ ಹಿಂದುಳಿದಿರುವ' ಸಮುದಾಯಗಳಿಂದ ರಾಷ್ಟ್ರವ್ಯಾಪಿ ಒತ್ತಾಯ ಕೇಳಿಬಂದಿದೆ. ಹಲವಾರು ರಾಜಕೀಯ ಪಕ್ಷಗಳು ಈ ಒತ್ತಾಯವನ್ನೇ ಬರುವ ಲೋಕಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಕೇಂದ್ರಬಿಂದುವಾಗಿಸುವ ಉದ್ದೇಶ ಸ್ಪಷ್ಟವಾಗಿದೆ.

ಸಮಾಜದಲ್ಲಿ ದುರ್ಬಲ ಜಾತಿ, ವರ್ಗಗಳ ವಿರುದ್ಧ ವ್ಯಾಪಕವಾಗಿ ಬೇರುಬಿಟ್ಟಿರುವ ಭೇದಭಾವಕ್ಕೆ, ಅಸಮತೆಗೆ ಜಾತಿ ಪದ್ಧತಿಯೇ ಕಾರಣವಾಗಿದೆ. ಹಿಂದುಳಿದ ಮತ್ತು ಅತಿ ಹಿಂದುಳಿದವರ ಜನಸಂಖ್ಯೆಯು ಸದ್ಯ ಲಭ್ಯವಿರುವ ಅಂಕಿ ಅಂಶಗಳಲ್ಲಿ ಇರುವುದಕ್ಕಿಂತ ಹೆಚ್ಚಾಗಿದೆ ಎಂಬ ವಾದವೂ ಮುನ್ನೆಲೆಗೆ ಬಂದಿದೆ. ಜಾತಿಯು ಸಮಾಜದ ರಚನೆ, ವಿನ್ಯಾಸಗಳೊಳಗೆ ಹುದುಗಿದೆ. ಶೋಷಣೆಗೆ ಅದು ಒಂದು ವಿಶೇಷವಾದ ಅಸ್ತ್ರವಾಗಿದ್ದು, ಹಾಗೆಯೇ ಮುಂದುವರಿದಿದೆ. ಇದನ್ನು ಅಂತ್ಯಗೊಳಿಸುವ ಮೊದಲ ಹೆಜ್ಜೆಯಾಗಿ ಜಾತಿಗಣತಿ ಪೂರಕವಾಗಿದೆ ಎಂದು ದೇಶದ ಹಲವಾರು ತಜ್ಞರು ಪ್ರತಿಪಾದಿಸಿದ್ದಾರೆ. ಆದರೂ, ಪ್ರಧಾನಿ ನರೇಂದ್ರ ಮೋದಿ ಅವರು ಜಾತಿಗಣತಿಯು ಸಮಾಜವನ್ನು ವಿಭಜಿಸುವ ಯೋಜನೆ ಎಂದಿದ್ದಾರೆ. ಅವರದೇ ಪಕ್ಷವಾದ ಬಿಜೆಪಿಯು ಹೆಚ್ಚು ಅಪಾಯಕಾರಿಯಾದ ರೀತಿಯಲ್ಲಿ, ಧರ್ಮದ ಹೆಸರಿನಲ್ಲಿ ದೇಶದಲ್ಲಿನ ಜನರನ್ನು ಧ್ರುವೀಕರಿಸುವಲ್ಲಿ ಸಕ್ರಿಯವಾಗಿಲ್ಲವೇ?

ಪ್ರೊ. ಬಿ.ಕೆ.ಚಂದ್ರಶೇಖರ್, ಬೆಂಗಳೂರು

ಜಾತಿಗಣತಿ...

ಒಬ್ಬೊಬ್ಬರದು ಒಂದೊಂದು
ರೀತಿಯ ಲೆಕ್ಕಾಚಾರ
ಅವರವರ ಪ್ರಕಾರ!
ಕೆಲವರದು ಗುಣಾಕಾರ
ಮತ್ತೆ ಕೆಲವರದು ಭಾಗಾಕಾರ
ಯಾವ ಆಕಾರ ನೀಡಲಿದೆಯೋ
ಕಾದು ನೋಡೋಣ
ರಾಜ್ಯ ಸರ್ಕಾರ,
ಏನೇ ಆಗಲಿ
ಮಾನವತೆಗೆ ಬಾರದಿರಲಿ
ಸಂಚಕಾರ!

ಮ.ಗು.ಬಸವಣ್ಣ
ನಂಜನಗೂಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಐಐಪಿಎಸ್ ನಿರ್ದೇಶಕರ ಅಮಾನತು, ರಾಜೀನಾಮೆ ಪ್ರಹಸನ

ಅಪ್ರಿಯ ದತ್ತಾಂಶ ಅಪಥ್ಯ?

ದೇಶದ ಅತ್ಯುನ್ನತ ಸಂಶೋಧನಾ ಸಂಸ್ಥೆಗಳಲ್ಲಿ ಒಂದಾದ ಮುಂಬೈನ 'ಅಂತರರಾಷ್ಟ್ರೀಯ ಜನಸಂಖ್ಯಾ ವಿಜ್ಞಾನ ಸಂಸ್ಥೆ–ಐಐಪಿಎಸ್'ನ ನಿರ್ದೇಶಕ ಕೆ.ಎಸ್. ಜೇಮ್ಸ್ ಅವರ ಅಮಾನತು ಆದೇಶವನ್ನು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ವಾಪಸ್ ಪಡೆದಿದೆ. ತಕ್ಷಣವೇ ಅವರ ರಾಜೀನಾಮೆಯನ್ನು ಅಂಗೀಕರಿಸಿದೆ. 'ಐಐಪಿಎಸ್ ಸಿದ್ಧಪಡಿಸುವ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ವರದಿಯ ದತ್ತಾಂಶಗಳು ಸರ್ಕಾರಕ್ಕೆ ವಿರುದ್ಧವಾಗಿದ್ದವು. ಹೀಗಾಗಿ ಜೇಮ್ಸ್ ಅವರ ಮೇಲೆ ಒತ್ತಡ ಹೇರಿ ರಾಜೀನಾಮೆ ಪಡೆಯಲಾಗಿದೆ. ತನಗೆ ಅಪ್ರಿಯವಾದ ಸತ್ಯವನ್ನು ಕೇಂದ್ರದ ಬಿಜೆಪಿ ಸರ್ಕಾರವು ಸಹಿಸಿಕೊಳ್ಳುವುದೇ ಇಲ್ಲ' ಎಂದು ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ಆರೋಪಿಸಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲೂ ಚರ್ಚೆಯಾಗುತ್ತಿದೆ

ಸರ್ಕಾರ ನಿರಾಕರಿಸಿದ ವರದಿಗಳು

ತನ್ನ ನೀತಿಗಳು ಪರಿಣಾಮಕಾರಿಯಾಗಿಲ್ಲ ಎಂಬುದನ್ನು ಬೊಟ್ಟುಮಾಡಿ ತೋರಿಸುವ ಸಮೀಕ್ಷಾ ವರದಿಗಳು ಮತ್ತು ಜಾಗತಿಕ ಸೂಚ್ಯಂಕಗಳನ್ನು ಕೇಂದ್ರ ಸರ್ಕಾರ ನಿರಾಕರಿಸುತ್ತಲೇ ಬಂದಿದೆ. ಅಂತಹ ಕೆಲವು ಸಮೀಕ್ಷಾ ವರದಿಗಳು ಇಂತಿವೆ

- ಎನ್‌ಎಫ್‌ಎಚ್‌ಎಸ್ ಸಮೀಕ್ಷೆಯ ದತ್ತಾಂಶ ಸಂಗ್ರಹ ವಿಧಾನದಲ್ಲೇ ಲೋಪವಿದೆ ಎಂದು ಕೇಂದ್ರ ಸರ್ಕಾರ ಹೇಳಿತ್ತು
- 2022ರ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ರ‍್ಯಾಂಕ್ ಕುಸಿದಿತ್ತು. ಆಗ ಆ ಸೂಚ್ಯಂಕವೇ ಸರಿ ಇಲ್ಲ ಎಂದು ಸರ್ಕಾರ ಹೇಳಿತ್ತು. 2023ರ ಹಸಿವು ಸೂಚ್ಯಂಕ ಈಗಷ್ಟೇ ಬಿಡುಗಡೆಯಾಗಿದೆ. ಭಾರತದ ರ‍್ಯಾಂಕ್ ಮತ್ತಷ್ಟು ಕುಸಿದಿದೆ. ಸೂಚ್ಯಂಕವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಮತ್ತೆ ಹೇಳಿದೆ
- ಪತ್ರಿಕಾ ಸ್ವಾತಂತ್ರ್ಯದಲ್ಲಿ ಭಾರತದ ರ‍್ಯಾಂಕ್ ಕುಸಿಯುತ್ತಲೇ ಸಾಗಿದೆ. ಆದರೆ ಆ ರ‍್ಯಾಂಕ್ ಪದ್ಧತಿ ಮತ್ತು ಅದಕ್ಕೆ ಬಳಸುವ ಮಾನದಂಡಗಳಲ್ಲೇ ಲೋಪವಿದೆ ಎಂದು ಸರ್ಕಾರ ಹೇಳಿತ್ತು
- ಜಾಗತಿಕ ಬಡತನ ಸೂಚ್ಯಂಕದಲ್ಲೂ ಭಾರತದ ಸ್ಥಾನ ಕುಸಿದಿದೆ ಮತ್ತು ಬಡತನ ಹೆಚ್ಚಾಗಿದೆ ಎಂದು ಹೇಳಿದ್ದ ವಿಶ್ವಬ್ಯಾಂಕ್‌ನ ವರದಿಯನ್ನು ಕೇಂದ್ರ ಸರ್ಕಾರ ನಿರಾಕರಿಸಿತ್ತು
- ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿದೆ ಎಂದು ಅಮೆರಿಕದ ವಿದೇಶಾಂಗ ಸಚಿವಾಲಯದ ತಜ್ಞರ ಸಮಿತಿ ವರದಿ ನೀಡಿತ್ತು. ಆ ವರದಿಯನ್ನೂ ಕೇಂದ್ರ ಸರ್ಕಾರ ನಿರಾಕರಿಸಿತ್ತು

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್) ವರದಿಯು ಸರ್ಕಾರದ ನೀತಿ ನಿರೂಪಣೆಗೆ ಅತ್ಯಗತ್ಯವಾದ ದತ್ತಾಂಶಗಳಲ್ಲಿ ಪ್ರಮುಖವಾದುದು. ದೇಶದ ಜನರ ಆರೋಗ್ಯದ ಸ್ಥಿತಿಗತಿ, ಅಪೌಷ್ಟಿಕತೆ, ರಕ್ತಹೀನತೆಯ ಪ್ರಮಾಣ, ಜನಸಂಖ್ಯಾ ನಿಯಂತ್ರಣ ಕ್ರಮಗಳ ಪಾಲನೆ, ಶೌಚಾಲಯದ ಲಭ್ಯತೆ ಪ್ರಮಾಣ, ಎಲ್‌ಪಿಜಿ ಬಳಕೆ ಪ್ರಮಾಣ, ಸಾಕ್ಷರತೆ ಪ್ರಮಾಣ, ಬಾಲ್ಯವಿವಾಹದ ಪ್ರಮಾಣ, ವೈದ್ಯಕೀಯ ಸೌಲಭ್ಯದ ಲಭ್ಯತೆ ಕುರಿತು ಹೆಚ್ಚು ಕರಾರುವಾಕ್ಕಾದ ದತ್ತಾಂಶಗಳನ್ನು ಎನ್‌ಎಫ್‌ಎಚ್‌ಎಸ್ ವರದಿ ಕಟ್ಟಿಕೊಡುತ್ತದೆ. 1992–93ರಲ್ಲಿ ಆರಂಭವಾದ ಈ ಸಮೀಕ್ಷೆಯು 2019–20ರ ವೇಳೆಗೆ ಐದನೇ ಆವೃತ್ತಿಯನ್ನು ಪೂರೈಸಿದೆ. ಈಗ ಆರನೇ ಆವೃತ್ತಿಯ ಸಮೀಕ್ಷೆ ನಡೆಯುತ್ತಿದೆ. ಸರ್ಕಾರವು ಯಾವ ಕ್ಷೇತ್ರಕ್ಕೆ ಎಷ್ಟು ಅನುದಾನ ಒದಗಿಸಬೇಕು ಮತ್ತು ಯಾವ ಕ್ಷೇತ್ರಕ್ಕೆ ಆದ್ಯತೆ ನೀಡಬೇಕು ಎಂದು ಶಿಫಾರಸು ಮಾಡುವ ನೀತಿ ಆಯೋಗವು, ಆ ಶಿಫಾರಸುಗಳನ್ನು ಸಿದ್ಧಪಡಿಸಲು ಎನ್‌ಎಫ್‌ಎಚ್‌ಎಸ್ ವರದಿಯನ್ನು ಆಧಾರವಾಗಿ ಬಳಸಿಕೊಳ್ಳುತ್ತದೆ.

ಕೆ.ಎಸ್.ಜೇಮ್ಸ್

ಈ ವರದಿಯನ್ನು ಸಿದ್ಧಪಡಿಸುವ ಹೊಣೆಗಾರಿಕೆ ಐಐಪಿಎಸ್‌ನದ್ದು. ಐಐಪಿಎಸ್, ಕೇಂದ್ರ ಆರೋಗ್ಯ ಸಚಿವಾಲಯದ ಅಧೀನದಲ್ಲಿರುವ ಅರೆಸ್ವಾಯತ್ತ ಸಂಸ್ಥೆ. 2019–20ರಲ್ಲಿ ದೇಶದ ಜನರ ಆರೋಗ್ಯದ ಸ್ಥಿತಿ ಮತ್ತು ಅವರಿಗೆ ಲಭ್ಯವಿರುವ ಮೂಲಸೌಕರ್ಯ ಹಾಗೂ ವೈದ್ಯಕೀಯ ಸವಲತ್ತುಗಳ ಬಗ್ಗೆ ಸಿದ್ಧಪಡಿಸಿದ್ದ ಎನ್‌ಎಫ್‌ಎಚ್‌ಎಸ್–5 ವರದಿಯನ್ನು ಆರೋಗ್ಯ ಸಚಿವಾಲಯವು 2021ರ ನವೆಂಬರ್‌ನಲ್ಲಿ ಬಿಡುಗಡೆ ಮಾಡಿತ್ತು. ಎರಡನೇ ಹಂತದ ವರದಿಯನ್ನು 2022ರಲ್ಲಿ ಬಿಡುಗಡೆ ಮಾಡಿತ್ತು. ದೇಶದ ಜನರ ಆರೋಗ್ಯ ಸುಧಾರಣೆಯಲ್ಲಿ ಸರ್ಕಾರವು ನಕಾರಾತ್ಮಕ ಪ್ರಗತಿ ಸಾಧಿಸಿದ್ದು ಮತ್ತು ದೇಶದ ಜನರ ಆರೋಗ್ಯದ ಸ್ಥಿತಿ ಮೊದಲಿಗಿಂತ ಹೆಚ್ಚು ಬಿಗಡಾಯಿಸಿದೆ ಎಂಬುದನ್ನು ಈ ವರದಿಯ ದತ್ತಾಂಶಗಳು ಹೇಳಿದ್ದವು.

ಆರೋಗ್ಯ ಸಚಿವಾಲಯ ಈ ವರದಿಯನ್ನೇನೋ ಬಿಡುಗಡೆ ಮಾಡಿತು. ಆದರೆ ಸರ್ಕಾರವು ತಾನು ಸಾಧಿಸಿದ್ದೇನೆ ಎಂದು ಹೇಳಿಕೊಂಡ ಸಾಧನೆಗಳೆಲ್ಲವೂ ವಾಸ್ತವದಲ್ಲಿ ನಿಜವಲ್ಲ ಎಂಬುದನ್ನು ಈ ವರದಿಯು ದತ್ತಾಂಶ ಸಹಿತ ಬಹಿರಂಗಪಡಿಸಿತ್ತು. ಮಾಧ್ಯಮಗಳು ಈ ಬಗ್ಗೆ ವರದಿ ಪ್ರಕಟಿಸಿದವು. ವಿರೋಧ ಪಕ್ಷಗಳು ಮತ್ತು ಕೆಲವು ಸಾಮಾಜಿಕ ಕಾರ್ಯಕರ್ತರು ಸರ್ಕಾರದ ಸಾಧನೆಯನ್ನು ಪ್ರಶ್ನಿಸಿದರು. ಆಗ ಆರೋಗ್ಯ ಸಚಿವಾಲಯವು, 'ದತ್ತಾಂಶ ಸಂಗ್ರಹ ವಿಧಾನದಲ್ಲೇ ಲೋಪವಿದೆ' ಎಂಬ ಲೇಖನವನ್ನು ಬಿಡುಗಡೆ ಮಾಡಿತು.

5ನೇ ಆವೃತ್ತಿಯ ಸಮೀಕ್ಷೆ ನಡೆದ ಮತ್ತು ವರದಿ ಸಿದ್ಧಪಡಿಸುವಾಗ ಐಐಪಿಎಸ್ ನಿರ್ದೇಶಕರಾಗಿದ್ದವರು ಕೆ.ಎಸ್. ಜೇಮ್ಸ್. ವರದಿ ಬಿಡುಗಡೆಯಾದ ಕೆಲವೇ ತಿಂಗಳಲ್ಲಿ ಅವರ ವಿರುದ್ಧ ಆರೋಗ್ಯ ಸಚಿವಾಲಯಕ್ಕೆ 35 ದೂರುಗಳು ಸಲ್ಲಿಕೆಯಾದವು. ಐಐಪಿಎಸ್‌ನ ನೇಮಕಾತಿಯಲ್ಲಿ ಅಕ್ರಮ ನಡೆದಿದೆ, ಕಟ್ಟಡ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ, ಸಂಸ್ಥೆಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ, ಲಂಚ ನೀಡುವ ಉದ್ದೇಶದಿಂದ ಹಣ್ಣಿನ ವ್ಯಾಪಾರಿಯೊಬ್ಬರಿಂದ 80 ಪ್ಲೇಟ್ ಹಣ್ಣಿನ ಸಲಾಡ್ ಖರೀದಿಸಲಾಗಿದೆ, ಸಂಸ್ಥೆಯ ಪ್ರೊಫೆಸರ್ ಒಬ್ಬರು ಚೀನಾದ ಸಂಸ್ಥೆಯೊಂದರ ವೆಬಿನಾರ್‌ನಲ್ಲಿ ಭಾಗವಹಿಸಿದ್ದಾರೆ... ಇವು ಆ 35ರಲ್ಲಿ ಕೆಲವು ದೂರುಗಳು.

ಈ ಎಲ್ಲಾ ದೂರುಗಳಿಗೆ ಜೇಮ್ಸ್ ಅವರನ್ನು ಹೊಣೆಯಾಗಿಸಿ ಅವರ ವಿರುದ್ಧ ತನಿಖೆಗೆ ಆರೋಗ್ಯ ಸಚಿವಾಲಯವು ಸತ್ಯಶೋಧನಾ ಸಮಿತಿಯನ್ನು ಇದೇ ಏಪ್ರಿಲ್‌ನಲ್ಲಿ ರಚಿಸಿತ್ತು. ಸಮಿತಿಯು ವರದಿ ನೀಡಿದೆ, ಅದರ ಆಧಾರದಲ್ಲಿ ಹೆಚ್ಚಿನ ತನಿಖೆ ಅಗತ್ಯವಿದೆ. ಮುಕ್ತ ತನಿಖೆ ನಡೆಸಲು ಅನುಕೂಲವಾಗಲಿ ಎಂದು ಜೇಮ್ಸ್ ಅವರನ್ನು 90 ದಿನ ಅಮಾನತು ಮಾಡಿ ಜುಲೈ 27ರಂದು ಸಚಿವಾಲಯ ಆದೇಶ ಹೊರಡಿಸಿತ್ತು. ಅದರ ಬೆನ್ನಲ್ಲೇ ಜೇಮ್ಸ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ಅದನ್ನು ಸರ್ಕಾರ ಪರಿಗಣಿಸಿರಲಿಲ್ಲ. ಈ ಪ್ರಕರಣದಲ್ಲಿ ಆರೋಗ್ಯ ಸಚಿವಾಲಯಕ್ಕೆ ದೂರು ನೀಡಿದವರು ಯಾರು, ಆರೋಪಗಳಿಗೆ ಜೇಮ್ಸ್ ಅವರು ನೀಡಿರುವ ವಿವರಣೆ ಏನು ಮತ್ತು ಸತ್ಯಶೋಧನಾ ಸಮಿತಿಯ ವರದಿ ಏನು ಹೇಳುತ್ತದೆ ಎಂಬುದನ್ನು ಆರೋಗ್ಯ ಸಚಿವಾಲಯ ಬಹಿರಂಗಪಡಿಸಿಲ್ಲ. ಆದರೆ, ಅಕ್ಟೋಬರ್ 16ರ ಸೋಮವಾರದಂದು ಜೇಮ್ಸ್ ಅವರ ಅಮಾನತು ಆದೇಶವನ್ನು ಹಿಂಪಡೆಯಿತು. ಅದೇ ದಿನ ಅವರ ರಾಜೀನಾಮೆಯನ್ನು ಅಂಗೀಕರಿಸಿತು.

ತಮಗೆ ಅಪ್ರಿಯವಾದ ದತ್ತಾಂಶವನ್ನು ನೀಡಿದ ಕಾರಣಕ್ಕೆ ಜೇಮ್ಸ್ ಅವರನ್ನು ಕೇಂದ್ರ ಸರ್ಕಾರ ಬಲಿಪಶು ಮಾಡಿದೆ. ದೇಶದಲ್ಲಿ ಮುಕ್ತವಾದ ಮತ್ತು ಪ್ರಜಾಸತ್ತಾತ್ಮಕವಾದ ಸಂಶೋಧನೆಗೂ ಅವಕಾಶವಿಲ್ಲದಂತಾಗಿದೆ ಎಂದು ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ.

ಎಲ್‌ಪಿಜಿ ಸಂಪರ್ಕ: ಸರ್ಕಾರದ ಹೇಳಿಕೆಗೆ ವ್ಯತಿರಿಕ್ತವಾಗಿದ್ದ ದತ್ತಾಂಶ

'ದೇಶದಲ್ಲಿ ಉಜ್ವಲ ಯೋಜನೆ ಯಶಸ್ವಿಯಾಗಿದೆ. ದೇಶದ ಎಲ್ಲಾ ಜನರಿಗೂ ಎಲ್‌ಪಿಜಿ ಅಡುಗೆ ಅನಿಲ ಸಂಪರ್ಕ ನೀಡಲಾಗಿದೆ. ದೇಶದ ಶೇ 99.50ರಷ್ಟು ಕುಟುಂಬಗಳು ಈಗ ಎಲ್‌ಪಿಜಿ ಅಡುಗೆ ಅನಿಲ ಬಳಸುತ್ತಿವೆ' ಎಂದು 2021ರ ಫೆಬ್ರುವರಿಯಲ್ಲಿ ಕೇಂದ್ರ ಸರ್ಕಾರವು ರಾಜ್ಯಸಭೆಗೆ ಮಾಹಿತಿ ನೀಡಿತ್ತು.

2021ರ ನವೆಂಬರ್ ವೇಳೆಗೆ ಬಿಡುಗಡೆಯಾದ ಎನ್‌ಎಫ್‌ಎಚ್‌ಎಸ್–5 ವರದಿಯ ದತ್ತಾಂಶಗಳು, 'ದೇಶದ ಶೇ 41.40ರಷ್ಟು ಜನರು ಎಲ್‌ಪಿಜಿ ಬಳಕೆಯಿಂದ ವಂಚಿತರಾಗಿದ್ದಾರೆ. ಎನ್‌ಎಫ್‌ಎಚ್‌ಎಸ್ ವರದಿಯನ್ನು ಆಧರಿಸಿಯೇ ನೀತಿ ಆಯೋಗವು ಸಿದ್ಧಪಡಿಸಿದ ಬಹುಆಯಾಮದ ಬಡತನ ಸೂಚ್ಯಂಕ ವರದಿಯಲ್ಲೂ, 'ದೇಶದ ಶೇ 41ರಷ್ಟು ಜನರು ಎಲ್‌ಪಿಜಿ ಬಳಕೆಯಿಂದ ವಂಚಿತರಾಗಿದ್ದಾರೆ' ಎಂದು ಹೇಳಿತ್ತು. ಎನ್‌ಎಫ್‌ಎಚ್‌ಎಸ್–5ರ ಮೊದಲ ಹಂತದ ಮತ್ತು ಎರಡನೇ ಹಂತದ ವರದಿ ಬಿಡುಗಡೆಯಾದ ನಂತರ, ಸರ್ಕಾರವನ್ನು ವಿರೋಧ ಪಕ್ಷಗಳು ಟೀಕಿಸಿದ್ದವು.

ವಿದ್ಯುತ್ ಸಂಪರ್ಕ: ಭಾರತದ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ ಎಂದು 2018ರ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರ ಘೋಷಿಸಿತ್ತು. ಎಲ್ಲಾ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಎಂದೇನೂ ಸರ್ಕಾರ ಹೇಳಿರಲಿಲ್ಲ. ಆದರೆ, ಎಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ ಎಂಬುದನ್ನೂ ಸರ್ಕಾರ ಹೇಳಿರಲಿಲ್ಲ. ಬದಲಿಗೆ ಎನ್‌ಎಫ್‌ಎಚ್‌ಎಸ್–5 ವರದಿಯು ದೇಶದ ಶೇ 3.2ರಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ ಎಂಬ ಮಾಹಿತಿಯನ್ನು ಒದಗಿಸಿತ್ತು.

'ಬಯಲು ಬಹಿರ್ದೆಸೆ ಮುಕ್ತ ವಾಸ್ತವಕ್ಕೆ ದೂರ'

ಭಾರತವು ಬಯಲು ಬಹಿರ್ದೆಸೆ ಮುಕ್ತ ದೇಶವಾಗಿದೆ ಎಂದು 2019ರ ಅಕ್ಟೋಬರ್‌ನಲ್ಲಿ ಕೇಂದ್ರ ಸರ್ಕಾರವು ಘೋಷಿಸಿತ್ತು. ಆದರೆ, ವಾಸ್ತವದಲ್ಲಿ ಇದನ್ನು ಸಾಧಿಸಿಲ್ಲ ಎಂಬುದರತ್ತ ಎನ್‌ಎಫ್‌ಎಚ್‌ಎಸ್–5 ವರದಿ ಬೊಟ್ಟು ಮಾಡಿತ್ತು.

ಯಾವುದೇ ಪ್ರದೇಶದಲ್ಲಿ ಇರುವ ಎಲ್ಲಾ ಮನೆಗಳಲ್ಲೂ ಶೌಚಾಲಯವಿರಬೇಕು, ಆ ಶೌಚಾಲಯಕ್ಕೆ ನೀರಿನ ಸಂಪರ್ಕವಿರಬೇಕು, ಶೌಚತ್ಯಾಜ್ಯ ವೈಜ್ಞಾನಿಕ ವಿಲೇವಾರಿಗೆ ವ್ಯವಸ್ಥೆ ಇರಬೇಕು ಮತ್ತು ಅಲ್ಲಿನ ಎಲ್ಲಾ ಜನರು ಶೌಚಾಲಯವನ್ನು ಬಳಸುತ್ತಿರಬೇಕು. ಈ ಎಲ್ಲವೂ ಸಾಧ್ಯವಾಗಿರುವ ಪ್ರದೇಶವನ್ನು ಮಾತ್ರ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಬೇಕು. ದೇಶವನ್ನು ಬಯಲು ಬಹಿರ್ದೆಸೆ ಮುಕ್ತ ಎಂದು 2019ರಲ್ಲಿ ಘೋಷಿಸಿದ್ದರೂ, ಅದೇ ಅವಧಿಯಲ್ಲಿ ನಡೆಸಿದ ಸಮೀಕ್ಷೆಯಲ್ಲಿ ದೇಶದ ಶೇ 29.9ರಷ್ಟು ಜನರಿಗೆ ಶೌಚಾಲಯದ ಲಭ್ಯತೆ ಇಲ್ಲ ಮತ್ತು ಆ ಜನ ಶೌಚಾಲಯ ಬಳಸುತ್ತಿಲ್ಲ ಎಂದು ಎನ್‌ಎಫ್‌ಎಚ್‌ಎಸ್–5 ವರದಿಯ ದತ್ತಾಂಶಗಳು ಹೇಳಿದ್ದವು.

ಸರ್ಕಾರ ಹೇಳಿಕೊಳ್ಳುತ್ತಿರುವುದಕ್ಕೂ, ಎನ್‌ಎಫ್‌ಎಚ್‌ಎಸ್ ವರದಿಯ ದತ್ತಾಂಶಗಳಿಗೂ ತಾಳೆಯಾಗುತ್ತಿಲ್ಲ ಎಂದು ವಿರೋಧ ಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದವು. ಮಾಧ್ಯಮಗಳಲ್ಲೂ ಈ ಬಗ್ಗೆ ವಿಸ್ತೃತ ಚರ್ಚೆಯಾಗಿತ್ತು.

ಆಧಾರ: ಪಿಟಿಐ, ಎನ್‌ಎಫ್‌ಎಚ್‌ಎಸ್ ವರದಿಗಳು, ರಾಯಿಟರ್ಸ್

ದೇಶದ ಜನರಲ್ಲಿ ರಕ್ತಹೀನತೆ ಏರಿಕೆಯಾಗಿದೆ ಎಂದಿದ್ದ ವರದಿ

ದೇಶದ ಜನರಲ್ಲಿ ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುವವರ ಪ್ರಮಾಣವನ್ನು ಕಡಿಮೆ ಮಾಡುವ ಉದ್ದೇಶದಿಂದ, ಈ ಹಿಂದೆ ಇದ್ದ ಮತ್ತು ಈಗಿನ ಸರ್ಕಾರಗಳು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಎನ್‌ಎಫ್‌ಎಚ್‌ಎಸ್ ಸಮೀಕ್ಷೆಯಲ್ಲಿ ಅಪೌಷ್ಟಿಕತೆ ಮತ್ತು ರಕ್ತಹೀನತೆಗೆ ಸಂಬಂಧಿಸಿದ ದತ್ತಾಂಶ ಕಲೆ ಹಾಕಲು ಆರಂಭಿಸಿದ ವರ್ಷದಿಂದ, ಈ ಎರಡೂ ಕೊರತೆಗಳನ್ನು ನೀಗುವಲ್ಲಿ ದೇಶವು ಗಣನೀಯ ಪ್ರಗತಿ ಸಾಧಿಸಿದೆ.

ಆದರೆ 2015–16ಕ್ಕೆ ಹೋಲಿಸಿದರೆ, 2019–20ರ ಅವಧಿಯಲ್ಲಿ ರಕ್ತಹೀನತೆಯಿಂದ ಬಳಲುವವರ ಪ್ರಮಾಣ ಏರಿಕೆಯಾಗಿತ್ತು. ಇದನ್ನು ಎನ್‌ಎಫ್‌ಎಚ್‌ಎಸ್–5ರ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

2015–16ರಯಲ್ಲಿ ದೇಶದ ಮಹಿಳೆಯರಲ್ಲಿ ರಕ್ತಹೀನತೆಯಿಂದ ಬಳಲುವವರ ಪ್ರಮಾಣ ಶೇ 53ರಷ್ಟಿತ್ತು. ಆದರೆ 2019–20ರಲ್ಲಿ ಅಂತಹ ಮಹಿಳೆಯರ ಪ್ರಮಾಣ ಶೇ 67ಕ್ಕೆ ಏರಿಕೆಯಾಗಿತ್ತು.

2015-16ರಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ, ರಕ್ತಹೀನತೆಯಿಂದ ಬಳಲುವವರ ಪ್ರಮಾಣ ಶೇ 53.1ರಷ್ಟಿತ್ತು. 2019–20ರಲ್ಲಿ ರಕ್ತಹೀನತೆಯಿಂದ ಬಳಲುತ್ತಿರುವ ಮಕ್ಕಳ ಪ್ರಮಾಣ ಶೇ 57ಕ್ಕೆ ಏರಿಕೆಯಾಗಿತ್ತು. ಇದೇ ಅವಧಿಯಲ್ಲಿ ದೇಶದ ಪುರುಷರಲ್ಲಿ ರಕ್ತಹೀನತೆಯಿಂದ ಬಳಲುವವರ ಪ್ರಮಾಣ ಶೇ 22.7ರಿಂದ ಶೇ 25ಕ್ಕೆ ಏರಿಕೆಯಾಗಿತ್ತು. ಈ ಎಲ್ಲಾ ಮಾಹಿತಿಯನ್ನು ಎನ್‌ಎಫ್‌ಎಚ್‌ಎಸ್–5 ವರದಿಯಲ್ಲಿ ದತ್ತಾಂಶ ಸಮೇತ ನೀಡಲಾಗಿತ್ತು.

'ಈ ವರದಿಯ ಸಂಬಂಧ ನಡೆದ ಸಭೆಯಲ್ಲಿ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು' ಎಂದು ಹಲವು ಮಾಧ್ಯಮಗಳು ವರದಿ ಮಾಡಿದ್ದವು.

ಭಿನ್ನ ಲುಕ್‌ನಲ್ಲಿ ರಂಗಾಯಣ ರಘು

ಹಾಸ್ಯ ಪಾತ್ರಗಳಿಗೆ ಸೀಮಿತವಾಗಿದ್ದ ನಟ ರಂಗಾಯಣ ರಘು ಈಗ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. 'ಬಾನ ದಾರಿಯಲ್ಲಿ' ಚಿತ್ರದಲ್ಲೊಂದು ಭಾವುಕ ಪಾತ್ರ ಮಾಡಿದ್ದ ರಘು 'ಶಾಖಾಹಾರಿ' ಚಿತ್ರದಲ್ಲಿ ಬೇರೆಯದೇ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು ಬಾಣಸಿಗನಾಗಿ ಕಾಣಿಸಿಕೊಂಡಿರುವ ನಾಯಕ ರಂಗಾಯಣ ರಘು ಅವರ ಲುಕ್ ಗಮನ ಸೆಳೆಯುತ್ತಿದೆ. ಎಸ್.ಐ ಪಾತ್ರದಲ್ಲಿ ಕಾಣಿಸಿಕೊಂಡಿರುವ ಗೋಪಾಲಕೃಷ್ಣ ದೇಶಪಾಂಡೆ ಅಪರಾಧಿಗಾಗಿ ಹುಡುಕುತ್ತಿದ್ದಾರೆ ಎಂಬುದು ಮೇಲ್ನೋಟಕ್ಕೆ ಗೋಚರಿಸುತ್ತಿದೆ.

'ಕೀಳಂಬಿ ಮೀಡಿಯಾ ಲ್ಯಾಬ್' ಮೂಲಕ ರಾಜೇಶ್ ಕೀಳಂಬಿ ಹಾಗೂ ರಂಜಿನಿ ಪ್ರಸನ್ನ ಜೊತೆಗೂಡಿ ನಿರ್ಮಿಸಿರುವ ಚಿತ್ರಕ್ಕೆ ಸಂದೀಪ್ ಸುಂಕದ್ ಆ್ಯಕ್ಷನ್–ಕಟ್ ಹೇಳಿದ್ದಾರೆ.

'ತೀರ್ಥಹಳ್ಳಿಯ ಊರೊಂದರಲ್ಲಿ ನಡೆಯುವ ನಿಗೂಢ ಘಟನೆಯ ಸುತ್ತ ಸಾಗುವ ಕಥೆ ಇದಾಗಿದ್ದು, ಎಸ್.ಐ ಆಗಿ ಗೋಪಾಲಕೃಷ್ಣ ದೇಶಪಾಂಡೆ ಮತ್ತು ಸುಜಯ್ ಶಾಸ್ತ್ರಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ಹರಿಣಿ, ಪ್ರತಿಮಾ ನಾಯಕ್ ಮತ್ತಿತರರು ಚಿತ್ರದಲ್ಲಿದ್ದಾರೆ. ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ' ಎಂದು ಮಾಹಿತಿ ನೀಡಿದರು ನಿರ್ದೇಶಕ ಸಂದೀಪ್.

ವಿಶ್ವಜಿತ್ ರಾವ್ ಛಾಯಾಗ್ರಹಣ, ಶಶಾಂಕ್ ನಾರಾಯಣ ಸಂಕಲನ, ಮಯೂರ್ ಅಂಬೆಕಲ್ಲು ಸಂಗೀತ ಚಿತ್ರಕ್ಕಿದೆ. ❖

ರಾಜಯೋಗಕ್ಕೆ ಅಭಿಷೇಕ್ ಸಾಥ್

ಧರ್ಮಣ್ಣ ಕಡೂರು ಮೊದಲ ಬಾರಿಗೆ ನಾಯಕನಾಗಿ ನಟಿಸಿರುವ 'ರಾಜಯೋಗ'ದ 'ನಗಬ್ಯಾಡ್ವೇ ನನ್ನ ಕಂಡು, ನಾನೂ ಬಿಎ ಮಾಡಿದ ಗಂಡು' ಎಂಬ ಹಾಡನ್ನು ನಟ ಅಭಿಷೇಕ್ ಅಂಬರೀಶ್ ಇತ್ತೀಚೆಗಷ್ಟೇ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

ಧರ್ಮಣ್ಣ ಕಡೂರು

'ಚಿತ್ರದ ಮೊದಲ ಹಾಡನ್ನು ನೋಡಿದೆ. ಇದರಲ್ಲಿ ನಾಯಕ ಧರ್ಮಣ್ಣ, ನಾಯಕಿ ನಿರೀಕ್ಷಾ ತುಂಬಾ ಚೆನ್ನಾಗಿ ಅಭಿನಯಿಸಿದ್ದಾರೆ. ಸಂಗೀತ ನಿರ್ದೇಶಕ ಅಕ್ಷಯ್ ರಿಶಭ್ ಕೆಲಸ ಎದ್ದು ಕಾಣುತ್ತದೆ. ನವಜೋಡಿಗಳಿಗೆ ತುಂಬ ಇಷ್ಟವಾಗುವ ಹಾಡು. ಎಲ್ಲರೂ ಸಿನಿಮಾವನ್ನು ನೋಡಿ ತಂಡಕ್ಕೆ ಬೆಂಬಲಿಸಿ' ಎಂದರು ಅಭಿಷೇಕ್.

ಲಿಂಗರಾಜ ಉಚ್ಚಂಗಿದುರ್ಗ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರಕ್ಕೆ ಶ್ರೀರಾಮರತ್ನ ಪ್ರೊಡಕ್ಷನ್ಸ್ ಬಂಡವಾಳ ಹೂಡಿದೆ. ಅಕ್ಷಯ್ ರಿಶಭ್ ಅವರ ಸಂಗೀತ, ವಿಷ್ಣುಪ್ರಸಾದ್ ಕ್ಯಾಮೆರಾ, ಬಿ.ಎಸ್.ಕೆಂಪರಾಜು ಸಂಕಲನ ಈ ಚಿತ್ರಕ್ಕಿದೆ. ನಾಗೇಂದ್ರ ಶಾ, ಕೃಷ್ಣಮೂರ್ತಿ ಕವತ್ತಾರು ಮೊದಲಾದವರು ಚಿತ್ರದ ಪ್ರಮುಖ ಪಾತ್ರವರ್ಗದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಗಾಜಾ ಜನರು ಸತ್ಯವನ್ನು ತಿರುಚುವ ಹೊಸ ಮಾದರಿಯೊಂದನ್ನು ಕಂಡುಕೊಂಡಿದ್ದಾರೆ. ಸುಳ್ಳು ಗಾಯಗಳನ್ನು ಮಾಡಿಕೊಂಡು, ಅದರಿಂದ ರಕ್ತ ಬರುವಂತೆ ತೋರಿಸುತ್ತಿದ್ದಾರೆ. ತಾವು ಎಷ್ಟು ಮುಗ್ಧರು, ಬಲಿಪಶುಗಳು ಹಾಗೂ ಇಸ್ರೇಲ್ ಎಷ್ಟು ಕ್ರೂರ ಎಂದು ಜಗತ್ತಿನ ಎದುರಿಗೆ ತೋರಿಸಲು ಗಾಜಾ ಜನರು ಈ ರೀತಿ ಮಾಡುತ್ತಿದ್ದಾರೆ' ಎಂದು ಆರೋಪಿಸಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಮಕ್ಕಳಿಂದ ಹಿಡಿದು ಮಧ್ಯ ವಯಸ್ಸಿನ ಜನರ ಮುಖ, ಮೈ ಮೇಲೆ ಕೆಂಪು ಬಣ್ಣ ಬಳಿಯುತ್ತಿರುವ, ಗಾಯಗಳಾಗಿರುವ, ಕಾಲು ಕತ್ತರಿಸಿ ಹೋಗಿರುವಂತೆ ತೋರಿಸುತ್ತಿರುವ ದೃಶ್ಯಗಳು ಈ ವಿಡಿಯೊದಲ್ಲಿ ಇವೆ. ಆದರೆ, ಇದು ಸುಳ್ಳು ಸುದ್ದಿ.

ಗಾಜಾದ ಸಿನಿಮಾ ಉದ್ಯಮದ ಮಹಿಳಾ ಪ್ರಸಾದನ ಕಲಾವಿದೆ ಮರಿಯಮ್ ಸಾಲೇಹ್ ಅವರ ಪ್ರಸಾದನ ಕಲೆಯ ಅನಾವರಣದ ವಿಡಿಯೊ ಇದಾಗಿದೆ. ಸ್ಪೆಷಲ್ ಎಫೆಕ್ಟ್‌ನ ಪ್ರಸಾದನ ಕಲೆಯಲ್ಲಿ ಇವರು ನಿಷ್ಣಾತರು. ಇವರ ಬಗ್ಗೆ 'ಟಿಆರ್‌ಟಿ ವರ್ಲ್ಡ್' ಎನ್ನುವ ಸುದ್ದಿ ಸಂಸ್ಥೆ ವಿಡಿಯೊ ಸುದ್ದಿಯನ್ನು 2019ರ ಮಾರ್ಚ್ 2ರಂದು ಪ್ರಸಾರ ಮಾಡಿದೆ. ಪುರುಷರೇ ಆಧಿಪತ್ಯಗಳಿಸಿರುವ ಗಾಜಾ ಸಿನಿಮಾ ಕ್ಷೇತ್ರದ ಜೊತೆಯಲ್ಲಿಯೇ ಮರಿಯಮ್ ಅವರ ಸಾಧನೆಯನ್ನು ವಿವರಿಸುವ ವಿಡಿಯೊ ಅದಾಗಿತ್ತು. 2021ರಲ್ಲಿ ಇಸ್ರೇಲ್–ಪ್ಯಾಲೆಸ್ಟೀನ್ ಯುದ್ಧ ನಡೆದಾಗಲೂ ಇದೇ ವಿಡಿಯೊ, ಇದೇ ರೀತಿಯ ಆರೋಪಗಳೊಂದಿಗೆ ಜಾಲತಾಣಗಳಲ್ಲಿ ಹರಿದಾಡಿದ್ದವು. ಆದ್ದರಿಂದ, ಇದು ಪ್ಯಾಲೆಸ್ಟೀನ್ ಜನರು ಇಸ್ರೇಲ್‌ನ ಕ್ರೂರತನವನ್ನು ತೋರಿಸಲು ಮಾಡುತ್ತಿರುವ ಪ್ರಯತ್ನ ಅಲ್ಲ ಎಂದು 'ದಿ ಕ್ವಿಂಟ್' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಜಿಪುಣ ಗುರುವಿನ ಜೊತೆ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ನನಗೆ ಫೋಟೊಗ್ರಫಿ ಹೇಳಿಕೊಟ್ಟ ಗುರು ಒಬ್ಬರಿದ್ದಾರೆ. ಎಲ್ಲವನ್ನೂ ಅವರಿಂದ ವೇಗವಾಗಿ ಕಲಿತು ಬಿಡಬೇಕೆಂಬ ತವಕ ನನ್ನಲ್ಲಿತ್ತು. ಆದರೆ ಅವರು ಕಲಿಸುವ ವಿಧಾನವೇ ತೀವ್ರ ನಿಧಾನ ಗತಿಯಲ್ಲಿತ್ತು. ಮುತ್ತು, ರತ್ನ, ವಜ್ರ ಹಂಚುವ ರೀತಿ ಆಗೊಂದು ಈಗೊಂದು ವಿಷಯಗಳನ್ನು ಅದೂ ಮೂಡು ಚೆನ್ನಾಗಿದ್ದಾಗ ಮಾತ್ರ ಅರೆಬರೆಯಾಗಿ ಹೇಳುತ್ತಿದ್ದರು. ಸಾಧಾರಣವಾಗಿ ಮೇಷ್ಟ್ರುಗಳಿಗೆ ಈ ರೀತಿಯ ಕಂಜೂಸಿ ಗುಣ ಇರುವುದು ಕಡಿಮೆ. ಮಕ್ಕಳು ಕೇಳಿದರೆ ಸಾಕು ಉತ್ಸಾಹ ಭುಗಿಲೆದ್ದು ಬೇಕಿರುವುದು, ಬೇಡವಾಗಿರುವುದು ಎಲ್ಲಾ ಒದರಿ ಹಾಕಿ ಬಿಡುತ್ತೇವೆ.

ಇವರು ಮಾತ್ರ ಹಾಗಲ್ಲ. ಗೊತ್ತಾಗದ ಯಾವ ವಿಚಾರ ಕೇಳಿದರೂ ಹ್ಞೂ ಎಂದು ಸುಮ್ಮನಾಗುವುದು. ಈಗ ಹೇಳಬಹುದು; ಆಗ ಹೇಳಬಹುದೆಂದು ಕಾದರೆ ಮತ್ತಷ್ಟು ಕಾಯಿಸುವುದು. ಕೊನೆಗೆ ತೀರಾ ಒತ್ತಾಯಿಸಿದರೆ ನೀನು ಮೊದಲು ಪ್ರಯೋಗ ಮಾಡಿ ವಿಫಲನಾಗು. ಆಮೇಲೆ ನಿನಗೇ ಉತ್ತರ ತಿಳಿಯುತ್ತದೆ ಎಂದು ಒಗಟಾಗಿ ಉತ್ತರಿಸುತ್ತಿದ್ದರು. ಅವರ ಜೊತೆ ಓಡಾಡಿ ಅವರ ಚಟುವಟಿಕೆಗಳನ್ನು ಗಮನಿಸುತ್ತಾ ಕಲಿತರೆ ಆ ಬಗ್ಗೆ ಅವರಿಗೆ ಯಾವ ತಕರಾರೂ ಇರಲಿಲ್ಲ.

ಒಮ್ಮೆ ಹಟ ಹಿಡಿದಾಗ 'ನಾನು ಇಷ್ಟೆಲ್ಲಾ ಕಲಿಯೋದಕ್ಕೆ ಇಪ್ಪತ್ತೈದು ವರ್ಷ ಹೆಣಗಾಡಿದ್ದೀನಿ. ನಿನಗೆ ನಾಲ್ಕೇ ದಿನದಲ್ಲಿ ಕಲಿಸಬೇಕಾ?' ಎಂದು ರೇಗಿದರು.

ಎಲ್ಲವನ್ನೂ ಬೇಗ ಪಡೆಯಬೇಕೆಂಬ ಹವಣಿಕೆಯೇ ತಪ್ಪು ಎಂಬುದು ಅವರ ಅಭಿಮತ. ಕಲಿಯುವ ಆಸಕ್ತ ಮೊದಲು ತನ್ನ ತಿಳಿವಳಿಕೆಯನ್ನು ಬಳಸಬೇಕು. ಆ ಪ್ರಯತ್ನದಲ್ಲಿ ಸಿಗುವ ಸೋಲು ಜ್ಞಾನವನ್ನು ಪಡೆಯಲೇಬೇಕೆಂಬ ಉತ್ಕಟತೆಯನ್ನು ಹೆಚ್ಚಿಸುತ್ತದೆ. ಸ್ವಪ್ರಯತ್ನದ ಫಲವಾಗಿ ದಕ್ಕುವ ಎಲ್ಲವೂ ಅಮೂಲ್ಯ ಎನಿಸುತ್ತವೆ. ಹೀಗೆ ಕಷ್ಟಬಿದ್ದು ಕಲಿಯುವ ವಿದ್ಯೆಗೆ ಮೌಲ್ಯವೂ ಹೆಚ್ಚು ಎನ್ನುವುದು ಅವರ ನಂಬಿಕೆ. ಒಂದು ಶ್ರೇಷ್ಠ ವಿದ್ಯೆಗಾಗಿ ಹೀಗೆ ಕಾಯುವ ಜಾಯಮಾನ ಈಗ ಹೊರಟೇ ಹೋಗಿದೆ. ಬೆರಳ ತುದಿಯಲ್ಲಿ ಎಲ್ಲವೂ ಸಿಗುವ ಕಾಲದಲ್ಲಿರುವ ನಾವು ಇಷ್ಟೊಂದು ಸುದೀರ್ಘ ತೂಕಡಿಕೆಯ ನಿರೀಕ್ಷೆಯನ್ನು ಒಪ್ಪುವುದೇ ಇಲ್ಲ.

ಕಾದು, ಕಾಡಿ ಬೇಡಿ ಅವರಿಂದ ತಕ್ಕಷ್ಟು ಕಲಿತ ಮೇಲೆ ಕೇಳಿದೆ. 'ಗೊತ್ತಿರುವುದನ್ನು ಕಲಿಸಲು ಯಾಕಿಷ್ಟು ತಡಮಾಡುತ್ತೀರಿ' ಎಂದೆ. 'ನನ್ನೊಳಗಿರುವುದೆಲ್ಲಾ ನಿನಗೆ ಹೇಳಿದ ಮೇಲೆ ನಾನು ಖಾಲಿಯಾದೆ ಅನ್ನಿಸುತ್ತೆ. ಆಗ ನಾನು ಮತ್ತೆ ಹೊಸದನ್ನು ಕಲಿಯಲೇಬೇಕು. ನಾನೆಂದೂ ಅರಿವಿನ ದಾರಿಯಲ್ಲಿ ಬರಿದಾಗಿರಲು ಇಷ್ಟಪಡುವುದಿಲ್ಲ. ಹೊಸ ಪಾಠ ಕಲಿತು ನನ್ನ ಜ್ಞಾನದಲ್ಲಿ ಒಂದು ಸಂಖ್ಯೆ ಹೆಚ್ಚಿಸಿಕೊಂಡ ಮೇಲೆಯೇ ನಾನು ಮತ್ತೊಬ್ಬರಿಗೆ ಕಲಿಸುವುದು. ಗುರುವಾದವನು ಕಲಿಯುತ್ತಲೇ ಇರಬೇಕು. ತನ್ನ ಶಿಷ್ಯರಿಗಿಂತ ಕಲಿಕೆಯಲ್ಲಿ ಸದಾ ಮುಂದಿರಬೇಕು. ಈ ಕಾರಣಕ್ಕಷ್ಟೇ ನಾನು ಜುಗ್ಗತನ ಮಾಡುತ್ತೇನೆ' ಎಂದರು.

ಗುರು ಸದಾ ವಿದ್ಯಾರ್ಥಿಯೇ ಆಗಿರುತ್ತಾನೆ. ಇಲ್ಲಿಗೆ ನನ್ನ ಕಲಿಕೆ ಮುಗಿದಿದೆ ಎಂದಾಗ ಆತ ಬದುಕಿದ್ದೂ ಸಾಯುತ್ತಾನೆ. ತಾಯಿ ಹಕ್ಕಿ ತನ್ನ ಮರಿಗಳಿಗೆ ಎಲ್ಲೆಲ್ಲಿಂದಲೋ ಆಹಾರ ಹುಡುಕಿ ತರುವಂತೆ, ದುಂಬಿ ಹೂವುಗಳಿಂದ ಜೇನು ಇಷ್ಟಿಷ್ಟೇ ಸಂಗ್ರಹಿಸಿ ತಂದು ಹುಟ್ಟಿನ ಜೀವ ತುಂಬಿಸುವಂತೆ ಸದಾ ಜ್ಞಾನದ ಹಂಬಲದಲ್ಲಿ ಮುಳುಗಿದವನೇ ನಿಜವಾದ ಗುರುವಾಗಲು ಸಾಧ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಅಕ್ಟೋಬರ್ 18, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಚತುರ್ಥಿ ಗಂ. 25-13 ನಕ್ಷತ್ರ: ಅನುರಾಧಾ ಗಂ. 21-01 ಯೋಗ: ಆಯುಷ್ಮಾನ್ ಗಂ 08-18 ಕರಣ: ವಣಿಜ ಗಂ. 13-23, ತುಲಾ ಮಾಸದ 01 ನೇ ದಿನ, ಮಳೆನಕ್ಷತ್ರ: ಚಿತ್ರ 3. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-25 ಸೂರ್ಯಾಸ್ತ : 06-07 ಮುಸ್ಲಿಂ ದಿನಾಂಕ : 02 ರಬಿಯುಸ್ಸಾನಿ ದಿನ ವಿಶೇಷ : ನವರಾತ್ರಿ 4ನೇ ದಿನ, ಕಾವೇರಿ ಸಂಕ್ರಮಣ ಸ್ನಾನ, ಅದೃಷ್ಟ ಸಂಖ್ಯೆ : 5, 10

ಮೇಷ: ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮುಂದಾಳತ್ವ ವಹಿಸಿ ದೇವರ ಕೃಪೆಗೆ ಪಾತ್ರರಾದಂಥ ಒಂದು ಧನ್ಯತೆಯ ಮನೋಭಾವ ನಿಮ್ಮದಾಗುವುದು. ಅತಿಥಿಗಳ ಆತಿಥ್ಯಕ್ಕಾಗಿ ಖರ್ಚು ಮಾಡುವಲ್ಲಿ ಧಾರಾಳತನ ವ್ಯಕ್ತಪಡಿಸುವಿರಿ.

ವೃಷಭ: ಅಧಿಕವಾದ ಕೌಟುಂಬಿಕ ಒತ್ತಡಗಳ ಮಧ್ಯೆ ವ್ಯಾಪಾರ ವ್ಯವಹಾರಗಳ ಬಗ್ಗೆ ಸ್ವಲ್ಪ ಹೆಚ್ಚಿನ ಗಮನ ನೀಡಬೇಕಾದ ಪರಿಸ್ಥಿತಿ ಬರುವುದು. ಮಾತಿನಲ್ಲಿ ನಯ ವಿನಯಗಳು ಇರಲಿ.

ಮಿಥುನ: ಸಂಬಂಧಿಕರು ಹಳೆ ವ್ಯಾಜ್ಯಗಳನ್ನು ಮರೆತು ನಿಮ್ಮೊಂದಿಗೆ ಸಂಬಂಧ ಉಳಿಸಿಕೊಳ್ಳುವ ದೃಷ್ಟಿಯಿಂದ ಬಂದಾರು. ಹೆಚ್ಚಿನ ಜಾಗರೂಕತೆಯಿಂದ ವ್ಯವಹರಿಸುವುದು ನಿಮ್ಮ ಭವಿಷ್ಯಕ್ಕೆ ಹಿತವಾದುದು.

ಕರ್ಕಾಟಕ: ಇಂದ್ರಿಯಗಳ ಚಂಚಲತೆ, ಏಕಾಗ್ರತೆ ಭಂಗಗೊಳಿಸುವ ಜೊತೆಗೆ ಹಾದಿ ತಪ್ಪಿಸುವ ಸಾಧ್ಯತೆ ಹೆಚ್ಚಿರುತ್ತದೆ. ನಂಬಿಕಸ್ಥರಿಂದ ವ್ಯಾಪಾರದಲ್ಲಿ ಮೋಸಹೋಗುವ ಸಾಧ್ಯತೆ ಇರುವುದರಿಂದ ಎಚ್ಚರವಿರಲಿ.

ಸಿಂಹ: ಬಂಧು ಮಿತ್ರರ ಉತ್ತಮ ನಡವಳಿಕೆಗಳಿಂದ ಸಂಕಷ್ಟಕರ ಸಂದರ್ಭದಲ್ಲಿ ಸಹಾಯಕ್ಕೆ ಬಂದಾರು ಎಂಬ ಆಶಾಭಾವನೆ ಬರುವುದು. ವೃತ್ತಿಯಲ್ಲಿ ಹೊಸ ಪ್ರಯತ್ನಗಳು ಲಾಭವನ್ನು ತಂದು ಕೊಡುವವು.

ಕನ್ಯಾ: ಬಲು ಅಪರೂಪದ ಹಾಗೂ ಕರಗತವಾದ ವಿದ್ಯೆಯು ಅಧಿಕ ಲಾಭ ತಂದುಕೊಡುವುದು. ಶಿಕ್ಷಕ ವೃತ್ತಿಯನ್ನು ಮಾಡುತ್ತಿರುವವರಿಗೆ ಅತ್ಯಂತ ಹೆಮ್ಮೆಯ ಸಂದರ್ಭವೊಂದು ಬರಲಿದೆ.

ತುಲಾ: ಅಕ್ಕಪಕ್ಕದವರೊಂದಿಗೆ ಇದ್ದ ವಿವಾದಗಳು ಹಂತ ಹಂತವಾಗಿ ಸರಿಯಾಗಲಿವೆ. ಸ್ವಂತ ವ್ಯವಹಾರಗಳಲ್ಲಿ ನಿರೀಕ್ಷಿತ ಯಶಸ್ಸನ್ನು ಕಾಣುವಿರಿ. ಇತರರಿಗೆ ಉಪಕಾರ ಮಾಡದಿದ್ದರೂ ಕೆಡುಕು ಬಯಸದಿರಿ.

ವೃಶ್ಚಿಕ: ದೀರ್ಘಕಾಲೀನ ಅನಾರೋಗ್ಯಗಳನ್ನು ಆಪ್ತರ ಸಲಹೆಯ ಮೇರೆಗೆ ವೈದ್ಯರೊಬ್ಬರನ್ನು ಕಂಡು ಬಗೆಹರಿಸಿಕೊಳ್ಳುವಿರಿ. ಶ್ರೇಯೋಭಿವೃದ್ಧಿಗಾಗಿ ದುರ್ಗಾಪರಮೇಶ್ವರಿಯಲ್ಲಿ ವಿಶೇಷ ಪ್ರಾರ್ಥನೆ ಮಾಡಿಕೊಳ್ಳಿರಿ.

ಧನು: ಕೆಲಸದ ಒತ್ತಡದಿಂದ ಉಂಟಾಗುತ್ತಿರುವ ಶರೀರಬಾಧೆಗಳನ್ನು ನಿವಾರಿಸಿಕೊಳ್ಳಲೆಂದು ತೆಗೆದುಕೊಳ್ಳುವ ಔಷಧಗಳು ನಿಧಾನವಾಗಿ ವಿಷವಾಗಿ ಪರಿಣಮಿಸಬಹುದು. ದುಶ್ಚಟಗಳಿಂದ ಮುಕ್ತರಾಗುವ ಮನಸ್ಸಿನ ಮಾತು ಕೇಳಿ.

ಮಕರ: ವೃತ್ತಿಯಲ್ಲಿ ಈಗಾಗಲೇ ಅತ್ಯಂತ ಯಶಸ್ಸು ಗಳಿಸಿರುವವರೊಂದಿಗೆ ಸಂಪರ್ಕ ಸಾಧಿಸುವ ಪ್ರಯತ್ನ ಯಶಸ್ವಿಯಾಗುತ್ತದೆ. ಒಳಿತಾಗುವ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಯಾವುದೇ ರೀತಿಯ ಯೋಚನೆಗಳು ಬೇಡ.

ಕುಂಭ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಿರಿ. ಮುಕ್ತ ಮಾತುಕತೆ ಮೂಲಕ ಕಾರ್ಮಿಕರಲ್ಲಿನ ಸಮಸ್ಯೆ ಬಗೆಹರಿಸಿಕೊಳ್ಳಿರಿ. ಪುಸ್ತಕಗಳನ್ನು ಕೊಳ್ಳಲು ಧನ ವಿನಿಯೋಗವಾಗುವುದು.

ಮೀನ: ನಿವೇಶನ ಮಾರುವ ಪರಿಸ್ಥಿತಿ ಎದುರಾದರೂ ಉತ್ತಮ ಲಾಭ ಪಡೆಯುವಿರಿ. ರಾಸಾಯನಿಕ ಪದಾರ್ಥಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ ಬರುವುದು. ಬೇಡಿಕೆಯ ಅರ್ಜಿಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುವುದು.

ಪದಬಂಧ 5474 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜೇನನ್ನು ಹಿಡಿದಿಟ್ಟುಕೊಂಡಿರುವ ತಿಂಗಳು (4)
3.ಇಂದ್ರಿಯಗಳ ಮೂಲಕ ಬರುವ ಜ್ಞಾನ (4)
5.ದುಡ್ಡಿಲ್ಲದಿರುವಿಕೆ (4)
7.ಮಣ ಭಾರವನ್ನು ಹೊತ್ತಿರುವ ನಲ್ಲ (3)
8.ವನವನ್ನು ಪಾಲನೆ ಮಾಡುವವನು (5)
11.ನೀರಿಗೊಂದು ಪರ್ಯಾಯ ಪದ (3)
12. ದೇವಸ್ಥಾನದ ಸಭಾಮಂಟಪ (4)
14.ವಿದಾಯ ಹೇಳಲು ಸೇರಿದ ಗುಂಪು (4)
15.ಈತ ಗುರುತುಳ್ಳ ವ್ಯಕ್ತಿ (4)

ಮೇಲಿಂದ ಕೆಳಕ್ಕೆ

1.ಮನಸ್ಸಿನ ಶಕ್ತಿ (4)
2.ಆನೆ ನಡೆಸುವವ ಇಲ್ಲಿದ್ದಾನೆ (3)
4.ನೀರಿನ ಅಧಿದೇವತೆ (3)
6.ನಯನಕ್ಕೆ ಕಂಡದ್ದು ಬಲು ಹೊಸತು! (3)
7.ಈತ ಕಾಪಾಡುವವನು (3)
8.ವರ್ತಮಾನ ತಿಳಿಸಿದ ವ್ಯಾಪಾರಿ (3)
9.ಬೆಳ್ಳುಳ್ಳಿಯನ್ನು ಹೀಗೂ ಹೇಳುವರು (3)
10.ಮನ್ಮಥನ ಮತ್ತೊಂದು ಹೆಸರು (4)
11.ಸಂತೋಷ ಹೀಗೆ ಬಂದಿದೆ (3)
13.ಈಕೆ ವೈರಿಯ ಹತ್ತಿರ ಬಿಂಕ ತೋರುತ್ತಿಹಳಲ್ಲಾ? (3)



5473ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸಮಸ್ಯೆ
4.ವಿವಾಹ 5.ಸಮಾಧಾನ
6.ಗಡಿಯಾರ 7.ನವ
9.ತಿವಿ 13.ವಾಸಸ್ಥಾನ
14.ಸಹವಾಸ 15.ಯಾಚಕ
16.ಬಂಧನ

ಮೇಲಿಂದ ಕೆಳಕ್ಕೆ:
1.ನವಿರೆಳೆ 2.ಸಹಗಮನ
3.ನಿಧಾನ 5.ಸರಸ್ವತಿ
8.ವನವಾಸ 10.ವಿಮಾನಯಾನ
11.ಮಧುಕರ 12.ಮಹಡಿ

ಸುಡೊಕು 5860

				3		1		6
4	6	9						
	1		7	6	2		5	4
		3	5		6	4		
	4			2			6	7
		5	1		7	3		
	8		6			2		3
2		6			3			
	3	4		7		6		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5859 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

2040ರೊಳಗೆ ಸಾಧಿಸಲು ಇಸ್ರೊಗೆ ಗುರಿ ನಿಗದಿ: ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ

‘ಚಂದಿರನ ಅಂಗಳಕ್ಕೆ ಭಾರತೀಯ’

ಮುಖ್ಯಾಂಶಗಳು

- 2035ರೊಳಗೆ ಭಾರತೀಯ ಬಾಹ್ಯಾಕಾಶ ನಿಲ್ದಾಣ ನಿರ್ಮಾಣಕ್ಕೆ ಸಲಹೆ
- ಅಂತರಿಕ್ಷ ಅನ್ವೇಷಣೆಗೆ ಸಂಬಂಧಿಸಿದ ಭಾರತದ ಸಾಧನೆಗೆ ಶ್ಲಾಘನೆ
- ಗಗನಯಾನ ಸಿದ್ಧತೆ ಬಗ್ಗೆ ಮಾಹಿತಿ ಹಂಚಿಕೆ

ನವದೆಹಲಿ(ಪಿಟಿಐ): ‘ಚಂದ್ರಯಾನ-3’ರ ಯಶಸ್ಸಿನಿಂದಾಗಿ ದೇಶವು ಹೆಮ್ಮೆಯಿಂದ ಬೀಗುತ್ತಿರುವ ಬೆನ್ನಲ್ಲೇ, ಚಂದಿರನ ಅಂಗಳಕ್ಕೆ 2040ರೊಳಗೆ ಭಾರತೀಯ ವ್ಯಕ್ತಿಯನ್ನು ಕಳುಹಿಸುವ ಬಾಹ್ಯಾಕಾಶ ಕಾರ್ಯಕ್ರಮ ರೂಪಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೊ ವಿಜ್ಞಾನಿಗಳಿಗೆ ಮಂಗಳವಾರ ಗುರಿ ನಿಗದಿ ಮಾಡಿದ್ದಾರೆ.

ಜೊತೆಗೆ, ಅಂತರಿಕ್ಷ ಕ್ಷೇತ್ರದಲ್ಲಿನ ಸಂಶೋಧನೆಗೆ ಮತ್ತಷ್ಟು ಬಲ ತುಂಬಲು ‘ಭಾರತೀಯ ಬಾಹ್ಯಾಕಾಶ ನಿಲ್ದಾಣ’ವನ್ನು 2035ರೊಳಗೆ ನಿರ್ಮಿಸುವಂತೆಯೂ ಅವರು ಸೂಚಿಸಿದ್ದಾರೆ.

ಗಗನಯಾನ ಕಾರ್ಯಕ್ರಮದ ಗಗನಯಾನಿಗಳು ಭೂಮಿಗೆ ಮರಳುವ ವೇಳೆ, ಸುರಕ್ಷಿತವಾಗಿ ಪಾರಾಗುವ ವ್ಯವಸ್ಥೆಯ (ಕ್ರೂ ಎಸ್ಕೇಪ್ ಸಿಸ್ಟಮ್) ಮೊದಲ ಪರೀಕ್ಷಾರ್ಥ ಉಡಾವಣೆಯನ್ನು ಇದೇ 21ಕ್ಕೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಸಿದ್ಧತೆಯನ್ನು ಪರಾಮರ್ಶಿಸುವ ಸಲುವಾಗಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮೋದಿ ಅವರು ನಿರ್ದೇಶನ ನೀಡಿದ್ದಾರೆ ಎಂದು ಪ್ರಧಾನ ಮಂತ್ರಿ ಕಚೇರಿ (ಪಿಎಂಒ) ಪ್ರಕಟಣೆ ತಿಳಿಸಿದೆ.

ನರೇಂದ್ರ ಮೋದಿ

ಗಗನಯಾನಕ್ಕೆ ಸಂಬಂಧಿಸಿ ನಡೆಯುತ್ತಿರುವ ಸಿದ್ಧತೆಗಳ ಕುರಿತು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಅವರು ಪ್ರಧಾನಿಯವರಿಗೆ ಮಾಹಿತಿ ನೀಡಿದರು. 2025ರ ವೇಳೆಗೆ ಈ ಬಾಹ್ಯಾಕಾಶ ಕಾರ್ಯಕ್ರಮ ಅನುಷ್ಠಾನಗೊಳಿಸುವ ವಿಶ್ವಾಸ ಸಭೆಯಲ್ಲಿ ವ್ಯಕ್ತವಾಯಿತು ಎಂದು ಪ್ರಕಟಣೆ ತಿಳಿಸಿದೆ.

ಅಂತರಿಕ್ಷ ಅನ್ವೇಷಣೆಗೆ ಸಂಬಂಧಿಸಿ ಭಾರತದ ಪ್ರಗತಿಯನ್ನು ಪ್ರಸ್ತಾಪಿಸಿದ ಪ್ರಧಾನಿ, ಭವಿಷ್ಯದಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಮಾತನಾಡಿದರು. ಬುಧ ಗ್ರಹ ಕಕ್ಷೆಗಾಮಿ ಹಾಗೂ ಮಂಗಳ ಗ್ರಹದಲ್ಲಿ ಗಗನನೌಕೆ ಇಳಿಸುವ ಬಾಹ್ಯಾಕಾಶ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವಂತೆ ವಿಜ್ಞಾನಿಗಳಿಗೆ ಸೂಚಿಸಿದರು.

‘2035ರ ವೇಳೆಗೆ ‘ಭಾರತೀಯ ಅಂತರಿಕ್ಷ ನಿಲ್ದಾಣ’ ಸ್ಥಾಪನೆ, 2040ರ ವೇಳೆಗೆ ಚಂದಿರನ ಅಂಗಳದಲ್ಲಿ ಭಾರತೀಯ ಗಗನಯಾನಿ ಇಳಿಯುವಂತೆ ಮಾಡುವುದು ನಮ್ಮ ಹೊಸ ಗುರಿಯಾಗಲಿ. ಇದಕ್ಕೆ ಇತ್ತೀಚಿನ ಚಂದ್ರಯಾನ-3 ಹಾಗೂ ಆದಿತ್ಯ ಎಲ್-1 ಕಾರ್ಯಕ್ರಮಗಳ ಯಶಸ್ಸು ಪ್ರೇರಣೆಯಾಗಲಿ ಎಂಬುದಾಗಿ ಪ್ರಧಾನಿ ಹೇಳಿದರು’ ಎಂದು ಪ್ರಕಟಣೆ ತಿಳಿಸಿದೆ.

ಚಂದ್ರನ ಮೇಲ್ಮೈನಲ್ಲಿ ಭಾರತೀಯ ವ್ಯೋಮಯಾನಿಯನ್ನು ಇಳಿಸುವುದಕ್ಕೆ ಸಂಬಂಧಿಸಿದ ನೀಲನಕ್ಷೆಯನ್ನು ಬಾಹ್ಯಾಕಾಶ ಇಲಾಖೆಯು ಸಿದ್ಧಪಡಿಸಲಿದೆ ಎಂದೂ ಪ್ರಕಟಣೆ ತಿಳಿಸಿದೆ.

‘ಉದ್ದೇಶಿತ ಈ ಅಂತರಿಕ್ಷಯಾನವು ಸರಣಿ ‘ಚಂದ್ರಯಾನ’ ಕಾರ್ಯಕ್ರಮಗಳನ್ನು ಒಳಗೊಂಡಿರಲಿದ್ದು, ಇದಕ್ಕಾಗಿ ‘ನೆಕ್ಸ್ಟ್ ಜನರೇಷನ್ ಲಾಂಚ್ ವೆಹಿಕಲ್’ (ಎನ್‌ಜಿಎಲ್‌ವಿ) ಎಂಬ ಹೊಸ ತಲೆಮಾರಿನ ಉಡ್ಡಯನ ವಾಹನಗಳನ್ನು ವಿನ್ಯಾಸಗೊಳಿಸಬೇಕು. ಹೊಸದಾದ ಉಡ್ಡಯನ ನೆಲೆ, ಪ್ರಯೋಗಾಲಯಗಳು ಹಾಗೂ ಸಂಬಂಧಪಟ್ಟ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ’ ಎಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಚಿವ ಜಿತೇಂದ್ರ ಸಿಂಗ್, ಮೋದಿ ಅವರ ಪ್ರಧಾನ ಕಾರ್ಯದರ್ಶಿ ಪಿ.ಕೆ. ಮಿಶ್ರಾ ಹಾಗೂ ಇತರ ಅಧಿಕಾರಿಗಳು ಸಭೆಯಲ್ಲಿ ಇದ್ದರು.

ಹೈಕೋರ್ಟ್‌ಗೆ ಉದಯನಿಧಿ ಹೇಳಿಕೆ ದಾಖಲು

ಚೆನ್ನೈ (ಪಿಟಿಐ): ‘ಸೈದ್ಧಾಂತಿಕ ಭಿನ್ನಾಭಿಪ್ರಾಯದ ನೆಲೆಗಟ್ಟಿನ ಆಧಾರದ ಮೇಲೆ ನನ್ನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್ ಅವರು, ಮದ್ರಾಸ್ ಹೈಕೋರ್ಟ್‌ನಲ್ಲಿ ಹೇಳಿಕೆ ದಾಖಲಿಸಿದ್ದಾರೆ.

ಕಳೆದ ತಿಂಗಳು ತಮಿಳುನಾಡಿನಲ್ಲಿ ನಡೆದ ಸಮಾರಂಭದಲ್ಲಿ ಸನಾತನ ಧರ್ಮವನ್ನು ಕೊರೊನಾ ಸೋಂಕು, ಡೆಂಗಿ ಹಾಗೂ ಮಲೇರಿಯಾಕ್ಕೆ ಹೋಲಿಸಿದ್ದ ಅವರು, ಅದನ್ನು ನಿರ್ಮೂಲನೆ ಮಾಡಬೇಕು ಎಂದು ನೀಡಿದ್ದ ಹೇಳಿಕೆಯು ವಿವಾದ ಸೃಷ್ಟಿಸಿತ್ತು.

ಈ ಕುರಿತಂತೆ ಹಿಂದೂಪರ ಸಂಘಟನೆಯಾದ ‘ಹಿಂದೂ ಮುನ್ನಾನಿ’ಯು, ಸನಾತನ ಧರ್ಮದ ವಿರುದ್ಧ ಟೀಕಿಸಲು ಉದಯನಿಧಿ ಅವರು ಸರ್ಕಾರಿ ಕಚೇರಿಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಫಾಲ್ಕೆ ಪ್ರದಾನ

ನವದೆಹಲಿಯಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ನಟಿ ವಹೀದಾ ರೆಹಮಾನ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಪ್ರದಾನ ಮಾಡಿದರು –ಪಿಟಿಐ ಚಿತ್ರ

ಬಾಂಬೆ ಹೈಕೋರ್ಟ್‌ಗೆ ರಾಹುಲ್ ಅರ್ಜಿ

ಮುಂಬೈ (ಪಿಟಿಐ): ಗೌರಿ ಲಂಕೇಶ್ ಹತ್ಯೆಗೂ, ಆರ್‌ಎಸ್‌ಎಸ್‌ಗೂ ಸಂಬಂಧವಿದೆ ಎಂದು ಆರೋಪಿಸಿ ನೀಡಿದ್ದ ಹೇಳಿಕೆ ಸಂಬಂಧ ದಾಖಲಾಗಿದ್ದ ಮಾನಹಾನಿ ಪ್ರಕರಣ ರದ್ದುಪಡಿಸಲು ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಬಾಂಬೆ ಹೈಕೋರ್ಟ್‌ನ ಮೆಟ್ಟಿಲೇರಿದ್ದಾರೆ.

ಪ್ರಕರಣವನ್ನು ಸಿಪಿಎಂ ನಾಯಕ ಸೀತಾರಾಂ ಯೆಚೂರಿ ವಿರುದ್ಧ ದಾಖಲಿಸಿರುವ ಪ್ರಕರಣದ ಜತೆಗೆ ಒಟ್ಟುಗೂಡಿಸಲಾಗದು. ಇಬ್ಬರು ಭಿನ್ನ ಸಂದರ್ಭಗಳಲ್ಲಿ ಹೇಳಿಕೆ ನೀಡಿದ್ದು ಭಿನ್ನ ಪಕ್ಷ, ಭಿನ್ನ ಸಿದ್ಧಾಂತ ಹೊಂದಿದ್ದವರು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ವಿ.ಕೊತ್ವಾಲ್ ಡಿಸೆಂಬರ್ 5ಕ್ಕೆ ಮುಂದೂಡಿದರು. ವಕೀಲ ಧ್ರುತಿಮನ್ ಜೋಶಿ 2017ರಲ್ಲಿ ರಾಹುಲ್, ಸೋನಿಯಾ ಗಾಂಧಿ ಮತ್ತು ಯೆಚೂರಿ ವಿರುದ್ಧ ಪ್ರಕರಣ ದಾಖಲಿಸಿದ್ದರು.

ಎಫ್‌ಐಆರ್ ರದ್ದುಪಡಿಸಲು ನಾಯ್ಡು ಮನವಿ: ತೀರ್ಪು ಕಾಯ್ದಿರಿಸಿದ ‘ಸುಪ್ರೀಂ’



ಚಂದ್ರಬಾಬು ನಾಯ್ಡು

ನವದೆಹಲಿ (ಪಿಟಿಐ): ತಮ್ಮ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿದ ಆಂಧ್ರಪ್ರದೇಶ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿರುವ ಸುಪ್ರೀಂ ಕೋರ್ಟ್, ತೀರ್ಪನ್ನು ಕಾಯ್ದಿರಿಸಿದೆ.

ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ವಿಭಾಗೀಯ ನ್ಯಾಯಪೀಠವು, ಮಂಗಳವಾರ ಈ ಅರ್ಜಿಯ ವಿಚಾರಣೆ ನಡೆಸಿತು.

ಚಂದ್ರಬಾಬು ಪರ ಹಿರಿಯ ವಕೀಲ ಹರೀಶ್ ಸಾಳ್ವೆ ಹಾಗೂ ಆಂಧ್ರಪ್ರದೇಶ ಸರ್ಕಾರದ ಪರ ಮುಕುಲ್ ರೋಹಟಗಿ ವಾದ ಮಂಡಿಸಿದರು.

ಮಧ್ಯಂತರ ಜಾಮೀನು ನಿರಾಕರಣೆ

ಚಂದ್ರಬಾಬು ನಾಯ್ಡು ಅವರಿಗೆ ಮಧ್ಯಂತರ ಜಾಮೀನು ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಕೌಶಲ ಅಭಿವೃದ್ಧಿ ನಿಗಮದ ಅವ್ಯವಹಾರ ಸಂಬಂಧ ದಾಖಲಾಗಿರುವ ಎಫ್‌ಐಆರ್ ರದ್ದತಿ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆಯೇ ಚಂದ್ರಬಾಬು ಪರ ಹಾಜರಿದ್ದ ವಕೀಲರಾದ ಹರೀಶ್ ಸಾಳ್ವೆ ಹಾಗೂ ಸಿದ್ಧಾರ್ಥ್ ಲೂತ್ರಾ, ‘ಮಾಜಿ ಮುಖ್ಯಮಂತ್ರಿಗೆ ಈಗ 73 ವರ್ಷವಾಗಿದೆ. 40 ದಿನಗಳ ಕಾಲ ಕಾರಾಗೃಹದಲ್ಲಿದ್ದಾರೆ. ಹಾಗಾಗಿ, ಮಧ್ಯಂತರ ಜಾಮೀನು ನೀಡಬೇಕು’ ಎಂದು ನ್ಯಾಯಪೀಠಕ್ಕೆ ಕೋರಿದರು.

ಆಂಧ್ರಪ್ರದೇಶ ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ರಂಜಿತ್ ಕುಮಾರ್, ‘ವಿಚಾರಣಾ ನ್ಯಾಯಾಲಯದಲ್ಲಿ ಚಂದ್ರಬಾಬು ಅವರ ಜಾಮೀನು ಅರ್ಜಿಯ ವಿಚಾರಣೆ ಬಾಕಿ ಇದೆ’ ಎಂದು ಪೀಠದ ಗಮನಕ್ಕೆ ತಂದರು. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17ಎ ಅನ್ವಯ ಸಾರ್ವಜನಿಕ ಸೇವೆಯಲ್ಲಿ ಇರುವ ವ್ಯಕ್ತಿಯ ವಿರುದ್ಧ ವಿಚಾರಣೆ ಅಥವಾ ತನಿಖೆ ನಡೆಸುವುದಕ್ಕೂ ಮೊದಲು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯಬೇಕಿದೆ. 2018ರ ಜುಲೈನಲ್ಲಿ ಕಾಯ್ದೆಯಡಿ ಹೊಸದಾಗಿ ಸೇರಿಸಿದ ನಿಬಂಧನೆಯಲ್ಲಿ ಈ ಷರತ್ತು ವಿಧಿಸಲಾಗಿದೆ. ಇದರ ಆಧಾರದ ಮೇಲೆ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯ ತೀರ್ಪನ್ನು ಕಾಯ್ದಿರಿಸಲಾಗಿದೆ ಎಂದು ನ್ಯಾಯಪೀಠ ಹೇಳಿತು.

ಮಹಾರಾಷ್ಟ್ರ ಸ್ಪೀಕರ್‌ಗೆ ಗಡುವು

ಅನರ್ಹತೆ ಅರ್ಜಿ ಇತ್ಯರ್ಥ: ವೇಳಾಪಟ್ಟಿ ನಿಗದಿಗೆ ಸಿದ್ಧ– ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸ್ಪೀಕರ್ ವಿಳಂಬ ನಡೆಗೆ ತ್ರಿಸದಸ್ಯ ಪೀಠ ಅತೃಪ್ತಿ
- ಅರ್ಜಿಗಳ ತ್ವರಿತ ಇತ್ಯರ್ಥಕ್ಕೆ ಕೋರಿದ ಶಿವಸೇನಾ (ಉದ್ಧವ್ ಠಾಕ್ರೆ ಬಣ)
- ಶಾಸಕರ ಅನರ್ಹತೆಗೆ ಎನ್‌ಸಿಪಿಯಿಂದಲೂ ಪ್ರತ್ಯೇಕ ಅರ್ಜಿ ಸಲ್ಲಿಕೆ

ನವದೆಹಲಿ: ಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಅವರ ಬಣದ ಶಾಸಕರ ಅನರ್ಹತೆ ಸಂಬಂಧ ಸಲ್ಲಿಸಿರುವ ಅರ್ಜಿಗಳ ಇತ್ಯರ್ಥಕ್ಕೆ ನಿರ್ದಿಷ್ಟ ವೇಳಾಪಟ್ಟಿ ನಿಗದಿಪಡಿಸುವಂತೆ ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ, ಸುಪ್ರೀಂ ಕೋರ್ಟ್ ಅಂತಿಮ ಗಡುವು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ಮಂಗಳವಾರ ಅನರ್ಹತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿತು.

2022ರ ಜೂನ್‌ನಿಂದ ಅರ್ಜಿಗಳ ಇತ್ಯರ್ಥ ಬಾಕಿ ಇರುವುದನ್ನು ಗಮನಿಸಿದ ಪೀಠವು, ಸ್ಪೀಕರ್ ಅವರ ವಿಳಂಬ ನಡೆಯ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿತು. ‘ಸುರಂಗದ ಕೊನೆಯಲ್ಲಿ ಯಾವಾಗಲೂ ಬೆಳಕು ಇರುತ್ತದೆ. ಅದನ್ನು ಕಾಣಲು ಅವಕಾಶ ನೀಡಬೇಕು’ ಎಂದು ಮಾರ್ಮಿಕವಾಗಿ ಹೇಳಿತು.

ಮಹಾರಾಷ್ಟ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಅರ್ಜಿಗಳನ್ನು ಇತ್ಯರ್ಥ ಪಡಿಸಬೇಕಿರುವ ಸ್ಪೀಕರ್ ಅವರು ದಸರಾ ಸಂಭ್ರಮದಲ್ಲಿ ತೊಡಗಿಕೊಂಡಿದ್ದಾರೆ. ಹಬ್ಬ ಮುಗಿದ ಬಳಿಕ ಇತ್ಯರ್ಥಪಡಿಸುತ್ತಾರೆ. ಅಲ್ಲದೇ, ಹಲವು ಅರ್ಜಿಗಳು ಸಲ್ಲಿಕೆಯಾಗಿವೆ. ಹಾಗಾಗಿ, ನಿರ್ದಿಷ್ಟ ವೇಳಾಪಟ್ಟಿ ನಿಗದಿಪಡಿಸಲು ಸ್ಪೀಕರ್‌ಗೆ ಮತ್ತಷ್ಟು ಕಾಲಾವಕಾಶ ಬೇಕಿದೆ’ ಎಂದು ಪೀಠಕ್ಕೆ ತಿಳಿಸಿದರು.

ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಪೀಠವು, ‘ಸದನದಲ್ಲಿ ಏನು ನಡೆದಿದೆ ಎಂಬುದು ನಮಗೆ ತಿಳಿದಿಲ್ಲ. ನಾವು ಮಧ್ಯಪ್ರವೇಶಿಸುವುದಿಲ್ಲ. ಸ್ಪೀಕರ್ ಅವರೇ ಅಂತಿಮ ನಿರ್ಧಾರಕೈಗೊಳ್ಳಬೇಕು. ಅವರು ಯಾವಾಗ ಈ ಪ್ರಕರಣವನ್ನು ಇತ್ಯರ್ಥಪಡಿಸುತ್ತಾರೆ’ ಎಂದು ಪ್ರಶ್ನಿಸಿತು.

‘ನಿರ್ದಿಷ್ಟ ದಿನಾಂಕ ನಿಗದಿಪಡಿಸುವ ಕುರಿತು ನ್ಯಾಯಾಲಯಕ್ಕೆ ತಿಳಿಸಬೇಕು. ಇಲ್ಲವಾದರೆ ನಾವೇ ಸಮಯವನ್ನು ನಿಗದಿಪಡಿಸುತ್ತೇವೆ’ ಎಂದು ಎಚ್ಚರಿಕೆ ನೀಡಿದ ಪೀಠವು, ‘ಸ್ಪೀಕರ್ ಅವರು ಸರ್ವಪಕ್ಷಗಳ ಸಭೆ ಕರೆದು ಚರ್ಚಿಸಿ ಸಮಯ ನಿಗದಿಪಡಿಸುವುದು ಉತ್ತಮ’ ಎಂದು ಸಲಹೆ ನೀಡಿತು. ಬಳಿಕ ಅಕ್ಟೋಬರ್ 30ಕ್ಕೆ ವಿಚಾರಣೆಯನ್ನು ಮುಂದೂಡಿತು.

ಶಾಸಕರ ಅನರ್ಹತೆ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಸ್ಪೀಕರ್‌ಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಶಿವಸೇನಾ (ಉದ್ಧವ್ ಠಾಕ್ರೆ ಬಣ) ಅರ್ಜಿ ಸಲ್ಲಿಸಿದೆ. ಅಜಿತ್ ಪವಾರ್ ಹಾಗೂ ಅವರ ಬಣದ ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಎನ್‌ಸಿಪಿ (ಶರದ್ ಪವಾರ್ ಬಣ) ನಾಯಕ ಜಯಂತ್ ಪಟೇಲ್ ಅವರು ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ

ಲಂಚ ಅಪರಾಧದ ಭಾಗವಾಗಿರದಿದ್ದರೆ ಆರೋಪ ಸಾಬೀತು ಕಠಿಣ: ‘ಸುಪ್ರೀಂ’

ನವದೆಹಲಿ (ಪಿಟಿಐ): ‘ದೆಹಲಿ ಅಬಕಾರಿ ನೀತಿಯನ್ನು ತಿರುಚುವುದಕ್ಕಾಗಿ ನೀಡಲಾಗಿದೆ ಎನ್ನಲಾದ ಲಂಚವು ನೀವು ನಿರೂಪಿಸಲು ಹೊರಟಿರುವ ಅಪರಾಧದ ಭಾಗವಾಗಿರದಿದ್ದಲ್ಲಿ ಮಾಜಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ವಿರುದ್ಧದ ಆರೋಪವನ್ನು ಸಾಬೀತು ಮಾಡುವುದು ಕಠಿಣವಾಗಲಿದೆ’ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಉದ್ದೇಶಿಸಿ ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಜಾಮೀನು ಕೋರಿ ಮನೀಷ್ ಸಿಸೋಡಿಯಾ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ವೇಳೆ, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್.ಭಟ್ಟಿ ಅವರ ನ್ಯಾಯಪೀಠ ಈ ಮಾತು ಹೇಳಿದೆ.

‘ಲಂಚ ನೀಡಲಾಗಿತ್ತು ಎಂಬ ಊಹೆಯನ್ನು ಪರಿಗಣಿಸಲಾಗದು. ಅಲ್ಲದೇ, ಕಾನೂನು ಪ್ರಕಾರ ಆರೋಪಿಗೆ ನೀಡಬೇಕಾದ ರಕ್ಷಣೆಯನ್ನು ನೀಡಬೇಕಾಗುತ್ತದೆ’ ಎಂದು ಪೀಠ ಹೇಳಿದೆ.

‘ಪ್ರಕರಣದ ವಿಚಾರಣೆಯೇ ಆರಂಭವಾಗಿಲ್ಲ. ಹೀಗಾಗಿ ಅನಿರ್ದಿಷ್ಟ ಅವಧಿವರೆಗೆ ಕಕ್ಷಿದಾರನನ್ನು ಸೆರೆವಾಸದಲ್ಲಿ ಇರಿಸುವಂತಿಲ್ಲ. 500 ಸಾಕ್ಷಿಗಳಿದ್ದು, 50 ಸಾವಿರಕ್ಕೂ ಹೆಚ್ಚು ದಾಖಲೆಗಳನ್ನು ಪರಿಶೀಲಿಸಬೇಕಿದೆ. ಅಲ್ಲದೇ, ಪ್ರಕರಣಕ್ಕೆ ನನ್ನ ಕಕ್ಷಿದಾರ ನಂಟು ಹೊಂದಿದ್ದಾನೆ ಎಂಬುದನ್ನು ಸಾಕ್ಷ್ಯವೂ ಇಲ್ಲ. ಸಿಸೋಡಿಯಾ ಅವರು ದೇಶ ತೊರೆಯುವ ಅಪಾಯ ಇಲ್ಲದ ಕಾರಣ, ಅವರಿಗೆ ಜಾಮೀನು ನೀಡಬೇಕು’ ಎಂದು ಸಿಸೋಡಿಯಾ ಪರ ಹಾಜರಿದ್ದ ವಕೀಲ ಅಭಿಷೇಕ್ ಸಿಂಘ್ವಿ ಹೇಳಿದರು.

‘ಸಿಸೋಡಿಯಾ ವಿರುದ್ಧದ ಭ್ರಷ್ಟಾಚಾರ ಮತ್ತು ಹಣದ ಅಕ್ರಮ ವರ್ಗಾವಣೆ ಪ್ರಕರಣಗಳ ವಿಚಾರಣೆಯನ್ನು 9 ರಿಂದ 12 ತಿಂಗಳಲ್ಲಿ ಪೂರ್ಣಗೊಳಿಸಬಹುದು. ಹೀಗಾಗಿ ಅವರಿಗೆ ಜಾಮೀನು ನೀಡಬಾರದು’ ಎಂದು ಸಿಬಿಐ ಮತ್ತು ಇ.ಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ಪೀಠಕ್ಕೆ ತಿಳಿಸಿದರು.

ತೀರ್ಪು ಕಾಯ್ದಿರಿಸಿದ ಕೋರ್ಟ್: ದೆಹಲಿ ಅಬಕಾರಿ ನೀತಿ ಹಗರಣಕ್ಕೆ ನಂಟಿದೆ ಎನ್ನಲಾದ ಭ್ರಷ್ಟಾಚಾರ ಹಾಗೂ ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ಜಾಮೀನು ಅರ್ಜಿಗಳ ಕುರಿತ ತೀರ್ಪನ್ನು ಸುಪ್ರೀಂಕೋರ್ಟ್ ಮಂಗಳವಾರ ಕಾಯ್ದಿರಿಸಿತು.

ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಿದ ದೇಶಗಳು

ನೆದರ್ಲೆಂಡ್ಸ್: ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಿದ ಜಗತ್ತಿನ ಮೊದಲ ದೇಶ. 2000ನೇ ಇಸವಿಯ ಡಿಸೆಂಬರ್‌ನಲ್ಲಿ ಈ ಕುರಿತ ಕಾನೂನಿಗೆ ಇಲ್ಲಿನ ಸಂಸತ್ತು ಅಂಗೀಕಾರ ನೀಡಿದೆ.

ಬೆಲ್ಜಿಯಂ: 2003ರಲ್ಲಿ ಸಲಿಂಗ ಮದುವೆಗೆ ಕಾನೂನು ಮಾನ್ಯತೆ ನೀಡಿದೆ.

ಅರ್ಜೆಂಟಿನಾ: ಲ್ಯಾಟಿನ್ ಅಮೆರಿಕದಲ್ಲಿ ಸಲಿಂಗ ವಿವಾಹಕ್ಕೆ ಅವಕಾಶ ನೀಡಿದ ಮೊದಲ ದೇಶ. 2010ರಲ್ಲಿ ಅರ್ಜೆಂಟಿನಾ ಇದಕ್ಕೆ ಮಾನ್ಯತೆ ನೀಡಿದೆ.

ಬ್ರೆಜಿಲ್: 2013ರಲ್ಲಿ ಇಲ್ಲಿನ ನ್ಯಾಯಾಲಯವು ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಿದೆ.

ಫಿನ್‌ಲ್ಯಾಂಡ್: 2017ರಲ್ಲಿ ಫಿನ್‌ಲ್ಯಾಂಡ್‌ನಲ್ಲಿ ಈ ಕುರಿತ ಕಾನೂನು ಅಸ್ತಿತ್ವಕ್ಕೆ ಬಂದಿದೆ.

ಫ್ರಾನ್ಸ್: ನ್ಯಾಯಾಲಯದಲ್ಲಿ ಅರ್ಜಿ ವಜಾಗೊಂಡ ನಂತರ ಫ್ರಾನ್ಸ್ ಮಾಜಿ ಪ್ರಧಾನಿ ಫ್ರಾಂಕೋಸಿಸ್ ಹೊಲಾಂಡೆ ಕಾನೂನಿಗೆ ಅನುಮೋದನೆ ನೀಡಿದರು.

ಐರ್ಲೆಂಡ್: ಜನಾಭಿಪ್ರಾಯದ ಮೂಲಕ ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಿದ ಮೊದಲ ದೇಶ. 2015ರಲ್ಲಿ ನಡೆದ ಮತದಾನದಲ್ಲಿ ಶೇ 62ರಷ್ಟು ಜನರು ಪರವಾಗಿ ಮತ ಚಲಾಯಿಸಿದ್ದರು.

ಬ್ರಿಟನ್: ದಕ್ಷಿಣ ಐರ್ಲೆಂಡ್‌ನಲ್ಲಿ 2020ರಲ್ಲಿ ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಲಾಯಿತು. ಅದಕ್ಕೂ ಆರು ವರ್ಷ ಮೊದಲೇ ಬ್ರಿಟನ್ ಮತ್ತು ವೇಲ್ಸ್‌ನಲ್ಲಿ ಕಾನೂನು ಜಾರಿಯಾಗಿತ್ತು. ಸ್ಕಾಟ್‌ಲ್ಯಾಂಡ್‌ನಲ್ಲಿ 2014ರಲ್ಲಿ ಪ್ರತ್ಯೇಕ ಕಾನೂನನ್ನು ಜಾರಿಗೆ ತರಲಾಯಿತು.

ಅಮೆರಿಕ: ಇಲ್ಲಿನ ಸುಪ್ರೀಂ ಕೋರ್ಟ್ ದೇಶದಾದ್ಯಂತ ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡುವ ಮೊದಲೇ 36 ರಾಜ್ಯಗಳು ಮತ್ತು ಕೊಲಂಬಿಯಾ ಜಿಲ್ಲೆಯಲ್ಲಿ ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಲಾಗಿತ್ತು.

ಸಲಿಂಗ ವಿವಾಹಕ್ಕೆ ಮಾನ್ಯತೆ ಇಲ್ಲ

ಒಂದನೇ ಪುಟದಿಂದ...

ಸಲಿಂಗ ಜೋಡಿಗಳಿಗೆ ವಿವಾಹದ ಹಕ್ಕು ನೀಡಲು ನ್ಯಾಯಾಂಗವು ಶಾಸಕಾಂಗದ ವ್ಯಾಪ್ತಿಯೊಳಗೆ ಪ್ರವೇಶಿಸಲು ಸಾಧ್ಯವಿಲ್ಲ ಎಂದು ಐವರು ನ್ಯಾಯಮೂರ್ತಿಗಳು ತೀರ್ಪಿನಲ್ಲಿ ಹೇಳಿದರು.

ತಮ್ಮದೇ ಲಿಂಗದವರನ್ನು ಜೋಡಿ ಮಾಡಿಕೊಳ್ಳುವ ಹಕ್ಕನ್ನು ಚಾಲ್ತಿಯಲ್ಲಿರುವ ಕಾನೂನುಗಳ ಅಡಿಯಲ್ಲಿ ಪರಿಗಣಿಸಿದ ಸಿಜೆಐ ಮತ್ತು ನ್ಯಾ. ಕೌಲ್ ತತ್ಪರಿಣಾಮವಾಗಿ ಸವಲತ್ತು ಪಡೆಯುವ ಅಂತಹ ಸಲಿಂಗಿ ಜೋಡಿಗಳ ಹಕ್ಕನ್ನು ಎತ್ತಿಹಿಡಿದರು. ಆದರೆ, ಇತರ ಮೂವರು ನ್ಯಾಯಮೂರ್ತಿಗಳು ಸಲಿಂಗಿ ಜೋಡಿಗಳ ಮದುವೆಗೆ ಮಾನ್ಯತೆ ನೀಡಲು ನಿರಾಕರಿಸಿದರು.

ಜತೆಗೆ, ಸಲಿಂಗ ವಿವಾಹದ ಕಾನೂನು ಮಾನ್ಯತೆಯ ಮನವಿಗಳು ನಗರ ಗಣ್ಯರ ಪರಿಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ ಎಂಬ ಕೇಂದ್ರದ ನಿಲುವನ್ನು ಪೀಠವು ಟೀಕಿಸಿತು. ವಿಲಕ್ಷಣತೆಯು ನಗರ ಅಥವಾ ಗಣ್ಯ ಪರಿಕಲ್ಪನೆ ಅಥವಾ ಲಕ್ಷಣವಲ್ಲ ಎಂದು ಪೀಠ ಹೇಳಿತು.

ತೀರ್ಪು ಪ್ರಕಟಿಸಿದ ಮುಖ್ಯ ನ್ಯಾಯಮೂರ್ತಿ, ‘ನ್ಯಾಯಾಲಯವು ಕಾನೂನುಗಳನ್ನು ಮಾಡುವುದಿಲ್ಲ. ಬದಲಿಗೆ ಅವುಗಳನ್ನು ವ್ಯಾಖ್ಯಾನಿಸುತ್ತದೆ. ವಿಶೇಷ ವಿವಾಹ ಕಾಯ್ದೆಯಲ್ಲಿ ಸಂಸತ್ತು ಬದಲಾವಣೆ ತರಬಹುದು. ಆದರೆ, ಈ ಸಮುದಾಯ ತಮ್ಮ ಬದುಕು ಸಾಗಿಸುವಲ್ಲಿ ಯಾವುದೇ ತಾರತಮ್ಯ ಆಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಕೇಂದ್ರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳದ್ದು’ ಎಂದರು.

ವಿಶೇಷ ವಿವಾಹ ಕಾಯ್ದೆ ವಿಷಯವನ್ನು ಸಂಸತ್ತು ನಿರ್ಧರಿಸಬೇಕು. ವಿಶೇಷ ವಿವಾಹ ಕಾಯ್ದೆಯ ಸೆಕ್ಷನ್ 4 ಅನ್ನು ರದ್ದುಪಡಿಸಿದರೆ ಪ್ರಗತಿಪರ ಶಾಸನದ ಪ್ರಯೋಜನಗಳನ್ನು ಕಳೆದುಕೊಳ್ಳಬೇಕಾಗುವ ಅಪಾಯವೂ ಇದೆ. ಇದು ದೇಶವನ್ನು ಸ್ವಾತಂತ್ರ್ಯಪೂರ್ವ ಯುಗಕ್ಕೆ ಕೊಂಡೊಯ್ಯಲಿದೆ. ಭಾರತೀಯ ಉತ್ತರಾಧಿಕಾರ ಕಾಯ್ದೆ ಅಥವಾ ಹಿಂದೂ ಉತ್ತರಾಧಿಕಾರ ಕಾಯ್ದೆಯನ್ನು ಒಮ್ಮೆ ಗಮನಿಸಿದರೆ ಈ ಪ್ರಕರಣವು ಶಾಸಕಾಂಗದ ವ್ಯಾಪ್ತಿಗೆ ಸೇರುತ್ತದೆ ಎಂಬುದು ಸ್ಪಷ್ಟ’ ಎಂದರು.

‘ವ್ಯಕ್ತಿಯ ಲಿಂಗವು ಅವರ ಲೈಂಗಿಕತೆಗೆ ಸಮನಾದುದಲ್ಲ. ಸಂಗಾತಿಯನ್ನು ಆಯ್ಕೆ ಮಾಡುವ ವಿಷಯವು ಸಂವಿಧಾನದ 21ನೇ ವಿಧಿಯಡಿ ಒಬ್ಬರ ಬದುಕು ಹಾಗೂ ಸ್ವಾತಂತ್ರ್ಯದ ಹಕ್ಕಿಗೆ ಸಂಬಂಧಿಸಿದ್ದಾಗಿದೆ. ಅದರಲ್ಲಿ ತಮ್ಮ ಬಾಳ ಸಂಗಾತಿಯ ಆಯ್ಕೆ ಹಾಗೂ ಅದನ್ನು ದೃಢಪಡಿಸುವುದನ್ನು ಒಳಗೊಂಡಿದೆ. ಇದನ್ನು ಗುರುತಿಸದಿರುವುದೇ ತಾರತಮ್ಯ’ ಎಂದು ಅಭಿಪ್ರಾಯಪಟ್ಟರು.

ಈ ಸಮುದಾಯದ ಜನರ ಹಕ್ಕುಗಳನ್ನು ರಕ್ಷಿಸುವ ಸಂಬಂಧ ಕೇಂದ್ರ ಸರ್ಕಾರವು ಸಮಿತಿ ರಚಿಸುವ ಕುರಿತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಪೀಠಕ್ಕೆ ತಿಳಿಸಿರುವುದನ್ನು ದಾಖಲಿಸಿಕೊಳ್ಳಲಾಗಿದೆ ಎಂದೂ ಸಿಜೆಐ ಹೇಳಿದರು.

ನ್ಯಾಯಮೂರ್ತಿ ರವೀಂದ್ರ ಭಟ್, ‘ಅಸಹಜ ಸಮುದಾಯದ ಸಲಿಂಗ ವಿವಾಹಕ್ಕೆ ಸಂಬಂಧಿಸಿದಂತೆ ಸೂಕ್ತ ಕಾನೂನು ಚೌಕಟ್ಟು ರೂಪಿಸದೆ, ಅದಕ್ಕೆ ಅನುಮತಿ ನೀಡಲಾಗುವುದಿಲ್ಲ’ ಎಂದರು.

ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಎ.ಎಂ.ಸಿಂಘ್ವಿ, ರಾಜು ರಾಮಚಂದ್ರನ್, ಕೆ.ವಿ.ವಿಶ್ವನಾಥನ್, ಆನಂದ್ ಗ್ರೋವರ್, ಸೌರಬ್ ಕೃಪಾಲ್ ವಾದ ಮಂಡಿಸಿದ್ದರು.

‘ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಬೇಕು. ಪೂರಕವಾಗಿ 1954ರ ವಿಶೇಷ ವಿವಾಹ ಕಾಯ್ದೆಯ (ಎಸ್‌ಎಂಎ) ನಿಬಂಧನೆಗಳನ್ನು ಮರು ವ್ಯಾಖ್ಯಾನಿಸಬೇಕು’ ಎಂದು ಅರ್ಜಿದಾರರು ಅರ್ಜಿಯಲ್ಲಿ ಮನವಿ ಮಾಡಿದ್ದರು.

‘ಕಾಯ್ದೆಯ ಸೆಕ್ಷನ್ 4 (ಸಿ) ರಡಿ ‘ಪುರುಷ’ ಮತ್ತು ‘ಮಹಿಳೆ’ ವಿವಾಹಕ್ಕಷ್ಟೇ ಕಾನೂನು ಮಾನ್ಯತೆ ನೀಡಲಾಗುತ್ತದೆ. ಈ ಮೂಲಕ ಸಲಿಂಗ ವಿವಾಹದ ಜೋಡಿಗೆ ಪಕ್ಷಪಾತ ಆಗುತ್ತಿದ್ದು, ಅವರಿಗೆ ವಿವಾಹದ ಅನುಕೂಲಗಳಾದ ದತ್ತು, ಬಾಡಿಗೆ ತಾಯ್ತನ, ಉದ್ಯೋಗಾವಕಾಶ, ನಿವೃತ್ತಿ ಸೌಲಭ್ಯದ ಹಕ್ಕುಗಳನ್ನು ನಿರಾಕರಿಸಲಾಗುತ್ತದೆ’ ಎಂದಿದ್ದರು.

‘ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡದಿರುವುದು ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಘನತೆಯ ಹಕ್ಕುಗಳ ನಿರಾಕರಣೆಯೂ ಆಗಿದೆ. ಈ ಕಾರಣದಿಂದ ಸೆಕ್ಷನ್ 4(ಸಿ) ಅಸಾಂವಿಧಾನಿಕ ಎಂದು ಘೋಷಿಸಬೇಕು’ ಎಂದೂ ಅರ್ಜಿದಾರರು ಕೋರಿದ್ದರು.

‘ದತ್ತು: ಸಲಿಂಗ ಜೋಡಿಗೆ ಅವಕಾಶ ಇಲ್ಲ’

ಅವಿವಾಹಿತ ಮತ್ತು ವಿಲಕ್ಷಣ ದಂಪತಿಗಳು ಮಕ್ಕಳನ್ನು ದತ್ತು ಪಡೆಯುವುದನ್ನು ನಿಷೇಧಿಸುವ ದತ್ತು ನಿಯಮಾವಳಿಯೊಂದನ್ನು ಸಂವಿಧಾನ ಪೀಠವು 3:2ರ ಬಹುಮತದಿಂದ ಎತ್ತಿ ಹಿಡಿದಿದೆ.

ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಕೌಲ್ ಅವರು ತಮ್ಮ ಎರಡು ಪ್ರತ್ಯೇಕ ತೀರ್ಪುಗಳಲ್ಲಿ, ‘ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ (ಕಾರ) ಮಾರ್ಗಸೂಚಿಯೊಂದರಲ್ಲಿ ಅವಿವಾಹಿತ ಮತ್ತು ವಿಲಕ್ಷಣ ದಂಪತಿಗಳು ದತ್ತು ತೆಗೆದುಕೊಳ್ಳುವುದನ್ನು ನಿಷೇಧಿಸಲಾಗಿದೆ. ಆದರೆ, ಇದು ಅಸಂವಿಧಾನಿಕ ಮತ್ತು ಕಾನೂನುಬಾಹಿರವಾಗಿದೆ’ ಎಂದು ಅಭಿಪ್ರಾಯಪಟ್ಟರು. ಪ್ರಾಧಿಕಾರದ 5(3) ನಿಯಮವು ‘ಸಂಬಂಧಿ ಅಥವಾ ಮಲ-ಪೋಷಕ ದತ್ತು ಸ್ವೀಕಾರದ ಪ್ರಕರಣಗಳನ್ನು ಹೊರತುಪಡಿಸಿ ದಂಪತಿಗಳು ಕನಿಷ್ಠ ಎರಡು ವರ್ಷಗಳ ಸ್ಥಿರ ವೈವಾಹಿಕ ಸಂಬಂಧವನ್ನು ಹೊಂದಿರದ ಹೊರತು ಯಾವುದೇ ಮಗುವನ್ನು ದತ್ತು ತೆಗೆದುಕೊಳ್ಳುವಂತಿಲ್ಲ’ ಎಂದು ಹೇಳುತ್ತದೆ.

‘ವಿವಾಹಿತ ಭಿನ್ನಲಿಂಗೀಯ ದಂಪತಿಗಳು ಮಾತ್ರ ಮಗುವಿಗೆ ಸ್ಥಿರತೆಯನ್ನು ಒದಗಿಸುತ್ತಾರೆ ಎಂಬುದನ್ನು ಸಾಬೀತುಪಡಿಸಲು ಯಾವುದೇ ದಾಖಲೆಗಳಿಲ್ಲ’ ಎಂದು ತೀರ್ಪು ಪ್ರಕಟಿಸುವಾಗ ಸಿಜೆಐ ಹೇಳಿದರು.

‘ವಿಭಿನ್ನಲಿಂಗಿ ದಂಪತಿಗಳು ಮಾತ್ರ ಉತ್ತಮ ಪೋಷಕರಾಗಬಹುದು ಎಂದು ಕಾನೂನು ಊಹಿಸಲು ಸಾಧ್ಯವಿಲ್ಲ. ಇದು ತಾರತಮ್ಯಕ್ಕೆ ಕಾರಣವಾಗುತ್ತದೆ. ಆದ್ದರಿಂದ ದತ್ತು ನಿಯಮಗಳು ಸಂವಿಧಾನದ ಉಲ್ಲಂಘನೆಯಾಗಿದೆ’ ಎಂದು ಸಿಜೆಐ ಹೇಳಿದರು.

ಇದಕ್ಕೆ ನ್ಯಾಯಮೂರ್ತಿ ಭಟ್, ನ್ಯಾಯಮೂರ್ತಿ ಕೊಹ್ಲಿ ಮತ್ತು ನ್ಯಾಯಮೂರ್ತಿ ನರಸಿಂಹ ಅವರು ಸಹಮತ ವ್ಯಕ್ತಪಡಿಸಲಿಲ್ಲ. ಅವರು ದತ್ತು ಪ್ರಾಧಿಕಾರದ ನಿಯಮಗಳನ್ನು ಎತ್ತಿಹಿಡಿದರು.

ಸಲಿಂಗ ವಿವಾಹ– ಹೋರಾಟದ ಹಾದಿ

- **2018ರ ಸೆಪ್ಟೆಂಬರ್ 6:** ಐತಿಹಾಸಿಕ ತೀರ್ಪು ನೀಡಿದ್ದ ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠ, ‘ಐಪಿಸಿ ಸೆಕ್ಷನ್ 377ರ ಅಡಿಯಲ್ಲಿ ಅನೈಸರ್ಗಿಕ ಲೈಂಗಿಕತೆ ಅಪರಾಧ’ ಎಂದು ಹೇಳಿದ್ದ 158 ವರ್ಷಗಳ ಹಳೆಯದಾದ, ವಸಾಹತುಶಾಹಿ ಕಾಲದ ಕಾನೂನನ್ನು ರದ್ದುಪಡಿಸಿತ್ತು. ಸಲಿಂಗಕಾಮವು ಅಪರಾಧವಲ್ಲ ಎಂದು ಹೇಳಿತ್ತು.
- **2022ರ ನವೆಂಬರ್ 25:** ಸಲಿಂಗಿ ದಂಪತಿಗಳು ಸುಪ್ರೀಂ ಕೋರ್ಟ್ ಮೊರೆ. ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಬೇಕು. ಪೂರಕವಾಗಿ 1954ರ ವಿಶೇಷ ವಿವಾಹ ಕಾಯ್ದೆಯ (ಎಸ್‌ಎಂಎ) ನಿಬಂಧನೆಗಳನ್ನು ಮರು ವ್ಯಾಖ್ಯಾನಿಸಬೇಕು ಎಂಬ ಮನವಿ.
- ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ.
- **2023ರ ಜನವರಿ 6:** ಸಲಿಂಗ ವಿವಾಹಗಳಿಗೆ ಕಾನೂನು ಮಾನ್ಯತೆ ಕೋರಿ ವಿವಿಧ ಹೈಕೋರ್ಟ್‌ಗಳಿಗೆ ಸಲ್ಲಿಕೆಯಾಗಿರುವ ಎಲ್ಲ ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಲು ಪೀಠ ನಿರ್ದೇಶನ. ಈ ಕುರಿತು 21 ಅರ್ಜಿಗಳು ಸಲ್ಲಿಕೆಯಾಗಿದ್ದವು.
- **ಮಾರ್ಚ್ 12:** ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡುವುದಕ್ಕೆ ಕೇಂದ್ರ ವಿರೋಧ.
- **ಮಾರ್ಚ್ 13:** ಪ್ರಕರಣವನ್ನು ಸಂವಿಧಾನ ಪೀಠಕ್ಕೆ ಉಲ್ಲೇಖಿಸಿದ ಸುಪ್ರೀಂ ಕೋರ್ಟ್ ಪೀಠ.
- **ಏಪ್ರಿಲ್ 15:** ಐವರು ನ್ಯಾಯಮೂರ್ತಿಗಳ ಪೀಠ ರಚನೆಗೆ ಮುಖ್ಯ ನ್ಯಾಯಮೂರ್ತಿ ಸೂಚನೆ.
- **ಏಪ್ರಿಲ್ 18:** ವಾದವನ್ನು ಆಲಿಸಲು ಪ್ರಾರಂಭಿಸಿದ ಐವರು ನ್ಯಾಯಮೂರ್ತಿಗಳ ಪೀಠ
- **ಮೇ 11:** ತೀರ್ಪು ಕಾಯ್ದಿರಿಸಿದ ಪೀಠ
- **ಅಕ್ಟೋಬರ್ 17:** ಸಲಿಂಗ ವಿವಾಹಗಳಿಗೆ ಕಾನೂನು ಮಾನ್ಯತೆ ನೀಡಲು ಪೀಠ ನಿರಾಕರಣೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

3RD DEATH ANNIVERSARY

H.K. Seetha Bai
W/o late M. Ramachandra Rao Sindhya
Inspector of Police
We miss you devotedly and the city of God heaven is very lucky to have you .
Your affectionate family members
Sindhya & Brothers, Gubbi, Tumkur Dist.
Ph: 7019912316, 9741130135

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

NO FEE (labour contractor) ಬೇಕಾಗಿದ್ದಾರೆ. TATA Warehouse: Hoskote, Bangalore, Salary 18000/- , OT. 128 per/ hour work: Packing Loading helpers, 250 Nos Room &Food (Deduct) Ph 9844434996/ 9035240677 SSLC Pass/Fail. Male Female

General

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

MNC ಕಂಪನಿಗಳಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ರೂಮ್, ESI, PF, OT. 18,500-47,500. SSLC, PUC. 8861041526, 7022121680.

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Hotel

ಬೆಂಗಳೂರಿನ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಸಸ್ಯಾಹಾರಿ ಉಪಹಾರ ಗೃಹಕ್ಕೆ ಅಡುಗೆಯವರು, ಸಹಾಯಕರು, ಮೇಲ್ವಿಚಾರಕರು ಹಾಗೂ ವ್ಯವಹಾರ ಅಭಿವೃದ್ಧಿಗೊಳಿಸುವವರು ಬೇಕಾಗಿದ್ದಾರೆ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ: 9741862781, ಇಮೇಲ್: cafemythri@gmail.com

Multiple Vacancy

REQUIRED SUPERVISOR, Telecaller & Field Executive For Bank_Loan Collection. Direct Recruitment to Company:- 7899040499, 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಪ್ರವಾಸ

Travel

ಕಾಶಿ ಅಯೋಧ್ಯಾ ಅಲಹಾಬಾದ್,ಗಯಾ ಬುದ್ದಗಯಾ ಕೋಲ್ಕತಾ,ಪುರಿಜಗನ್ನಾಥ್ ಕೋನಾರ್ಕ್ ಸೂರ್ಯ ದೇವಾಲಯ ಭುವನೇಶ್ವರ್ ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

ಭಾರತೀಯ ರೈಲ್ವೆ - ಪ್ರವಾಸ ರೈಲು
ಪಂಚ ದ್ವಾರಕ ಯಾತ್ರೆ
ಡಾಕೋರ್ ದ್ವಾರಕಾ - ದ್ವಾರಕಾ ಬ್ಯಾಟ್ ದ್ವಾರಕಾ - ಸೋಮನಾಥ್ ಉದಯಪುರ್ - ನಿಷ್ಕಳಂಕ ಮಹಾದೇವ್ ಸಮುದ್ರ ದೇವಸ್ಥಾನ - ಸ್ಟ್ಯಾಚು ಆಫ್ ಯುನಿಟಿ
29NOV|12 DAYS|₹19050
ವಿಶೇಷ ರೈಲು - ಪ್ರವಾಸ ಸ್ಥಳ - ಊಟ - ವಸತಿ
9015 500 200
WWW.SOUTHSTARRAIL.COM

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ವ್ಯಾಪಾರ

Business Offers

Finance

EARN DAILY Rs. 1000 trading and Investment on your own account. Call 9967066300

ಭವಿಷ್ಯ

Astrology

★★ಒಂದೇ ಕರೆಯಲ್ಲಿ★★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

General

CONTRACTOR/ PARTNER Required for running new Cement Brick Industry, Pavgada, Tumkur. Contact: 9448526221/ 9916211075

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಮಧ್ಯಪ್ರದೇಶ: ರಾಜ್ಯದಲ್ಲಿ ಐಪಿಎಲ್ ಕ್ರಿಕೆಟ್ ತಂಡ ರಚನೆ – ಕಾಂಗ್ರೆಸ್ ಪ್ರಣಾಳಿಕೆ ಭರವಸೆ

ಪ್ರತಿಯೊಬ್ಬರಿಗೂ ₹25 ಲಕ್ಷ ಆರೋಗ್ಯ ವಿಮೆ

ಭೋಪಾಲ್ (ಪಿಟಿಐ): ರಾಜ್ಯದ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 27 ಮೀಸಲಾತಿ ಮತ್ತು ಪ್ರತಿಯೊಬ್ಬರಿಗೂ ₹25 ಲಕ್ಷ ಮೊತ್ತದ ಆರೋಗ್ಯ ವಿಮೆ ನೀಡುವ ಭರವಸೆ ಸೇರಿ ವಿವಿಧ ಜನಪ್ರಿಯ ಭರವಸೆಗಳಿರುವ ಚುನಾವಣಾ ಪ್ರಣಾಳಿಕೆಯನ್ನು ಮಧ್ಯಪ್ರದೇಶ ಕಾಂಗ್ರೆಸ್ ಮಂಗಳವಾರ ಬಿಡುಗಡೆ ಮಾಡಿತು.

ಮಧ್ಯಪ್ರದೇಶ ಕಾಂಗ್ರೆಸ್‌ನ ಪ್ರಣಾಳಿಕೆ 'ವಚನ ಪತ್ರ'ವನ್ನು ಭೋಪಾಲ್‌ನಲ್ಲಿ ಮಂಗಳವಾರ ಬಿಡುಗಡೆ ಮಾಡಲಾಯಿತು. ರಾಜ್ಯಸಭೆ ಸದಸ್ಯ ದಿಗ್ವಿಜಯ್ ಸಿಂಗ್, ಪಕ್ಷದ ಅಧ್ಯಕ್ಷ ಕಮಲ್‌ನಾಥ್ ಮತ್ತಿತರರು ಇದ್ದರು –ಪಿಟಿಐ ಚಿತ್ರ

ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್ ಅವರು ಪ್ರಣಾಳಿಕೆ 'ವಚನ ಪತ್ರ'ವನ್ನು ಬಿಡುಗಡೆ ಮಾಡಿದರು.

ಪ್ರಣಾಳಿಕೆಯನ್ನು ಏಳು ವಿಭಾಗಗಳಾಗಿ ವರ್ಗೀಕರಿಸಲಾಗಿದೆ. 59 ವಿಷಯಗಳ ಅಡಿ 1,290 ಭರವಸೆಗಳನ್ನು ನೀಡಲಾಗಿದೆ. ಅದಲ್ಲದೇ, ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ, ಬೆಳವಣಿಗೆ ಮತ್ತು ಸಾಮಾಜಿಕ ಕಲ್ಯಾಣವನ್ನು ಗುರಿಯಾಗಿಸಿಕೊಂಡು 225 ಮುಖ್ಯಾಂಶಗಳನ್ನೂ ನೀಡಲಾಗಿದೆ.

ಕಾಂಗ್ರೆಸ್‌ನ 'ಕಾಂಗ್ರೆಸ್ ಆಯೇಗೀ, ಖುಷಿಯಾ ಲಾಯೇಗೀ' (ಕಾಂಗ್ರೆಸ್ ಬರಲಿದೆ, ಖುಷಿ ತರಲಿದೆ) ಘೋಷವಾಕ್ಯವನ್ನು ಉಚ್ಚರಿಸಿದ ಕಮಲ್ ನಾಥ್ ಅವರು, ಪ್ರಣಾಳಿಕೆಯಲ್ಲಿ ನೀಡಲಾಗಿರುವ ಭರವಸೆಗಳನ್ನು ಚಾಚೂ ತಪ್ಪದೇ ನೆರವೇರಿಸುತ್ತೇವೆ ಎಂದರು.

ಪ್ರಮುಖ ಭರವಸೆಗಳು: ರಾಜ್ಯದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ತಂಡ ರಚಿಸುವ, ₹2 ಲಕ್ಷದ ವರೆಗಿನ ಕೃಷಿ ಸಾಲವನ್ನು ಮನ್ನಾ ಮಾಡುವ, ಮಹಿಳೆಯರಿಗೆ ಮಾಸಿಕ ₹1,500 ಹಣಕಾಸು ನೆರವು ನೀಡುವಂಥ ಜನಪ್ರಿಯ ಭರವಸೆಗಳು ಪ್ರಣಾಳಿಕೆಯಲ್ಲಿ ಇವೆ.

ಅಪಘಾತ ವಿಮೆ ₹10 ಲಕ್ಷ ಸೇರಿ ರಾಜ್ಯದ ಎಲ್ಲರಿಗೂ ₹25 ಲಕ್ಷ ಮೊತ್ತದ ಆರೋಗ್ಯ ವಿಮೆ, ₹500ಕ್ಕೆ ಅಡುಗೆ ಅನಿಲ ಸಿಲಿಂಡರ್, ಉಚಿತ ಶಾಲಾ ಶಿಕ್ಷಣ, ಹಳೆ ಪಿಂಚಣಿ ಯೋಜನೆ ಮರು ಜಾರಿ, ಎರಡು ವರ್ಷಗಳ ಕಾಲ ನಿರುದ್ಯೋಗಿ ಯುವಕರಿಗೆ ಮಾಸಿಕ ₹1,500ರಿಂದ 3,000 ವರೆಗೆ ನಿರುದ್ಯೋಗ ಭತ್ಯೆ ನೀಡುವ ಭರವಸೆಯನ್ನೂ ನೀಡಲಾಗಿದೆ.

'ಕಾಂಗ್ರೆಸ್ ಪ್ರಣಾಳಿಕೆಯು ಸುಳ್ಳಿನ ಕಂತೆಯಲ್ಲದೆ ಬೇರೇನೂ ಅಲ್ಲ' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ವಿ.ಡಿ. ಶರ್ಮಾ ಟೀಕಿಸಿದ್ದಾರೆ.

'ಬಟ್ಟೆ ಹರಿಯಿರಿ' ಎಂದ ಕಮಲ್ ನಾಥ್

ಭೋಪಾಲ್ (ಪಿಟಿಐ): ಶಿವಪುರಿಯ ನಾಯಕರೊಬ್ಬರಿಗೆ ಟಿಕೆಟ್ ನಿರಾಕರಿಸಿರುವುದಕ್ಕೆ ಸಂಬಂಧಿಸಿದಂತೆ ಪಕ್ಷದ ಪ್ರಮುಖ ದಿಗ್ವಿಜಯ್ ಸಿಂಗ್ ಅವರ 'ಬಟ್ಟೆ ಹರಿಯಿರಿ' ಎಂದು ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಅವರು ಹೇಳಿರುವ ವಿಡಿಯೊವೊಂದು ಪಕ್ಷದಲ್ಲಿರುವ ಒಡಕನ್ನು ಬಹಿರಂಗಪಡಿಸಿದೆ. ಆದರೆ ನಾಥ್ ಮತ್ತು ಸಿಂಗ್ ಅವರು ಮಂಗಳವಾರ 'ನಾವು ಒಗ್ಗಟ್ಟಿನಿಂದ ಇದ್ದೇವೆ' ಎಂಬ ಸಂದೇಶ ರವಾನಿಸಿದ್ದಾರೆ.

ಬಿಜೆಪಿಯಿಂದ ಕಾಂಗ್ರೆಸ್ಸಿಗೆ ಬಂದಿರುವ ವೀರೇಂದ್ರ ರಘುವಂಶಿ ಅವರು ಶಿವಪುರಿ ಕ್ಷೇತ್ರದಿಂದ ಟಿಕೆಟ್ ಬಯಸಿದ್ದರು. ಅವರಿಗೆ ಟಿಕೆಟ್ ನಿರಾಕರಿಸಿರುವ ವಿಚಾರವಾಗಿ 'ದಿಗ್ವಿಜಯ್ ಸಿಂಗ್ ಅವರ ಬಟ್ಟೆ ಹರಿಯಿರಿ' ಎಂದು ನಾಥ್ ಅವರು ರಘುವಂಶಿ ಅವರ ಬೆಂಬಲಿಗರು ಎನ್ನಲಾದವರಿಗೆ ಹೇಳಿರುವುದು ವಿಡಿಯೊದಲ್ಲಿ ಇದೆ. ಈ ನಡುವೆ, ಮಂಗಳವಾರ ನಡೆದ ಪಕ್ಷದ ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಒಟ್ಟಾಗಿ ಕಾಣಿಸಿಕೊಂಡ ನಾಥ್ ಮತ್ತು ಸಿಂಗ್ ಅವರು, ವಿಡಿಯೊದಲ್ಲಿ ಇರುವ ವಿಚಾರವು ಗಂಭೀರವಾಗಿ ಪರಿಗಣಿಸಬೇಕಾದುದಲ್ಲ ಎಂದರು.

'ನಾವಿಬ್ಬರು ಬಹುಕಾಲದ ಸ್ನೇಹಿತರು. ನಮ್ಮ ನಡುವೆ ಕೌಟುಂಬಿಕ ಬಂಧವೂ ಇದೆ. ನಾನು ದಿಗ್ವಿಜಯ್‌ಗಿಂತ ಹಿರಿಯ. ಅವರ ಮೇಲೆ ಅಧಿಕಾರ ಚಲಾಯಿಸುವ ಹಕ್ಕು ನನಗೆ ಇದೆ' ಎಂದು ಕಮಲ್‌ನಾಥ್ ಹೇಳಿದರು.

ಸ್ಕೂಟರ್ ಸವಾರಿ

ವಿಧಾನಸಭಾ ಚುನಾವಣೆಯ ಪ್ರಚಾರ ಕಾರ್ಯಕ್ಕಾಗಿ ಮಂಗಳವಾರ ಮಿಜೋರಾಂನಲ್ಲಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಐಜ್ವಾಲ್‌ನಲ್ಲಿ ವ್ಯಕ್ತಿಯೊಬ್ಬರ ಸ್ಕೂಟರ್‌ನಲ್ಲಿ ಪ್ರಯಾಣಿಸಿದರು –ಪಿಟಿಐ ಚಿತ್ರ

ಮಿಜೋರಾಂ: ಐಜ್ವಾಲ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ವಾಗ್ದಾಳಿ

ಸಿದ್ಧಾಂತ ಹೇರಲು ಬಿಜೆಪಿ ಪ್ರಯತ್ನ

ಐಜ್ವಾಲ್ (ಪಿಟಿಐ): ಮಿಜೋರಾಂನ ಆಡಳಿತಾರೂಢ ಮಿಜೋ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಮತ್ತು ವಿರೋಧ ಪಕ್ಷವಾದ ಝೋರಂ ಪೀಪಲ್ಸ್ ಮೂವ್‌ಮೆಂಟ್ (ಝೆಡ್‌ಪಿಎಂ) ಮಿಜೋ ರಾಷ್ಟ್ರೀಯತೆಯನ್ನು ಜಪಿಸುತ್ತಿರುವ ವೇಳೆಯೇ, ಆ ಎರಡು ಪಕ್ಷಗಳನ್ನು 'ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ರಾಜ್ಯದ ಪ್ರವೇಶ ಒದಗಿಸುತ್ತಿರುವ ಪ್ರವೇಶ ಬಿಂದುಗಳು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ಜರೆದರು.

ಚುನಾವಣೆಗೆ ಸಜ್ಜಾಗುತ್ತಿರುವ ಮಿಜೋರಾಂನಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸುತ್ತಿರುವ ಅವರು ಐಜ್ವಾಲ್‌ನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದರು. ಈಶಾನ್ಯ ರಾಜ್ಯಗಳೂ ಸೇರಿ ದೇಶದೆಲ್ಲೆಡೆ ತಮ್ಮ ಸಿದ್ಧಾಂತವನ್ನು ಹೇರಲು ಬಿಜೆಪಿ, ಆರ್‌ಎಸ್‌ಎಸ್ ಪ್ರಯತ್ನಿಸುತ್ತಿವೆ. ಕ್ರೈಸ್ತ ಧರ್ಮೀಯರೇ ಬಹುಸಂಖ್ಯಾತರಾಗಿರುವ ಈ ರಾಜ್ಯದಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನೆಲೆಯೂರಲು ಇಲ್ಲಿಯ ಪ್ರಾದೇಶಿಕ ಪಕ್ಷಗಳಾದ ಎಂಎನ್‌ಎಫ್ ಮತ್ತು ಝೆಡ್‌ಪಿಎಂ ಪಕ್ಷಗಳು ಸಾಧನಗಳಾಗಿವೆ ಎಂದರು.

'ದೇಶದ ಶೇ 60 ಭಾಗವನ್ನು ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟ ಪ್ರತಿನಿಧಿಸುತ್ತದೆ. ಇದು ಬಿಜೆಪಿ ಪ್ರತಿನಿಧಿಸುವ ಭೂಭಾಗಕ್ಕಿಂತ ಹೆಚ್ಚು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೇಳಿದರು.

ಬಿಜೆಪಿ, ಆರ್‌ಎಸ್‌ಎಸ್ ಗುರಿಯಾಗಿಸಿಕೊಂಡು ದಾಳಿ ನಡೆಸಿದ ಅವರು, 'ದೇಶದ ಕುರಿತು ಅವರಿಗಿರುವ ದೃಷ್ಟಿಕೋನಕ್ಕಿಂತ ಭಿನ್ನವಾದ ದೃಷ್ಟಿಕೋನವನ್ನು ನಾವು ಹೊಂದಿದ್ದೇವೆ. ನಾವು ವಿಕೇಂದ್ರೀಕರಣದಲ್ಲಿ ನಂಬಿಕೆ ಇರಿಸಿದ್ದೇವೆ. ಅವರು, ಎಲ್ಲಾ ನಿರ್ಧಾರವನ್ನೂ ದೆಹಲಿಯಿಂದಲೇ ತೆಗೆದುಕೊಳ್ಳಬೇಕು ಎಂದು ಬಯಸುತ್ತಾರೆ' ಎಂದರು.

'ದೇಶದ ಈಶಾನ್ಯ ಭಾಗದ ವಿವಿಧ ರಾಜ್ಯಗಳು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಿಂದ ದಾಳಿಗೊಳಗಾಗಿವೆ. ನಿಮ್ಮ ನಂಬಿಕೆ ಮತ್ತು ಭಾಷೆಯ ಅಡಿಪಾಯಕ್ಕೆ ಬೆದರಿಕೆ ಒಡ್ಡುತ್ತಿವೆ. ಒಂದೇ ಸಿದ್ಧಾಂತ ಮತ್ತು ಸಂಘಟನೆಯು ದೇಶದಲ್ಲಿ ರಾಜ್ಯಭಾರ ಮಾಡಬೇಕು ಎಂಬುದು ಆರ್‌ಎಸ್‌ಎಸ್‌ನ ನಿಲುವು. ಆ ನಿಲುವನ್ನು ಕಾಂಗ್ರೆಸ್ ಸಂಪೂರ್ಣವಾಗಿ ವಿರೋಧಿಸುತ್ತದೆ' ಎಂದು ಹೇಳಿದರು.

' ರಾಜ್ಯದ ಆಡಳಿತವನ್ನು ದೆಹಲಿಯಿಂದ ನಡೆಸುವುದು ನಮಗೆ ಬೇಕಾಗಿಲ್ಲ. ಇಲ್ಲಿಯ ಆಡಳಿತವು ಇಲ್ಲಿಯ ಜನರ ಕೈಯಲ್ಲೇ ಇರಬೇಕು ಎಂದು ಬಯಸುತ್ತೇವೆ. ತಮ್ಮ ಭವಿಷ್ಯದ ಬಗ್ಗೆ ಮಿಜೋರಾಂ ಜನರೇ ನಿರ್ಧಾರ ತೆಗೆದುಕೊಳ್ಳಲಿ' ಎಂದರು.

₹750ಕ್ಕೆ ಅಡುಗೆ ಅನಿಲ:ಆಶ್ವಾಸನೆ

ಗುವಾಹಟಿ: ಮಿಜೋರಾಂನಲ್ಲಿ ಅಧಿಕಾರಕ್ಕೆ ಬಂದರೆ ₹ 750ಕ್ಕೆ ಅಡುಗೆ ಅನಿಲ ಸಿಲಿಂಡರ್, ಹಿರಿಯ ನಾಗರಿಕರಿಗೆ ಪ್ರತಿ ತಿಂಗಳು ₹ 2000 ಪಿಂಚಣಿ, ₹ 15ಲಕ್ಷದ ವರೆಗಿನ ಆರೋಗ್ಯ ವಿಮೆ ಮತ್ತಿತರ ಆಶ್ವಾಸನೆಗಳನ್ನು ಪ್ರತಿಪಕ್ಷ ಕಾಂಗ್ರೆಸ್ ಮಂಗಳವಾರ ನೀಡಿದೆ

ಐಜ್ವಾಲ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

ಯುವಜನತೆಗೆ ಒಂದು ಲಕ್ಷ ಉದ್ಯೋಗ ಒದಗಿಸಲು ಯಂಗ್ ಮಿಜೊ ಎಂಟರ್‌ಪ್ರಿನರ್ಸ್ ಪ್ರೋಗ್ರಾಮ್ ರೂಪಿಸಲಿದೆ. ಬಡವರಿಗೆ ₹ 15 ಲಕ್ಷದವರೆಗೆ ಆರೋಗ್ಯ ವಿಮಾ ಯೋಜನೆ ಜಾರಿಗೆ ತರಲಾಗುವುದು ಎಂದು ಕಾಂಗ್ರೆಸ್ ತಿಳಿಸಿದೆ.

ಕಾಂಗ್ರೆಸ್ ಎಂದಿಗೂ ನಿರಂತರ ವಿದ್ಯುತ್ ನೀಡಲಿಲ್ಲ: ಕೆಸಿಆರ್

ಹೈದರಾಬಾದ್ (ಪಿಟಿಐ): 'ಹಲವಾರು ಅವಕಾಶಗಳು ದೊರೆತ ಹೊರತಾಗಿಯೂ ರಾಜ್ಯದ ರೈತರಿಗೆ 24 ಗಂಟೆಗಳ ನಿರಂತರ ವಿದ್ಯುತ್ತನ್ನು ಕಾಂಗ್ರೆಸ್ ಒದಗಿಸಲಿಲ್ಲ' ಎಂದು ತೆಲಂಗಾಣ ಮುಖ್ಯಮಂತ್ರಿ, ಬಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ್ ರಾವ್ (ಕೆಸಿಆರ್) ಅವರು ಮಂಗಳವಾರ ದೂರಿದರು.

ಕೆಸಿಆರ್ ಅವರ ಮಗ, ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ ಕೆ.ಟಿ. ರಾಮರಾವ್ ಅವರ ವಿಧಾನಸಭಾ ಕ್ಷೇತ್ರವಾದ ಸಿರಿಸಿಲ್ಲಾದಲ್ಲಿ ಅವರು ಚುನಾವಣಾ ಪ್ರಚಾರ ರ‍್ಯಾಲಿ ನಡೆಸಿದರು. ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ನಿಮ್ಮ ಕೃಷಿ ಭೂಮಿ ಮೇಲಿನ ನಿಯಂತ್ರಣವನ್ನು ನೀವು ಕಳೆದುಕೊಳ್ಳಬೇಕಾಗುತ್ತದೆ. ಭೂದಾಖಲೆಗಳನ್ನು ನಿರ್ವಹಿಸುವ 'ಧರಣಿ' ಪೋರ್ಟಲ್‌ಅನ್ನು ಅವರು ಸ್ಥಗಿತಗೊಳಿಸುತ್ತಾರೆ' ಎಂದು ಎಚ್ಚರಿಸಿದರು.

ತೆಲಂಗಾಣದ ರೈತರು ವಾರ್ಷಿಕ ಮೂರು ಬೆಳೆಗಳನ್ನು ಬೆಳೆಯುತ್ತಾರೆ. ರೈತರಿಗೆ ದಿನದಲ್ಲಿ ಮೂರು ಗಂಟೆ ವಿದ್ಯುತ್ ನೀಡಿದರೆ ಸಾಕು. ಕೆಸಿಆರ್ ಏಕೆ 24 ಗಂಟೆ ವಿದ್ಯುತ್ ನೀಡುತ್ತಾರೆ ಎಂದು ಕಾಂಗ್ರೆಸ್ ನಾಯಕರು ಕೇಳುತ್ತಾರೆ. 60 ವರ್ಷಗಳ ಕಾಲ ಅವರೇ ಆಡಳಿತ ನಡೆಸಿದ್ದರು. ಆದರೆ 24 ಗಂಟೆಗಳ ನಿರಂತರ ವಿದ್ಯುತ್ ಸರಬರಾಜು ಮಾಡಲು ಅವರಿಂದ ಸಾಧ್ಯವಾಗಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ತವರು ರಾಜ್ಯ ಗುಜರಾತ್‌ನಲ್ಲೂ 24 ಗಂಟೆಗಳ ಕಾಲ ವಿದ್ಯುತ್ ನೀಡಲಾಗುತ್ತಿಲ್ಲ ಎಂದರು.

ರೈತು ಬಂಧು ಯೋಜನೆಯು ವಿಶ್ವಸಂಸ್ಥೆಯಿಂದ ಪ್ರಶಂಸೆಗೊಳಗಾದ ಭಾರತದ ಪ್ರಥಮ ಯೋಜನೆ. ಕೆಸಿಆರ್ ಅವರನ್ನು ಜನರು ಈ ಬಾರಿಯೂ ಬೆಂಬಲಿಸಲಿದ್ದಾರೆ

ಕೆ. ಕವಿತಾ, ವಿಧಾನ ಪರಿಷತ್ ಬಿಆರ್‌ಎಸ್ ಸದಸ್ಯೆ

ರಾಜಕೀಯಕ್ಕೆ ಸೇನೆ ಬಳಕೆ: ಖರ್ಗೆ ಟೀಕೆ

ನವದೆಹಲಿ (ಪಿಟಿಐ): ಚುನಾವಣೆಗಾಗಿ ಕೇಂದ್ರ ಸರ್ಕಾರ ಸೇನೆಯನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ ಮತ್ತು ಸೈನಿಕರ ಜನಪ್ರಿಯತೆಯನ್ನು ಬಳಸಿಕೊಳ್ಳುವ ಮೂಲಕ ಅವರ ಘನತೆಗೆ ಧಕ್ಕೆ ತಂದಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಆರೋಪಿಸಿದ್ದಾರೆ.

ಸೈನಿಕರ ಶೌರ್ಯವನ್ನು ಸಾರುವ ಬದಲು ಸರ್ಕಾರದ ಯೋಜನೆಗಳ ಪ್ರಚಾರಕ್ಕಾಗಿ ರಾಷ್ಟ್ರದಾದ್ಯಂತ 822 ಸೆಲ್ಫಿ ಪಾಯಿಂಟ್‌ಗಳನ್ನು ರೂಪಿಸಲು ಮೋದಿ ಸರ್ಕಾರ ಸೇನೆಗೆ ಹೇಳಿದೆ ಎಂದು ಅವರು ದೂರಿದ್ದಾರೆ.

'ದೇಶ ರಕ್ಷಣೆ ಮಾಡುವ ಭಾರತೀಯ ಸೇನೆಯ ಸೈನಿಕರ ಜನಪ್ರಿಯತೆಯನ್ನು ತಮ್ಮ ಪ್ರಚಾರಕ್ಕಾಗಿ ಮೋದಿಜಿ ಬಳಸಿಕೊಳ್ಳುತ್ತಿದ್ದಾರೆ. ಚುನಾವಣೆಗಾಗಿ ಸೇನೆಯನ್ನು ರಾಜಕೀಯವಾಗಿ ಬಳಸಿಕೊಳ್ಳುವ ಮೂಲಕ ಮೋದಿ ಸರ್ಕಾರವು 75 ವರ್ಷಗಳಲ್ಲಿ ದೇಶ ಕಂಡಿರದ ರೀತಿ ವರ್ತಿಸಿದೆ' ಎಂದು ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಈ ಸೆಲ್ಫಿ ಪಾಯಿಂಟ್‌ಗಳಲ್ಲಿ ಯೋಧರ ಶೌರ್ಯದ ಪ್ರತಿಬಿಂಬದ ಬದಲು ಮೋದಿ ಅವರ ಚಿತ್ರದ ರೀತಿಯ ಪ್ರತಿಮೆಗಳು ಇರಲಿದ್ದು ಅವರ ಯೋಜನೆಗಳನ್ನು ಕೊಂಡಾಡಲಿವೆ' ಎಂದು ಆಪಾದಿಸಿದ್ದಾರೆ.

'ಭಾರತೀಯ ಸೇನೆಯ ತ್ಯಾಗ ಮತ್ತು ಶೌರ್ಯದ ಬಗ್ಗೆ ಕಾಂಗ್ರೆಸ್‌ಗೆ ಹೆಮ್ಮೆ ಇದೆ. ಆದರೆ ದೇಶಪ್ರೇಮದ ಬಗ್ಗೆ ಪಾಠ ಮಾಡುವ ಬಿಜೆಪಿಯು ಸೇನೆಯ ಘನತೆಗೆ ಧಕ್ಕೆ ತಂದಿದೆ' ಎಂದು ಹೇಳಿದ್ದಾರೆ.

ರಾಜಸ್ಥಾನ ನಾಯಕರೊಂದಿಗೆ ಶಾ, ನಡ್ಡಾ ಸಭೆ

ನವದೆಹಲಿ (ಪಿಟಿಐ): ರಾಜಸ್ಥಾನ ಅಭ್ಯರ್ಥಿಗಳ ಪಟ್ಟಿ ಕುರಿತಂತೆ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ದೀರ್ಘ ಅವಧಿವರೆಗೆ ಮಂಗಳವಾರ ಸಭೆ ನಡೆಸಿದರು.

ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ, ನಾಯಕರಾದ ಗಜೇಂದ್ರ ಸಿಂಗ್ ಶೆಖಾವತ್, ರಾಜಸ್ಥಾನ ಬಿಜೆಪಿ ಅಧ್ಯಕ್ಷ ಸಿ.ಪಿ. ಜೋಶಿ ಮತ್ತಿತರರು ಭಾಗವಹಿಸಿದ್ದರು. 200 ಸದಸ್ಯ ಬಲ ರಾಜಸ್ಥಾನ ವಿಧಾನಸಭೆ ಚುನಾವಣೆಗೆ ಪಕ್ಷವು ಈವರೆಗೆ 41 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ.

ನುಡಿ-ಕಿಡಿ

ನೆರೆಯ ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವು ಬಿಜೆಪಿಯ ಒಡೆದು ಆಳುವ ರಾಜಕೀಯ ನೀತಿಯ ಫಲ. 'ಇಂಡಿಯಾ' ಮೈತ್ರಿಕೂಟವು ಮೋದಿ ಸರ್ಕಾರವನ್ನು ಈ ಬಾರಿ ಉರುಳಿಸಲಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಕಾಂಗ್ರೆಸ್ ತನ್ನ ಭರವಸೆಗಳನ್ನು ಕಾರ್ಯಗತಗೊಳಿಸುತ್ತದೆ. ಬಿಜೆಪಿ ಕೇವಲ ಸುಳ್ಳು ಭರವಸೆಗಳನ್ನು ನೀಡುತ್ತದೆ. ಇದೇ ಕಾಂಗ್ರೆಸ್ ಮತ್ತು ಬಿಜೆಪಿಗೆ ಇರುವ ಪ್ರಮುಖ ವ್ಯತ್ಯಾಸ.

ದಿಗ್ವಿಜಯ್ ಸಿಂಗ್, ಕಾಂಗ್ರೆಸ್ ರಾಜ್ಯಸಭಾ ಸದಸ್ಯ

ಚುನಾವಣೆ ಸುತ್ತಮುತ್ತ ...

₹ 100 ಕೋಟಿ ಮೌಲ್ಯದ ವಸ್ತು ವಶ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಅ. 9ರಂದು ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ನಂತರ ರಾಜ್ಯದಲ್ಲಿ ವಶಪಡಿಸಿಕೊಂಡ ವಸ್ತುಗಳ ಮೊತ್ತ ₹ 100 ಕೋಟಿ ದಾಟಿದೆ.

₹ 58.96 ಕೋಟಿ ನಗದು, 64.2 ಕೆಜಿ ಚಿನ್ನ, 400 ಗ್ರಾಂ ಬೆಳ್ಳಿ ಮತ್ತು 42.203 ಕ್ಯಾರಟ್ ವಜ್ರ ಅಲ್ಲದೆ ₹ 6.64 ಕೋಟಿ ಮೊತ್ತದ ಮದ್ಯ, ₹ 2.97 ಕೋಟಿ ಮೊತ್ತದ ಗಾಂಜಾ ಮತ್ತು ₹ 6.89 ಕೋಟಿ ಮೊತ್ತದ ಉಡುಗೊರೆಗಳು/ಮತ್ತಿತರ ವಸ್ತುಗಳು ಇದರಲ್ಲಿ ಸೇರಿವೆ ಎಂದು ಮುಖ್ಯ ಚುನಾವಣಾಧಿಕಾರಿ ಕಚೇರಿ ಬಿಡುಗಡೆ ಮಾಡಿದ ಪ್ರಕಟಣೆ ತಿಳಿಸಿದೆ.

ಅಕ್ಟೋಬರ್ 9ರಿಂದ 16ರವರೆಗೆ ವಶಪಡಿಸಿಕೊಂಡ ವಸ್ತುಗಳ ಒಟ್ಟು ಮೊತ್ತವು ₹ 109.11 ಕೋಟಿ ಆಗಿದೆ ಎಂದು ಪ್ರಕಟಣೆ ಹೇಳಿದೆ. ನ. 30ರಂದು ತೆಲಂಗಾಣದಲ್ಲಿ ಚುನಾವಣೆ ನಡೆಯಲಿದೆ.

ಗಾಂಜಾ: ನಾಲ್ವರು ವಶಕ್ಕೆ

ಹೈದರಾಬಾದ್ (ಪಿಟಿಐ): ಇಬ್ಬರು ಗಾಂಜಾ ಪೆಡ್ಲರ್‌ಗಳು ಸೇರಿದಂತೆ ನಾಲ್ವರನ್ನು ವಶಕ್ಕೆ ತೆಗೆದುಕೊಂಡಿದ್ದು ಅವರಿಂದ ಒಟ್ಟು ₹ 3.5ಕೋಟಿ ಮೌಲ್ಯದ 1,000 ಕೆಜಿ ಗಾಂಜಾ, ಕಾರು, ವ್ಯಾನನ್ನು ತೆಲಂಗಾಣ ರಾಜ್ಯ ಮಾದಕ ದ್ರವ್ಯ ನಿಗ್ರಹ ದಳದ (ಟಿಎಸ್‌ಎನ್‌ಎಬಿ) ಅಧಿಕಾರಿಗಳು ಜಪ್ತಿ ಮಾಡಿಕೊಂಡಿದ್ದಾರೆ.

ಬೊಲ್ಲರಾಂನಲ್ಲಿ ವಾಹನಗಳನ್ನು ತಪಾಸಣೆ ಮಾಡುವಾಗ ನಾಲ್ವರನ್ನು ವಶಕ್ಕೆ ಪಡೆದು, ಗಾಂಜಾ, ಕಾರು, ವ್ಯಾನನ್ನು ಜಪ್ತಿ ಮಾಡಲಾಗಿದೆ ಎಂದು ಟಿಎಸ್‌ಎನ್‌ಎಬಿ (ಪಶ್ಚಿಮ) ಎಸ್ಪಿ ಡಿ. ಸುನಿತಾ ರೆಡ್ಡಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇಬ್ಬರು ರಜಪೂತರು ಬಿಜೆಪಿಗೆ

ಜೈಪುರ: ರಜಪೂತ ಸಮುದಾಯವನ್ನು ಓಲೈಸಲು ಬಿಜೆಪಿಯು ಮಂಗಳವಾರ ಇಲ್ಲಿ ಸಮುದಾಯದ ಇಬ್ಬರು ಬಲಿಷ್ಠರನ್ನು ಪಕ್ಷಕ್ಕೆ ಸೇರಿಸಿಕೊಂಡಿದೆ.

ಮಹಾರಾಣಾ ಪ್ರತಾಪ್ ಅವರ ವಂಶಜ ವಿಶ್ವರಾಜ್ ಸಿಂಗ್ ಮೇವಾಡ್ ಮತ್ತು ಕರಣಿ ಸೇನಾ ಸಂಘಟನೆಯ ಮುಖ್ಯಸ್ಥರಾಗಿದ್ದ ದಿ. ಲೋಕೇಂದ್ರ ಸಿಂಗ್ ಕಾಲವಿ ಅವರ ಮಗ, ಪೋಲೊ ಆಟಗಾರ ಭವಾನಿ ಸಿಂಗ್ ಕಾಲವಿ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ.

ದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಜೈಪುರ ರಜಪೂತ ರಾಜಮನೆತನದ ವ್ಯಕ್ತಿ ಮತ್ತು ರಾಜಸ್‌ಮಂಡ್ ಸಂಸದೆ ದಿಯಾ ಕುಮಾರಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿ.ಪಿ ಜೋಶಿ, ಮತ್ತಿತರರು ಭಾಗವಹಿಸಿದ್ದರು.

ವಿಶ್ವರಾಜ್ ಸಿಂಗ್ ಅವರು ಮಹೇಂದ್ರ ಸಿಂಗ್ ಮೇವಾಡ್ ಅವರ ಪುತ್ರ. ಮಹೇಂದ್ರ ಸಿಂಗ್ ಅವರು 1989ರಲ್ಲಿ ಚಿತ್ತೋಡಗಢ ಸಂಸದರಾಗಿ 1,90,000 ಮತಗಳ ದಾಖಲೆ ಅಂತರದಿಂದ ಆಯ್ಕೆಯಾಗಿದ್ದರು.

ರಾಜಸ್ಥಾನದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಕನಿಷ್ಠ ಶೇ 10ರಷ್ಟು ರಜಪೂತ ಸಮುದಾಯದವರು ಇದ್ದಾರೆ. ವಿಧಾನಸಭೆಯ 30 ಸ್ಥಾನಗಳಲ್ಲಿ ಈ ಸಮುದಾಯದವರು ಪ್ರಮುಖ ಪಾತ್ರ ವಹಿಸಲಿದ್ದಾರೆ. ಬಿಜೆಪಿಯ ಸಾಂಪ್ರದಾಯಿಕ ಮತದಾರರಾಗಿದ್ದ ರಜಪೂತರು 2018ರಿಂದ ಪಕ್ಷದಿಂದ ದೂರ ಸರಿದಿದ್ದರು.

2018ರ ಸ್ಪರ್ಧಿಗಳೇ ಮತ್ತೆ ಕಣದಲ್ಲಿ

ಇಂದೋರ್, ಮಧ್ಯಪ್ರದೇಶ (ಪಿಟಿಐ): ಇಂದೋರ್ ಜಿಲ್ಲೆಯ ರಾವೂ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ 2018ರ ಚುನಾವಣೆಯಲ್ಲಿ ಕಣಕ್ಕಿಳಿಸಿದ್ದ ಅಭ್ಯರ್ಥಿಗಳನ್ನೇ ಮತ್ತೆ ಈ ಸಲವೂ ಸ್ಪರ್ಧೆಗೆ ಇಳಿಸಿವೆ.

ಕಾಂಗ್ರೆಸ್ ಪಕ್ಷವು ಹಾಲಿ ಶಾಸಕ ಜೀತೂ ಪಟ್ವಾರಿ ಅವರನ್ನು ನಾಲ್ಕನೇ ಬಾರಿಗೆ ಕಣಕ್ಕೆ ಇಳಿಸಿದ್ದರೆ, ಬಿಜೆಪಿಯು ಮಧು ವರ್ಮ ಅವರನ್ನೇ ಮತ್ತೆ ನೆಚ್ಚಿಕೊಂಡಿದೆ. ಮಧುವರ್ಮ ಅವರು ಕಳೆದ ಸಲ 5,703 ಮತಗಳಿಂದ ಪರಾಭವಗೊಂಡಿದ್ದರು. ಇಂದೋರ್‌ನ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಹಂಚಿಹೋಗಿರುವ ಈ ಕ್ಷೇತ್ರದಲ್ಲಿ 3.56 ಲಕ್ಷ ಮತದಾರರು ಇದ್ದಾರೆ. ಇವರಲ್ಲಿ ಬಹುತೇಕರು ರೈತರು.

ಹಮರ್ ರಾಜ್ ಪಾರ್ಟಿ ಕಣಕ್ಕೆ

ರಾಯಪುರ (ಪಿಟಿಐ): ಛತ್ತೀಸಗಢದಲ್ಲಿ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಬುಡಕಟ್ಟು ಜನರ ಸಂಘಟನೆ, ಹಮರ್ ರಾಜ್ ಪಾರ್ಟಿ (ಎಚ್‌ಆರ್‌ಪಿ) 19 ಸ್ಥಾನಗಳಿಗೆ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದೆ.

ಹತ್ತೊಂಬತ್ತು ಸ್ಥಾನಗಳ ಪೈಕಿ 10 ಸ್ಥಾನಗಳು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಾಗಿದ್ದರೆ ಎರಡು ಸ್ಥಾನಗಳು ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಮೀಸಲಾಗಿವೆ.

ಜನರ ಬಲವಂತದ ಸ್ಥಳಾಂತರ ತಪ್ಪು ● ಹಮಾಸ್ ದಾಳಿಯ ಚಿತ್ರ ಬಿಡುಗಡೆ ಮಾಡಿದ ಇಸ್ರೇಲ್

ಇಸ್ರೇಲ್‌ಗೆ ಎಚ್ಚರಿಕೆ ನೀಡಿದ ವಿಶ್ವಸಂಸ್ಥೆ

ಜಿನಿವಾ/ಟೆಲ್ ಅವೀವ್ (ಎಎಫ್‌ಪಿ/ಎಪಿ): ಗಾಜಾ ಪಟ್ಟಿಯಲ್ಲಿ ಇರುವ ನಾಗರಿಕರನ್ನು 'ಒತ್ತಾಯದಿಂದ ಇನ್ನೊಂದೆಡೆ ಕಳುಹಿಸುವ' ಕ್ರಮ ಸರಿಯಲ್ಲ ಎಂದು ವಿಶ್ವಸಂಸ್ಥೆಯು ಇಸ್ರೇಲ್‌ಗೆ ಮಂಗಳವಾರ ಎಚ್ಚರಿಕೆ ನೀಡಿದೆ. ಈ ರೀತಿ ಮಾಡುವುದು ಅಂತರರಾಷ್ಟ್ರೀಯ ಕಾನೂನುಗಳ ಉಲ್ಲಂಘನೆ ಎಂದು ಅದು ಹೇಳಿದೆ.

ನಾಗರಿಕರನ್ನು ಕಾನೂನಿಗೆ ಅನುಗುಣವಾಗಿ ತಾತ್ಕಾಲಿಕ ಅವಧಿಗೆ ಸ್ಥಳಾಂತರಿಸುವ ಪ್ರಕ್ರಿಯೆಯಲ್ಲಿ ಇಸ್ರೇಲ್ ಮೇಲೆ ಹೊಣೆಗಾರಿಕೆಗಳು ಇರುತ್ತವೆ. ಆದರೆ ಆ ಹೊಣೆಗಾರಿಕೆಗಳನ್ನು ನಿಭಾಯಿಸುವಲ್ಲಿ ಇಸ್ರೇಲ್ ಯಾವುದೇ ಪ್ರಯತ್ನ ಮಾಡಿದಂತೆ ಕಾಣುತ್ತಿಲ್ಲ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿಯು ಹೇಳಿದೆ.

ಉತ್ತರ ಗಾಜಾದ ನಿವಾಸಿಗಳು ದಕ್ಷಿಣ ಭಾಗಕ್ಕೆ ಸ್ಥಳಾಂತರಗೊಳ್ಳಬೇಕು ಎಂದು ಇಸ್ರೇಲ್ ಆಗ್ರಹಿಸಿದೆ. ಭೂದಾಳಿ ನಡೆಸುವ ಮೊದಲು ಆ ಪ್ರದೇಶದಲ್ಲಿನ ನಾಗರಿಕರನ್ನು ಸ್ಥಳಾಂತರಿಸಬಹುದು ಎಂಬುದು ಇಸ್ರೇಲ್‌ನ ಆಲೋಚನೆ. 'ಮುಂದಿನ ದಿನಗಳಲ್ಲಿ ನಾಗರಿಕರು ತೆರಬೇಕಿರುವ ಬೆಲೆಯ ವಿಚಾರವಾಗಿ ನಮಗೆ ಬಹಳ ಆತಂಕ ಮೂಡಿದೆ. ಮಿಲಿಟರಿ ಕಾರ್ಯಾಚರಣೆಗಳು ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ' ಎಂದು ಮಾನವ ಹಕ್ಕುಗಳ ಕಚೇರಿಯ ವಕ್ತಾರೆ ರವೀನಾ ಶಂದಸಾನಿ ಹೇಳಿದ್ದಾರೆ.

'ಜನರನ್ನು ಕಾನೂನುಬದ್ಧವಾಗಿ ತಾತ್ಕಾಲಿಕ ಅವಧಿಗೆ ಸ್ಥಳಾಂತರ ಮಾಡುವಾಗ ಅವರಿಗೆ ಸೂಕ್ತ ವಸತಿ ಸೌಲಭ್ಯ ಕಲ್ಪಿಸಬೇಕು' ಎಂದು ಅವರು ಹೇಳಿದ್ದಾರೆ. 'ಗಾಜಾದ ಜನರಿಗೆ ಸ್ಥಳಾಂತರಗೊಳ್ಳಲು ನೀಡಿರುವ ಆದೇಶ ಹಾಗೂ ಗಾಜಾ ಪಟ್ಟಿಯ ಮೇಲೆ ವಿಧಿಸಿರುವ ಸಂಪೂರ್ಣ ದಿಗ್ಬಂಧನವನ್ನು ಕಾನೂನುಬದ್ಧ ತಾತ್ಕಾಲಿಕ ಸ್ಥಳಾಂತರ ಎಂದು ಪರಿಗಣಿಸಲು ಆಗದು. ಇದು ಅಂತರರಾಷ್ಟ್ರೀಯ ಕಾನೂನುಗಳಿಗೆ ವಿರುದ್ಧವಾಗಿ ನಾಗರಿಕರನ್ನು ಬಲವಂತವಾಗಿ ಸ್ಥಳಾಂತರ ಮಾಡುವುದಕ್ಕೆ ಸಮ' ಎಂದೂ ಅವರು ಎಚ್ಚರಿಸಿದ್ದಾರೆ.

ಗಾಜಾ ಪಟ್ಟಿಯ ಖಾನ್ ಯೂನಿಸ್‌ನಲ್ಲಿ ಧ್ವಂಸಗೊಂಡ ಕಟ್ಟಡಗಳ ನಡುವೆ ಪ್ಯಾಲೆಸ್ಟೀನ್ ಮಹಿಳೆಯೊಬ್ಬರ ಆಕ್ರಂದನ

–ಎಎಫ್‌ಪಿ ಚಿತ್ರ

ಇಸ್ರೇಲ್-ಹಮಾಸ್ ಸಮರ

ದಾಳಿಯ ಚಿತ್ರ ಬಿಡುಗಡೆ: ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ಹಮಾಸ್ ಬಂಡುಕೋರರು ನಡೆಸಿದ ನಾಗರಿಕರ ಹತ್ಯೆಯ ಭೀಕರ ಚಿತ್ರಗಳು ಇರುವ ವಿಡಿಯೊ ಒಂದನ್ನು ಇಸ್ರೇಲ್ ಬಿಡುಗಡೆ ಮಾಡಿದ್ದು, ಬಂಡುಕೋರರ ಕ್ರೌರ್ಯವನ್ನು ಅದು ದಾಖಲಿಸಿದೆ.

ಸುಟ್ಟುಹೋಗಿರುವ ಮಗುವಿನ ಚಿತ್ರ, ನಾಗರಿಕರ ಮೃತದೇಹಗಳಿಗೆ ಬಂಡುಕೋರರು ಗುಂಡು ಹಾರಿಸುತ್ತಿರುವ ಚಿತ್ರ, ಗುದ್ದಲಿಯಂತಹ ಸಲಕರಣೆ ಬಳಸಿ ದೇಹವೊಂದರ ತಲೆ ಕಡಿಯುತ್ತಿರುವ ಚಿತ್ರ ಈ ವಿಡಿಯೊದಲ್ಲಿ ಇವೆ. ಇಸ್ರೇಲ್ ಆಡಳಿತವು ಈ ಚಿತ್ರಗಳನ್ನು ಮಾಧ್ಯಮ ಪ್ರತಿನಿಧಿಗಳಿಗೆ ತೋರಿಸಿದೆ.

ಹಿಂದಿನ ಮಿಲಿಟರಿ ಕಾರ್ಯಾಚರಣೆಗಳಲ್ಲಿ ನಾಗರಿಕರ ಸಾವಿಗೆ ಕಾರಣವಾಗಿದ್ದಕ್ಕೆ ಇಸ್ರೇಲ್ ವಿರುದ್ಧ ಅಂತರರಾಷ್ಟ್ರೀಯ ಸಮುದಾಯವು ಟೀಕೆಗಳನ್ನು ಮಾಡಿದೆ. ಈಗ ಇಸ್ರೇಲ್ ಬಿಡುಗಡೆ ಮಾಡಿರುವ ವಿಡಿಯೊ, ಈ ಟೀಕೆಗಳನ್ನು ಎದುರಿಸುವ ಹಾಗೂ ಜಗತ್ತಿನ ಗಮನವು ತನ್ನ ಪ್ರಜೆಗಳ ಹತ್ಯೆಯ ಮೇಲೆ ಕೇಂದ್ರೀಕೃತವಾಗಿರಬೇಕು ಎಂಬ ಉದ್ದೇಶ ಹೊಂದಿರುವಂತಿದೆ.

'ಇದು ಇಸ್ರೇಲ್ ವಿರುದ್ಧದ ಯುದ್ಧ ವಷ್ಟೇ ಅಲ್ಲ. ಇದು ಇಡೀ ಮನುಕುಲದ ವಿರುದ್ಧದ ಯುದ್ಧ' ಎಂದು ಹಮಾಸ್ ದಾಳಿಯ ಬಗ್ಗೆ ಇಸ್ರೇಲ್ ಅಧಿಕಾರಿಗಳು ಹೇಳಿದ್ದಾರೆ. ವಿಡಿಯೊದಲ್ಲಿ ಇರುವ ಚಿತ್ರಗಳನ್ನು ಹಮಾಸ್ ಬಂಡುಕೋರರು ಹೊಂದಿದ್ದ ಕ್ಯಾಮೆರಾಗಳಿಂದ, ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದ ವಿಡಿಯೊಗಳಿಂದ ಮತ್ತು ಇಸ್ರೇಲ್‌ನ ಕೆಲವು ಪ್ರಜೆಗಳ ಮೊಬೈಲ್ ಕ್ಯಾಮೆರಾಗಳಿಂದ ಪಡೆಯಲಾಗಿದೆ.

- ಗಾಜಾ ಪಟ್ಟಿಯ ನಾಗರಿಕರಿಗೆ ಅಗತ್ಯ ವಸ್ತುಗಳನ್ನು ಪೂರೈಸುವ ವಿಚಾರದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟು ಕೊನೆಗೊಳಿಸಲು ಅಮೆರಿಕ ಪ್ರಯತ್ನ ನಡೆಸಿದೆ. ಅಮೆರಿಕದ ಅಧ್ಯಕ್ಷ ಜೋ ಬೈಡನ್, ಇಸ್ರೇಲ್‌ಗೆ ಬುಧವಾರ ಭೇಟಿ ನೀಡಲಿದ್ದಾರೆ.
- ಯುದ್ಧದಲ್ಲಿ ಹಿಜ್ಬುಲ್ಲಾ ಭಾಗಿಯಾದರೆ, ಲೆಬನಾನ್‌ಅನ್ನು ನಾಶಗೊಳಿಸಲಾಗುತ್ತದೆ ಎಂದು ಇಸ್ರೇಲ್ ಎಚ್ಚರಿಕೆ ನೀಡಿದೆ.
- ಗಾಜಾ ಪಟ್ಟಿಯಲ್ಲಿ ಇರುವವರಿಗೆ ಅಗತ್ಯ ವಸ್ತುಗಳನ್ನು ಹೊತ್ತ ವಾಹನಗಳು ಇಸ್ರೇಲ್ ಪ್ರವೇಶಿಸಿ, ಅಲ್ಲಿ ತಪಾಸಣೆಗೆ ಒಳಗಾಗಿ, ನಂತರದಲ್ಲಿ ಗಾಜಾ ಪಟ್ಟಿ ಪ್ರವೇಶಿಸಬೇಕು ಎಂಬ ಸೂತ್ರಕ್ಕೆ ಇಸ್ರೇಲ್ ಮತ್ತು ಈಜಿಪ್ಟ್ ಒಪ್ಪಿಗೆ ನೀಡಿವೆ ಎಂದು ಈಜಿಪ್ಟ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- ಅಲ್ಪ ಅವಧಿಗೆ ಕದನ ವಿರಾಮ ಘೋಷಿಸಲಾಗುತ್ತದೆ. ಆ ಹೊತ್ತಿನಲ್ಲಿ ವಿದೇಶಿ ಪ್ರಜೆಗಳಿಗೆ ರಫಾ ಮಾರ್ಗವಾಗಿ ಗಾಜಾ ಪಟ್ಟಿಯಿಂದ ಹೊರನಡೆಯಲು ಅವಕಾಶ ಮಾಡಿಕೊಡಲಾಗುತ್ತದೆ ಎಂದು ಕೂಡ ಆ ಅಧಿಕಾರಿ ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ತಿಳಿಸಿದ್ದಾರೆ.
- ಇಸ್ರೇಲ್ ಸಂಸತ್ತಿನಲ್ಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಸೋಮವಾರ ಮಾತನಾಡಿದ ಕೆಲವೇ ಹೊತ್ತಿನಲ್ಲಿ ಜೆರುಸಲೇಂ ಮೇಲೆ ರಾಕೆಟ್ ದಾಳಿ ನಡೆದಿದೆ. ಈ ಕಾರಣಕ್ಕೆ, ಸಂಸತ್ತಿನಲ್ಲಿ ಇದ್ದವರನ್ನು ಸುರಕ್ಷಿತ ಸ್ಥಳಗಳಿಗೆ ಕಳುಹಿಸಲಾಗಿತ್ತು.

ಹಮಾಸ್‌ನ ಕಮಾಂಡರ್ ಸಾವು

ಗಾಜಾ ಪಟ್ಟಿ (ಎಎಫ್‌ಪಿ): ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ಹಮಾಸ್ ಬಂಡುಕೋರ ಸಂಘಟನೆಯ ಸಶಸ್ತ್ರ ವಿಭಾಗದ ಪ್ರಮುಖ ಅಯ್ಮಾನ್ ನೊಫಾಲ್ 'ಅಬು ಅಹ್ಮದ್' ಮೃತಪಟ್ಟಿದ್ದಾರೆ.

ಇವರು ಅಲ್ ಕಸ್ಸಾಂ ಬ್ರಿಗೇಡ್ಸ್‌ನ ಕೇಂದ್ರ ಬ್ರಿಗೇಡ್‌ನ ಕಮಾಂಡರ್ ಆಗಿದ್ದರು. ಹಮಾಸ್ ಸಂಘಟನೆಯ ಅತ್ಯಂತ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು ಎಂದು ಇಸ್ರೇಲ್ ಮಿಲಿಟರಿ ಹೇಳಿದೆ. ಇವರು ಸತ್ತಿರುವುದನ್ನು ಇಸ್ರೇಲ್ ಖಚಿತಪಡಿಸಿದೆ.

ಇವರು ಹಮಾಸ್‌ನ ಮಿಲಿಟರಿ ಗುಪ್ತಚರ ವಿಭಾಗದಲ್ಲಿ ಈ ಮೊದಲು ಮುಖ್ಯಸ್ಥರಾಗಿದ್ದರು. ಶಸ್ತ್ರಾಸ್ತ್ರಗಳ ತಯಾರಿಕೆ ಹಾಗೂ ಇಸ್ರೇಲ್‌ನತ್ತ ರಾಕೆಟ್ ದಾಳಿ ನಡೆಸುವುದರಲ್ಲಿ ಭಾಗಿಯಾಗಿದ್ದರು. ಹಮಾಸ್‌ನ ಇನ್ನೊಬ್ಬ ಮುಖಂಡ ಒಸಾಮ ಮಜಿನಿ ಎಂಬುವವನನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಹೇಳಿದೆ. ಆದರೆ ಈ ಬಗ್ಗೆ ಹಮಾಸ್ ಪ್ರತಿಕ್ರಿಯಿಸಿಲ್ಲ.

ಟೆಲ್ ಅವೀವ್: ಹಮಾಸ್ ಬಂಡುಕೋರರ ವಶದಲ್ಲಿ ಇರುವ ಮಹಿಳೆ ಮಿಯಾ ಶೆಮ್ ಅವರ ತಾಯಿ ಕೆರೆನ್ ಶೆಮ್ ಅವರು ತಮ್ಮ ಮಗಳನ್ನು ಬಂಡುಕೋರರ ವಶದಿಂದ ಬಿಡಿಸಿ ಕೊಡಬೇಕು ಎಂದು ವಿಶ್ವದ ಪ್ರಮುಖ ದೇಶಗಳ ನಾಯಕರಲ್ಲಿ ಮನವಿ ಮಾಡಿದ್ದಾರೆ. ಮಿಯಾ ಅವರು ತಮ್ಮ ವಶದಲ್ಲಿ ಇರುವ ವಿಡಿಯೊ ಒಂದನ್ನು ಬಂಡುಕೋರರು ಬಿಡುಗಡೆ ಮಾಡಿದ್ದಾರೆ. 'ನನ್ನ ಮಗಳು ಹಾಗೂ ಎಲ್ಲ ಒತ್ತೆಯಾಳುಗಳನ್ನು ಸೆರೆಯಿಂದ ಬಿಡಿಸಬೇಕು' ಎಂದು ಕೆರೆನ್ ಅವರು ಮನವಿ ಮಾಡಿದ್ದಾರೆ.

ಮಿಯಾ ಅವರ ಗಾಯಕ್ಕೆ ಚಿಕಿತ್ಸೆ ನೀಡುತ್ತಿರುವ ದೃಶ್ಯವು ಹಮಾಸ್ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ಇದೆ. ಗಾಜಾ ಪಟ್ಟಿಯ ಗಡಿಗೆ ಸಮೀಪದಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿಯಲ್ಲಿ ಮಿಯಾ ಭಾಗಿಯಾಗಿದ್ದರು. ಅಲ್ಲಿಗೆ ದಾಳಿ ನಡೆಸಿದ್ದ ಹಮಾಸ್, ಮಿಯಾ ಅವರನ್ನು ಹೊತ್ತೊಯ್ದಿದೆ.

ಇಸ್ರೇಲ್– ಲೆಬನಾನ್ ಗಡಿಯಲ್ಲಿ ಸಂಘರ್ಷ

ಖಾನ್ ಯೂನಿಸ್/ವಾಷಿಂಗ್ಟನ್ (ಎಪಿ/ಪಿಟಿಐ/ರಾಯಿಟರ್ಸ್): ಇಸ್ರೇಲ್‌ನ ಉತ್ತರ ಭಾಗದ ಲೆಬನಾನ್ ಗಡಿಯಲ್ಲಿ ಹಿಂಸಾಚಾರ ನಡೆದಿರುವುದು ಯುದ್ಧವು ಇತರೆಡೆಗಳಿಗೂ ವ್ಯಾಪಿಸುವ ಭೀತಿಯನ್ನು ಹೆಚ್ಚಿಸಿದೆ. ಸ್ಫೋಟಕಗಳನ್ನು ಹೊಂದಿದ್ದ ಉಡುಪು ಧರಿಸಿ ಲೆಬನಾನ್ ಕಡೆಯಿಂದ ಇಸ್ರೇಲ್ ಪ್ರವೇಶಿಸಲು ಹವಣಿಸುತ್ತಿದ್ದ ನಾಲ್ವರನ್ನು ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ.

ಗಡಿಯಲ್ಲಿ ಸಂಘರ್ಷ ಹೆಚ್ಚುತ್ತಿರುವ ಕಾರಣ ಗಡಿಯ ಎರಡೂ ಕಡೆಗಳಲ್ಲಿನ ಸ್ಥಳೀಯರು ಮನೆಗಳನ್ನು ತೊರೆಯಲು ಮುಂದಾಗಿದ್ದಾರೆ.

ಹಮಾಸ್ ದಾಳಿಗೆ ಪ್ರತಿಯಾಗಿ ಇಸ್ರೇಲ್ ಸೇನೆಯು ಗಾಜಾ ಮೇಲೆ ಭೂದಾಳಿ ಆರಂಭಿಸಿದಲ್ಲಿ, ಇಸ್ರೇಲ್‌ನ ಪ್ರಾದೇಶಿಕ ಶತ್ರುಗಳು ತೀಕ್ಷ್ಣ ಪ್ರತಿಕ್ರಿಯೆಗೆ ಮುಂದಾದಲ್ಲಿ ಈ ಗಡಿ ಪ್ರದೇಶವು ಇನ್ನೊಂದು ಯುದ್ಧಭೂಮಿಯಾಗಿ ಪರಿವರ್ತನೆ ಕಾಣುವ ಸಾಧ್ಯತೆ ಇದೆ.

ಸೋಮವಾರ ನಡೆದ ವಾಯುದಾಳಿಯಲ್ಲಿ ಗಾಜಾ ನಗರದಲ್ಲಿ ಏಳು ಮಂದಿ ಅರೆವೈದ್ಯಕೀಯ ಸಿಬ್ಬಂದಿ ಮೃತಪಟ್ಟಿದ್ದಾರೆ. ಆಸ್ಪತ್ರೆಗಳಿಗೆ ವಿದ್ಯುತ್ ಸಂಪರ್ಕವು ಸ್ಥಗಿತಗೊಳ್ಳುವ ಅಪಾಯ ಹೆಚ್ಚಾಗುತ್ತಿದೆ ಎಂದು ನೆರವು ಒದಗಿಸುತ್ತಿರುವ ಕಾರ್ಯಕರ್ತರು ಮತ್ತೆ ಮತ್ತೆ ಎಚ್ಚರಿಸಿದ್ದಾರೆ.

ಗಾಜಾದಲ್ಲಿನ ನಾಗರಿಕರಿಗೆ ಅಗತ್ಯ ವಸ್ತುಗಳನ್ನು ತಲುಪಿಸಲು ಸೂತ್ರವೊಂದನ್ನು ರೂಪಿಸಲು ಇಸ್ರೇಲ್ ಮತ್ತು ಅಮೆರಿಕ ಒಮ್ಮತಕ್ಕೆ ಬಂದಿವೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಟೆಲ್ ಅವೀವ್‌ನಲ್ಲಿ ತಿಳಿಸಿದ್ದಾರೆ. ನಾಗರಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಅವರನ್ನು ಪ್ರತ್ಯೇಕವಾಗಿಸುವ ಆಲೋಚನೆಯೂ ಇದರಲ್ಲಿ ಸೇರಿದೆ.

ರಫಾ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ನಡೆಸಿದ ದಾಳಿಯಿಂದ ಧ್ವಂಸಗೊಂಡ ಕಟ್ಟಡದ ಅಡಿಯಿಂದ ಬಾಲಕಿಯೊಬ್ಬಳನ್ನು ರಕ್ಷಿಸಲಾಯಿತು (ಎಎಫ್‌ಪಿ ಚಿತ್ರ)

ರಷ್ಯಾ ನಿರ್ಣಯಕ್ಕೆ ಸೋಲು

ವಿಶ್ವಸಂಸ್ಥೆ: ಗಾಜಾದಲ್ಲಿ ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಬೇಕು ಎಂದು ರಷ್ಯಾ ಮಂಡಿಸಿದ್ದ ಕರಡು ನಿರ್ಣಯವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ತಿರಸ್ಕರಿಸಿದೆ. ರಷ್ಯಾ ಮಂಡಿಸಿದ್ದ ಕರಡು ನಿರ್ಣಯದಲ್ಲಿ, ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ನಡೆಸಿದ್ದ ದಾಳಿಯ ಬಗ್ಗೆ ಉಲ್ಲೇಖವೇ ಇರಲಿಲ್ಲ.

15 ರಾಷ್ಟ್ರಗಳ ಸದಸ್ಯತ್ವ ಇರುವ ಭದ್ರತಾ ಮಂಡಳಿಯಲ್ಲಿ ನಿರ್ಣಯವೊಂದಕ್ಕೆ ಅಂಗೀಕಾರ ಸಿಗಬೇಕು ಎಂದಾದರೆ ಅದರ ಪರವಾಗಿ ಕನಿಷ್ಠ ಒಂಬತ್ತು ಮತಗಳು ಚಲಾವಣೆ ಆಗಬೇಕು, ಭದ್ರತಾ ಮಂಡಳಿಯ ಕಾಯಂ ಸದಸ್ಯರೆಲ್ಲರ ಬೆಂಬಲ ಸಿಗಬೇಕು.

ಷೇರುಪೇಟೆ ವಹಿವಾಟು 262



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,731
ಇಂದಿನ ಅಂತ್ಯ	19,811
▲	80
ದಿನದ ಗರಿಷ್ಠ	19,849

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1560 (1560)
ಸೋಯಾ (ರಿಫೈಂಡ್)	₹915 (900)
ಸೂರ್ಯಕಾಂತಿ (ರಿಫೈಂಡ್)	₹915 (905)
ಪಾಮೋಲಿನ್	₹828 (825)

ವಿನಿಮಯ ದರ

$ ಡಾಲರ್	83.25
£ ಪೌಂಡ್	101.32
€ ಯುರೊ	87.79
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-8850
ಕೆ.ಆರ್‌.ಪೇಟೆ	₹7960-7960
ಪುತ್ತೂರು	₹4500-7300
ತಿಪಟೂರು	₹8000-9009
ತುರುವೇಕೆರೆ	₹8400-8400

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹260-490
ದ್ವಿತಳಿ (ಬಿ.ವಿ)	₹338-593

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹10600
ಎಸಿ	₹6440
ಆರ್‌ಪಿ	₹9500
ಆರ್‌ಸಿ	₹5960

2024 ರಿಂದ 2030ರ ಅವಧಿಯಲ್ಲಿ ₹143 ಲಕ್ಷ ಕೋಟಿ ವೆಚ್ಚ: ಕ್ರಿಸಿಲ್

ಮೂಲಸೌಕರ್ಯ ವೆಚ್ಚ ದುಪ್ಪಟ್ಟು?

ನವದೆಹಲಿ (ಪಿಟಿಐ): ಮೂಲಸೌಕರ್ಯ ಅಭಿವೃದ್ಧಿಗಾಗಿ ಭಾರತವು 2023-24ನೇ ಹಣಕಾಸು ವರ್ಷದಿಂದ 2029-30ನೇ ಹಣಕಾಸು ವರ್ಷದ ಅವಧಿಯಲ್ಲಿ ಒಟ್ಟು ₹143 ಲಕ್ಷ ಕೋಟಿ ವೆಚ್ಚ ಮಾಡಲಿದೆ. 2017ರಿಂದ 2023ರ ಅವಧಿಯಲ್ಲಿ ಮಾಡಿರುವ ವೆಚ್ಚಕ್ಕೆ ಹೋಲಿಸಿದರೆ ಎರಡು ಪಟ್ಟಿಗೂ ಹೆಚ್ಚಿನ ಮೊತ್ತ ಇದಾಗಲಿದೆ ಎಂದು ರೇಟಿಂಗ್ಸ್ ಸಂಸ್ಥೆ ಕ್ರಿಸಿಲ್ ಮಂಗಳವಾರ ಹೇಳಿದೆ.

2016-17 ರಿಂದ 2022-23ರ ಅವಧಿಯಲ್ಲಿ ಒಟ್ಟು ₹ 67 ಲಕ್ಷ ಕೋಟಿ ವೆಚ್ಚ ಮಾಡಲಾಗಿತ್ತು ಎಂದು ತಿಳಿಸಿದೆ.

ಒಟ್ಟು ಮೊತ್ತದಲ್ಲಿ ₹36.6 ಲಕ್ಷ ಕೋಟಿಯಷ್ಟು ಪರಿಸರ ಸ್ನೇಹಿ ಯೋಜನೆಗಳಿಗೆ ಹೂಡಿಕೆ ಆಗಲಿದ್ದು, 2016-17 ರಿಂದ 2022-23ರ ಅವಧಿಯಲ್ಲಿ ಅವಧಿಯಲ್ಲಿ ಆಗಿದ್ದ ಹೂಡಿಕೆಗಿಂತಲೂ ಐದುಪಟ್ಟು ಏರಿಕೆ ಆಗಲಿದೆ ಎಂದು 'ಇನ್‌ಫ್ರಾಸ್ಟ್ರಕ್ಚರ್ ಇಯರ್‌ಬುಕ್ 2023'ರ ವರದಿಯಲ್ಲಿ ತಿಳಿಸಿದೆ.

ಮುಖ್ಯಾಂಶಗಳು

- ಮೂಲಸೌಕರ್ಯ ವಲಯಗಳಲ್ಲಿ ಹೆಚ್ಚುತ್ತಿದೆ ಹೂಡಿಕೆ
- ನಾಲ್ಕು ಪಟ್ಟು ಹೆಚ್ಚಲಿರುವ ನವೀಕರಿಸಬಲ್ಲ ಇಂಧನದ ಒಟ್ಟು ಸಾಮರ್ಥ್ಯ

ಭಾರತದ ಜಿಡಿಪಿಯು 2030-31ನೇಹಣಕಾಸು ವರ್ಷದವರೆಗೂ ಶೇ 6.7ರ ಸರಾಸರಿಯಲ್ಲಿ ಬೆಳವಣಿಗೆ ಕಾಣುವ ಅಂದಾಜನ್ನು ಕ್ರಿಸಿಲ್ ಮಾಡಿರುವುದಾಗಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಮಿಶ್ ಮೆಹ್ತಾ ತಿಳಿಸಿದ್ದಾರೆ.

ತಲಾ ಆದಾಯವು 2030-31ನೇ ಹಣಕಾಸು ವರ್ಷದ ವೇಳೆಗೆ ಈಗಿರುವ



2,500 ಡಾಲರ್‌ನಿಂದ (₹2.07 ಲಕ್ಷ) 4,500 ಡಾಲರ್‌ಗೆ (₹3.73 ಲಕ್ಷ) ಏರಿಕೆ ಆಗಲಿದೆ. ಆ ಮೂಲಕ ಭಾರತವು ಮಧ್ಯಮ ಆದಾಯದ ದೇಶವಾಗಲಿದೆ. ಮೂಲಸೌಕರ್ಯ ಅಭಿವೃದ್ಧಿಯಿಂದಾಗಿ ತಲಾ ಆದಾಯದಲ್ಲಿ ಈ ಬೆಳವಣಿಗೆ ಸಾಧ್ಯವಾಗಲಿದೆ ಎಂದು ಮೆಹ್ತಾ ಹೇಳಿದ್ದಾರೆ.

ಸಮಂಜಸವಾದ ನೀತಿ ಮತ್ತು ನಿಯಂತ್ರಣ ಕ್ರಮಗಳಿಂದಾಗಿ ಹಾಗೂ ಸಕಾಲಕ್ಕೆ ಯೋಜನೆಯನ್ನು ಕಾರ್ಯ-ಗತಗೊಳಿಸಲಾಗುತ್ತಿದೆ. ಹೀಗಾಗಿ ಮೂಲಸೌಕರ್ಯ ವಲಯಗಳಲ್ಲಿ ಬಂಡವಾಳ ಹೂಡಿಕೆ ಪ್ರಮಾಣ ಹೆಚ್ಚಾಗುತ್ತಿದೆ ಎಂದು ಕ್ರಿಸಿಲ್ ತಿಳಿಸಿದೆ.

ಮೂಲಸೌಕರ್ಯಕ್ಕೆ ರಸ್ತೆ ಮತ್ತು ವಿದ್ಯುತ್ ವಲಯಗಳ ಕೊಡುಗೆಯೇ ಹೆಚ್ಚಿನ ಪ್ರಮಾಣದಲ್ಲಿ ಇರುವ ಅಂದಾಜನ್ನು ಸಂಸ್ಥೆಯು ಮಾಡಿದೆ. ಸೌರ ವಿದ್ಯುತ್, ಪವನ ವಿದ್ಯುತ್ ಮತ್ತು ಜಲಜನಕದ ಪಾಲು ಕಡಿಮೆ ಇರಲಿದೆ ಎಂದು ಹೇಳಿದೆ.

2023ರ ವೇಳೆಗೆ ಭಾರತದಲ್ಲಿ ಮಾರಾಟ ಆಗಲಿರುವ ಒಟ್ಟು ವಾಹನಗಳಲ್ಲಿ ವಿದ್ಯುತ್ ಚಾಲಿತ ವಾಹನಗಳ ಪಾಲು ಶೇ 30ರಷ್ಟು ಆಗಲಿದೆ. ನವೀಕರಿಸಬಲ್ಲ ಇಂಧನದ ಸಾಮರ್ಥ್ಯವು 20230ರ ವೇಳೆಗೆ ನಾಲ್ಕುಪಟ್ಟು ಹೆಚ್ಚಾಗುವ ಅಂದಾಜು ಮಾಡಲಾಗಿದೆ. ಹೈಡ್ರೋಜನ್ ವಲಯವು 2024 ರಿಂದ 2030ರ ಅವಧಿಯಲ್ಲಿ ₹1.5 ಲಕ್ಷ ಕೋಟಿ ಹೂಡಿಕೆಯನ್ನು ಆಕರ್ಷಿಸಲಿದೆ ಎಂದು ತಿಳಿಸಿದೆ.

ಜಿಯೊ ಫೈನಾನ್ಶಿಯಲ್: ಗೃಹ, ವಾಹನ ಸಾಲ

ಬೆಂಗಳೂರು (ರಾಯಿಟರ್ಸ್): ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಯು ವಾಹನ, ಗೃಹ ಸಾಲ ಯೋಜನೆಗಳನ್ನು ಜಾರಿಗೊಳಿಸುವ ಆಲೋಚನೆ ನಡೆಸಿದೆ. ಈ ಮೂಲಕ ಪೂರ್ಣ ಪ್ರಮಾಣದಲ್ಲಿ ಹಣಕಾಸು ಸೇವೆಗಳನ್ನು ನೀಡುವ ಕಂಪನಿಯಾಗಲು ಉದ್ದೇಶಿಸಿದೆ.

ಹಣಕಾಸು ಹೂಡಿಕೆ ಉತ್ಪನ್ನಗಳು ಭಾರತದಲ್ಲಿ ಉತ್ತಮ ಬೆಳವಣಿಗೆ ಕಾಣುತ್ತಿವೆ. ಹೀಗಿದ್ದರೂ ದೇಶದ ಆರ್ಥಿಕತೆಯ ಗಾತ್ರಕ್ಕೆ ಹೋಲಿಸಿದರೆ ಬೆಳವಣಿಗೆಯ ವೇಗವು ಕಡಿಮೆ ಇದೆ. ಹೀಗಾಗಿ ಮುಕೇಶ್ ಅಂಬಾನಿ ಒಡೆತನದ ಈ ಕಂಪನಿಯು ಈ ಬಗ್ಗೆ ಹೆಚ್ಚು ಗಮನ ಹರಿಸಲು ಮುಂದಾಗಿದೆ.

ಕಂಪನಿಯು ವೇತನ ವರ್ಗದವರು ಮತ್ತು ಸ್ವಂತ ಉದ್ಯೋಗ ಮಾಡುವವರಿಗಾಗಿ ವೈಯಕ್ತಿಕ ಸಾಲ ನೀಡುವ ಯೋಜನೆಯನ್ನು ಮುಂಬೈನಲ್ಲಿ ಈಗಾಗಲೇ ಜಾರಿಗೊಳಿಸಿದೆ. ಸ್ವಂತ ಉದ್ಯೋಗ ಮಾಡುವವರಿಗೆ ಉದ್ದಿಮೆ ಮತ್ತು ವ್ಯಾಪಾರಿ ಸಾಲ ಸೌಲಭ್ಯವನ್ನು ಪರಿಚಯಿಸುವುದಾಗಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

17-10-2023

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	12900-12000
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11300-11400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1570)
ಒಂದು ವಾರದ ಡೆಲಿವರಿ	1565 (1565)
ಸೋಯಾ ಕಚ್ಚಾ	862 (850)
ಪಾಮ್ ವಾರದ ಡೆಲಿವರಿ	826 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	840 (815)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,950 (58,900)
ಬೆಳ್ಳಿ ಕೆ.ಜಿ 70,800 (70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌.ಆರ್‌.ಪುರ ರಬ್ಬರ್

ಆರ್‌ಎಸ್‌ಎಸ್‌-4	₹148.50
ಆರ್‌ಎಸ್‌ಎಸ್‌-5	₹142.50
ಗುಡ್ ಲಾಟ್	₹131.50

(ಪ್ರತಿ ಕೆ.ಜಿಗೆ)

'ಇನ್‌ವೆಸ್ಟ್ ಕರ್ನಾಟಕ ಫೋರಂ'ಗೆ ಜಿಂದಾಲ್ ಸಾರಥ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಹೆಚ್ಚು ಬಂಡವಾಳ ಆಕರ್ಷಿಸಲು ಹಿಂದೆ ರೂಪಿಸಿದ್ದ 'ಇನ್‌ವೆಸ್ಟ್ ಕರ್ನಾಟಕ ಫೋರಂ' ಅನ್ನು (ಐಕೆಎಫ್) ಪುನ-ರ್‌ರಚಿಸಲಾಗಿದ್ದು, ಸಹ ಅಧ್ಯಕ್ಷರನ್ನಾಗಿ ಉದ್ಯಮಿ ಸಜ್ಜನ್ ಜಿಂದಾಲ್ ಅವರನ್ನು ನೇಮಿಸಲಾಗಿದೆ.

ಕಿರ್ಲೋಸ್ಕರ್ ಸಿಸ್ಟಮ್ಸ್ ಅಧ್ಯಕ್ಷೆ ಗೀತಾಂಜಲಿ ಕಿರ್ಲೋಸ್ಕರ್, ಏಕಸ್ ಇಂಕ್ ಸಮೂಹದ ಅಧ್ಯಕ್ಷ ಅರವಿಂದ್ ಮೆಳ್ಳಿಗೇರಿ, ಜೆಟ್ವರ್ಕ್ಸ್ ಕಂಪನಿಯ ಸಹ ಸಂಸ್ಥಾಪಕ ಅಂಕಿತ್ ಫತೇಪುರಿಯಾ, ಕೆನ್ನಮೆಟಲ್ ವ್ಯವಸ್ಥಾಪಕ ನಿರ್ದೇಶಕ ವಿಜಯಕೃಷ್ಣನ್ ವೆಂಕಟೇಶನ್ ಅವರನ್ನು ನಿರ್ದೇಶಕರಾಗಿ ನೇಮಿಸಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾಹಿತಿ ನೀಡಿದ್ದಾರೆ.

ಕಾರ್ಯತಂತ್ರ ಹೂಡಿಕೆ ಸಮಿತಿ (ಎಸ್‌ಐಸಿ): ಐಕೆಎಫ್‌ಗೆ ಮಾರ್ಗದರ್ಶನ ನೀಡಲು ಇದೇ ಮೊದಲ ಬಾರಿಗೆ ಕಾರ್ಯತಂತ್ರ ಹೂಡಿಕೆ ಸಮಿತಿ (ಎಸ್‌ಐಸಿ) ರಚಿಸಲಾಗಿದೆ. ಉದ್ಯಮ ವಲಯದ ಮೃತ್ಯುಂಜಯ ಹಿರೇಮಠ, ರಾಮ್ ಟಿ. ಚಂದನಾನಿ, ಪ್ರಶಾಂತ್ ಪ್ರಕಾಶ್, ನಿಖಿಲ್ ಕಾಮತ್, ರವಿ ಮಾನಚಂದ್, ಅಶ್ವಿನ್ ಕೃಷ್ಣಸ್ವಾಮಿ, ಗೌರಿ ಶಂಕರ್ ನಾಗಭೂಷಣಂ, ಕಾಸರಗೋಡು ಉಲ್ಲಾಸ್ ಕಾರಂತ್ ಅವರನ್ನು ಸದಸ್ಯರಾಗಿ ಆಯ್ಕೆ ಮಾಡಲಾಗಿದೆ.

ಅಮೆರಿಕ, ಜರ್ಮನಿ, ಫ್ರಾನ್ಸ್, ನೆದರ್ಲೆಂಡ್ಸ್, ಜಪಾನ್, ದಕ್ಷಿಣ ಕೊರಿಯಾ, ತೈವಾನ್ ಕಂಪನಿಗಳ ಜತೆ ನೂತನ ಸಮಿತಿವ್ಯವಹರಿಸಲಿದೆ. ರಾಜ್ಯಕ್ಕೆ ಹೆಚ್ಚಿನ ಹೂಡಿಕೆಯನ್ನು ಸೆಳೆಯಲು ಶ್ರಮಿಸಲಿದೆ ಎಂದಿದ್ದಾರೆ.

ಸುಜುಕಿಯಿಂದ ಗುಜರಾತ್ ಘಟಕ ಖರೀದಿಸಲಿರುವ ಮಾರುತಿ

ನವದೆಹಲಿ (ಪಿಟಿಐ/ರಾಯಿಟರ್ಸ್): ಮಾತೃಸಂಸ್ಥೆ ಸುಜುಕಿ ಮೋಟರ್ ಕಾರ್ಪೊರೇಷನ್‌ನಿಂದ ಸುಜುಕಿ ಮೋಟರ್ ಗುಜರಾತ್ (ಎಸ್‌ಎಂಜಿ) ಘಟಕವನ್ನು ಸ್ವಾಧೀನಪಡಿಸಿಕೊಳ್ಳಲು ಆಡಳಿತ ಮಂಡಳಿಯು ಒಪ್ಪಿಗೆ ನೀಡಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಮಂಗಳವಾರ ತಿಳಿಸಿದೆ.

ಈ ಘಟಕದಲ್ಲಿ ಸುಜುಕಿ ಮೋಟರ್ ಕಾರ್ಪೊರೇಷನ್ ಹೊಂದಿರುವ 1.23 ಕೋಟಿ ಷೇರು ಖರೀದಿ ಒಪ್ಪಂದಕ್ಕೆ ಬರಲಾಗಿದೆ. ಷೇರು ಖರೀದಿಯ ಒಟ್ಟು ಮೊತ್ತವು ₹12,841 ಕೋಟಿ ಆಗಲಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

2014ರಲ್ಲಿ ಗುಜರಾತ್‌ನಲ್ಲಿ ಈ ಘಟಕ ಸ್ಥಾಪಿಸಲಾಗಿದ್ದು, ವಾರ್ಷಿಕ ಸಾಮರ್ಥ್ಯ 7.6 ಲಕ್ಷ ಇದೆ. ಈ ಘಟಕದ ಮೇಲೆ ನಿಯಂತ್ರಣ ಹೊಂದುವುದರಿಂದ ವಿದ್ಯುತ್ ಚಾಲಿತ ವಾಹನ ಸೇರಿದಂತೆ ಎಲ್ಲ ರೀತಿಯ ವಾಹನ ತಯಾರಿಕೆ ಮೇಲೆ ಉತ್ತಮ ಹಿಡಿತ ಸಾಧಿಸಲು, ಬೇಡಿಕೆಗೆ ಅನುಗುಣವಾಗಿ ತಯಾರಿಕೆ ಹೊಂದಿಸಲು ನೆರವಾಗಲಿದೆ ಎಂದು ತಿಳಿಸಿದೆ.

11.63 ಲಕ್ಷ ಟನ್ ಕಲ್ಲಿದ್ದಲು ರಫ್ತು

ನವದೆಹಲಿ (ಪಿಟಿಐ): ಭಾರತವು 2022-23ರಲ್ಲಿ 11.63 ಲಕ್ಷ ಟನ್‌ನಷ್ಟು ಕಲ್ಲಿದ್ದಲ-ನ್ನು ನೇಪಾಳ, ಬಾಂಗ್ಲಾದೇಶ ಸೇರಿದಂತೆ ನೆರೆಯ ದೇಶಗಳಿಗೆ ರಫ್ತು ಮಾಡಿದೆ ಎಂದು ಕಲ್ಲಿದ್ದಲು ಸಚಿವಾಲಯ ಮಂಗಳವಾರ ತಿಳಿಸಿದೆ.

ನೇಪಾಳಕ್ಕೆ 8.33 ಲಕ್ಷ ಟನ್, ಬಾಂಗ್ಲಾದೇಶಕ್ಕೆ 2.45 ಲಕ್ಷ ಟನ್, ಭೂತಾನ್‌ಗೆ 53 ಸಾವಿರ ಟನ್ ಹಾಗೂ ಇತರ ದೇಶಗಳಿಗೆ 32 ಸಾವಿರ ಟನ್‌ನಷ್ಟು ರಫ್ತು ಮಾಡಲಾಗಿದೆ ಎಂದು ಮಾಹಿತಿ ನೀಡಿದೆ.

ಭಾರತದಲ್ಲಿ ಕಲ್ಲಿದ್ದಲಿಗೆ ಇರುವ ಬೇಡಿಕೆಯನ್ನು ಗಮನಿಸಿದರೆ ಪೂರೈಕೆಯಲ್ಲಿ ಕೊರತೆ ಇದ್ದು, ಆಮದು ಮಾಡಿಕೊಳ್ಳಬೇಕಾಗಿದೆ. ಹೀಗಿದ್ದರೂ ನೆರೆಯ ದೇಶಗಳಿಗೆ 2022-23ರಲ್ಲಿ ಸ್ವಲ್ಪ ಪ್ರಮಾಣವನ್ನು ರಫ್ತು ಮಾಡಲಾಗಿದೆ ಎಂದು ಸಚಿವಾಲಯವು ಹೇಳಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಂಭುಲಿಂಗ, ಜಗಳೂರು

● **ಪ್ರಶ್ನೆ:** ನಾನು ಆಗಾಗ ಪ್ರಜಾವಾಣಿಯ ಪ್ರಶ್ನೋತ್ತರ ಅಂಕಣ ಓದುತ್ತಿರುತ್ತೇನೆ. ಅದರಿಂದ ಸ್ಫೂರ್ತಿ ಪಡೆದಿದ್ದೇನೆ. ಆದರೆ ಅನೇಕ ಕಾರಣಗಳಿಂದ ಸರಿಯಾಗಿ ಹೂಡಿಕೆ ಮಾಡಲಾಗುತ್ತಿಲ್ಲ. ನನ್ನ ವಯಸ್ಸು 59 ವರ್ಷ. ನಿವೃತ್ತಿಗೆ ಇನ್ನೂ 10 ತಿಂಗಳು ಬಾಕಿ ಇದೆ. ನನಗೆ ಕೈಗೆ ಬರುವ ಸಂಬಳ ₹ 55 ಸಾವಿರ. ₹ 30 ಸಾವಿರವನ್ನು ಮನೆಯ ಸಾಲದ ಕಂತು ಪಾವತಿಗೆ ಹೋಗುತ್ತದೆ. ಒಟ್ಟು ₹ 90 ಸಾವಿರ ಸಂಬಳ. ₹ 20 ಸಾವಿರ ಪಿಎಫ್, ₹2 ಸಾವಿರ ಎಲ್‌ಐಸಿ ಮತ್ತು ನಿವೃತ್ತಿಗೆ ಮುಂಚಿತವಾಗಿ ಪಡೆದ ಭವಿಷ್ಯ ನಿಧಿ ಮೊತ್ತ ₹ 25 ಲಕ್ಷ ರೂಪಾಯಿಗಳು. ಈಗ ಹತ್ತು ದಿನಗಳಿಂದ ಅರ್ಧ ಹಣ ಕೈ ಸೇರಿ ಉಳಿತಾಯ ಖಾತೆಯಲ್ಲಿದೆ. ಪಿಂಚಣಿ, ಇಪಿಎಫ್ ಇತ್ಯಾದಿ ಸೌಲಭ್ಯ ಇದೆ. ಇದಲ್ಲದೆ ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯಲ್ಲಿ 900 ಅಡಿ ಖಾಲಿ ರೆವಿನ್ಯೂ ನಿವೇಶನ ಇದೆ. ವಿವಾಹಿತ ಮಗ ಹಾಗೂ ಸೊಸೆ ಇದ್ದು ಇವರು ಸಾಫ್ಟ್‌ವೇರ್ ಕಂಪನಿ ಉದ್ಯೋಗಿಗಳು. ಒಬ್ಬಳು ಮೊಮ್ಮಗಳು ಇದ್ದಾಳೆ. ಅವಿವಾಹಿತ ಮಗಳು ಸರ್ಕಾರಿ ಸಂಸ್ಥೆಯಲ್ಲಿ ಉದ್ಯೋ-ಗಿಯಾಗಿದ್ದು ಪರ್ಮನೆಂಟ್ ಆಗಿಲ್ಲ. ಈ ಸಂದರ್ಭದಲ್ಲಿ ನಿವೃತ್ತಿಯ ನಂತರ ಜೀವನವನ್ನು ಸ್ವಾಭಿಮಾನದಿಂದ ಕಳೆಯುವುದು ಹೇಗೆ ಎಂದು ಚಿಂತೆ ಆಗಿದೆ.

ಉತ್ತರ: ನಿವೃತ್ತಿಯ ನಂತರ ಹಿರಿಯ ನಾಗರಿಕರು ತಮ್ಮ ಹಣಕಾಸಿಗೆ ಸಂಬಂಧಿಸಿದ ವಿಚಾರಗಳನ್ನು ಜಾಗರೂಕತೆಯಿಂದ ನಿಭಾಯಿಸಬೇಕಾಗುತ್ತದೆ. ನಿವೃತ್ತಿಗೂ ಮೊದಲು ಯಾವುದೇ ಯೋಜನೆಯನ್ನು ಮಾಡಿರದಿದ್ದರೂ, ನಿವೃತ್ತಿಯ ಸಂದರ್ಭದಲ್ಲಿ ಬರುವ ಒಂದೇ ಕಂತಿನ ಅನೇಕ ಮೂಲಗಳ ಗಳಿಕೆಯ ಸಮರ್ಪಕ ಹೂಡಿಕೆ ಮಾಡುವುದರಿಂದ ಒಂದಷ್ಟು ಆರ್ಥಿಕ ಬಲ ತುಂಬುವಲ್ಲಿ ನೆರವಾದೀತು. ಹೀಗಾಗಿ ನಿಮ್ಮ ನಿವೃತ್ತಿಯ ಸಂದರ್ಭದಲ್ಲಿ ನಿಮಗೆ ಆರ್ಥಿಕ ಭದ್ರತೆ ಒದಗಿಸಲು ನೆರವಾಗುವ ಕೆಲವು ಪ್ರಮುಖ ಮಾರ್ಗಗಳು ಇಲ್ಲಿವೆ.

1. ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್): ಹಿರಿಯ ನಾಗರಿಕರ ಉಳಿತಾಯ ಯೋಜನೆ ಕೇಂದ್ರ ಸರ್ಕಾರದ ಬೆಂಬಲಿತ ಉಳಿತಾಯ ಯೋಜನೆ. ಇದು ಶೂನ್ಯ ಅಪಾಯಗಳನ್ನು ಹೊಂದಿರುವ ಹೂಡಿಕೆಯಾಗಿದೆ. 60 ವರ್ಷಕ್ಕಿಂತ ಮೇಲ್ಪಟ್ಟವರು ಇದರಲ್ಲಿ ಹೂಡಿಕೆ ಮಾಡಬಹುದು. ಈ ಹೂಡಿಕೆಯ ಸಂಪೂರ್ಣ ಅವಧಿಯಲ್ಲಿ ಖಚಿತವಾದ ಬಡ್ಡಿ ಆದಾಯದ ಭದ್ರತೆ ಇರುತ್ತದೆ. ಇದರಲ್ಲಿ ಗರಿಷ್ಠ ಹೂಡಿಕೆ ಮೊತ್ತ ₹30 ಲಕ್ಷ, ಮತ್ತು ಕನಿಷ್ಠ ₹1,000 ಹೂಡಿಕೆ ಮಾಡಿ ಖಾತೆ ತೆರೆಯಬಹುದು. ಖಾತೆಯನ್ನು ವೈಯಕ್ತಿಕವಾಗಿ ಅಥವಾ ಜಂಟಿಯಾಗಿ ತೆರೆಯಬಹುದು. ಇದರ ಮೇಲೆ ಸುಮಾರು ಶೇ 8.2 ರ ಬಡ್ಡಿ ಸಿಗುತ್ತದೆ. ಇದನ್ನು ಪ್ರತಿ ಏಪ್ರಿಲ್, ಜುಲೈ, ಅಕ್ಟೋಬರ್ ಮತ್ತು ಜನವರಿಯ ತಿಂಗಳಲ್ಲಿ ಪಾವತಿಸಲಾಗುತ್ತದೆ. ಈ ಯೋಜನೆ ಹಿರಿಯ ನಾಗರಿಕರಿಗೆ ನಿಯಮಿತ ಬಡ್ಡಿ ಆದಾಯವನ್ನು ಒದಗಿಸುವಲ್ಲಿ ನೆರವಾಗುತ್ತದೆ. ಇದರ ಒಟ್ಟು ಅವಧಿ 5 ವರ್ಷ. ನೀವು ಅದನ್ನು ಇನ್ನೂ 3 ವರ್ಷಗಳವರೆಗೂ ವಿಸ್ತರಿಸಬಹುದು.

೨. ಹೈಬ್ರಿಡ್ ಮ್ಯೂಚುಯಲ್ ಫಂಡ್‌ಗಳು: ನಿವೃತ್ತಿಯ ನಂತರ, ತುಂಬಾ ಆದಾಯ ನೀಡುವ ಹಾಗೂ ಹೆಚ್ಚು ಆರ್ಥಿಕ ಅಪಾಯ ಹೊಂದಿದ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಸಮಂಜಸವಲ್ಲ. ಹೀಗಾಗಿ ಬಂಡವಾಳದ ಸುರಕ್ಷತೆಯ ದೃಷ್ಟಿಯಲ್ಲಿ ಹೈಬ್ರಿಡ್ ಮ್ಯೂಚುಯಲ್ ಫಂಡ್‌ಗಳಲ್ಲಿ ಒಂದಷ್ಟು ಹೂಡಿಕೆ ಮಾಡಬಹುದು. ಇವು 3-5 ವರ್ಷದ ಅವಧಿಯಲ್ಲಿ ಆಯ್ಕೆ ಮಾಡಿದ ಉತ್ಪನ್ನಕ್ಕೆ ಅನುಸಾರವಾಗಿ ಬ್ಯಾಂಕ್ ಬಡ್ಡಿಗಿಂತ ಅಧಿಕ ಆದಾಯ ನೀಡವಲ್ಲದು. ಇಲ್ಲಿನ ಹೂಡಿಕೆಗೆ ಕಾಲ ಮಿತಿ ಇಲ್ಲದಿದ್ದರೂ ಈ ಮೊತ್ತವನ್ನು ನಿಮ್ಮ ತುರ್ತು ಅಗತ್ಯಕ್ಕೆ ತಕ್ಕಂತೆ ಹಿಂಪಡೆಯಬಹುದು. ಹೂಡಿಕೆಯನ್ನು ಹಂತ ಹಂತಗಳಲ್ಲೂ ಮುಂದುವರಿಸಬಹುದು.

3. ಸಾಲದ ಪೂರ್ವ ಪಾವತಿ: ನೀವು ಪ್ರಶ್ನೆಯಲ್ಲಿ ತಿಳಿಸಿದಂತೆ ಪ್ರತಿ ತಿಂಗಳೂ ₹ 30 ಸಾವಿರವನ್ನು ಮನೆಯ ಸಾಲದ ಕಂತಿಗೆ ಪಾವತಿ ಮಾಡುತ್ತಿದ್ದೀರಿ. ಉಳಿದಿರುವ ಸಾಲದ ಒಂದಷ್ಟು ಪ್ರಮಾಣವನ್ನು ಬಂದಿರುವ ಹಣದಲ್ಲಿ ನೀವು ಪೂರ್ವ ಪಾವತಿಸಿ. ಸಾಲದ ಬಾಕಿ ಮೊತ್ತ ತಗ್ಗಿದಂತೆ ನಿಮ್ಮ ಬಡ್ಡಿ ಮೊತ್ತ ಕಡಿಮೆಯಾಗುತ್ತದೆ. ಇಎಂಐ ಅವಧಿಯೂ ಕಡಿಮೆಯಾಗುತ್ತದೆ. ಇದರಿಂದ ನಿಮಗೆ ಮಾಸಿಕ ಉಳಿಕೆಯಲ್ಲಿ ಹೆಚ್ಚಿನ ಮೊತ್ತ ಲಭಿಸುತ್ತದೆ.

4. ಅಂಚೆ ಕಛೇರಿಯ ಮಾಸಿಕ ಆದಾಯ ಠೇವಣಿ: ಇದರಲ್ಲಿ ₹ 9 ಲಕ್ಷದ ತನಕ ನೀವು ಹಣವನ್ನು ಹೂಡಿಕೆ ಮಾಡಬಹುದು. ಶೇ 7.4 ರ ವಾರ್ಷಿಕ ಬಡ್ಡಿ ಆದಾಯ ಇದರಲ್ಲಿ ಲಭಿಸುತ್ತದೆ. ಇದೂ ಕೂಡಾ 5 ವರ್ಷದ ಅವಧಿಯ ಹೂಡಿಕೆಯಾಗಿದೆ.

ಸತೀಶ್ ಶಂಕರ್

● **ಪ್ರಶ್ನೆ:** ನನ್ನ ಹೆಸರಲ್ಲಿ ಒಂದು ಮನೆ ಇದ್ದು ಇದು ಉಯಿಲಿನ ರೂಪದಲ್ಲಿ ನನಗೆ ಬಂದಿದೆ. ನಾನು ಇದನ್ನು ₹ 2 ಕೋಟಿಗೆ ಮಾರಾಟ ಮಾಡಬೇ-ಕೆಂದಿದ್ದೇನೆ. ಇದು ದೀರ್ಘಾವಧಿ ಬಂಡವಾಳ ಹೂಡಿಕೆಯಾಗಿದ್ದು ಇದರ ಸರ್ಕಾರಿ ನಿಗದಿತ ಮೌಲ್ಯ ₹30 ಲಕ್ಷ. ನನ್ನ ಪ್ರಶ್ನೆ ಏನೆಂದರೆ, ಈ ಆಸ್ತಿ ನನ್ನ ಹೆಸರಲ್ಲಿ ಮೊದಲ ಹಂತದಲ್ಲಿ ಖರೀದಿಸದ ಕಾರಣ ಸಂಪೂರ್ಣ ₹ 2 ಕೋಟಿ ಮೌಲ್ಯವೂ ತೆರಿ-ಗೆಗೊಳಪಡುತ್ತದೆಯೆ? ಈ ಬಗ್ಗೆ ತೆರಿಗೆ ವಿನಾಯಿತಿ ಪಡೆಯುವುದು ಹೇಗೆ ?

ಇದಲ್ಲದೆ, ನನ್ನ ಹೆಸರಲ್ಲಿ ಕೆಲವು ಷೇರುಗಳಿವೆ. ನಾನು ಇವನ್ನು ನನ್ನ ಸಹೋದರರಿಗೆ ವರ್ಗಾಯಿಸುವ ಯೋಚನೆ ಮಾಡಿದ್ದೇನೆ. ಈ ವರ್ಗಾವಣೆಗೆ ತೆರಿಗೆ ಇರುತ್ತದೆಯೆ?

ಉತ್ತರ: ನೀವು ಉಲ್ಲೇಖಿಸುತ್ತಿರುವ ಆಸ್ತಿಯ ಪ್ರಸ್ತುತ ಮಾಲೀಕತ್ವ ಈಗ ನಿಮ್ಮ ಕೈಯಲ್ಲಿದೆ. ಯಾವುದೇ ಆಸ್ತಿಯನ್ನು ಉಡುಗೊರೆಯಾಗಿ, ಉಯಿಲಿನ ರೂಪದಲ್ಲಿ ಅಥವಾ ಪಿತ್ರಾ-ರ್ಜಿತವಾಗಿ ಹಸ್ತಾಂತರಗೊಂಡಾಗ ಅದರ ಮೂಲ ವಾರಾಸುದಾರರು ಕೊಂಡುಕೊಂಡ ಸಂದರ್ಭದಿಂದಲೇ ಪ್ರಸ್ತುತ ಮಾಲೀಕರಾದವರ ಖರೀದಿ ದಿನಾಂಕ ಪರಿಗಣಿತವಾಗುತ್ತದೆ. ಹೀಗಾಗಿ ನಿಮ್ಮ ಭೂಮಿಯ ವಿಚಾರದಲ್ಲೂ, ನೀವು ನಿಜವಾಗಿ ಆ ಭೂಮಿಗೆ ಯಾವುದೇ ಮೌಲ್ಯ ತೆರದಿದ್ದರೂ, ಆದಾಯ ತೆರಿಗೆಯ ಸೆಕ್ಷನ್ 49(1) ರ ಪ್ರಕಾರ ಅದನ್ನು ಕೊಳ್ಳುವ ಸಲುವಾಗಿ ನಿಮ್ಮ ಹಿಂದಿನ ಭೂಮಾಲೀಕರು ಅದಕ್ಕೆ ಪಾವತಿಸಿದ ಮೌಲ್ಯವನ್ನೇ ನಿಮ್ಮ ಅಸಲು ಮೊತ್ತವೆಂದು ಪರಿಗಣಿಸಲಾಗುತ್ತ-ದೆ. ಹೀಗಾಗಿ ಇಲ್ಲಿ ನೀವು ಉಯಿಲಿನ ರೂಪದಲ್ಲಿ ಉಚಿತವಾಗಿ ಪಡೆದಿದ್ದರೂ, ಅದರ ನಿಜವಾದ ಮೌಲ್ಯವನ್ನು ಶೂನ್ಯವೆಂದು ಪರಿಗಣಿಸಿ ಗಳಿಸಿದ ಸಂಪೂರ್ಣ ಮೊತ್ತಕ್ಕೆ ತೆರಿಗೆ ಕಟ್ಟುವ ಪ್ರಮೇಯ ಬರುವುದಿಲ್ಲ. ನಿಮ್ಮ ಹಿಂದಿನ ಮಾಲೀಕರ ದಾಖಲೆಗಳ ಅನ್ವಯ ಇರುವ ಮೊತ್ತ ಹಾಗೂ ಅದಕ್ಕೆ ಅನ್ವಯಿಸುವ ಹಣದುಬ್ಬರ ಮೌಲ್ಯ ಪರಿಗಣಿಸಿ ಆಸ್ತಿಯ ಪ್ರಸ್ತುತ ಅಂದಾಜು ಅಸಲು ಮೊತ್ತ ಲೆಕ್ಕ ಹಾಕಬೇಕು. ಉಳಿದ ಲಾಭದ ಮೊತ್ತಕ್ಕಷ್ಟೇ ತೆರಿಗೆ ಇರುತ್ತದೆ. ಈ ವಿಚಾರವಾಗಿ ನೀವು ಸಂಪೂರ್ಣ ದಾಖಲೆಗಳೊಂದಿಗೆ ಹೆಚ್ಚಿನ ಸಲಹೆ ಪಡೆಯುವುದು ಸೂಕ್ತ.

ಇನ್ನು ನೀವು ಷೇರುಗಳನ್ನು ನಿಮ್ಮ ತಮ್ಮನಿಗೆ ವರ್ಗಾಯಿಸುವ ಬಗ್ಗೆ ಅನ್ವಯವಾಗುವ ತೆರಿಗೆಯ ಬಗ್ಗೆ ವಿಚಾರಿಸಿದ್ದೀರಿ. ಸಮೀಪದ ಬಂಧುಗಳ ನಡುವೆ ಏರ್ಪಡುವ ಉಡುಗೊರೆ (ಗಿಫ್ಟ್) ಇತ್ಯಾದಿಗಳಿಗೆ ಆದಾಯ ತೆರಿಗೆ ಕಾಯ್ದೆಯ ಪ್ರಕಾರ ತೆರಿಗೆ ಇರುವುದಿಲ್ಲ. ಅದಕ್ಕೆ ಅಗತ್ಯವಿರುವ ದಾಖಲಾತಿಗ-ಳನ್ನು ಬರೆಯಿಸಿ ಇಟ್ಟುಕೊಳ್ಳಿ. ಅದರ ಅಸಲು ಮೌಲ್ಯ ನೀವು ಪಾವತಿಸಿದ ಮೊತ್ತವಾಗಿರುತ್ತದೆ. ಅವರು ಮುಂದೆ ಅವರ ಖಾತೆಯಿಂದ ಅನ್ಯರಿಗೆ ಮಾರಾಟ ಮಾಡಿದಾಗ ತೆರಿಗೆ ಅನ್ವಯವಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	15000-27500
ಹಳತು	46000-48500
ಕಾರ್ಕಳ	
ಹೊಸತು	25000-36500
ಹಳತು	30000-48500
ಪುತ್ತೂರು	
ಕೋಕ	11000-25000
ಹೊಸತು	34000-43000
ಸಾಗರ	
ಬಿಳಿಗೋಟು	32299-32786
ಚಾಲಿ	36599-39359
ಕೋಕ	23989-34406
ರಾಶಿ	45269-46899
ಸಿಪ್ಪೆಗೋಟು	20525-20869
ಶಿವಮೊಗ್ಗ	
ಬೆಟ್ಟೆ	47089-53409
ಗೊರಬಾಲು	29515-36851
ಹೊಸತು	45069-46799
ರಾಶಿ	45022-47719
ಸರಕು	59400-81600
ಸಿದ್ದಾಪುರ	
ಬಿಳಿಗೋಟು	31689-35500
ಚಾಲಿ	37099-40209
ಕೋಕ	29911-34055
ಕೆಂಪುಗೋಟು	30869-33669
ರಾಶಿ	42069-46089
ತಟ್ಟಿಬೆಟ್ಟೆ	36109-40019
ಶಿರಸಿ	
ಬೆಟ್ಟೆ	38719-44618
ಬಿಳಿಗೋಟು	32329-35555
ಚಾಲಿ	37609-41488
ಕೆಂಪುಗೋಟು	29628-34699
ರಾಶಿ	43808-46699
ಯಲ್ಲಾಪುರ	
ಬಿಳಿಗೋಟು	26699-35570
ಚಾಲಿ	36280-40690
ಕೋಕ	19000-30099
ಕೆಂಪುಗೋಟು	32399-34299
ರಾಶಿ	45040-53899
ತಟ್ಟೆಬೆಟ್ಟೆ	39500-44060

ಟಾಟಾ ಮೋಟರ್ಸ್‌ನಿಂದ ಹೊಸ ರೂಪದಲ್ಲಿ ಸಫಾರಿ, ಹ್ಯಾರಿಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ದೇಶದ ಮಾರುಕಟ್ಟೆಗೆ ಹೊಸ ರೂಪದಲ್ಲಿ ಸಫಾರಿ,ಹ್ಯಾರಿಯರ್ ಎಸ್‌ಯುವಿಗಳನ್ನು ಬಿಡುಗಡೆ ಮಾಡಿದೆ. ಪರಿಚಯಾತ್ಮಕ ಬೆಲೆ ಕ್ರಮವಾಗಿ ₹16.19 ಲಕ್ಷ ಮತ್ತು ₹ 15.49 ಇದೆ.

ಹೊಸ ವಿನ್ಯಾಸ ಮತ್ತು ಆಧುನಿಕ ತಂತ್ರಜ್ಞಾನಗಳೊಂದಿಗೆ ಈ ಎರಡೂ ಮಾದರಿಗಳು ಚಾಲನಾ ಅನುಭವವನ್ನು ಇನ್ನಷ್ಟು ಸುಧಾರಿಸಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಎರಡೂ ಮಾದರಿಗಳು ಜಿಎನ್‌ಸಿಎಪಿ 5 ಸ್ಟಾರ್ ರೇಟಿಂಗ್ ಪಡೆದುಕೊಂಡಿವೆ. 7 ಏರ್‌ಬ್ಯಾಗ್, 31.24 ಸಿಎಂ ಹರ್ಮಾನ್ ಟಚ್‌ಸ್ಕ್ರೀನ್ ಎನ್ಫೊಟೇನ್ಮೆಂಟ್ ಸಿಸ್ಟಂ ಸೇರಿದಂತೆ ಇನ್ನೂ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿವೆ ಎಂದು ಕಂಪನಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಹಾಕಿ: ರಾಜ್ಯ ತಂಡಗಳ ಶುಭಾರಂಭ

ಬೆಂಗಳೂರು: ಕರ್ನಾಟಕದ ಬಾಲಕರ ಮತ್ತು ಬಾಲಕಿಯರ ತಂಡಗಳು ಚೆನ್ನೈನಲ್ಲಿ ನಡೆಯುತ್ತಿರುವ ಹಾಕಿ ಇಂಡಿಯಾ ದಕ್ಷಿಣ ವಲಯ ಸಬ್ ಜೂನಿಯರ್ ಹಾಕಿ ಚಾಂಪಿಯನ್‌ಷಿ-ಪ್‌ನಲ್ಲಿ ಶುಭಾರಂಭ ಮಾಡಿದವು.

ಮಂಗಳವಾರ ನಡೆದ ಬಾಲಕರ ವಿಭಾಗದ ಪಂದ್ಯದಲ್ಲಿ ಕರ್ನಾಟಕ 8-1 ರಿಂದ ಪುದುಚೇರಿ ತಂಡವನ್ನು ಮಣಿಸಿತು. ಜಿ. ಸುಪ್ರೀತ್ (12, 14, 18, 30 ಮತ್ತು 52ನೇ ನಿ.) ಐದು ಗೋಲುಗಳನ್ನು ಗಳಿಸಿ ಗಮನ ಸೆಳೆದರು. ಇತರ ಗೋಲುಗಳನ್ನು ಕಾರ್ಯಪ್ಪ ಸೋಹನ್ (1), ಎಂ.ನಿಶಾಂತ್ (57) ಮತ್ತು ಕೆ.ರೋಹಿತ್ (59) ತಂದಿತ್ತರು.

ಬಾಲಕಿಯರು 12-0 ಗೋಲುಗಳಿಂದ ಪುದುಚೇರಿ ವಿರುದ್ಧ ಗೆದ್ದರು. ವೈಷ್ಣವಿ (25, 26, 27, 36 ಮತ್ತು 51ನೇ ನಿ.) ಐದು ಗೋಲುಗಳನ್ನು ಗಳಿಸಿ ಮಿಂಚಿದರು. ಲಕ್ಷ್ಮಿ (4), ಪ್ರಣೀತಾ (7), ಸಿಂಚನಾರಾಜ್ (14), ಪ್ರತೀಕ್ಷಾ (28), ದೇಚಕ್ಕ (42, 47) ಮತ್ತು ಅಕ್ಷಿತಾ (45) ಅವರು ಇತರ ಗೋಲುಗಳನ್ನು ಹೊಡೆದರು.

ಫುಟ್‌ಬಾಲ್: ಡೆಕ್ಕನ್ ತಂಡಕ್ಕೆ ಗೆಲುವು

ಬೆಂಗಳೂರು: ಎಫ್‌ಸಿ ಡೆಕ್ಕನ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2-1 ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಡೆಕ್ಕನ್ ಪರವಾಗಿ ಎಂ. ನಿಶಾಲ್ (37ನೇ), ಎನ್. ರಾಕೇಶ್ ಸಿಂಗ್ (90 + 7ನೇ) ತಲಾ ಒಂದು ಗೋಲು ಗಳಿಸಿದರು. ಎಂಎಫ್‌ಎಆರ್ ತಂಡದ ಪರ ಲಾಲ್ ಲನ್ಮುಕಿಮಾ (90 + 5ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ತಂಡವು ಬೆಂಗಳೂರು ಇಂಡಿಪೆಂಡೆಂಟ್ಸ್ ಜತೆ ಗೋಲುರಹಿತವಾಗಿ ಡ್ರಾ ಸಾಧಿಸಿತು.

ಬಸವನಗುಡಿ ಈಜುಪಟುಗಳ ಪಾರಮ್ಯ

ದಸರಾ ರಾಜ್ಯ ಮಟ್ಟದ ಕ್ರೀಡಾಕೂಟ: ನೈಶಾ ಶೆಟ್ಟಿಗೆ ನಾಲ್ಕು ಬಂಗಾರದ ಪದಕ

● ಆರ್. ಜಿತೇಂದ್ರ

ಮೈಸೂರು: ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದ (ಬಿಎಸಿ) ಈಜುಪಟುಗಳು ಸಿ.ಎಂ. ಕಪ್ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟದ ಈಜು ಸ್ಪರ್ಧೆಗಳಲ್ಲಿ ಪಾರಮ್ಯ ಮೆರೆದರು.

ಕೂಟದ ಎರಡನೇ ದಿನವಾದ ಮಂಗಳವಾರ ಚಾಮುಂಡಿ ವಿಹಾರ ಕ್ರೀಡಾ ಸಮುಚ್ಚಯದ ಈಜುಕೊಳದಲ್ಲಿ ನಡೆದ ಪುರುಷರ ಹಾಗೂ ಮಹಿಳೆಯರ ವಿಭಾಗದ ಸ್ಪರ್ಧೆಗಳಲ್ಲಿ ಪದಕಗಳ ಬೇಟೆಯಾಡಿದರು. ಅವರಿಗೆ ಡಾಲ್ಫಿನ್ ಕೇಂದ್ರದ ಈಜುಪಟುಗಳು ಪೈಪೋಟಿ ಒಡ್ಡಿದರು.

ಮಹಿಳೆಯರ ವಿಭಾಗದಲ್ಲಿ ಡಾಲ್ಫಿನ್ ಈಜು ಕೇಂದ್ರದ ನೈಶಾ ಶೆಟ್ಟಿ 100 ಮೀ ಬ್ಯಾಕ್‌ಸ್ಟ್ರೋಕ್, 100 ಮೀ. ಬಟರ್‌ಫ್ಲೈ, 100 ಮೀ. ಫ್ರೀ ಸ್ಟೈಲ್ ಹಾಗೂ 200 ಮೀ. ಬ್ಯಾಕ್‌ಸ್ಟ್ರೋಕ್ ಸೇರಿದಂತೆ ಒಟ್ಟು 4 ಚಿನ್ನದ ಪದಕಗಳ ಬೇಟೆಯಾಡಿದರು. ಮೈಸೂರಿನ ಹುಡುಗಿ ಎಸ್. ತಾನ್ಯಾ 50 ಮೀ ಬ್ರೆಸ್ಟ್‌ಸ್ಟ್ರೋಕ್ ಹಾಗೂ 100 ಮೀ ಫ್ರೀಸ್ಟೈಲ್‌ನಲ್ಲಿ ಬಂಗಾರ ಗೆಲ್ಲುವ ಮೂಲಕ ಸ್ಪರ್ಧೆ ಒಡ್ಡಿದರು. ಪುರುಷರ ವಿಭಾಗದಲ್ಲಿ ಡಿ.ಎಸ್. ಪೃಥ್ವಿಕ್, ಸಾಹಿಲ್ ದಲಾಲ್ ಹಾಗೂ ಧೋನಿಶ್ ತಲಾ ಎರಡು ಬಂಗಾರಕ್ಕೆ ಕೊರಳೊಡ್ಡಿದರು.

ಇದೇ ವೇಳೆ ಗುಂಪು ವಿಭಾಗದಲ್ಲಿ ಸ್ಪರ್ಧೆಗಳು ನಡೆದವು.

2ನೇ ದಿನದ ಫಲಿತಾಂಶ: ಈಜು: ಪುರುಷರು: 50 ಮೀ. ಬ್ರೆಸ್ಟ್‌ಸ್ಟ್ರೋ-ಕ್: ಡಿ.ಎಸ್. ಪೃಥ್ವಿಕ್-1, ಸೂರ್ಯ ಜೋಯಪ್ಪ-2, ಶ್ರೇಯಸ್ ಮಂಜುನಾಥ್-3 (ಎಲ್ಲರೂ ಬಸವನಗುಡಿ ಈಜು ಕೇಂದ್ರ). ಕಾಲ: 31.32 ಸೆ; 100 ಮೀ. ಬ್ಯಾಕ್‌ಸ್ಟ್ರೋಕ್: ಎಸ್. ವಿಶ್ವನಾಥನ್ (ಪಿ.ಎಂ. ಈಜು ಕೇಂದ್ರ)-1, ಧೋನೀಶ್ (ವಿಜಯನಗರ ಈಜು ಕೇಂದ್ರ)-2, ಎನ್. ಹೇಮನ್ (ಪಿಇಟಿ ಈಜು ಕೇಂದ್ರ)-3. ಕಾಲ: 1ನಿ. 06.78 ಸೆ.; 100 ಮೀ. ಬಟರ್‌ಫ್ಲೈ: ಎಂ. ಪೃಥ್ವಿ-1, ಮ್ಯಾಥ್ಯು ಕೌಶಿ-2, ಶ್ರೇಯಸ್ ವೆಂಕಟೇಶ್-3 (ಎಲ್ಲರೂ ಬಸವನಗುಡಿ ಈಜು ಕೇಂದ್ರದವರು). ಕಾಲ: 59.28 ಸೆ; 100 ಮೀ. ಬ್ರೆಸ್ಟ್‌ಸ್ಟ್ರೋಕ್: ಡಿ.ಎಸ್.

ಮಹಿಳೆಯರ ಈಜು ವಿಭಾಗದಲ್ಲಿ ಬಂಗಾರದ ಪದಕ ಗೆದ್ದ ಡಾಲ್ಫಿನ್ ಈಜು ಕ್ಲಬ್‌ನ ಎಸ್‌. ತಾನ್ಯಾ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ್‌. ಟಿ.

ಪೃಥ್ವಿಕ್-1, ಸೂರ್ಯ ಜೋಯಪ್ಪ-2, ಶ್ರೇಯಸ್ ಮಂಜುನಾಥ್-3. (ಎಲ್ಲರೂ ಬಸವನಗುಡಿ ಈಜು ಕೇಂದ್ರದವರು). ಕಾಲ: 1ನಿ.09.86 ಸೆ; 100 ಮೀ. ಫ್ರೀ ಸ್ಟೈಲ್: ಎಂ. ಪೃಥ್ವಿ (ಬಸವನಗುಡಿ ಕೇಂದ್ರ)-1, ಎಸ್. ವಿಶ್ವನಾಥನ್ (ಪಿ.ಎಂ. ಈಜು ಕೇಂದ್ರ)-2, ಧ್ಯಾನ್ ಬಾಲಕೃಷ್ಣ (ಬಸವನಗುಡಿ ಕೇಂದ್ರ)-3. ಕಾಲ: 55.77 ಸೆ.

200 ಮೀ. ಮೆಡ್ಲೆ: ಸಾಹಿಲ್ ದಲಾಲ್-1, ಸೂರ್ಯ ಜೋಯಪ್ಪ-2, ಡಿ.ಎಸ್. ಪೃಥ್ವಿಕ್-3. (ಎಲ್ಲರೂ ಬಸವನಗುಡಿ ಈಜು ಕೇಂದ್ರದವರು). ಕಾಲ: 2ನಿ. 21.05 ಸೆ; 200 ಬ್ಯಾಕ್‌ಸ್ಟ್ರೋಕ್: ಧ್ಯಾನ್ ಬಾಲಕೃಷ್ಣ (ಬಸವನಗುಡಿ ಕೇಂದ್ರ)-1, ಲಿತೀಶ್ ಗೌಡ (ಬಸವನಗುಡಿ ಕೇಂದ್ರ)-2, ಎನ್. ಹೇಮನ್ (ಪಿಇಟಿ ಕೇಂದ್ರ)-3. ಕಾಲ: 2ನಿ. 15.90 ಸೆ.; 400 ಮೀ. ಫ್ರೀ ಸ್ಟೈಲ್: ಎನ್. ಧೋನೀಶ್ (ವಿಜಯನಗರ ಈಜು ಕೇಂದ್ರ)-1, ಎಚ್.ಎಂ. ಪ್ರಶಾಂತ್ (ಬಸವನಗುಡಿ ಕೇಂದ್ರ)-2, ಸಾಹಿಲ್ ದಲಾಲ್ (ಬಸವನಗುಡಿ ಕೇಂದ್ರ)-3. ಕಾಲ: 4ನಿ. 32.24 ಸೆ; 1500 ಮೀ. ಫ್ರೀಸ್ಟೈಲ್: ಎಚ್.ಎಂ. ಪ್ರಶಾಂತ್ (ಬಸವನಗುಡಿ ಈಜು ಕೇಂದ್ರ)-1, ಪಾರ್ಥ ಶೆಟ್ಟಿ (ಪಿಇಟಿ ಈಜು ಕೇಂದ್ರ)-2, ನಮನ್ ಗೌಡ (ಪಿಇಟಿ ಈಜು ಕೇಂದ್ರ)-3. ಕಾಲ: 18 ನಿ, 10.79 ಸೆ; 4X200 ಫ್ರೀಸ್ಟೈಲ್: ಬಸವನಗುಡಿ ಈಜು ಕೇಂದ್ರ-1, ಬಸವನಗುಡಿ ಈಜು ಕೇಂದ್ರ-2, ಪಿಇಟಿ ಈಜು ಕೇಂದ್ರ-3. ಕಾಲ: 8ನಿ. 29.38 ಸೆ.

ಆರ್ಚರಿ: ಇಂಡಿಯನ್ ರೌಂಡ್: ಮೌನೇಶ್ ಕುಮಾರ್-1, ಮೌನೇಶ್-2; ರಿಕರ್ವ್; ರಕ್ಷಕ್ ಪಾಟೀಲ-1, ಯಶವಂತ ನಾಯಕ್-2; ಕಾಂಪೌಂಡ್ ರೌಂಡ್: ಶ್ರವಣ್ ಸಾಲಿ-ಯಾನ್-1,ಆರ್. ಪ್ರವೀಣ್‌ಕುಮಾರ್-2.

ಶೂಟಿಂಗ್: 50 ಮೀ ರೈಫಲ್: ಮೊಹಮ್ಮದ್ ರಯಾನ್-1, ರಾಕೇಶ್ ಮನ್‌ಪತ್-2;

ವೇಟ್‌ಲಿಫ್ಟಿಂಗ್: 55 ಕೆ.ಜಿ: ಕೆ.ಎಜಿ-ಲರಸನ್-1, ಬಿ.ಆರ್. ಮನೋಜ್-2; 61 ಕೆ.ಜಿ. ಒಳಗಿನವರು: ಸುಬ್ರಹ್ಮಣ್ಯ-1, ನಾಗರಾಜು-2; 67 ಕೆ.ಜಿ. ಒಳಗಿನವರು; ತಿಪ್ಪಣ್ಣ ಲಕ್ಕಣ್ಣವರ-1, ಚಿರಂಜೀವಿ-2. 73 ಕೆ.ಜಿ. ಒಳಗಿನವರು: ಪ್ರಜ್ವಲ್-1, ಸಂಕೇತ್-2.

ಮಹಿಳೆಯರು: 50 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್. ತಾನ್ಯ (ಡಾಲ್ಫಿನ್ ಈಜುಕೇಂದ್ರ)-1, ಜಗಶ್ರೀ ಪೂಜಾ (ಬಸವನಗುಡಿ ಈಜುಕೇಂದ್ರ)-2, ವಿ. ಹಿತೈಷಿ (ವಿಜಯನಗರ ಈಜುಕೇಂದ್ರ)-3. ಕಾಲ: 36.81 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ ಶೆಟ್ಟಿ (ಡಾಲ್ಫಿನ್ ಈಜುಕೇಂದ್ರ)-1, ಸಿದ್ಧಿ ಗೌತಮ್ ಶಾ (ಡಾಲ್ಫಿನ್ ಈಜುಕೇಂದ್ರ)-2, ಕೆ.ಆರ್. ಶ್ರುತಿ (ಗ್ಲೋಬಲ್ ಈಜು ಕೇಂದ್ರ)-3. ಕಾಲ: 1ನಿ, 11.07 ಸೆ.; 100 ಮೀ. ಬಟರ್‌ಫ್ಲೈ: ನೈಶಾ ಶೆಟ್ಟಿ (ಡಾಲ್ಫಿನ್ ಕೇಂದ್ರ)-1, ರಿಷಿಕಾ ಮಾಂಗ್ಲೆ (ಬಸವನಗುಡಿ ಕೇಂದ್ರ)-2, ತನಿಶಾ ವಿನಯ್ (ಬಸವನಗುಡಿ ಕೇಂದ್ರ)-3. ಕಾಲ: 1ನಿ. 06.72 ಸೆ.; 200 ಮೀ. ಮೆಡ್ಲೆ: ವಿಹಿತಾ ನಾರಾಯಣ (ಬಸವನಗುಡಿ ಕೇಂದ್ರ)-1, ಎಸ್. ತಾನ್ಯ (ಡಾಲ್ಫಿನ್ ಕೇಂದ್ರ)-2, ವಿ. ಹಿತೈಷಿ (ವಿಜಯನಗರ ಕೇಂದ್ರ)-3. ಕಾಲ: 2ನಿ, 30.81 ಸೆ. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್. ತಾನ್ಯ (ಡಾಲ್ಫಿನ್ ಕೇಂದ್ರ)-1, ವಿಹಿತಾ ನಯನ (ಬಸವನಗುಡಿ ಕೇಂದ್ರ)-2, ವಿ. ಹಿತೈಷಿ (ವಿಜಯನಗರ ಕೇಂದ್ರ)-3. ಕಾಲ: 1ನಿ. 17.92 ಸೆ.; 100 ಮೀ. ಫ್ರೀಸ್ಟೈಲ್: ನೈಶಾ ಶೆಟ್ಟಿ (ಡಾಲ್ಫಿನ್ ಕೇಂದ್ರ)-1, ಲಕ್ಷ್ಮಿ ತ್ರಿವಿಕ್ರಂ ನಿಕಂ (ಬಸವನಗುಡಿ ಕೇಂದ್ರ)-2, ಜಗಶ್ರೀ ಪೂಜಾ (ಬಸವನಗುಡಿ ಕೇಂದ್ರ)-3. ಕಾಲ: 1ನಿ. 03.23 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ ಶೆಟ್ಟಿ (ಡಾಲ್ಫಿನ್ ಈಜುಕೇಂದ್ರ)-1, ಸಿದ್ಧಿ ಗೌತಮ್ ಶಾ (ಡಾಲ್ಫಿನ್ ಈಜು ಕೇಂದ್ರ)-2, ಕೆ.ಆರ್. ಶ್ರುತಿ (ಗ್ಲೋಬಲ್ ಈಜು ಕೇಂದ್ರ)-3. ಕಾಲ: 2ನಿ, 51.97 ಸೆ.; 400 ಮೀ. ಫ್ರೀ ಸ್ಟೈಲ್: ಅದಿತಿ ಮುಲ್ಯೆ-1, ಬಿ.ಎಸ್. ಜನ್ಯಾ-2, ತನಿಶಾ ವಿನಯ್-3 (ಎಲ್ಲರೂ ಬಸವನಗುಡಿ ಈಜು ಕೇಂದ್ರದವರು). ಕಾಲ: 4ನಿ. 43.81 ಸೆ.; 1500 ಮೀ. ಫ್ರೀಸ್ಟೈಲ್: ಎನ್. ಅದಿತಿ-1, ಬಿ.ಎಸ್. ಜನ್ಯಾ-2, ಆಶ್ರಾ ಸುಧೀರ್-3 (ಎಲ್ಲರೂ ಬಸವನಗುಡಿ ಈಜು ಕೇಂದ್ರ). ಕಾಲ: 18 ನಿ, 29.23 ಸೆ.: 4X200 ಫ್ರೀ ಸ್ಟೈಲ್: ಬಸವನಗುಡಿ ಈಜು ಕೇಂದ್ರ-1, ಬಸವನಗುಡಿ ಈಜು ಕೇಂದ್ರ-2, ಡಾಲ್ಫಿನ್ ಈಜು ಕೇಂದ್ರ-3.

ಆರ್ಚರಿ: ಇಂಡಿಯನ್ ರೌಂಡ್: ರೇಣುಕಾ-1, ಬಸಮ್ಮ-2; ರಿಕರ್ವ್: ಕರೀನಾ ಅಲೆಗ್ಸಾಂಡ್ರ-1, ಎಲ್. ಕೀರ್ತನಾ-2.

ಶೂಟಿಂಗ್: 50 ಮೀ ರೈಫಲ್: ಅನುಷ್ಕಾ ಠಾಕೂರ್-1, ಎಸ್. ಯಾಮಿನಿ-2.

ವೇಟ್‌ಲಿಫ್ಟಿಂಗ್: 49 ಕೆ.ಜಿ. ಒಳಗಿನವರು: ಜೀವಿತಾ-1, ಯಾಸ್ಮಿನ್ ಶೇಖ್-2. 55 ಕೆ.ಜಿ. ಒಳಗಿನವರು; ಯುಕ್ತಿಯಾ-1, ಪಿ. ಮೋನಿತಾ-2. 59 ಕೆ.ಜಿ. ಒಳಗಿನವರು- ಬಿ. ಅಶ್ವಿಕಾ-1, ಖುತಿಕಾ ಬಾಂಡಗಿ-2. 64 ಕೆ.ಜಿ. ಒಳಗಿನವರು; ಸ್ವರ್ಣ-1, ಅನುಷಾ-2. 71 ಕೆ.ಜಿ. ಒಳಗಿನವರು: ಎಂ. ತನುಷಾ-1, ಕೆ. ತೇಜಸ್ವಿನಿ ಪೂಜಾರಿ-2. 76 ಕೆ.ಜಿ. ಒಳಗಿನವರು- ನಿಷೆಲ್ ಡಿಸೋಜಾ-1, ಯಶಸ್ವಿನಿ ಭಂಡಾರಿ-2. 81 ಕೆ.ಜಿ. ಒಳಗಿನವರು: ರಿಕ್ತಾ ಕಿರಣ್-1, ನಿಶ್ಮಿತಾ ಪೂಜಾರಿ-2.

ಧಾರವಾಡ: ಅಂತರರಾಷ್ಟ್ರೀಯ ಟೆನಿಸ್ ಟೂರ್ನಿ

ಮನೀಷ್-ಸೂರಜ್ ಜೋಡಿಗೆ ಜಯ

● ಬಿ.ಜೆ.ಧನ್ಯಪ್ರಸಾದ್

ಧಾರವಾಡ: ಮನೀಷ್ ಗಣೇಶ್ ಮತ್ತು ಸೂರಜ್ ಆರ್. ಪ್ರಬೋಧ್ ಜೋಡಿ, ನಗರದ ಜಿಲ್ಲಾ ಲಾನ್ ಟೆನಿಸ್ ಅಂಗಣದಲ್ಲಿ ಮಂಗಳವಾರ ಆರಂಭವಾದ ಅಂತರರಾಷ್ಟ್ರೀಯ ಮಟ್ಟದ ಟೆನಿಸ್ ಟೂರ್ನಿಯ ಡಬಲ್ಸ್ ಮೊದಲ ಸುತ್ತಿನಲ್ಲಿ ಯು.ಅನಂತರಾಮು- ರಶೀನ್ ಸಾಮ್ಯುಯೆಲ್ ಜೋಡಿಯನ್ನು ಸೋಲಿಸಿ ಮುನ್ನಡೆಯಿತು.

ಮನಿಷ್ ಮತ್ತು ಸೂರಜ್ 7-6 (3), 6-3 ರಿಂದ ಗೆಲುವು ಸಾಧಿಸಿದರು. ಇತರ ಪಂದ್ಯಗಳಲ್ಲಿ ರಿಷಬ್ ಅಗರ್‌ವಾಲ್ ಮತ್ತು ಆಸ್ಟ್ರೇಲಿಯಾದ ಫ್ಲೋರೆಂಟ್ ಬಾಕ್ಸ್ ಜೋಡಿ 6-4, 5-7, 10-4 ರಿಂದ ಅದಿಲ್ ಕಲ್ಯಾಣಪುರ್ ಮತ್ತು ಜಪಾನ್‌ನ ರಾಯಿಟೊರೊ ಮ್ಯಾಟ್ಸುಮಾರ ಜೋಡಿಯನ್ನು; ಇಷಾಖ್ ಇಕ್ಬಾಲ್ ಮತ್ತು ಫೈಸಲ್ ಖಮರ್ ಜೋಡಿ 6-3, 6-7(4), 10-4 ರಿಂದ ಚಿರಾಗ್ ದುಹಾನ್ ಮತ್ತು ದೇವ್ ಜಾವಿಯಾ ಜೋಡಿಯನ್ನು ಸೋಲಿಸಿದವು.

ಅಮೆರಿಕದ ಜೇಕ್ ಭಂಗ್ಡಿಯಾ ಮತ್ತು ರಾಘವ್ ಜೈಸಿಂಘಾನಿ ಜೋಡಿ 6-3, 6-4 ರಿಂದ ತುಷಾರ್ ಮದನ್ ಮತ್ತು ಜಗಮೀತ್ ಸಿಂಗ್ ಜೋಡಿಯನ್ನು; ಸಿದ್ಧಾಂತ್ ಬಂತಿಯಾ ಮತ್ತು ವಿಷ್ಣುವರ್ಧನ್ ಜೋಡಿ 6-4, 6-1 ರಿಂದ ನೆದರ್ಲೆಂಡ್ಸ್‌ನ ತಿಜ್‌ಮನ್ ಲೂಪ್ ಮತ್ತು ಸ್ಟಿಜಿನ್ ಪೆಲ್ ಜೋಡಿಯನ್ನು ಸೋಲಿಸಿದವು

ಪ್ರಜ್ವಲ್ ದೇವ್ ಮತ್ತು ನಿತಿನ್‌ಕುಮಾರ್ ಸಿನ್ಹಾ ಜೋಡಿ 6-1, 6-2 ರಿಂದ ಯಶ್ ಚೌರಾಸಿಯಾ ಮತ್ತು ಅಥರ್ವ ಶರ್ಮ ಜೋಡಿಯನ್ನು; ಸಾಯಿ ಕಾರ್ತಿಕ್ ರೆಡ್ಡಿ ಗಂಟಾ ಮತ್ತು ಮನಿಷ್ ಸುರೇಶ್‌ಕುಮಾರ್ ಜೋಡಿ ಬೊಗ್ದನ್ ಬೊಬ್ರವ್ ಮತ್ತು ಅಮೆರಿಕದ ನಿಕ್ ಚಾಪೆಲ್ ಅವರನ್ನು 6-3, 3-6, 10-5 ರಿಂದ ಸೋಲಿಸಿದವು.

ಪಂದ್ಯ ಮುಂದೂಡಿಕೆ: ಪುರವ್ ರಾಜಾ- ರಾಮಕುಮಾರ್ ರಾಮನಾಥನ್ ಜೋಡಿ ಹಾಗೂ ದಿಗ್ವಿಜಯ್ ಪ್ರತಾಪ್‌ಸಿಂಗ್, ಕರಣ್ ಸಿಂಗ್ ಜೋಡಿ ಸೆಣಸಾಟದ ಪಂದ್ಯವನ್ನು ಮಂದ ಬೆಳಕಿನ ಕಾರಣದಿಂದ ಮುಂದೂಡಲಾಗಿದೆ.

ಧಾರವಾಡದಲ್ಲಿ ಆಯೋಜಿಸಿರುವ ಐಟಿಎಫ್‌ನ ಪಂದ್ಯದಲ್ಲಿ ಮಾಧ್ವಿನ್ ಕಾಮತ್ ಅವರು ಚೆಂಡನ್ನು ಹೊಡೆದ ಪರಿ – ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ

ಸಿಂಗಲ್ಸ್ ವಿಭಾಗ: ದಿಗ್ವಿಜಯ್ ಪ್ರತಾಪ್ ಸಿಂಗ್ ಅವರು ಸಿದ್ಧಾಂತ್ ಬಂತಿಯಾ ಅವರನ್ನು 6-2, 7-6 ರಿಂದ ಸೋಲಿಸಿದರು. ನಿತಿನ್ ಕುಮಾರ್ ಸಿನ್ಹಾ 6-2, 6-2 ರಿಂದ ರಿಷಿ ರೆಡ್ಡಿ ಅವರನ್ನು ಮಣಿಸಿದರು.

ಅರ್ಹತಾ ಸುತ್ತಿನ ಬಾಕಿ ಪಂದ್ಯಗಳ ಫಲಿತಾಂಶ: ಮಾಧ್ವಿನ್ ಕಾಮತ್ 5-7, 6-3, 10-5 ರಿಂದ ವಿಷ್ಣುವರ್ಧನ್ ಅವರನ್ನು ಸೋಲಿಸಿದರು. ಸೂರಜ್ ಆರ್.ಪ್ರಬೋಧ್ 6-4, 6-1 ರಿಂದ ಯಶ್ ಯಾದವ್ ಅವರನ್ನು ಮಣಿಸಿದರು.

ಅಭಿನವ್ ಸಂಜೀವ್ ಷಣ್ಮುಗಂ 6-3, 6-3 ರಿಂದ ತುಷಾರ್ ಮದನ್ ಅವರನ್ನು, ರಂಜಿತ್ ವಿರಾಲಿ ಮುರುಗೇಶನ್ 4-6, 6-3, 10-6 ರಿಂದ ಕಬೀರ್ ಹಂಸ್ ಅವರನ್ನು ಸೋಲಿಸಿದರು.

ಎಲ್ಲಾ ಕ್ರೀಡೆಗಳಿಗೂ ಪ್ರೋತ್ಸಾಹ ಸಿಗಲಿ: ಅಜರುದ್ದೀನ್

'ಕ್ರಿಕೆಟ್‌ನಂತೆ ಎಲ್ಲಾ ಕ್ರೀಡೆಗಳಿಗೂ ಪ್ರೋತ್ಸಾಹ ಸಿಗಬೇಕು. ವಿವಿಧ ಕ್ರೀಡೆಗಳ ಪ್ರತಿಭೆಗಳು ಬೆಳಕಿಗೆ ಬರಬೇಕು' ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಹೇಳಿದರು.

ಅಜರುದ್ದೀನ್

ಜಿಲ್ಲಾ ಲಾನ್ ಟೆನಿಸ್ ಸಂಸ್ಥೆ (ಡಿಡಿಎಲ್‌ಟಿಎ) ಆವರಣದಲ್ಲಿ ಮಂಗಳವಾರ ಅಂತರರಾಷ್ಟ್ರೀಯ ಟೆನಿಸ್ ಟೂರ್ನಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, 'ಧಾರವಾಡದಲ್ಲಿ ಟೆನಿಸ್ ಟೂರ್ನಿಗೆ ಹಲವು ಕಂಪನಿಗಳು, ಸಂಸ್ಥೆಗಳು ಪ್ರಾಯೋಜಕತ್ವ ನೀಡಿದ್ದು ಒಳ್ಳೆಯ ಬೆಳವಣಿಗೆ' ಎಂದರು.

'ಮಹಿಳಾ ಟೆನಿಸ್ ಟೂರ್ನಿ ಕೂಡ ಆಯೋಜಿಸಬೇಕು. ಪುರುಷ ಮತ್ತು ಮಹಿಳಾ ಎರಡೂ ವಿಭಾಗದಲ್ಲಿ ಟೂರ್ನಿ ಆಯೋಜನೆಯಿಂದ ಪ್ರಚಾರ ಹೆಚ್ಚುತ್ತದೆ. ಕ್ರೀಡೆ ಬೆಳೆಸಲು ಅನುಕೂಲವಾಗುತ್ತದೆ ಎಂದರು.

ಭಾರತ ವಿಶ್ವಕಪ್ ಗೆಲ್ಲುವ ವಿಶ್ವಾಸ: ಭಾರತ ಕ್ರಿಕೆಟ್ ತಂಡವು ಅತ್ಯಂತ ಸಮರ್ಥವಾಗಿದೆ. ಈ ಬಾರಿ ಭಾರತ ತಂಡವು ವಿಶ್ವಕಪ್ ಗೆಲ್ಲುವ ವಿಶ್ವಾಸ ಇದೆ ಎಂದು ಅಜರುದ್ದೀನ್ ಹೇಳಿದರು.

ಟೂರ್ನಿಯಲ್ಲಿ ಮೂರು ದಿನಗಳಲ್ಲಿ ಎರಡನೇ ಅಚ್ಚರಿ ಫಲಿತಾಂಶ: ಮಿಂಚಿದ ನೆದರ್ಲೆಂಡ್ಸ್

ದಕ್ಷಿಣ ಆಫ್ರಿಕಾಕ್ಕೆ ಡಚ್ ಆಘಾತ

ಧರ್ಮಶಾಲಾ (ಪಿಟಿಐ): ಈ ಬಾರಿಯ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮೂರು ದಿನಗಳ ಅಂತರದಲ್ಲಿ ಎರಡನೇ ಅಚ್ಚರಿಯ ಫಲಿತಾಂಶ ದಾಖಲಾಯಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಬಲಿಷ್ಠ ದಕ್ಷಿಣ ಆಫ್ರಿಕಾ ತಂಡವನ್ನು ಹೆಚ್ಚು ಅನುಭವವಿಲ್ಲದ ನೆದರ್ಲೆಂಡ್ಸ್ ತಂಡವು 38 ರನ್‌ಗಳಿಂದ ಮಣಿಸಿತು. ಅಕ್ಟೋಬರ್ 15ರಂದು ನವದೆಹಲಿಯಲ್ಲಿ ನಡೆದಿದ್ದ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವು ತನಗಿಂತಲೂ ಬಲಾಢ್ಯವಾಗಿದ್ದ ಇಂಗ್ಲೆಂಡ್ ತಂಡವನ್ನು ಸೋಲಿಸಿತ್ತು. ಇದೀಗ ತೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾ ಆಘಾತ ಅನುಭವಿಸಿತು.

ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನೆದರ್ಲೆಂಡ್ಸ್ ತಂಡದ ಗೆಲುವಿನಲ್ಲಿ ನಾಯಕ ಸ್ಕಾಟ್ ಎಡ್ವರ್ಡ್ಸ್ (ಔಟಾಗದೇ 78; 69ಎ, 4X10, 6X1) ಮತ್ತು ಬೌಲರ್‌ಗಳ ಸಂಘಟಿತ ದಾಳಿಯು ಪ್ರಮುಖ ಪಾತ್ರ ವಹಿಸಿದವು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬೌಲರ್‌ಗಳ ಉತ್ತಮ ದಾಳಿಯ ನಡುವೆಯೂ ನೆದರ್ಲೆಂಡ್ಸ್ ತಂಡವು 43 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 245 ರನ್ ಗಳಿಸಿತು. ಮಳೆಯಿಂದಾಗಿ ಪಂದ್ಯದ ಸಮಯವು ವ್ಯರ್ಥವಾಗಿದ್ದರಿಂದ ಇನಿಂಗ್ಸ್ ಅನ್ನು 43 ಓವರ್‌ಗೆ ನಿಗದಿಪಡಿಸಲಾಯಿತು.

ಈ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 42.5 ಓವರ್‌ಗಳಲ್ಲಿ 207 ರನ್ ಗಳಿಸಿ ಆಲೌಟ್ ಆಯಿತು. ಈ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ ತಂಡವು ತನ್ನ ಮೊದಲ ಪಂದ್ಯದಲ್ಲಿ ಶ್ರೀಲಂಕಾ ಎದುರು 428 ರನ್ ಗಳಿಸಿತ್ತು. ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 311 ರನ್‌ಗಳನ್ನು ಗಳಿಸಿತ್ತು. ಎರಡೂ ಹಣಾಹಣಿಗಳಲ್ಲಿಯೂ ಭರ್ಜರಿ ಗೆಲುವು ಸಾಧಿಸಿದ್ದ ದಕ್ಷಿಣ ಆಫ್ರಿಕಾದ ಬ್ಯಾಟರ್‌ಗಳು ಅನನುಭವಿ ಡಚ್ ಬೌಲರ್‌ಗಳ ಎದುರು ಮಂಕಾದರು.

ಅತಿಯಾದ ಆತ್ಮವಿಶ್ವಾಸದಿಂದ ಬೀಸಿದ ಶಾಟ್‌ಗಳು ಕೈಕೊಟ್ಟವು. ತೆಂಬಾ ಬವುಮಾ, ಕ್ವಿಂಟನ್ ಡಿ ಕಾಕ್, ರೆಸಿ ವ್ಯಾನ್ ಡೆರ್ ಡಸೆ, ಏಡನ್ ಮರ್ಕರಂ ಹಾಗೂ ಬೀಸು ಹೊಡೆತಗಳ ಆಟಗಾರ ಹೆನ್ರಿಕ್ ಕ್ಲಾಸೆನ್ ಅವರನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ಯಶಸ್ವಿಯಾದರು. ಡೇವಿಡ್ ಮಿಲ್ಲರ್ (43; 52ಎಸೆತ) ಅವರೊಬ್ಬರೇ ತುಸು ಹೆಚ್ಚು ಹೊತ್ತು ಕ್ರೀಸ್‌ನಲ್ಲಿದ್ದರು. ಆದರೂ ಅವರಿಗೆ ತಮ್ಮ ತಂಡವನ್ನು ಗೆಲುವಿನ ಗಡಿ ಮುಟ್ಟಿಸಲು ಸಾಧ್ಯವಾಗಲಿಲ್ಲ. ಕೊನೆಯಲ್ಲಿ ಕೇಶವ್ ಮಹಾರಾಜ್ 40 ರನ್ ಗಳಿಸಿದರು.

ಈಚೆಗೆ ಅಹಮದಾಬಾದಿನಲ್ಲಿ ಭಾರತ ತಂಡದ ಬೌಲರ್‌ಗಳು ಪಾಕ್ ತಂಡದ ವಿರುದ್ಧ ಅನುಸರಿಸಿದ್ದ ತಂತ್ರಗಾರಿಕೆಯ ರೀತಿಯನ್ನು ನೆದರ್ಲೆಂಡ್ಸ್ ಬೌಲಿಂಗ್ ಪಡೆಯೂ ಇಲ್ಲಿ ಅನುಕರಿಸಿದಂತೆ ಕಂಡಿತು.

ಎಡ್ವರ್ಡ್ಸ್ ಆಸರೆ: ಮೊದಲು ಬ್ಯಾಟ್ ಮಾಡಿದ ನೆದರ್ಲೆಂಡ್ಸ್, 140 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡು ಕುಸಿತ ಅನುಭವಿಸಿತ್ತು. ಎಡ್ವರ್ಡ್ಸ್ ಮತ್ತು ರೋಲೊಫ್ ವಾನ್ ಡರ್ ಮೆರ್ವ್ 8ನೇ ವಿಕೆಟ್‌ಗೆ 64 ರನ್ ಸೇರಿಸಿದ್ದರಿಂದ ತಂಡದ ಮೊತ್ತ 200ರ ಗಡಿ ದಾಟಿತು. ಕೊನೆಯಲ್ಲಿ ಆರ್ಯನ್ ದತ್ 9 ಎಸೆತಗಳಲ್ಲಿ 23 ರನ್ ಹೊಡೆದರು.

ವಿಕೆಟ್ ಗಳಿಸಿದ ಸಂಭ್ರಮದಲ್ಲಿ ನೆದರ್ಲೆಂಡ್ಸ್ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	3	3	0	0	6	1.821
ನ್ಯೂಜಿಲೆಂಡ್	3	3	0	0	6	1.604
ದಕ್ಷಿಣ ಆಫ್ರಿಕಾ	3	2	1	0	4	1.385
ಪಾಕಿಸ್ತಾನ	3	2	1	0	4	-0.137
ಇಂಗ್ಲೆಂಡ್	3	1	2	0	2	-0.084
ಅಫ್ಗಾನಿಸ್ತಾನ	3	1	2	0	2	-0.652
ಬಾಂಗ್ಲಾದೇಶ	3	1	2	0	2	-0.699
ಆಸ್ಟ್ರೇಲಿಯಾ	3	1	2	0	2	-0.734
ನೆದರ್ಲೆಂಡ್ಸ್	3	1	2	0	2	-0.993
ಶ್ರೀಲಂಕಾ	3	0	3	0	0	-1.532

ಸ್ಕೋರ್ ಕಾರ್ಡ್

ನೆದರ್ಲೆಂಡ್ಸ್ 8ಕ್ಕೆ 245 (43 ಓವರ್)

ವಿಕ್ರಮ್‌ಜೀತ್ ಸಿ ಕ್ಲಾಸೆನ್ ಬಿ ರಬಾಡ 2 (16 ಎ.)
ಒ'ಡೌಡ್ ಸಿ ಡಿ ಕಾಕ್ ಬಿ ಜಾನ್ಸೆನ್ 18 (25 ಎ., 4X4)
ಆ್ಯಕ್ರಮನ್ ಬಿ ಕೊಯೆಟ್ಜಿ 12 (25 ಎ., 4X1)
ಲೀಡ್ ಎಲ್‌ಬಿಡಬ್ಲ್ಯು ಬಿ ರಬಾಡ 2 (7 ಎ.)
ಇಂಗೆಲ್‌ಬ್ರೆಕ್ಟ್ ಸಿ ಜಾನ್ಸೆನ್ ಬಿ ಗಿಡಿ 19 (37 ಎ., 4X1, 6X1)
ನಿಡಮಾನೂರು ಎಲ್‌ಬಿಡಬ್ಲ್ಯು ಬಿ ಜಾನ್ಸೆನ್ 20 (25 ಎ., 4X3)
ಎಡ್ವರ್ಡ್ಸ್ ಔಟಾಗದೆ 78 (69 ಎ., 4X10, 6X1)
ಬೀಕ್ ಸ್ಟಂಪ್ ಡಿ ಕಾಕ್ ಬಿ ಕೇಶವ್ 10 (27 ಎ., 4X1)
ಮರ್ವೆ ಸಿ ಡಿ ಕಾಕ್ ಬಿ ಗಿಡಿ 29 (19 ಎ., 4X3, 6X1)
ದತ್ ಔಟಾಗದೆ 23 (9 ಎ., 6X3)
ಇತರೆ: 32 (ಲೆಗ್‌ಬೈ 10, ನೋಬಾಲ್ 1, ವೈಡ್ 21)
ವಿಕೆಟ್ ಪತನ: 1–22 (ವಿಕ್ರಮ್‌ಜೀತ್ ಸಿಂಗ್; 6.1), 2–24 (ಮ್ಯಾಕ್ ಒ'ಡೌಡ್; 7.1), 3–40 (ಬಾಸ್ ಡಿ ಲೀಡ್; 10.5), 4–50 (ಕಾಲಿನ್ ಆ್ಯಕ್ರಮನ್; 15.1), 5–82 (ಸೈಬ್ರಾಂಡ್ ಇಂಗೆಲ್‌ಬ್ರೆಕ್ಟ್; 20.2), 6–112 (ತೇಜ ನಿಡಮಾನೂರು; 26.6), 7–140 (ಲೋಗನ್ ವಾನ್ ಬೀಕ್; 33.5), 8–204 (ರೋಲೊಫ್ ವಾನ್ ಡರ್ ಮೆರ್ವ್; 39.5)
ಬೌಲಿಂಗ್: ಲುಂಗಿ ಗಿಡಿ 9–1–57–2, ಮಾರ್ಕೊ ಜಾನ್ಸೆನ್ 8–1–27–2, ಕಗಿಸೊ ರಬಾಡ 9–1–56–2, ಜೆರಾಲ್ಡ್ ಕೊಯೆಟ್ಜಿ 8–0–57–1, ಕೇಶವ್ ಮಹಾರಾಜ್ 9–0–38–1

ದಕ್ಷಿಣ ಆಫ್ರಿಕಾ 207 (42.5 ಓವರ್)

ಬವುಮಾ ಬಿ ಮೆರ್ವ್ 16 (31 ಎ., 4X2, 6X1)
ಡಿ ಕಾಕ್ ಸಿ ಎಡ್ವರ್ಡ್ಸ್ ಬಿ ಆ್ಯಕ್ರಮನ್ 20 (22 ಎ., 4X3)
ಡಸೆ ಸಿ ದತ್ ಬಿ ಮೆರ್ವ್ 4 (7 ಎ)
ಮರ್ಕರಮ್ ಬಿ ಮೀಕೆರೆನ್ 1 (3 ಎ)
ಕ್ಲಾಸೆನ್ ಸಿ ವಿಕ್ರಮ್‌ಜೀತ್ ಬಿ ಬೀಕ್ 28 (28 ಎ., 4X4)
ಮಿಲ್ಲರ್ ಬಿ ಬೀಕ್ 43 (52 ಎ., 4X4, 6X1)
ಜಾನ್ಸೆನ್ ಬಿ ಮೀಕೆರೆನ್ 9 (25 ಎ)
ಕೊಯೆಟ್ಜಿ ಸಿ ಎಡ್ವರ್ಡ್ಸ್ ಬಿ ಲೀಡ್ 22 (23 ಎ., 4X2, 6X1)
ಕೇಶವ್ ಸಿ ಎಡ್ವರ್ಡ್ಸ್ ಬಿ ಬೀಕ್ 40 (37 ಎ., 4X5, 6X1)
ರಬಾಡ ಸಿ ಇಂಗೆಲ್‌ಬ್ರೆಕ್ಟ್ ಬಿ ಲೀಡ್ 9 (6 ಎ., 6X1)
ಗಿಡಿ ಔಟಾಗದೆ 7 (24 ಎ)
ಇತರೆ: 8 (ಲೆಗ್‌ಬೈ 2, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1–36 (ಕ್ವಿಂಟನ್ ಡಿ ಕಾಕ್; 7.6); 2–39 (ತೆಂಬಾ ಬವುಮಾ; 9.1), 3–42 (ಏಡನ್ ಮರ್ಕರಮ್; 10.2), 4–44 (ರಸಿ ವಾನ್‌ಡರ್ ಡಸೆ; 11.2), 5–89 (ಹೆನ್ರಿಕ್ ಕ್ಲಾಸೆನ್; 18.5), 6–109 (ಮಾರ್ಕೊ ಜಾನ್ಸೆನ್; 24.6), 7–145 (ಡೇವಿಡ್ ಮಿಲ್ಲರ್; 30.6), 8–147 (ಜೆರಾಲ್ಡ್ ಕೊಯೆಟ್ಜಿ; 33.1), 9–166 (ಕಗಿಸೊ ರಬಾಡ; 35.1)
ಬೌಲಿಂಗ್: ಆರ್ಯನ್ ದತ್ 5–1–19–0, ವಾನ್ ಬೀಕ್ 8.5–0–60–3, ಕಾಲಿನ್ ಆ್ಯಕ್ರಮನ್ 3–0–16–1, ಪಾಲ್ ವಾನ್ ಮೀಕೆರೆನ್ 9–0–40–2, ರೋಲೊಫ್ ವಾನ್ ಡರ್ ಮೆರ್ವ್ 9–0–34–2, ಬಾಸ್ ಡಿ ಲೀಡ್ 8–0–36–2

ಫಲಿತಾಂಶ: ನೆದರ್ಲೆಂಡ್ಸ್‌ಗೆ 38 ರನ್ ಗೆಲುವು

ಆಲೂರಿನಲ್ಲಿ ಅಭ್ಯಾಸ ಮಾಡಿದ್ದ ಡಚ್ ಪಡೆ

ನೆದರ್ಲೆಂಡ್ಸ್ ತಂಡವು 12 ವರ್ಷಗಳ ನಂತರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಅರ್ಹತೆ ಗಳಿಸಿದೆ.

ಭಾರತದ ವಾತಾವರಣ ಮತ್ತು ಪಿಚ್‌ಗಳಲ್ಲಿ ಹೊಂದಿಕೊಳ್ಳುವ ಉದ್ದೇಶದಿಂದ ವಿಶ್ವಕಪ್ ಟೂರ್ನಿಯು ಆರಂಭವಾಗುವ ಒಂದು ತಿಂಗಳು ಮುನ್ನವೇ ಡಚ್ ಪಡೆಯು ಬೆಂಗಳೂರು ಸಮೀಪದ ಆಲೂರಿನಲ್ಲಿ ಅಭ್ಯಾಸ ನಡೆಸಿತ್ತು. ಈ ಅವಧಿಯಲ್ಲಿ ಸ್ಕಾಟ್ ಎಡ್ವರ್ಡ್ಸ್ ಅವರ ಬಳಗವು ಕರ್ನಾಟಕ ಕ್ರಿಕೆಟ್ ತಂಡದ ಎದುರು ಎರಡು ಅಭ್ಯಾಸ ಪಂದ್ಯಗಳನ್ನು ಆಡಿತ್ತು. ಆದರೆ ಆ ಪಂದ್ಯಗಳಲ್ಲಿ ಸೋತಿತ್ತು.

ಪಾಕ್ ಆಟಗಾರರಿಗೆ ವೈರಲ್ ಜ್ವರ

20ರಂದು ಬೆಂಗಳೂರಿನಲ್ಲಿ ಆಸ್ಟ್ರೇಲಿಯಾ– ಪಾಕ್ ಸೆಣಸು

ಬೆಂಗಳೂರು/ ನವದೆಹಲಿ (ಪಿಟಿಐ): ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯ ಆಡಲು ಬೆಂಗಳೂರಿಗೆ ಬಂದಿಳಿದಿರುವ ಪಾಕಿಸ್ತಾನ ತಂಡದ ಬಾಬರ್ ಆಜಂ ಮತ್ತು ವೇಗಿ ಶಾಹೀನ್ ಶಾ ಅಫ್ರಿದಿ ಸೇರಿದಂತೆ ಕೆಲವು ಆಟಗಾರರು ವಿಷಮಶೀತ ಜ್ವರದಿಂದ ಬಳಲಿದ್ದಾರೆ.

ಕಳೆದ ಶನಿವಾರ ಅಹಮದಾಬಾದಿನಲ್ಲಿ ಭಾರತ ತಂಡದ ಎದುರಿನ ಪಂದ್ಯದಲ್ಲಿ ಸೋತಿದ್ದ ಪಾಕ್ ತಂಡವು ಭಾನುವಾರ ಇಲ್ಲಿಗೆ ಬಂದಿಳಿದಿತ್ತು. ಇದೇ 20ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ಎದುರು ನಡೆಯುವ ಪಂದ್ಯದಲ್ಲಿ ಆಡಲಿದೆ. ಆದರೆ ಭಾನುವಾರ ಕೆಲವು ಆಟಗಾರರಿಗೆ ಜ್ವರ ಇರುವುದು ಪತ್ತೆಯಾಗಿತ್ತು. ತಂಡದ ವೈದ್ಯಕೀಯ ಸಿಬ್ಬಂದಿಯು ಚಿಕಿತ್ಸೆ ನೀಡಿದೆ. ಮಂಗಳವಾರ ಮಧ್ಯಾಹ್ನದ ಹೊತ್ತಿಗೆ ಬಹುತೇಕರು ಚೇತರಿಸಿಕೊಂಡಿದ್ದು, ಬುಧವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವ ಸಾಧ್ಯತೆ ಇದೆ ಎನ್ನಲಾಗಿದೆ.

'ಕೆಲವು ಆಟಗಾರರು ಜ್ವರದಿಂದ ಬಳಲಿದ್ದರು. ಅದರಲ್ಲಿ ಕೆಲವರು ಸಂಪೂರ್ಣ ಗುಣಮುಖರಾಗಿದ್ದಾರೆ. ಇನ್ನುಳಿದವರು ಚೇತರಿಸಿಕೊಳ್ಳುತ್ತಿದ್ದಾರೆ. ಅವರ ಮೇಲೆ ನಿಗಾ ವಹಿಸಲಾಗಿದೆ. ನಮ್ಮ ವೈದ್ಯಕೀಯ ತಂಡವು ಉತ್ತಮವಾದ ಚಿಕಿತ್ಸೆ ನೀಡುತ್ತಿದೆ. ಪ್ರಯಾಣ ಮತ್ತು ಹವಾಗುಣದಲ್ಲಿ ಆದ ಬದಲಾವಣೆಯಿಂದಾಗಿ ಜ್ವರ ಬಂದಿರುವ ಸಾಧ್ಯತೆ ಇದೆ' ಎಂದು ತಂಡದ ಮಾಧ್ಯಮ ವ್ಯವಸ್ಥಾಪಕ ಎಹಸಾನ್ ಇಫ್ತಿಕಾರ್ ನೇಗಿ ತಿಳಿಸಿದ್ದಾರೆ.

ನಾಯಕ ಬಾಬರ್ ಮತ್ತು ಬೌಲರ್ ಅಫ್ರಿದಿಯವರು ಚೇತರಿಸಿಕೊಂಡಿದ್ದಾರೆಂದೂ ಅವರು ಹೇಳಿದರು.

ಬೆಂಗಳೂರಿನಲ್ಲಿ ಕಳೆದ ಹಲವು ದಿನಗಳಿಂದ ವೈರಲ್ ಜ್ವರ ಮತ್ತು ಡೆಂಗಿ ಜ್ವರದ ಪ್ರಕರಣಗಳೂ ಹೆಚ್ಚಿವೆ.

ಪಾಕಿಸ್ತಾನ–ಆಸ್ಟ್ರೇಲಿಯಾ ನಡುವಣ ಪಂದ್ಯದ ಟಿಕೆಟ್ ಖರೀದಿಸಲು ಅಭಿಮಾನಿಗಳು ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದ ಕೌಂಟರ್ ಮುಂದೆ ಸಾಲುಗಟ್ಟಿದ್ದರು – ಪ್ರಜಾವಾಣಿ ಚಿತ್ರ/ ಬಿ.ಕೆ. ಜನಾರ್ದನ್

ಐಸಿಸಿಗೆ ಪಿಸಿಬಿ ದೂರು

ಲಾಹೋರ್ ವರದಿ: ಅಹಮದಾಬಾದಿನಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯದ ಸಂದರ್ಭದಲ್ಲಿ ಕೆಲವು ಅಹಿತಕರ ಪ್ರಕರಣಗಳು ವರದಿಯಾಗಿವೆ. ಪಾಕ್ ಆಟಗಾರರ ವಿರುದ್ಧ ಭಾರತ ತಂಡದ ಕ್ರಿಕೆಟ್ ಅಭಿಮಾನಿಗಳ ನಡವಳಿಕೆಯ ಬಗ್ಗೆ ಪಾಕ್ ಕ್ರಿಕೆಟ್ ಮಂಡಳಿಯ ಮುಖ್ಯಸ್ಥ ಝಕಾ ಅಶ್ರಫ್ ಅವರು ಐಸಿಸಿಗೆ ಪ್ರತಿಭಟನೆ ಸಲ್ಲಿಸಿದ್ದಾರೆ.

ಪ್ರೇಕ್ಷಕರ 'ಅನುಚಿತ ವರ್ತನೆ' ಬಗ್ಗೆ ಪಿಸಿಬಿಯು ಮಂಗಳವಾರ ಅಧಿಕೃತವಾಗಿ ದೂರು ಸಲ್ಲಿಸಿದೆ.

'ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯವನ್ನು ಅಶ್ರಫ್ ಅವರೂ ವೀಕ್ಷಿಸಿದ್ದರು. ಅಶ್ರಫ್ ಅವರನ್ನು ಬಿಸಿಸಿಐನ ಪದಾಧಿಕಾರಿಗಳು ಆತ್ಮೀಯವಾಗಿ ಬರಮಾಡಿಕೊಂಡಿದ್ದರು. ಪಂದ್ಯದ ವೇಳೆ ಕೆಲವು ಪ್ರೇಕ್ಷಕರು ಪಾಕ್ ಆಟಗಾರರ ವಿರುದ್ಧ ಕೂಗಿದ ಘೋಷಣೆ ಮತ್ತಿತರ ವಿಷಯಗಳಿಂದ ಅಶ್ರಫ್ ಅವರು ಅಸಮಾಧಾನಗೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಆರ್‌ಸಿಬಿ ತಾರೆಗಳಿಗಾಗಿ ಟಿಕೆಟ್ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಆಡುವ ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ಜೋಷ್ ಹ್ಯಾಜಲ್‌ವುಡ್ ಈ ವಿಶ್ವಕಪ್ ಟೂರ್ನಿಯಲ್ಲಿ ಬೆಂಗಳೂರಿಗರ ಆಕರ್ಷಣೆಯ ಕೇಂದ್ರಬಿಂದುವಾಗಿದ್ದಾರೆ.

ಇದೇ 20ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಪಾಕಿಸ್ತಾನವನ್ನು ಎದುರಿಸಲಿದೆ. ಅದಕ್ಕಾಗಿ ಮಂಗಳವಾರ ಆರಂಭವಾದ ಕೌಂಟರ್ ಟಿಕೆಟ್ ಮಾರಾಟಕ್ಕೆ ಜನರು ಮುಗಿಬಿದ್ದು ಖರೀದಿಸಿದರು. ಇನ್ನೂ ಕೆಲವರು ನವೆಂಬರ್ 12ರಂದು ನಡೆಯಲಿರುವ ಭಾರತ ಮತ್ತು ನೆದರ್ಲೆಂಡ್ಸ್ ನಡುವಣ ಪಂದ್ಯದ ಟಿಕೆಟ್ ಮಾರಾಟವಾಗುತ್ತಿದೆಯೆಂಬ ವದಂತಿ ನಂಬಿ ಬಂದಿದ್ದರು.

ಆದರೆ ಮಂಗಳವಾರದಿಂದ ಅಕ್ಟೋಬರ್ 19ರವರೆಗೆ ಆಸ್ಟ್ರೇಲಿಯಾ–ಪಾಕಿಸ್ತಾನ, ನ್ಯೂಜಿಲೆಂಡ್–ಪಾಕಿಸ್ತಾನ, ಇಂಗ್ಲೆಂಡ್–ಶ್ರೀಲಂಕಾ ಮತ್ತು ನ್ಯೂಜಿಲೆಂಡ್–ಶ್ರೀಲಂಕಾ ಪಂದ್ಯಗಳ ಟಿಕೆಟ್ ಮಾರಾಟ ಮಾಡಲಾಗುವುದು ಎಂದು ಕೆಎಸ್‌ಸಿಎ ಈಚೆಗೆ ಪ್ರಕಟಣೆ ನೀಡಿತ್ತು. ಅದರಿಂದಾಗಿ ಭಾರತ–ನೆದರ್ಲೆಂಡ್ಸ್ ಪಂದ್ಯದ ಟಿಕೆಟ್‌ಗಳ ಮಾರಾಟ ಇರಲಿಲ್ಲ.

ಇದಲ್ಲದೇ ಕೌಂಟರ್‌ನಲ್ಲಿದ್ದ ಸರ್ವರ್ ನಿಧಾನಗತಿಯಲ್ಲಿ ಕಾರ್ಯನಿರ್ವಹಿಸಿದ್ದರಿಂದ ಜನರು ಸಾಲಿನಲ್ಲಿ ಬಹಳ ಹೊತ್ತು ಕಾಯಬೇಕಾಯಿತು. ಕಡಿಮೆ ಮೊತ್ತದ ಟಿಕೆಟ್‌ಗಳೂ ಬೇಗನೆ ಖಾಲಿಯಾದವು. ಅದರಿಂದಾಗಿ ಹಲವು ಅಭಿಮಾನಿಗಳು ಬರಿಗೈಯಲ್ಲಿ ಮರಳಬೇಕಾಯಿತು.

'ಭಾರತದ ಪಂದ್ಯಕ್ಕಾಗಿ ಕೆಲಸದಿಂದ ರಜೆ ಪಡೆದು ಬಂದು ನಿಂತಿದ್ದೇವೆ. ಭಾರತ–ನೆದರ್ಲೆಂಡ್ಸ್ ಪಂದ್ಯದ ಟಿಕೆಟ್ ಕೊಡುತ್ತಿಲ್ಲ ಎಂಬುದು ಖಚಿತವಾದ ಮೇಲೆ ಮರಳುತ್ತಿದ್ದೇವೆ' ಎಂದು ಅಭಿಮಾನಿಗಳು ಹೇಳಿದರು.

'ಬುಕ್ ಮೈ ಶೋ ಸಂಸ್ಥೆಯು ಆನ್‌ಲೈನ್ ಮತ್ತು ಕೌಂಟರ್ ಟಿಕೆಟ್ ಮಾರಾಟದ ಉಸ್ತುವಾರಿ ನೋಡಿಕೊಳ್ಳುತ್ತಿದೆ. ಈ ದಿನ ಮಾರಾಟವಾಗಿರುವ ಟಿಕೆಟ್‌ಗಳ ಕುರಿತು ಅವರಿಂದ ಯಾವುದೇ ಮಾಹಿತಿಯು ಇದುವರೆಗೆ ಲಭ್ಯವಾಗಿಲ್ಲ' ಎಂದು ಕೆಎಸ್‌ಸಿಎ ಮೂಲಗಳು ತಿಳಿಸಿವೆ.

ಭಾರತ ತಂಡದ ಆಟಗಾರರ ಅಭ್ಯಾಸ

ಪ್ರಜಾವಾಣಿ ವಾರ್ತೆ

ಪುಣೆ: ಪಾಕಿಸ್ತಾನ ವಿರುದ್ಧದ ಪಂದ್ಯದ ಬಳಿಕ ಎರಡು ದಿನಗಳ ವಿಶ್ರಾಂತಿ ಪಡೆದಿದ್ದ ಭಾರತ ತಂಡದ ಆಟಗಾರರು ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಮಂಗಳವಾರ ಅಭ್ಯಾಸ ನಡೆಸಿದರು.

ತಂಡದ ಆಟಗಾರರಿಗೆ ಮಂಗಳವಾರ 'ಕಡ್ಡಾಯವಲ್ಲದ ಅಭ್ಯಾಸದ ಅವಧಿ' ಏರ್ಪಡಿಸಲಾಗಿದ್ದರೂ, ಎಲ್ಲರೂ ಪೂರ್ಣ ಪ್ರಮಾಣದ ತಾಲೀಮು ನಡೆಸಿದ್ದು ಗಮನ ಸೆಳೆಯಿತು.

ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ರೋಹಿತ್ ಶರ್ಮಾ ಬಳಗ ಗುರುವಾರ ನಡೆಯಲಿರುವ ತನ್ನ ಮುಂದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ವಿರಾಟ್ ಕೊಹ್ಲಿ ಸೇರಿದಂತೆ ಎಲ್ಲ ಬ್ಯಾಟರ್‌ಗಳು ನೆಟ್ಸ್‌ನಲ್ಲಿ ತುಂಬಾ ಹೊತ್ತು ಅಭ್ಯಾಸ ನಡೆಸಿದರು. ತಂಡದ ಸ್ಪಿನ್ ಮತ್ತು ವೇಗದ ಬೌಲರ್‌ಗಳು ಮಾತ್ರವಲ್ಲದೆ ಸ್ಥಳೀಯ ಬೌಲರ್‌ಗಳನ್ನೂ ಎದುರಿಸಿದರು.

ಟೂರ್ನಿಯಲ್ಲಿ ಇದುವರೆಗೆ ಅವಕಾಶ ಪಡೆಯದೇ ಇರುವ ಅನುಭವಿ ವೇಗಿ ಮೊಹಮ್ಮದ್ ಶಮಿ ಅವರೂ ನೆಟ್ಸ್‌ನಲ್ಲಿ ಪೂರ್ಣ ಸಾಮರ್ಥ್ಯದೊಂದಿಗೆ ಬೌಲ್ ಮಾಡಿದರು.

ಅಭ್ಯಾಸದಲ್ಲಿ ಪಾಲ್ಗೊಂಡ ರವೀಂದ್ರ ಜಡೇಜ –ಎಎಫ್‌ಪಿ ಚಿತ್ರ

ಇಂಗ್ಲೆಂಡ್ ವಿರುದ್ಧ ಪಂದ್ಯದಲ್ಲಿ ಅನುಚಿತ ವರ್ತನೆ

ಅಫ್ಗನ್‌ನ ಗುರ್ಬಾಝ್‌ಗೆ ವಾಗ್ದಂಡನೆ

ನವದೆಹಲಿ (ಪಿಟಿಐ): ಇಂಗ್ಲೆಂಡ್ ವಿರುದ್ಧ ಭಾನುವಾರ ನವದೆಹಲಿಯಲ್ಲಿ ನಡೆದ ವಿಶ್ವಕಪ್ ಪಂದ್ಯದ ವೇಳೆ ಐಸಿಸಿ ನೀತಿಸಂಹಿತೆ ಉಲ್ಲಂಘಿಸಿದ್ದಕ್ಕೆ ಅಫ್ಗಾನಿಸ್ತಾನದ ಆರಂಭಿಕ ಬ್ಯಾಟರ್ ರಹಮಾನುಲ್ಲಾ ಗುರ್ಬಾಝ್ ಅವರಿಗೆ ವಾಗ್ದಂಡನೆ ವಿಧಿಸಲಾಗಿದೆ.

ಗುರ್ಬಾಝ್ ಅವರು ಸಂಹಿತೆಯ ವಿಧಿ 2.2 ಉಲ್ಲಂಘಿಸಿದ್ದು, ಇದು ಅಂತರರಾಷ್ಟ್ರೀಯ ಪಂದ್ಯದ ವೇಳೆ ಕ್ರಿಕೆಟ್ ಪರಿಕರ, ಧಿರಿಸು ಜೊತೆ ಒರಟು ವರ್ತನೆಗೆ ಸಂಬಂಧಿಸಿದ್ದು. ಅವರ ಶಿಸ್ತು ದಾಖಲೆಗೆ ಒಂದು ಡಿಮೆರಿಟ್ ಅಂಕ ಕೂಡ ಸೇರ್ಪಡೆಯಾಗಲಿದೆ. ಇದು ಅವರಿಗೆ 24 ತಿಂಗಳ ಅವಧಿಯಲ್ಲಿ ಮೊದಲನೆಯ ಡಿಮೆರಿಟ್ ಅಂಕ.

ಪಂದ್ಯದ 19ನೇ ಓವರ್ ವೇಳೆ ಈ ಪ್ರಕರಣದ ನಡೆದಿತ್ತು. ಔಟ್ ಆದ ನಂತರ ಪೆವಿಲಿಯನ್‌ಗೆ ಮರಳುವಾಗ ಬೌಂಡರಿ ರೋಪ್ ಬಳಿ ಅವರು ಬ್ಯಾಟನ್ನು ನೆಲಕ್ಕೆ ಮತ್ತು ಕುರ್ಚಿಗೆ ಬಡಿದು ಹತಾಶೆ ಸೂಚಿಸಿದ್ದರು.

ಗುರ್ಬಾಝ್ ತಪ್ಪು ಒಪ್ಪಿಕೊಂಡಿದ್ದು, ಮ್ಯಾಚ್ ರೆಫ್ರಿ ಜೆಫ್ ಕ್ರೊವ್ ಅವರ ದಂಡನೆಗೆ ಸಮ್ಮತಿ ವ್ಯಕ್ತಪಡಿಸಿದ್ದಾರೆ. ಫೀಲ್ಡ್ ಅಂಪೈರ್‌ಗಳಾದ ರಾಡ್ ಟಕ್ಕರ್, ಶರ್ಫುದ್ದೌಲಾ ಇಬ್ನೆ ಶಾಹಿದ್, ಮೂರನೇ ಅಂಪೈರ್ ಪಾಲ್ ರೀಫೆಲ್ ಮತ್ತು ನಾಲ್ಕನೇ ಅಂಪೈರ್ ಪಾಲ್ ವಿಲ್ಸನ್ ದೂರು ಸಲ್ಲಿಸಿದ್ದರು.

ಈ ಪಂದ್ಯದಲ್ಲಿ ಅಫ್ಗಾನಿಸ್ತಾನ 69 ರನ್‌ಗಳಿಂದ ಇಂಗ್ಲೆಂಡ್ ತಂಡಕ್ಕೆ ಆಘಾತ ನೀಡಿತ್ತು.



ರಹಮಾನುಲ್ಲಾ ಗುರ್ಬಾಝ್

ಅಜೇಯ ಓಟ ಮುಂದುವರಿಸುವ ಉತ್ಸಾಹ • ಹಷ್ಮತ್ ಪಡೆಗೆ ಮತ್ತೊಂದು ಅಚ್ಚರಿಯ ನಿರೀಕ್ಷೆ

ಕಿವೀಸ್ ಪಡೆಗೆ ಇಂದು ಅಫ್ಗನ್ ಸವಾಲು

ಚೆನ್ನೈ (ಪಿಟಿಐ): ಎರಡು ದಿನಗಳ ಹಿಂದೆಯಷ್ಟೇ ಪ್ರಬಲ ಇಂಗ್ಲೆಂಡ್ ತಂಡದ ಮೇಲೆ ಸಾಧಿಸಿದ ಅಚ್ಚರಿಯ ಗೆಲುವು ಅಫ್ಗಾನಿಸ್ತಾನ ತಂಡದಲ್ಲಿ ನವೋಲ್ಲಾಸ ಮೂಡಿಸಿದೆ. ಅಜೇಯ ನ್ಯೂಜಿಲೆಂಡ್ ತಂಡ ಬುಧವಾರ ಇಲ್ಲಿ ಏಕದಿನ ವಿಶ್ವಕಪ್ ಪಂದ್ಯದಲ್ಲಿ ಎದುರಾಳಿಯಾಗಿರುವ ಹಷ್ಮತ್‌ಉಲ್ಲಾ ಶಾಹಿದಿ ಪಡೆಯನ್ನು ಲಘುವಾಗಿ ಪರಿಗಣಿಸುವಂತಿಲ್ಲ.

ಆಡಿದ ಮೂರೂ ಪಂದ್ಯಗಳಲ್ಲಿ ಜಯ ಗಳಿಸಿರುವ ಕಿವೀಸ್ ತಂಡ ಯಶಸ್ಸಿನ ಓಟವನ್ನು ಮುಂದುವರಿಸುವ ಉಮೇದಿನಲ್ಲಿದೆ. ಇನ್ನೊಂದೆಡೆ ಭಾನುವಾರ ದೆಹಲಿಯಲ್ಲಿ ಇಂಗ್ಲೆಂಡ್ ಮೇಲೆ 69 ರನ್‌ಗಳ ಜಯ ಪಡೆದ ಅಫ್ಗಾನಿಸ್ತಾನ ಮತ್ತೊಂದು ಅನಿರೀಕ್ಷಿತ ಫಲಿತಾಂಶದ ವಿಶ್ವಾಸದಲ್ಲಿದೆ. ಅಫ್ಗಾನಿಸ್ತಾನ ತಂಡ ಆ ಪಂದ್ಯಕ್ಕೆ ಮೊದಲು, ಬಾಂಗ್ಲಾದೇಶ ಮತ್ತು ಭಾರತದ ಎದುರು ಸೋಲನುಭವಿಸಿತ್ತು. ಆದರೆ ದೆಹಲಿಯ ಜಯ ಕಳೆಗುಂದಿದ ಅದರ ವರ್ಚಸ್ಸನ್ನು ವೃದ್ಧಿಸಿದೆ.

ಕೇನ್ ವಿಲಿಯಮ್ಸನ್ ಪುನರಾಗಮನ ಪಂದ್ಯದಲ್ಲೇ ಗಾಯಾಳಾಗಿರುವ ಕಾರಣ ಟಾಮ್ ಲಥಾಮ್ ನ್ಯೂಜಿಲೆಂಡ್ ತಂಡವನ್ನು ಮತ್ತೆ ಮುನ್ನಡೆಸಲಿದ್ದಾರೆ. ಬಾಂಗ್ಲಾ ವಿರುದ್ಧ ಪಂದ್ಯದ ವೇಳೆ ರನ್ನಿಗಾಗಿ ಓಡುವಾಗ ಫೀಲ್ಡರ್ ಎಸೆದ ಚೆಂಡು ವಿಲಿಯಮ್ಸನ್ ಅವರ ಎಡ ಹೆಬ್ಬೆರಳಿನ ಮೂಳೆಗೆ ಪೆಟ್ಟುಮಾಡಿತ್ತು. ಹೀಗಾಗಿ ಮೊದಲ ಎರಡು ಪಂದ್ಯ ತಪ್ಪಿಸಿಕೊಂಡಿದ್ದ ಅವರು ಮತ್ತೆ ಕೆಲ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ನ್ಯೂಜಿಲೆಂಡ್ ತಂಡದ ಅಗ್ರ ಕ್ರಮಾಂಕದ ಆಟಗಾರರು ಉತ್ತಮ ಲಯದಲ್ಲಿದ್ದಾರೆ. ಬ್ಯಾಟರ್‌ಗಳಾದ ವಿಲ್ ಯಂಗ್, ಡೇರಿಲ್ ಮಿಚೆಲ್, ಡೆವಾನ್ ಕಾನ್ವೆ ಜೊತೆಗೆ ಆಲ್‌ರೌಂಡ್ ಆಟಗಾರ ರಚಿನ್ ರವೀಂದ್ರ ಅವರ ಪ್ರದರ್ಶನ ಕುತೂಹ ಲಕ್ಕೆ ಎಡೆಮಾಡಿದೆ. ರಚಿನ್ ಈ ಬಾರಿ ಒಂದು ಶತಕ, ಒಂದು ಅರ್ಧ ಶತಕ ಗಳಿಸಿದ್ದಾರೆ.

ಆದರೆ ಈ ತಂಡದ ಆಟಗಾರರು ಅಫ್ಗಾನಿಸ್ತಾನ ತಂಡದ ಸ್ಪಿನ್ನರ್‌ಗಳ ವಿಡಿಯೊ ತುಣುಕುಗಳನ್ನು ನೋಡದೇ ಇರಲಾರರು. ರಶೀದ್ ಖಾನ್, ಮೊಹಮ್ಮದ್ ನಬಿ, ಮುಜೀಬ್ ಉರ್ ರೆಹಮಾನ್ ಅವರ ಸ್ಪಿನ್ ಜಾಲಕ್ಕೆ ಇಂಗ್ಲೆಂಡ್ ಬ್ಯಾಟರ್‌ಗಳು ಸಿಲುಕಿದ್ದರು. ಸಾಂಪ್ರದಾಯಿಕವಾಗಿ ಸ್ಪಿನ್ನರ್‌ಗಳಿಗೆ ನೆರವಾಗುವ ಚೆಪಾಕ್ ಪಿಚ್‌ನಲ್ಲಿ ಪಂದ್ಯ ನಡೆಯುತ್ತಿರುವುದರಿಂದ ನ್ಯೂಜಿಲೆಂಡ್ ಎಚ್ಚರಿಕೆ ವಹಿಸಬೇಕಿದೆ.

ಅಫ್ಗಾನಿಸ್ತಾನದ ಬ್ಯಾಟರ್‌ಗಳ ಪೈಕಿ ರಹಮಾನುಲ್ಲಾ ಗುರ್ಬಾಝ್ ಉತ್ತಮ ಲಯದಲ್ಲಿದ್ದು ಎರಡು ಅರ್ಧ ಶತಕಗಳನ್ನು ಬಾರಿಸಿದ್ದಾರೆ. ನಾಯಕ ಶಾಹಿದಿ, ಅಜ್ಮತ್‌ಉಲ್ಲಾ ಒಮ್ರಾರ್ಝೈ ಮತ್ತು ಇಕ್ರಮ್ ಅಲಿಖಿಲ್ ಅವರೂ ಉಪಯುಕ್ತ ಇನಿಂಗ್ಸ್ ಆಡಬಲ್ಲರೆಂಬುದನ್ನು ಸಾಬೀತುಪಡಿಸಿದ್ದಾರೆ.

ಬೌಲ್ಟ್, ಮ್ಯಾಟ್ ಹೆನ್ರಿ ಮೊದಲಾದವರಿಂದ ನ್ಯೂಜಿಲೆಂಡ್‌ನ ವೇಗದ ದಾಳಿ ಪ್ರಬಲವಾಗಿಯೇ ಇದೆ. ಹೆಬ್ಬೆರಳ ಗಾಯದಿಂದ ಚೇತರಿಸಿಕೊಂಡಿರುವ ಮಧ್ಯಮ ವೇಗಿ ಟಿಮ್ ಸೌಥಿ ಈ ಪಂದ್ಯಕ್ಕೆ ಅವಕಾಶ ಪಡೆಯುತ್ತಾರೆಯೇ ಎಂಬ ಕುತೂಹಲ ಇದೆ. ಸ್ಪಿನ್‌ದ್ವಯರಾದ ರವೀಂದ್ರ ಮತ್ತು ಸ್ಯಾಂಟ್ನರ್ ಅವರನ್ನು ಎದುರಾಳಿಗಳು ಹೇಗೆ ಎದುರಿಸಬಲ್ಲರು ಎಂಬುದು ಕುತೂಹಲಕರ. ಸ್ಯಾಂಟ್ನರ್ ಈ ವಿಶ್ವಕಪ್‌ನಲ್ಲಿ ಎಂಟು ವಿಕೆಟ್‌ಗಳನ್ನು ಪಡೆದಿದ್ದಾರೆ.

ಇವೆರಡು ತಂಡಗಳು ಇದುವರೆಗೆ ಎರಡು ಬಾರಿಯಷ್ಟೇ ಮುಖಾಮುಖಿ ಆಗಿವೆ. ಎರಡೂ ಸಂದರ್ಭಗಳಲ್ಲಿ– ನೇಪಿಯರ್‌ನಲ್ಲಿ 2015ರ ವಿಶ್ವಕಪ್‌ನ ಗುಂಪು ಪಂದ್ಯದಲ್ಲಿ; ಟಾಂಟನ್‌ನಲ್ಲಿ ನಡೆದ 2019ರ ವಿಶ್ವಕಪ್ ಪಂದ್ಯದಲ್ಲಿ ನ್ಯೂಜಿಲೆಂಡ್ ಸುಲಭ ಜಯಗಳಿಸಿದೆ.

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಅಭ್ಯಾಸದಲ್ಲಿ ನಿರತವಾಗಿರುವ ಅಫ್ಗಾನಿಸ್ತಾನ ತಂಡದ ಆಟಗಾರರು –ಎಎಫ್‌ಪಿ ಚಿತ್ರ

ಅಭ್ಯಾಸದಲ್ಲಿ ನಿರತವಾಗಿರುವ ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್ –ಪಿಟಿಐ ಚಿತ್ರ

ತಂಡಗಳು: ನ್ಯೂಜಿಲೆಂಡ್: ಟಾಮ್ ಲಥಾಮ್ (ನಾಯಕ, ವಿಕೆಟ್ ಕೀಪರ್), ಟ್ರೆಂಟ್ ಬೌಲ್ಟ್, ಮಾರ್ಕ್ ಚಾಪ್ಮನ್, ಡೆವಾನ್ ಕಾನ್ವೆ, ಲಾಕಿ ಫರ್ಗ್ಯುಸನ್, ಮ್ಯಾಟ್ ಹೆನ್ರಿ, ಟಾಮ್ ಲಥಾಮ್, ಡೇರಿಲ್ ಮಿಚೆಲ್, ಜಿಮ್ಮಿ ನೀಶಾಮ್, ಗ್ಲೆನ್ ಫಿಲಿಪ್ಸ್ (ವಿಕೆಟ್ ಕೀಪರ್), ರಚಿನ್ ರವೀಂದ್ರ, ಮಿಚೆಲ್ ಸ್ಯಾಂಟ್ನರ್, ಈಶ್ ಸೋಧಿ, ಟಿಮ್ ಸೌಥಿ ಮತ್ತು ವಿಲ್ ಯಂಗ್.
ಅಫ್ಗಾನಿಸ್ತಾನ: ಹಷ್ಮತ್‌ಉಲ್ಲಾ ಶಾಹಿದಿ (ನಾಯಕ), ರಹಮಾನುಲ್ಲಾ ಗುರ್ಬಾಜ್ (ವಿಕೆಟ್ ಕೀಪರ್), ಇಬ್ರಾಹಿಂ ಜರ್ದಾನ್, ರಿಯಾಝ್ ಹಸನ್, ರಹಮತ್ ಶಾ, ನಜೀಬುಲ್ಲಾ ಜದ್ರಾನ್, ಮೊಹಮ್ಮದ್ ನಬಿ, ಇಕ್ರಮ್ ಅಲಿಖಿಲ್ (ವಿಕೆಟ್ ಕೀಪರ್), ಅಜ್ಮತ್‌ಉಲ್ಲಾ ಒಮ್ರಾರ್ಝೈ, ರಶೀದ್ ಖಾನ್, ಮುಜೀಬ್ ಉರ್ ರಹಮಾನ್, ನೂರ್ ಅಹ್ಮದ್, ಫಜಲಖ್ ಫರೂಖಿ, ಅಬ್ದುಲ್ ರಹಮಾನ್ ಮತ್ತು ನವೀನ್ ಉಲ್ ಹಕ್.

ಮುಕುಂದ್ ವಿರುದ್ಧ ಶಿಸ್ತುಕ್ರಮ: ಚಿಂತನೆ

ನವದೆಹಲಿ (ಪಿಟಿಐ): ಮೊರೊಕ್ಕೊ ವಿರುದ್ಧದ ಡೇವಿಸ್ ಕಪ್ ಟೆನಿಸ್ ಟೂರ್ನಿಯ ಪಂದ್ಯದ ವೇಳೆ ಅಧಿಕೃತ ಉಡುಪು ಧರಿಸದೇ ಇದ್ದುದಕ್ಕೆ ಭಾರತ ತಂಡದ ಆಟಗಾರ ಶಶಿಕಿರಣ್ ಮುಕುಂದ್ ಮೇಲೆ ಶಿಸ್ತುಕ್ರಮ ಜರುಗಿಸಲು ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಮುಂದಾಗಿದೆ.

ಭಾರತ– ಮೊರೊಕ್ಕೊ ನಡುವಣ ಡೇವಿಸ್ ಕಪ್ ವಿಶ್ವ ಗುಂಪು–2 ಪ್ಲೇ ಆಫ್ ಪಂದ್ಯ ಲಖನೌದಲ್ಲಿ ನಡೆದಿತ್ತು. ಮುಕುಂದ್ ಅವರು ಸೆ.16 ರಂದು ಮೊದಲ ಸಿಂಗಲ್ಸ್‌ನಲ್ಲಿ ಮೊರೊಕ್ಕೊದ ಯಾಸಿನ್ ದ್ಲಿಮಿ ವಿರುದ್ಧ ಆಡಿದ್ದರು.

ಭಾರತ ತಂಡದ ಅಧಿಕೃತ ಪ್ರಾಯೋಜಕರು ಒದಗಿಸಿದ್ದ ಉಡುಪು ಧರಿಸದ ಅವರು ತಮ್ಮ ಖಾಸಗಿ ಪ್ರಾಯೋಜಕರು ನೀಡಿದ್ದ ಜೆರ್ಸಿ ಧರಿಸಿ ಆಡಲಿಳಿದಿದ್ದರು. ಮಾತ್ರವಲ್ಲ, ಅವರು ಧರಿಸಿದ್ದ ಟಿ–ಶರ್ಟ್‌ನಲ್ಲಿ ಬರೆದಿದ್ದ 'INDIA' ಹೆಸರು ತಪ್ಪಾಗಿ ಮುದ್ರಿತವಾಗಿತ್ತು. ತಂಡದ ಪ್ರಾಯೋಜಕರು ಈ ವಿಷಯವನ್ನು ಎಐಟಿಎ ಗಮನಕ್ಕೆ ತಂದಿದ್ದರು.

ಎಐಟಿಎಯು ಈ ಬಗ್ಗೆ ವಿವರಣೆ ಕೋರಿ ಸೆ.28 ರಂದು ಮುಕುಂದ್ ಅವರಿಗೆ ನೋಟಿಸ್ ನೀಡಿತ್ತು. ನೋಟಿಸ್‌ಗೆ ಅ.3 ರಂದು ಉತ್ತರಿಸಿದ್ದ ಮುಕುಂದ್, 'ತಂಡದ ಪ್ರಾಯೋಜಕರು ನೀಡಿದ್ದ ಉಡುಪು ಆರಾಮದಾಯಕ ಎನಿಸದ ಕಾರಣ ಪಂದ್ಯದ ವೇಳೆ ಧರಿಸಲಿಲ್ಲ. ತಂಡದ ನಾಯಕ ಮತ್ತು ಕೋಚ್ ಅವರ ಅನುಮತಿ ಪಡೆದುಕೊಂಡೇ ಬೇರೆ ಉಡುಪು ಧರಿಸಿದ್ದೆ' ಎಂದು ಸ್ಪಷ್ಟನೆ ನೀಡಿದ್ದರು.

'ಮುಕುಂದ್ ಕ್ಷಮೆಯಾಚಿಸಿದ್ದಾರೆ. ಆದರೂ ಶಿಸ್ತುಕ್ರಮ ಕೈಗೊಳ್ಳುವ ಕುರಿತು ಚಿಂತನೆ ನಡೆದಿದೆ' ಎಂದು ಎಐಟಿಎ ಕಾರ್ಯದರ್ಶಿ ಅನಿಲ್ ಧೂಪರ್ ಹೇಳಿದ್ದಾರೆ.

ಕ್ರಿಕೆಟಿಗ ದನುಷ್ಕಾ ನಿಷೇಧ ತೆರವು

ಕೊಲಂಬೊ (ಪಿಟಿಐ): ಶ್ರೀಲಂಕಾದ ಕ್ರಿಕೆಟಿಗ ದನುಷ್ಕಾ ಗುಣತಿಲಕ ಮೇಲೆ ಹೇರಲಾಗಿದ್ದ ನಿಷೇಧವನ್ನು ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ತೆರವು ಮಾಡಿದೆ. ಹೀಗಾಗಿ, ಎಡಗೈ ಬ್ಯಾಟರ್ ಆಗಿರುವ ಅವರಿಗೆ ಮತ್ತೆ ರಾಷ್ಟ್ರೀಯ ಕ್ರಿಕೆಟ್ ತಂಡವನ್ನು ಸೇರುವ ಹಾದಿ ಸುಗಮವಾದಂತಾಗಿದೆ.

ಆಸ್ಟ್ರೇಲಿಯಾದಲ್ಲಿ ದನುಷ್ಕ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಗಳ ಕುರಿತು ತನಿಖೆ ನಡೆಸಲು ಶ್ರೀಲಂಕಾ ಕ್ರಿಕೆಟ್ ಮಂಡಳಿಯು ಸ್ವತಂತ್ರ ವಿಚಾರಣಾ ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯು ದನುಷ್ಕಾ ಮೇಲಿನ ನಿಷೇಧವನ್ನು ತೆಗೆದುಹಾಕಲು ಶಿಫಾರಸು ಮಾಡಿದೆ.

ಡೆನ್ಮಾರ್ಕ್ ಓಪನ್: ಲಕ್ಷ್ಯ, ಶ್ರೀಕಾಂತ್‌ಗೆ ನಿರಾಸೆ

ಎರಡನೇ ಸುತ್ತಿಗೆ ಸಿಂಧು, ಆಕರ್ಷಿ

ಒಡೆನ್ಸ್, ಡೆನ್ಮಾರ್ಕ್ (ಪಿಟಿಐ): ಭಾರತದ ಪಿ.ವಿ. ಸಿಂಧು ಮತ್ತು ಆಕರ್ಷಿ ಕಶ್ಯಪ್ ಮಂಗಳವಾರ ಆರಂಭಗೊಂಡ ಡೆನ್ಮಾರ್ಕ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತಿಗೆ ಮುನ್ನಡೆದರು. ಆದರೆ, ಪುರುಷರ ಸಿಂಗ ಲ್ಸ್‌ನಲ್ಲಿ ಲಕ್ಷ್ಯಸೇನ್ ಮತ್ತು ಕಿದಂಬಿ ಶ್ರೀಕಾಂತ್ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು 21–14, 18–21, 21–10 ರಿಂದ ಸ್ಕಾಟ್ಲೆಂಡ್‌ನ ಕಿರ್ಸ್ಟಿ ಗಿಲ್ಮೊರ್ ಅವರನ್ನು ಹಿಮ್ಮೆಟ್ಟಿಸಿದರು. 56 ನಿಮಿಷ ನಡೆದ ಮ್ಯಾರಥಾನ್‌ನಲ್ಲಿ ಸಿಂಧು ಮೊದಲ ಗೇಮ್‌ನಲ್ಲಿ ಮುನ್ನಡೆ ಸಾಧಿಸಿದರೂ ಎರಡನೇ ಗೇಮ್‌ನಲ್ಲಿ ಮುಗ್ಗರಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಮತ್ತೆ ಹಿಡಿತ ಸಾಧಿಸಿದರು. ಅವರು ಮುಂದಿನ ಸುತ್ತಿನಲ್ಲಿ 7ನೇ ಶ್ರೇಯಾಂಕದ ಇಂಡೊನೇಷ್ಯಾದ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ ಅವರ ಸವಾಲನ್ನು ಎದುರಿಸುವರು.

ಮತ್ತೊಂದು ಪಂದ್ಯದಲ್ಲಿ 38ನೇ ಕ್ರಮಾಂಕದ ಆಕರ್ಷಿ ಅವರು 10-21, 22-20, 21-12ರಿಂದ ವಿಶ್ವದ 26ನೇ ರ‍್ಯಾಂಕ್‌ನ ಲಿ ಯೊವೊನ್ನೆ (ಜರ್ಮನಿ) ಅವರನ್ನು ಮಣಿಸಿದರು. ಅವರು ಮುಂದಿನ ಸುತ್ತಿನಲ್ಲಿ 19ನೇ ಕ್ರಮಾಂಕದ ಥಾಯ್ಲೆಂಡ್‌ನ ಸುಪಾನಿಡಾ ಕಟೆಥೋಂಗ್ ಅವರನ್ನು ಎದುರಿಸುವರು. ಈ ವರ್ಷದ ಸಿಂಗಪುರ ಓಪನ್ ಟೂರ್ನಿಯಲ್ಲಿ ಅವರು ಆಕರ್ಷಿ ಅವರನ್ನು ಸೋಲಿಸಿದ್ದರು.

ಪುರುಷರ ಸಿಂಗಲ್ಸ್‌ನಲ್ಲಿ ವಿಶ್ವದ 15ನೇ ಕ್ರಮಾಂಕದ ಲಕ್ಷ್ಯ ಸೇನ್ 16–21, 18–21ರಿಂದ ಥಾಯ್ಲೆಂಡ್‌ನ ಕಾಂತಾಫೋನ್ ವಾಂಗ್‌ಚರೊಯೆನ್ ಅವರಿಗೆ ಮಣಿದರು. ಕಿದಂಬಿ ಶ್ರೀಕಾಂತ್ ಅವರು 21-19, 10-21, 16-21 ರಿಂದ ಚೀನಾದ ವೆಂಗ್ ಹಾಂಗ್ ಯಾಂಗ್ ಅವರ ಎದುರು ಸೋತರು.

ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ವಿಜೇತರಾದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಟೂರ್ನಿಯಿಂದ ಹಿಂದೆ ಸರಿದರು.

22ರಿಂದ ಪ್ಯಾರಾ ಏಷ್ಯನ್ ಗೇಮ್ಸ್: ಭಾರತದಿಂದ 446 ಮಂದಿಯ ದಂಡು

ನವದೆಹಲಿ (ಪಿಟಿಐ): ಚೀನಾದ ಹಾಂಗ್‌ಝೌನಲ್ಲಿ ಇದೇ 22 ರಿಂದ 28ರವರೆಗೆ ನಡೆಯಲಿರುವ ನಾಲ್ಕನೇ ಏಷ್ಯನ್ ಪ್ಯಾರಾ (ಅಂಗವಿಕಲರ) ಕ್ರೀಡಾಕೂಟದಲ್ಲಿ ಭಾರತದ 446 ಸದಸ್ಯರ ತಂಡ ಪಾಲ್ಗೊಳ್ಳಲಿದೆ. ಇವರಲ್ಲಿ 303 ಕ್ರೀಡಾಪಟುಗಳು ಒಳಗೊಂಡಿದ್ದಾರೆ.

ಇದು ಪ್ಯಾರಾ ಏಷ್ಯಾಡ್‌ಗೆ ಭಾರತ ಕಳುಹಿಸುತ್ತಿರುವ ಅತಿ ದೊಡ್ಡ ತಂಡವಾಗಿದೆ.

ತಂಡದಲ್ಲಿ 191 ಪುರುಷ ಮತ್ತು 112 ಮಂದಿ ಮಹಿಳಾ ಕ್ರೀಡಾಪಟುಗಳಿದ್ದಾರೆ. ಇವರ ಪಾಲ್ಗೊಳ್ಳುವಿಕೆಗೆ ಕೇಂದ್ರ ಕ್ರೀಡಾ ಸಚಿವಾಲಯ ಸಮ್ಮತಿ ನೀಡಿದೆ. ಕ್ರೀಡಾಪಟುಗಳ ಜೊತೆಗೆ 143 ಮಂದಿ ತರಬೇತುದಾರರು, ಅಧಿಕಾರಿಗಳು, ನೆರವು ಸಿಬ್ಬಂದಿ ಕೂಡ ಹಾಂಗ್‌ಝೌಗೆ ತೆರಳಲಿದ್ದಾರೆ.

ಕ್ರೀಡಾಪಟುಗಳಲ್ಲಿ 123 ಮಂದಿ ಅಥ್ಲೆಟಿಕ್ಸ್‌ನಲ್ಲಿ ಮಾತ್ರ ಭಾಗವಹಿಸುವರು.

ಜಕಾರ್ತಾದಲ್ಲಿ ನಡೆದ ಈ ಹಿಂದಿನ ಕ್ರೀಡೆಗಳಲ್ಲಿ 190 ಅಥ್ಲೀಟುಗಳು ದೇಶವನ್ನು ಪ್ರತಿನಿಧಿಸಿದ್ದು, 13 ವಿವಿಧ ಕ್ರೀಡೆಗಳಲ್ಲಿ ಪಾಲ್ಗೊಂಡಿದ್ದರು. ಈ ಕೂಟದಲ್ಲಿ ಭಾರತ 15 ಚಿನ್ನ ಒಳಗೊಂಡಂತೆ 72 ಪದಕಗಳನ್ನು ಗೆದ್ದುಕೊಂಡಿತ್ತು.

EXCLUSIVE FESTIVE BENEFITS
3-YEAR FREE MAINTENANCE# + EXCHANGE BENEFITS
SAVINGS UPTO ₹55,000*
OFFER VALID TILL 31ST OCTOBER 2023

TURBOCHARGED PERFORMANCE	BEST-IN-SEGMENT' WHEELBASE	26 cm ADVANCED INFOTAINMENT	SEGMENT FIRST' 5+2 FLEXI PRO SEATING	17.78 cm COLOUR DIGITAL TFT CLUSTER	ADVANCED TECH SUITE
1.2 l Gen III Turbo Puretech Engine with 110 ps Power, 190 Nm Torque	2671 mm Wheelbase for Generous Cabin Space	Android Auto™ & Apple CarPlay® | Rear View Camera | MyCitroën Connect with 38 Smart Features & Remote Lock/Unlock	7 Unique Seat Configurations	3 Personalisation Modes	Auto Stop/Start, ESP, Hill Hold & TPMS

BORN FRENCH MADE IN INDIA

CITIZEN SERVICES CITROËN
- Anytime Anywhere Access
- Virtual remote diagnosis
- Periodic Service maintenance with pick-up & drop
- 180-Minutes RSA guarantee
- Remote service job card opening
- Service cost estimator on website
- Service On Wheels

ADVANCED COMFORT CITROËN

BOOK ONLINE @ WWW.CITROEN.IN
BOOK C3 AIRCROSS SUV

Happy to hear from you:
1800 267 1000 +91 73585 02839

VISIT LA MAISON CITROËN SHOWROOM TODAY

78 TOUCHPOINTS ACROSS INDIA

Bengaluru: Hosur Road & Millers Road, Ph. No. 70755 52216 | **Mangalore:** Old Kannur Check Post, Mangalore-Bangalore Highway, Ph No. 72047 52233 | **Hubli:** Hubli-Dharwad Highway, Rayapur, Ph. No. 93640 11885 | **Vellore:** Chennai Bangalore Highway, Perumugai, Ph. No. 96555 31377 | **Chennai:** Mount Road, Ph. No. 95009 33360 | OMR Road, Ph. No. 95009 33360 | **Pondicherry:** Pondy Cuddalore Road, Ariyankuppam, Ph. No. 93601 77058 | **Madurai:** Plot No. H1A & H1B, Kappalur SIDCO Industrial Estate, GST Road, Madurai – 625008, Ph. No. 9500884638 | **Coimbatore:** Mettupalayam Road, Ph. No. 95007 24411 | **Calicut:** Puthiyangadi, Ph. No. 97440 35353 | **Kochi:** Maradu, Ph. No. 85939 77777 | **Trivandrum:** NH Bypass, Karikkakom, Ph. No. 97784 10550 | **Hyderabad:** Banjara Hills, Ph. No. 7288889949| **Nagole:** Ph. No. 73311 51666 | **Visakhapatnam:** NH-5, Akkayapalem, Ph. No. 7997990561

*T&C Apply. #Ex-showroom Price. '5+2 refers to Flexi seating variations of all 3 seating rows to provide customers with unmatched versatility during different usage scenarios. Mid size SUV segment is defined as a passenger vehicles with OAL > 4300 mm < 4450 mm with ground clearance > 195 mm. #Citroën vehicles must be serviced at Citroën authorised workshops as per service schedule mentioned in owner's manual. Images and illustrations are indicative and for informative purposes only. Actual colour of vehicle & upholstery might differ. Accessories shown and features mentioned may not be part of the standard equipment. All benefits are available from Citroën India dealers and partners. Benefits may vary from variant to variant. Benefits are valid till 31st October 2023 and are subject to change without prior notice. Finance & Insurance are at the sole discretion of the partners.

ಈ ಹಬ್ಬಕ್ಕೆ, ಹೊಸ ವೇಗ
ಈ ನವರಾತ್ರಿಯಲ್ಲಿ, ಹೀರೊವನ್ನು ಮನೆಗೆ ತನ್ನಿ.

ಈಗಲೇ ಖರೀದಿಸಿ 2024ರಲ್ಲಿ ಪಾವತಿಸಿ^ | ಕಡಿಮೆ ಬಡ್ಡಿ ದರ@ 6.99%^ | ಕ್ಯಾಶ್ ಡಿಸ್ಕೌಂಟ್ ₹2100* ವರೆಗೆ

Hero GIFT
Grand Indian Festival of Trust

SCAN TO AVAIL THE GIFT OFFERS
Hero 112 MILLION** MADE OF TRUST
WORLD'S NO.1 22 YEARS IN A ROW≠ MOTORCYCLE & SCOOTER COMPANY
INDIA'S FIRST 5 YEAR WARRANTY* *Conditions apply
ಆಧಾರ್‌ನ ಆಧಾರದ^ ಮೇಲೆ ಲೋನ್ & ಕ್ಯಾಶ್ EMI
ಅಡಮಾನ ಇಲ್ಲ^
Flipkart ನಲ್ಲಿಯೂ ಲಭ್ಯವಿದೆ
• For Corporate & Govt enquiries please contact: institutionalsales@heromotocorp.com • Select models are available at CSD/CPC authorised dealerships

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per the cumulative dispatch number till March 2023. ≠Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). ^^Based on offers from empanelled dealers on Wheels of Trust platform. ^Finance offer is at the sole discretion of the Financier, subject to its respective T&Cs. Available at select dealerships. *Offer amount and combination of offer may vary for model/variant and states and it is applicable on select models only. For more details, please visit your nearest authorised Hero outlet.

Exchange Powered By Wheels of Trust^^
ಉತ್ತಮ ಮರುಮಾರಾಟ ಮೌಲ್ಯಕ್ಕಾಗಿ ಸ್ಕ್ಯಾನ್ ಮಾಡಿರಿ

AUTHORIZED DEALERS – BENGALURU - PEENYA: SAI HERO - PH: 9289922830. MAGADI ROAD: POORNA HERO - PH: 9289923212. KAMAKSHIPALYA: POORNA MOTORS – PH: 9606922534. BANASHANKARI: SAI HERO - PH: 9289922476. JP NAGAR: SAI HERO 99002 36280. . BANASWADI: BHAGATH HERO - PH: 9289922738. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. HOSUR ROAD: RT KRISHNA HERO - PH: 9289923177. JIGANI: RT KRISHNA HERO – PH: 8762860999. BYATARAYANAPURA: BIMAL HERO - PH: 9289922863. RT Nagar: Bimal Hero 9535327710. Doddaballapur: Bimal Hero 9742202125. LALBAGH ROAD: PRAKASH HERO - PH: 9289922117. RAJAJI NAGAR: MAX HERO - PH: 9289923023. MARATHALLI: VAAYURATHA HERO - PH: 9289923811. TUMKUR: SAI HERO - PH: 9289922986. B.H.ROAD – SAI HERO PH. 7022752841 .TIPTUR: SAI HERO PH. 9164840456. KUNIGAL: SAI HERO - PH: 7022752858. SHIMOGA: . MYTHRI HERO - PH: 9289922635. SREE KARTHIK HERO - PH: 9289922509. CHICKMAGALUR: NAYANA HERO, PH: 9289922120. SAGAR: PRAJWAL HERO - PH: 9289922399. UDUPI : SHAKTI HERO : PH: 9821696225, MANGALORE: TRIBHUVAN HERO - Ph: 9289923203. WEST COAST HERO - PH: 9289922606. DAVANAGERE: PRAKASHA HERO - PH: 9289922501. RUTVI HERO - PH: 9289923174. . CHITRADURGA: MAHESH HERO - PH: 9289922126. MYSORE: SHAH MYSORE HERO (NAZARBAD CITY) - Ph: 9289922518. DYUTHI MYSORE HERO (B.M.HOSPITAL) - Ph: 9289922475. NANJANGUD : DYUTHI HERO PH. 9742885252 .CHAMARAJNAGAR: YEPIYES HERO - Ph: 9289922828. HASSAN: VENKATESHWARA HERO, Ph: 9289922121. MANDYA: DAYANAND HERO - Ph: 9289922123. BELGAUM: NAGSHANTI HERO - PH: 9289922502 NAGSHANTI - 2 UNIT - PH. 9289923173. CHIKODI: SHREE RENUKA MOTORS - PH: 9289922884. GOKAK: CHINMAY HERO - PH: 9289922673. YADGIR: SRI VENKATESH HERO - Ph: 9289922875. BIDAR: KAILASH HERO - Ph: 9289922124. BASAVA KALYANA : AKASH HERO PH; 9449337211 . GULBARGA: SRI VENKATESH HERO - Ph: 9289922118. HOSPET: ANNAPOOORNA AUTOMOTIVES - PH: 9289923165. . SINDHANUR: ANAND HERO - PH: 9289922943. KOPPAL: VIJAYA HERO - PH: 9289922985. BELLARY: ANNAPOORNA HERO - PH: 9289922125. RAICHUR: SRI VENKKATESHWARA HERO - PH: 9289922944. SIRSI: SHAKTI HERO - PH: 9289922391. HAVERI: BAHADDUR DESAI HERO - PH: 9289922977. HUBLI: . BELLAD HERO - PH: 9289922565. DHARWAD: BELLAD HERO - PH: 9686204480. CHADHA HERO - PH: 9289922119. GADAG: CHADHA HERO: - PH - 8050041033. MUDHOL: KUMAR HERO - PH: 9289922633.BAGALKOT: CHINMAY HERO - PH: 9289923049. SINDAGI: JOGUR MOTORS - PH: 9289922964. BIJAPUR: VIJAY HERO - PH: 9289922122.

WT.5654.2023KAN